ಗಾಂಧೀವಾದ

ಲೇಖಕರು:
ವಿ. ಯಸ್. ನಾರಾಯಣರಾವ್.

ವಿಚಾರ ಸಾಹಿತ್ಯ ಲಿಮಿಟೆಡ್,
ಬೆಂಗಳೂರು.

ಬೆಲೆ 1-12

ಗಾಂಧೀವಾದ

ವಿ. ಯಸ್. ನಾರಾಯಣರಾವ್

ವಿಚಾರ ಸಾಹಿತ್ಯ ಲಿಮಿಟೆಡ್
ಬಳೇಪೇಟೆ, ಬೆಂಗಳೂರು ಸಿಟಿ

★

ಸಾದಾ ಪ್ರತಿ ೧—೧೨—೦
ಉತ್ತಮ ಪ್ರತಿ ೨—೪—೦

ನಮಸ್ತೆ

ಗಾಂಧಿಯ ವಿಚಾರಗಳು ಭಿನ್ನ ಮತ್ತು ಪರಸ್ಪರ ವಿರೋಧವಾಗಿ ತೋರಿಕೆಯಾಗುವುವು. ಆಧುನಿಕ ನಾಗರಿಕ ಕಾಲಕ್ಕೆ ಯೋಗ್ಯವಲ್ಲವೆಂದೂ ಸಂಸ್ಕೃತವಾಗಿರುವ ಪುರಾತನ ಗೊಡ್ಡು ಧಾರ್ಮಿಕ ಶಿಷ್ಟಾಚಾರ ಸಂಪ್ರದಾಯವನ್ನು ಪುನರುದ್ಧರಿಸಲು ನಡೆಯುತ್ತಿರುವ ಪ್ರಯತ್ನವೇ ಗಾಂಧೀವಾದ ಎಂಬ ಅಭಿಮತವೂ ಇದೆ. ತಾನೇ ಹೇಳಿಕೊಳ್ಳುವಂತೆ ಗಾಂಧಿಯ ತತ್ವಗಳಲ್ಲಿ ಹೊಸದೇನೂ ಇಲ್ಲದಿರಬಹುದು. ಪ್ರಾಚೀನ ತತ್ವಗಳಿಗೆ ಮೆರುಗು ಕೊಟ್ಟು ಅವುಗಳನ್ನು ಗಾಂಧಿ ಹೊಸದಾಗಿ ಹೂಡಿರಲೂ ಬಹುದು. ಯಾವತ್ತೂ ನಿಜವೆನಿಸಿಕೊಳ್ಳುವ ತತ್ವಗಳಿಗೆ ಜೀವಕಳೆ ಕೊಟ್ಟು ಅವುಗಳಲ್ಲಿ ಒಂದು ಅಪೂರ್ವ ಶಕ್ತಿ ಸಂಚರಿಸುವಂತೆ ಮಾಡಿ, ಕಾರ್ಯ ರೂಪುಗೊಳಿಸಿ ತೋರಿಸುವುದರಲ್ಲಿದೆ ಗಾಂಧಿಯ ಮಹಾತ್ಮ್ಯ. ಭಿನ್ನವಾಗಿ ತೋರಿಕೆಯಾಗುವ ಗಾಂಧಿಯ ವಿಚಾರಗಳಲ್ಲಿ—ಹೂಮಾಲೆಯಲ್ಲಿ ಪೋಣಿಸಿಕೊಂಡು ಹೋಗುವ ನೂಲಿನಂತೆ—ಒಂದು ಐಕ್ಯತೆ, ಒಂದು ಸಾಮರಸ್ಯ, ಹೊಂದಾಣಿಕೆ ಇದೆ ಎಂದರೆ ಆಶ್ಚರ್ಯವೆನಿಸಬಹುದು. ಆದರೆ ವಿಚಾರಮಾಡಿ ನೋಡಿದರೆ ಯುದ್ಧ ಪಿಪಾಸೆಯಿಂದ ಬೆಂದು ಬಳಲಿ ಬೆಂಡಾಗಿ ದಾರಿ ಕಾಣದೆ ಕಂಗೆಟ್ಟಿರುವ ಈ ಪ್ರಪಂಚದ ಶಾಂತಿಗೆ, ಗಾಂಧೀವಾದವೊಂದೇ ಸರಿಯಾದ ದಾರಿ ಎಂದು ವೇದ್ಯವಾಗದಿರದು. ಈ ಅರಿವಾಗುವಂತೆ ಮಾಡುವುದೇ ಈ ಗ್ರಂಥದ ಉದ್ದೇಶ.


ಮೊದಲ ಮುದ್ರಣ ಹೊರಬಿದ್ದ ಸ್ವಲ್ಪ ಕಾಲದಲ್ಲಿಯೇ ಎರಡನೆಯ ಮುದ್ರಣಕ್ಕೆ ದೊರೆತ ಅವಕಾಶ ಬಳಸಿಕೊಂಡು ಅನೇಕ ದೋಷಗಳನ್ನು ಸರಿಪಡಿಸಿ, ಹೊಸ ನಿದರ್ಶನಗಳನ್ನೂ ವಿಷಯ ಗಳನ್ನೂ ಅಲ್ಲಲ್ಲಿ ಜೋಡಿಸಿ ವಿಷಯ ನಿರೂಪಣೆ ಪ್ರಚಲಿತ ಮುಹೂರ್ತದ ವರಿಗೂ ತರಲಾಗಿದೆ. ಪ್ರತಿ ಪರಿಚ್ಛೇದಕ್ಕೂ ಅದರಲ್ಲಿ ಅಡಕವಾಗಿರುವ ವಿಷಯ ಸಮರ್ಥನೆಯ ಅಣಿಮುತ್ತುಗಳನ್ನು ವಿಖ್ಯಾತ ವಿಚಾರವಂತರ ಬರಹಗಳಿಂದ ಆಯ್ದು ಕೊಡಲಾಗಿದೆ. ಇದೊಂದು ಈ ಸಂಸ್ಕರಣದ ವೈಶಿಷ್ಟ್ಯ. 'ಅಹಿಂಸೆಯೋ ಆಟಂ ಬಾಂಬೋ' ಎಂಬುದು ಹೊಸ ಪರಿಚ್ಛೇದ. ಇವುಗಳ ಜೋಡಣೆಯಿಂದ ಪುಸ್ತಕದ ಗಾತ್ರವೂ ಹೆಚ್ಚಿದೆ.

ಮೊದಲ ಮುದ್ರಣಕ್ಕೆ ಧಾರವಾಡದ ವಿದ್ಯಾವರ್ಧಕ ಸಂಘದವರು ವಿಶೇಷ ಬಹುಮಾನವಿತ್ತು ಪುರಸ್ಕರಿಸಿದ್ದಾರೆ.

ದ್ವಿತೀಯ ಮುದ್ರಣ ಪ್ರಕಟಿಸಲು ಅವಕಾಶವಿತ್ತ ಆಚಾರ್ಯ ಬಿಂದು ಮಾಧವ ಬುರ್ಲಿ ಅವರಿಗೆ ನಾನು ಕೃತಜ್ಞ.

ಸ್ವಾತಂತ್ರ್ಯೋದಯ ದಿನ,
೧೫ನೆ ಆಗಸ್ಟ್ ೧೯೪೭,

—ವಿ. ಯಸ್. ನಾರಾಯಣರಾವ್



ತಮ್ಮ ದೇಹವನ್ನೇ ಬತ್ತಿಯಾಗಿಯೂ,

ಗಾಂಧೀತತ್ವವನ್ನೇ ತೈಲವಾಗಿಯೂ ಮಾಡಿ,

ಗಾಂಧೀವಾದಕ್ಕೆ ಒರೆಯಿಡಲು ನೆರವಾಗಿ

ಕರ್ನಾಟಕದ ಕರನಿರಾಕರಣೆಯಲ್ಲಿ,

ಭಾರತಮಾತೆಯ ಸೇವೆಯಲ್ಲಿ

ತಮ್ಮ ಸರ್ವಸ್ವ ಅರ್ಪಿಸಿ,

ಕಿಂಚಿತ್ ಸೇವೆ ಸಲ್ಲಿಸಲು ನನಗೂ ಅವಕಾಶವಿತ್ತ

ಕಾರವಾರದ ವೀರ ಸತ್ಯಾಗ್ರಹಿಗಳಿಗೆ

ಸಮರ್ಪಿತ

★

ವಿಷಯ ಸೂಚಿ

★

GANDHIVADA

Vichara Sahitya Limited, Bangalore City

PRICE RS. 1—12—0

ಪ್ರಕಾಶಕರು :
ವಿ. ಯಸ್. ನಾರಾಯಣ ರಾವ್
ವಿಚಾರ ಸಾಹಿತ್ಯ ಲಿಮಿಟೆಡ್
ಬೆಂಗಳೂರು ಸಿಟಿ

ಮುದ್ರಕರು :
ಸಿ. ರಾಜಗೋಪಾಲಾಚಾರ್
ಇಂಡಿಯನ್ ಪ್ರೆಸ್
ಬೆಂಗಳೂರು ಸಿಟಿ

Each age makes some idol in its own image and sacrifices upon its altar the freedom of those who refuse it worship. ...Laski

His whole existence is a continuous moral protest against the violation of conscience in every sphere of life. He is the greatest crusader on behalf of conscience. ...Gaganvihari Mehta

ಗಾಂಧೀವಾದ

★

೧. ಮಹಾ ಆತ್ಮ

'ಮಹಾತ್ಮಾ ಗಾಂಧೀಕಿ ಜೈ' ಎಂದು ಗಾಂಧೀತತ್ವ ವೊಳಗುವ ಸ್ವಾತಂತ್ರ್ಯದಾಹದ ಜಯಧ್ವನಿ ಕೇಳದವರು ಅತಿವಿರಳ. ಲೋಕವಿಖ್ಯಾತ ಮಹಾತ್ಮಾ.

ಯಾರ ಧ್ಯೇಯ ಸಾಧನೆಗೆ ಲಕ್ಷಾಂತರ ಜನ ಸಹಿಸಲಾರದ ಕಷ್ಟ ಸಹಿಸಿ ಸರ್ವಸ್ವವನ್ನೂ—ಅವಶ್ಯವೆನಿಸಿದರೆ—ಪ್ರಾಣವನ್ನೂ ನೀಗಲು ಸಿದ್ಧರಾಗುತ್ತಾರೋ, ಅಂಥವನೇ ಮಹಾತ್ಮ! ಅರ್ಥಾತ್ ಯಾವನು ತನ್ನಸಂಕಲ್ಪ ಸಿದ್ಧಿಗಾಗಿ ಸಾವಿರಾರು ಕುಟುಂಬಗಳನ್ನು ಸಂಕಟಕ್ಕೆ ಸಿಲುಕಿಸುತ್ತಾನೋ ಆತನೇ ಮಹಾತ್ಮ! ಇದೊಂದು ವಿಚಿತ್ರ ಸೂತ್ರ.

ಈ ದೃಷ್ಟಿಯಿಂದ ಹಿಟ್ಲರ್, ಮುಸೋಲಿನಿಗಳನ್ನು ಮಹಾತ್ಮರೆಂದು ಲೋಕ ಏಕೆ ಹೊಗಳದು? ಎಷ್ಟು ಲಕ್ಷಾಂತರ ಜನ ಇವರ ಸಾಮ್ರಾಜ್ಯ ದಾಹಕ್ಕಾಗಿ ನೆತ್ತರದ ಕೋಡಿ ಹರಿಸಿಲ್ಲ! ಗಾಂಧಿ-ಹಿಟ್ಲರ್ ಇವರ ಮಾರ್ಗಗಳಲ್ಲಿಯೂ ತ್ಯಾಗ, ಧೈರ್ಯ, ಸ್ಥೈರ್ಯಗಳ ಹೆಚ್ಚಳವಿದೆ. ವ್ಯತ್ಯಾಸವಿಷ್ಟೆ —ಒಂದೆಡೆ ಪ್ರೀತಿ, ಇನ್ನೊಂದೆಡೆ ಭೀತಿ. ಗಾಂಧಿಯ ತತ್ವಕ್ಕಾಗಿ ಸ್ವಾರ್ಥ ತ್ಯಾಗಮಾಡಲು ಸಾವಿರಾರು ಸತ್ಯಾಗ್ರಹಿಗಳನ್ನುಪ್ರೇರೇಪಿಸಿರುವ ಓಜಸ್ಸು—

ಪ್ರೀತಿ. ಹಿಟ್ಲರನ ಸಾಮ್ರಾಜ್ಯದಾಹಕ್ಕಾಗಿ ಲಕ್ಷಾಂತರ ಯೋಧರು ಪ್ರಾಣ ನೀಗುವಂತೆಮಾಡಿರುವ ಶಕ್ತಿ—ಭೀತಿ. 'ಅಳಿಲ ಭಕ್ತಿ, ಮಳಲ ಸೇವೆ' ಎಂದು ಸತ್ಯಾಗ್ರಹಿಗಳು ಸ್ವಯಂಪ್ರೇರಿತರಾಗಿ ಸ್ವಾರ್ಥ ತೊರೆದು ಸರ್ವಸ್ವ ಅರ್ಪಣ ಮಾಡುತ್ತಾರೆ. ಆತ್ಮಪ್ರೇರಣೆಯೇ ಇದರ ಪ್ರೇರಕ; ಬಲೋದ್ಬಂಧವಲ್ಲ ಹಿಟ್ಲರನನ್ನು ವಿರೋಧಿಸಿದರೆ ಪ್ರಾಣ ಉಳಿಯುವುದೇ ಕಷ್ಟ. ಸರ್ವನಾಶವೂ ಆಗಬಹುದು ಎಂಬ ಭೀತಿ-ತ್ಯಾಗವೆನ್ನಬಹುದಾದರೆ-ಮತ್ತೊಂದು ತ್ಯಾಗಕೆ. ಪ್ರೇರಕ. ಸಾಯಲೇಬೇಕಾದರೆ ಯುದ್ಧದಲ್ಲಿ ಮಡಿದು ವೀರಸ್ವರ್ಗ ಪಡೆ ಯೋಣ ಎಂಬ ಹೇಡಿತನ ಮುಸುಕಿದ ಧೈರ್ಯ. ದಬ್ಬಾಳಿಕೆ ಎದುರಿಸಲು, ಹೇಡಿತನ; ಯುದ್ಧರಂಗಕ್ಕೆ ತೆರಳಲು ಧೈರ್ಯ! ಯುದ್ಧಕ್ಕೆ ತೆರಳುವವನು ಹೋಗುವುದು ಕೊಲುವುದಕ್ಕೆ—ಕೊಲಿಸಿಕೊಳುವುದಕ್ಕಲ್ಲ. ಯುದ್ಧದಲ್ಲಿ ಸಾವು ಸಿದ್ಧವೇನು ?

ಒಂದು ಮಾರ್ಗ, ಕಷ್ಟಸಹಿಷ್ಣುತೆಯಿಂದ ಶತ್ರು ಮನಕರಗಿಸಿ ಕಾರ್ಯ ಸಾಧಿಸಲು ಪ್ರೇರೇಪಿಸುತ್ತದೆ; ಮತ್ತೊಂದು ಮಾರ್ಗ ಶತ್ರುವನ್ನು ಧ್ವಂಸ ಮಾಡಿ ಹೇಗಾದರೂ ಜಯಗಳಿಸಲು ಪ್ರೇರೇಪಿಸುತ್ತದೆ. ಒಂದಕ್ಕೆ ಸಾಧನವೇ ಶ್ರೇಷ್ಠ; ಮತ್ತೊಂದರಲ್ಲಿ ಸಾಧಿಸುವುದೇ ಗುರಿ. ಒಂದರ ಸೋಪಾನ ಸೇವೆ ಮತ್ತೊಂದರ ಅಡಿಪಾಯ ದುರಾಸೆ. ಮಾನವನ ಉಚ್ಚತಮ ದೈವೀಗುಣ ಪ್ರಚೋದಿಸುವ ಶಕ್ತಿ ಒಂದೆಡೆ; ಮಾನವನ ನೀಚ ಆಸುರೀಗುಣ ಪ್ರೋತ್ಸಾಹಿಸುವ ಶಕ್ತಿ ಮತ್ತೊಂದೆಡೆ; ಒಬ್ಬರ ಪ್ರೇರಕ ಗಾಂಧಿ, ಮತ್ತೊಬ್ಬರ ಪ್ರೇರಕ ಹಿಟ್ಲರ್. ಶ್ರೇಷ್ಠ ಯಾವುದು ? ಸಾಧಕವೊ, ಸಾಧನೆಯೋ, ಗುರಿಯೋ, ಗುರಿ ಮುಟ್ಟಿಸುವ ಮಾರ್ಗವೊ ? ಮಹಾತ್ಮನಾರು ? ಪ್ರೇರಕನೋ, ಪ್ರೇರಕವೋ, ಪ್ರೇರೇಪಿತನೋ ?

ಸಕ್ಕರೆ ಎನ್ನುತ್ತಲೇ 'ಸಿಹಿ' ಎಂಬ ಗುಣ ಮನಸ್ಸಿಗೆ ಹೊಳೆಯುತ್ತದೆ. ಸಕ್ಕರೆ—ಸಿಹಿ, ಉಪ್ಪು—ಕ್ಷಾರ, ಮೆಣಸು—ಖಾರ, ಬೆಂಕಿ—ಶಾಖ, ಇವು ಬೇರ್ಪಡಿಸಲಾಗದ ಸ್ವಭಾವಜನ್ಯ ಗುಣಗಳು. ಆದುದರಿಂದಲೇ "ಸವಿಯು ಸಕ್ಕರೆಯೊಳಗೋ, ಸಕ್ಕರೆಯೊಳು ಸವಿಯೋ" ಎಂದು ಭಾವ ಗರ್ಭಿತವಾಗಿ ದಾಸರು ಹಾಡಿರುತ್ತಾರೆ. ಅಂತೆಯೇ 'ಗಾಂಧಿ' ಎಂಬ ಶಬ್ದ ಉಚ್ಚರಣೆಯಾಗುತ್ತಲೇ ಮಿಂಚಿನ ವೇಗದಿಂದ 'ಅಹಿಂಸೆ' ಮನಸ್ಸಿಗೆ

ಹೊಳೆಯುತ್ತದೆ. ಸೂರ್ಯನಿಂದ ಬಿಸಿಲು ಬೆಳಕನ್ನು ಪ್ರತ್ಯೇಕಿಸುವುದು ಎಷ್ಟು ದುಸ್ತರವೋ, ಗಾಂಧಿಯಲ್ಲಿ ಸತ್ಯ ಅಹಿಂಸೆ ಬೇರ್ಪಡಿಸುವುದೂ ಅಷ್ಟೇ ಕಷ್ಟ. ಸತ್ಯದ ಸಾಕ್ಷಾತ್ಕಾರ ಪುರುಷ—ಗಾಂಧಿ.

'ನಾನು ರೈತ, ನೇಕಾರ' ಎಂದು ಹೆಮ್ಮೆಪಡುತ್ತಾನೆ ಗಾಂಧಿ. ಚರಖ ಬಿಟ್ಟು ಒಂದು ದಿನವೂ ಇರಲಾರ. ರಾಜದ್ರೋಹ ಆಪಾದನೆಗೆ ನ್ಯಾಯ ಸ್ಥಾನದ ಸಮ್ಮುಖದಲ್ಲಿ ನಿಂತು "ನಾನು ಹುಟ್ಟಿನಲ್ಲಿ ಜೈನ; ಆಚರಣೆಯಲ್ಲಿ ಹಿಂದು; ಕರ್ಮದಲ್ಲಿ ನೇಕಾರ" ಎಂದ ಬ್ಯಾರಿಸ್ಟರ್ ಗಾಂಧಿ. ಈತನ ಉಡುಪು ದರಿದ್ರನಾರಾಯಣನ ನಾಲ್ಕು ಮೊಳದ ತುಂಡು. ಹೊಲಿದ ಬಟ್ಟೆ ಧರಿಸ—ಹಜರತ್ ಪೈಗಂಬರನಂತೆ.

ವಿರೋಧಾಭಾಸಗಳ ವಿಚಿತ್ರ ವ್ಯಕ್ತಿ ಗಾಂಧಿ. ಬಡವನಾದರೂ ತಂತಿ ಟಪಾಲಿಗೆ ತಿಂಗಳಿಗೆ ಮೂರು ನೂರು ರೂಪಾಯಿಗಳ ವೆಚ್ಚ. ವಿಷಸರ್ಪ ಸಹ ಕೊಲಲಾರ; ಆದರೆ ಪ್ರಾಣಸಂಕಟದಲ್ಲಿ ಸಿಲುಕಿದ ಗೋವುಕರುವನು ನೋವು ಮುಕ್ತಮಾಡಲು ಕೊಲಿಸುವನು. ಯುದ್ಧ ವಿರೋಧಿ—ಆದರೆ ಯುದ್ಧದಲ್ಲಿ ಗಾಯಗೊಂಡವರಿಗೆ ತನ್ನ ಜೀವದಾಸೆ ತೊರೆದು ಸೇವೆ ಸಲ್ಲಿಸುವನು. ಮಾಟಗಾರನ ಮಾಯೆ ಆಧುನಿಕ ವೈದ್ಯಶಾಸ್ತ್ರ ಎಂದು ಸಾರಿ ತಾನೇ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವನು. ಯಂತ್ರ ವಿರೋಧಿ—ಆದರೆ ಸಂಚರಿಸುವುದು ರೈಲಿನಲ್ಲಿ; ಗಂಟೆಗೆ ೬೦ ಮೈಲಿ ಓಡುವ ಮೋಟಾರಿನಲ್ಲಿ.

ಎಷ್ಟು ವೈವಿಧ್ಯ ಗಾಂಧಿಯ ಗುಣ! ಎಷ್ಟು ರಂಗಗಳಲ್ಲಿ ಆತನ ಪ್ರಯೋಗ? ಜಲ, ಮಣ್ಣು, ಪ್ರಕೃತಿ ಚಿಕಿತ್ಸೆಗಳಲ್ಲಿ ಧನ್ವಂತರಿ. ಬೆಂದ ಆಹಾರಕ್ಕೂ ಹಸಿ ಪದಾರ್ಥವೇ ಮೇಲೆಂದು ಸಾಧಿಸಲು ತನ್ನ ಮೇಲೆಯೇ ಪ್ರಯೋಗ. ಆರೋಗ್ಯಶಾಸ್ತ್ರ, ಪಾಕಶಾಸ್ತ್ರ ನಿಪುಣ. ಈ ಯಾಂತ್ರಿಕ ಯುಗದಲ್ಲಿ ಚರಖ ಪೂಜಾರಿ. ಖಾದಿಯ ಹಿರಿಮೆ ಹೆಚ್ಚಿಸಿದ ಹಿರಿಯ. ಧನ ಪಿಶಾಚಿಯ ಪ್ರಪಂಚದಲ್ಲಿ ಹಣದ ಚಲಾವಣೆಯನ್ನೇ ತೊಡೆಯಬೇಕೆನ್ನುವ ಅರ್ಥಶಾಸ್ತ್ರ ನಿಪುಣ. ಹಿಂದೂ ಮುಸಲ್ಮಾನ್ ಐಕ್ಯ, ಹರಿಜನೋದ್ಧಾರ, ಪಾನನಿರೋಧ, ಅಸ್ಪೃಶ್ಯತಾ ನಿವಾರಣೆ, ವಿಧವಾವಿವಾಹ ಇವುಗಳಿಗಾಗಿ ಅವಿಶ್ರಾಂತ ದುಡಿಯುವ ಸಮಾಜ ಸುಧಾರಕ. ಕಾಂಗ್ರೆಸ್ಸಿನ ಏಕನಾಯಕ; ರಾಜನೀತಿ ಚತುರ. ಮೋಕ್ಷ ಪಡೆಯಲು ಆಶಿಸುವ ಸತ್ಯೋಪಾಸಕ.

ಮಕ್ಕಳ ಆಟಪಾಟಗಳಲ್ಲಿ ಮೈಮರೆಯುವ ಮುದುಕ. ಮಹತ್ತರ ಸಂದಿಗ್ಧ ಸನ್ನಿವೇಶಗಳಲ್ಲಿ 'ಇದೋ ಬಂದೆ', ಎಂದು ದ್ರೌಪದಿ ಮಾನಾಪಹರಣ ಸಮಯದ ಮುರಾರಿಯಂತೆ, ಗಂಡ-ಹೆಂಡರ ವ್ಯಾಜ್ಯ ಬಿಡಿಸಲು ಓಡುವ ಸಂಸಾರಿ. ವರ್ಧಾಶಿಕ್ಷಣಕ್ರಮ ಆಚರಣೆಗೆ ತಂದ ಶಿಕ್ಷಣತಜ್ಞ. ಸರಳ ಶೈಲಿಯ ತ್ರಿಭಾಷಾ ವಿಶಾರದ. ಅದ್ವಿತೀಯ, ಅನುಪಮ ಪತ್ರಿಕಾ ಸಂಪಾದಕ· ಮನ ತಲ್ಲಣಿಸಿ, ಸೂರೆಗೊಳ್ಳುವ ವಿಖ್ಯಾತ ವಾಗ್ಮಿ. ಗೋಸೇವಕ, ಧರ್ಮೋದ್ಧಾರಕ. ಗ್ರಾಮೋದ್ಯೋಗ ನಿರತನಾದ ಗ್ರಾಮೋದ್ಧಾರಕ. ನಾಲ್ಕು ಮಕ್ಕಳ ತಂದೆ, ಆದರೂ ನೈಷ್ಠಿಕ ಬ್ರಹ್ಮಚಾರಿ. ಸಾತ್ವಿಕ ವಿರೋಧ, ಅಸಹಕಾರ, ಸವಿನಯ ಕಾನೂನು ಭಂಗ, ಸತ್ಯಾಗ್ರಹಿಗಳ ಮಾರ್ಗದರ್ಶಿಯಾದ ಚಳುವಳಿಕಾರ; ಆದರೂ ಶಾಂತತಾ ಪ್ರಿಯ. ಗುಂಡಿನ ಬಾಯಿಗೆ ಹೆದರದ ಕೆಚ್ಚೆದೆಯ ಕಟ್ಟಾಳು. ಹಿಂಸೆಗೂ ಶ್ರೇಷ್ಠವಾದುದು ಅಹಿಂಸೆ ಎಂದು ಸಾರುವ ಸತ್ಯಾಗ್ರಹಿ. ಅಂಜುಬುರುಕರಿಗೆ ಅಸ್ತ್ರ ಹಿಡಿಯುವಂತೆ ಉಪದೇಶಿಸಲು ಹಿಂಜರಿಯ. ಕರುವಿಗೆ ಹಾಲು ದೊರೆಯದೆಂದು ಕಣ್ಣೀರಿಟ್ಟು, ಆಡಿನ ಹಾಲು ಸೇವಿಸುವ ಕರುಣಾಸಾಗರ. ಆಂಗ್ಲೇಯರ ಸನ್ಮಿತ್ರ. ಸಾಮ್ರಾಜ್ಯವಾದದನಾಶಕ್ಕೆ ಪಣತೊಟ್ಟಿರುವ ಸಾಮ್ರಾಜ್ಯವಿರೋಧಿ. ಸ್ವದೇಶಿಗೆ ಪ್ರೋತ್ಸಾಹಕೊಡುವ ಜಗನ್ಮಿತ್ರ. ಗಾಂಧಿಯ ಗುಣಗಳೂ, ಗಾಂಧಿಯ ವಿರೋಧಾಭಾಸಗಳೂ ವರ್ಣಿಸಲಸದಳ. ಒಂದು ರಂಗದಲ್ಲಿ, ಒಂದು ಕ್ಷೇತ್ರದಲ್ಲಿ ಆತನು ಮಾಡಿರುವಕೆಲಸ ಬಣ್ಣಿಸಲು ಎಷ್ಟು ಗ್ರಂಥಗಳಾದರೂ ತೀರದು. ರಾಜಕೀಯ, ಆರ್ಥಿಕ, ಸಾಮಾಜಿಕ, ಪಾರಮಾರ್ಥಿಕ, ವೈದ್ಯಕೀಯ, ಶಿಕ್ಷಣ ಮೊದಲಾದ ಕ್ಷೇತ್ರಗಳೊಂದೊಂದರಲ್ಲಿ ಮಾಡಿರುವ ಸೇವೆಯೇ ಯಾರನ್ನಾದರೂ ಲೋಕವಿಖ್ಯಾತ ಮಾಡಲು ಸಾಕು. ಹೀಗಿರಲು ನಾನಾ ಕ್ಷೇತ್ರಗಳಲ್ಲಿ ಅಮಿತ ಖ್ಯಾತಿ ಗಳಿಸಿರುವ ಗಾಂಧಿ, ಮಹಾತ್ಮನಾಗಿ ಜಗದ್ವಂದ್ಯನಾಗುವುದರಲ್ಲಿ ಆಶ್ಚರ್ಯವೇನು ?

ಗಾಂಧಿಯ ಸರ್ವತೋಮುಖ ಕಾರ್ಯಾಸಕ್ತ ಜೀವನದಲ್ಲಿ ವಿರೋಧಿಗಳೂ, ವಿರೋಧಗಳೂ ಹುಟ್ಟಿಕೊಂಡಿವೆ. ಆದರೆ ಗಾಂಧಿಗೆ ಯಾರ ಮೇಲೂ ಕ್ರೋಧವಿಲ್ಲ. ಬಂಡವಾಳಗಾರನ ವಿರೋಧಕ್ಕಾಗಿ ಎಚ್ಚರಿಕೆ ಕೊಡುವನು. ಗಿರಣಿಗಳು ನಾಶವಾಗಬೇಕೆಂದು ಸಾರುವನು. ಆದರೂ ಅವರೇ 'ಗಾಂಧೀಕಿ

ಜೈ' ಎಂದು ಜಯಕಾರ ಮಾಡುವರು ತನ್ನ ತತ್ವಗಳನ್ನೂ ಗಾಂಧಿ ಬಿಡಲೊಲ್ಲ, ವ್ಯಕ್ತಿಯನ್ನೂ ದ್ವೇಷಿಸ. ಪ್ರೇಮಬಾಣದ ತಿಳಿನಗುವಿನಿಂದ ವೈರಿ ಹೃದಯ ಸೂರೆಗೊಳ್ಳುವನು. ಯಾವ ಸಂದರ್ಭದಲ್ಲಿ ಬಿಗಿ ಹಿಡಿಯಬೇಕು, ಯಾವ ಸಂದರ್ಭದಲ್ಲಿ ಮಣಿದು ನಡೆಯಬೇಕು ಎಂಬ ಜೀವನ ಸಾಮರಸ್ಯ ಕಲಿಯಬೇಕು ಗಾಂಧಿಯಿಂದ. 'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ' ಎಂಬಂತೆ ಈತನ ವ್ಯಕ್ತಿತ್ವ.

'ಗಾಂಧಿಯೇ ಗಾಂಧಿ ಸರ್ವತ್ರ ಗಾಂಧಿ' ಎಂದು ಕವಿ ಪಾಡಿರುವಂತೆ ಗಾಂಧಿ ಪ್ರಭಾವ ಎಲ್ಲೆಲ್ಲೂ ಕಾಣಬಹುದು. ಗಂಡ ಹೆಂಡಿರ ಜಗಳದಲ್ಲಿಯೂ ಗಾಂಧಿ; ವೈಸರಾಯ ಮತ್ತು ಪಾರ್ಲಿಮೆಂಟು ಸಭೆಯಲ್ಲೂ ಗಾಂಧಿ. ಯಾವ ವೃತ್ತಪತ್ರಿಕೆ ತೆಗೆದರೂ ಗಾಂಧಿ. ಗಾಂಧಿ ಸುದ್ದಿಯಿಲ್ಲದ ದಿನವಿಲ್ಲ. ತೊದಲು ನುಡಿಯುವ ಮಕ್ಕಳು—'ಗಾಂಧಿ ಕೀ ಜೈ' ಎಂದರೆ ಅದೆಷ್ಟು ಆನಂದ ಹೆತ್ತವರಿಗೆ! ನಾಲ್ವತ್ತು ಕೋಟಿ ಭಾರತೀಯರಲ್ಲಿ ಗಾಂಧಿ ಹೆಸರು ಕೇಳದವರು ಯಾರು? ಗಾಂಧಿಯ ಖ್ಯಾತಿ ಪ್ರಪಂಚದ ಎಲ್ಲ ಭಾಗಗಳಲ್ಲಿ ಎಷ್ಟು ಮಟ್ಟಿಗೆ ವ್ಯಾಪಿಸಿದೆ ಎಂಬುದಕ್ಕೆ ಅವನ ಎಪ್ಪತ್ತೊಂದನೆ ಜನ್ಮೋತ್ಸವ ಕಾಲದಲ್ಲಿ ನಾನಾ ದೇಶಗಳ ಲೋಕ ವಿಖ್ಯಾತರು ಮಹಾತ್ಮರಿಗೆ ಅರ್ಪಿಸಿರುವ ಶ್ರದ್ಧಾಂಜಲಿಯೇ ಸಾಕ್ಷಿ. (ಇದನ್ನು ರಾಧಾಕೃಷ್ಣನ್ನರು ಅಭಿನಂದನ ಗ್ರಂಥರೂಪದಲ್ಲಿ ಪ್ರಕಟಿಸಿರುತ್ತಾರೆ.) ಇಂಗ್ಲೆಂಡ್, ಫ್ರಾನ್ಸ್, ಅಮೇರಿಕ, ಚೀನ, ರಷ್ಯ, ಜಪಾನ್, ಇಟಲಿ ಎಲ್ಲ ರಾಷ್ಟ್ರಗಳೂ ನಾನು ತಾನೆಂದು ಗಾಂಧಿಗೆ ಕಾಣಿಕೆ ಅರ್ಪಿಸಿವೆ. 'ಸಜೀವ ಏಸುಕ್ರಿಸ್ತ', 'ಅವತಾರ ಪುರುಷ', 'ಬುದ್ಧನ ಅವತಾರ', 'ಸತ್ಯೋಪಾಸಕ', 'ಶಾಂತಮೂರ್ತಿ', 'ಯುದ್ಧ ವಿರೋಧಿ', 'ಪಾಶವೀ ಬಲವನ್ನು ದೈವೀಬಲದಿಂದ ವಿರೋಧಿಸುವ ಸಾಹಸಿ' ಎಂದು ಸ್ತೋತ್ರದ ಸುರಿಮಳೆ. ಆದರೂ ಇವರಲ್ಲಿ ಅನೇಕರು ಗಾಂಧೀತತ್ವ ವಿರೋಧಿಗಳು.

"ನಿಮ್ಮ ಜನ ಕಂಡರೆ ನನಗೆ ಆಗದು. ಅವರಿಗೆ ಸಹಾಯ ನೀಡಲು ನನ್ನ ಮನ ಒಪ್ಪದು. ಆದರೆ ನಾನೇನು ಮಾಡಲಿ! ಇಂಗ್ಲೆಂಡಿನ ಮುಷ್ಕರಕಾರರಂತೆ ಹಿಂಸಾಕೃತ್ಯ ಮಾಡಲು ಉದ್ಯುಕ್ತರಾಗಬಾರದೆ ನೀವು? ಆಗ ನಿಮಗೆ ಪಾಠ ಕಲಿಸಬಲ್ಲೆವು. ಆದರೆ ನಿಮ್ಮ ಶತ್ರುಗಳಿಗೂ ನೀವು ಕೇಡು

ಬಯಸಲಾರಿರಿ. ಸ್ವಯಂ ಕಷ್ಟ ಅನುಭವಿಸುತ್ತ, ಕಷ್ಟ ಸಹಿಷ್ಣುತೆಯ ಬಲದಿಂದ ಜಯ ಪಡೆಯುವ ಉದ್ದೇಶ ನಿಮ್ಮದು. ಸ್ವಯಂ ನಿರ್ಣೀತ ಘನತೆ, ಗಾಂಭೀರ್ಯ, ಗೌರವದ ಮೇರೆ ಮೀರಲೊಲ್ಲಿರಿ. ಇದೇ ನಮ್ಮನ್ನು ನಿಸ್ಸಹಾಯ ಮಾಡುವ ನಿಮ್ಮ ಹಾಳು ಸೌಜನ್ಯಗಳು" ಎಂದು ಸ್ಮಟ್ಸ್.

ಅಹಿಂಸೆಗೆ ಇದಕ್ಕೂ ಹಿರಿದಾದ ಪ್ರಶಂಸೆ ಬೇಕೆ? ತನ್ನನ್ನು ಬಂಧನ ದಲ್ಲಿರಿಸಿದ ಇದೇ ಸ್ಮಟ್ಸ್‌ಗೆ, ಜೈಲಿನಲ್ಲಿದ್ದಾಗ ಒಂದು ಜೊತೆ ಜೋಡು ಗಾಂಧಿ ಸ್ವಹಸ್ತದಿಂದ ಮಾಡಿ ಸ್ನೇಹ ಕಾಣಿಕೆಯಾಗಿ ಕಳುಹಿಸಿದನು! 'ಈ ಮಹಾ ಪುರುಷ ಮಾಡಿದ ಜೋಡು ಧರಿಸುವ ಯೋಗ್ಯತೆಯಾದರೂ ನನಗುಂಟೆ' ಎಂದು ಹಂಬಲಿಸುತ್ತಾನೆ, ಆ ಜನರಲ್ ಸ್ಮಟ್ಸ್. ಪ್ರೇಮ ದಿಂದ ಶತ್ರುವನ್ನು ಮಿತ್ರನಾಗಿ ಮಾಡಿಕೊಂಡ ಇಂತಹ ನಿದರ್ಶನ ಗಾಂಧಿಯ ಜೀವನದಲ್ಲಿ ಹೇರಳ.

ಗಾಂಧಿ ಬಹು ಸರಳ ಜೀವಿ. ಐದಕ್ಕೂ ಹೆಚ್ಚಾದ ವ್ಯಂಜನದ ಊಟ ವಿಲ್ಲ. ಯಾರು ಯಾವಾಗ ಬೇಕಾದರೂ ಗಾಂಧಿಯನ್ನು ಕಂಡು ಮಾತ ನಾಡಬಹುದು. ಆಶ್ರಮಕ್ಕೆ ಬೀಗವೂ ಇಲ್ಲ, ಕಾವಲು ಮೊದಲೇ ಇಲ್ಲ. ಪ್ರವಾಸ ಕಡೇ ದರ್ಜೆಯ ಗಾಡಿಯಲ್ಲಿ. ಇವನ ಮೇಲ್ಪಂಕ್ತಿ ಕಾಂಗ್ರೆಸ್ ಮಂತ್ರಿಗಳಿಗೆ ಪೇಚಾಟ. ತಮ್ಮ ಅದ್ವಿತೀಯ ನಾಯಕನೇ ಕಡೇ ದರ್ಜೆ ಗಾಡಿಯಲ್ಲಿ ಪ್ರವಾಸ ಮಾಡಿದರೆ, ಜನಸೇವಕರಾದ ತಾವು ಮೇಲ್ತರಗತಿ ಯಲ್ಲಿ ಪ್ರವಾಸ ಮಾಡುವುದು ಹೇಗೆ?

ಅಹಂಕಾರಕ್ಕೆ ಗಾಂಧಿ ತಿಲಮಾತ್ರವೂ ಎಡೆಗೊಡನು. ಗೌರೀಶಂಕರ ಆರೋಹಣ ಮಾಡಿದ ಸಾಹಸಿಯ ಹೆಮ್ಮೆ ಗಾಂಧಿಯಲ್ಲಿ ಕಾಣದು. ಅನೇಕ ರಿಗೆ ಗಾಂಧಿ ಪ್ರಿಯ ಬಾಪು. 'ಬಾಪು' ಎಂಬ ಹೆಸರಿನಿಂದಲೇ ಶ್ರೀಮಂತ ಬಿರ್ಲಾ ಮಹಾತ್ಮನ ಜೀವನ ವೈಶಿಷ್ಟ್ಯಗಳನ್ನು ಕಥಾರೂಪದಲ್ಲಿ ಬಣ್ಣಿಸಿರು ತ್ತಾನೆ. ದೆಹಲಿಯಿಂದ ಮೂವತ್ತು ಮೈಲಿ ದೂರದಲ್ಲಿಯ ವೃದ್ಧೆಯೊಬ್ಬಳು, ತನ್ನ ಅವಸಾನ ಕಾಲದಲ್ಲಿ ಗಾಂಧಿ ದರುಶನ ಬಯಸಿದಳು. ಅವಸರ ಕೆಲಸ, ಅಲ್ಪ ಸಮಯದ ತೊಂದರೆ ಇದ್ದರೂ ಕೊರೆಯುವ ಬೆಳಗಿನ ಚಳಿಯಲ್ಲಿ ಅವಳ ಮನೆಗೆ ಹೋಗಿ ಅಂತ್ಯದರ್ಶನ ಕೊಟ್ಟ ದುಃಖತ್ರಾತ ಗಾಂಧಿ. ಈ ದೃಶ್ಯ ಹೃದಯಂಗಮವಾಗಿ ಬಣ್ಣಿಸಿದ್ದಾನೆ, ಹಣವಂತ ಬಿರ್ಲಾ.

ಮೋಹನದಾಸನ ಮಾನವತ್ವವು ತಾನೇ ಬರೆದಿರುವ 'ಆತ್ಮಕತೆ' ಯಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ಗಾಂಧಿ ಮಹಾತ್ಮನಾಗಿ ಜನಿಸಲಿಲ್ಲ. ಮಾನವ ಸಹಜ ದೋಷಗಳು ಮೋಹನದಾಸನಲ್ಲಿಯೂ ಕಾಣಬರುತ್ತವೆ. ಬಾಲ್ಯವಿವಾಹ, ವೇಶ್ಯಾಗೃಹ ಪ್ರವೇಶ, ಗಂಡಹೆಂಡಿರ ಪ್ರೇಮಕಲಹ, ಯಾವ ಸಂಸಾರದಲ್ಲಿ ಇಲ್ಲ! ಕುರಿಮಾಂಸ ಸೇವಿಸಿದ ಗಾಂಧಿಗೆ ಕುರಿ ಮರಿ ಉದರದಲ್ಲಿಯೇ 'ಬ್ಯಾ, ಬ್ಯಾ' ಎಂದಂತೆ ಭಾಸವಾಗುತ್ತದೆ. ಕಸ್ತೂರಿಬಾಯಿ ಪಥ್ಯಕ್ಕಾಗಿ ಉಪ್ಪು ಬಿಡುವುದು ಕಷ್ಟವೆಂದರೆ, ಹೆಂಡತಿಗೆ ಬುದ್ಧಿ ಕಲಿಸಲು ಒಂದು ವರುಷ ಉಪ್ಪು, ಬೇಳೆ ತ್ಯಜಿಸಿದ ಮೋಹನದಾಸ, ಮಹಾತ್ಮನೋ ಮನುಜನೋ? ಶಾಂತಿ, ಸಂಯಮ, ಸಾಹಸ, ಸತ್ಯೋಪಾಸನೆ, ಸತ್ಯಸಂಕಲ್ಪ, ಸತ್ಯಸಾಧನೆ, ಸೇವಾಕಾಂಕ್ಷೆ, ಸತ್ಯಾಗ್ರಹ ಇವುಗಳನ್ನು ಗಳಿಸಿ, ಸಾಧಿಸಿ, ಮಾನವ ಗಾಂಧಿ ಇಂದು ಮಹಾತ್ಮಾ ಗಾಂಧಿಯಾಗಿದಾನೆ.

"ನಾನು ಅನೇಕ ಮತ ಬೋಧಕರನ್ನು ನೋಡಿದೇನೆ. ಮತೋದ್ಧಾರಕರಂತೆ ನಟಿಸುವ ರಾಜಕಾರಣಿಗಳೇ ಅದರಲ್ಲಿ ಹೆಚ್ಚು. ಬಾಹ್ಯದಲ್ಲಿ ರಾಜಕೀಯನಾಗಿ ಕಾಣುವೆ; ಆದರೆ ಹೃದಯಾಂತರದಲ್ಲಿ ನಿಜವಾಗಿಯೂ ಧರ್ಮೋಪಾಸಕ ನಾನು" ಎಂದು ೧೯೧೭ರಲ್ಲಿ ಭಾರತ ಕಾರ್ಯದರ್ಶಿ ಮಾಂಟೆಗೂ ತನ್ನನ್ನು ಭೇಟಿ ಮಾಡಿದಾಗ ಹೇಳಿರುತ್ತಾನೆ. ಗಾಂಧಿ ಧರ್ಮರಹಿತ ರಾಜಕೀಯ ಅನುಮೋದಿಸನು. ಅವನಿಗದು ರುಚಿಸದು. ವಸ್ತ್ರದ ಹಾಸು ಹೊಕ್ಕುಗಳಂತೆ ಧರ್ಮ ಮತ್ತು ರಾಜಕೀಯ ಒಂದರಲ್ಲೊಂದು ಹೆಣೆದುಕೊಂಡಿವೆ. ರಾಜಕೀಯ ನಮ್ಮನ್ನು ಹಾವಿನಂತೆ ಹೆಡೆ ಕಟ್ಟಿದೆ. ಆ ಬಂಧನದಿಂದ ಪಾರಾಗುವುದು ಸುಲಭವಲ್ಲ. ಪಾರಾಗುವುದಕ್ಕಾಗಿಯೇ ಅದರೊಡನೆ ಹೋರಾಟ ನಡೆಸಬೇಕಾಗಿದೆ ಸತ್ಯೋಪಾಸಕನಾದ ನಾನು" ಎನ್ನುತ್ತಾನೆ ಗಾಂಧಿ.

ಗಾಂಧಿಯ ರಾಜಕೀಯ ವಿಶೇಷತಃ ಪಾರಮಾರ್ಥಿಕ. ಪ್ರಚಲಿತ ರಾಜಕೀಯ ದೃಷ್ಟಿಯಿಂದ ಅವ್ಯವಹಾರಿಕ, ಅಶಾಸ್ತ್ರೀಯ ಎಂದು ತೋರಬಹುದು. ಗಾಂಧಿಯ ತತ್ವಗಳು ನೈತಿಕ, ಧಾರ್ಮಿಕ, ಪಾರಮಾರ್ಥಿಕಗಳಿಂದ ಪರಿಪ್ಲುತವಾಗಿವೆ. ಮಾನವನ ನಡೆನುಡಿಗಳನ್ನು ತಿದ್ದಿ ಅವನಲ್ಲಿ

ಅಡಗಿರುವ ದೈವೀ ಸಂಪದಗಳಿಗೆ ಪುಟವಿಟ್ಟು, ಪಾಪಭೀರುಕ ಮಾಡಿ, ವ್ಯಕ್ತಿಯನ್ನು ಋಷಿಪುಂಗವರ ಉನ್ನತ ಶ್ರೇಣಿಗೆ ಒಯ್ಯುಬಹುದು. ಪರಲೋಕದಲ್ಲಿ ಪರಮಾತ್ಮನ ಸಾನ್ನಿಧ್ಯ ಸೇರಲು ಸಹಾಯ ಮಾಡಬಹುದು. ಆದರೆ ಇಹಲೋಕದ ರಾಜಕೀಯ ವ್ಯವಹಾರದಲ್ಲಿ ಅದಕ್ಕೆ ಸ್ಥಾನವಿದೆಯೇ? ಸಾಮ್ಯವಾದ-ಸಮತಾವಾದಗಳಂತೆ, ಅಹಿಂಸಾವಾದ ಶಾಸ್ತ್ರೀಯವಾದ ರಾಜಕೀಯವೇ? ವ್ಯವಹಾರ ಯೋಗ್ಯವೇ?

ಗಾಂಧಿ ಮತ್ತು ಗಾಂಧೀ ತತ್ತ್ವಗಳನ್ನುದ್ದೇಶಿಸಿ ವಿಖ್ಯಾತ ಬರಹಗಾರರು ನಾನಾ ದೇಶಗಳಲ್ಲಿ ಅನೇಕ ಗ್ರಂಥ ಬರೆದಿದ್ದಾರೆ. ಸಾರ್ವಜನಿಕ ಕ್ಷೇತ್ರಕ್ಕೆ ಗಾಂಧಿ ಕೈಹಾಕಿದ ಮೊದಲ್ಗೊಂಡು ಅವನ ತತ್ವಗಳನ್ನು 'ಇಂಡಿಯನ್ ಒಪಿನಿಯನ್', 'ಯಂಗ್ ಇಂಡಿಯ', 'ಹರಿಜನ', 'ಗ್ರಾಮ ಉದ್ಯೋಗ' ಮೊದಲಾದ ಆಂಗ್ಲಭಾಷಾ ಪತ್ರಿಕೆಗಳೂ: 'ನವಜೀವನ', 'ಹರಿಜನ ಬಂಧು', 'ಖಾದಿ ಜಗತ್', 'ರಾಷ್ಟ್ರಭಾಷಾ ಸಮಾಚಾರ', 'ಸರ್ವೋದಯ' ಮೊದಲಾದ ಹಿಂದೀ ಗುಜರಾತಿ ಪತ್ರಿಕೆಗಳೂ ಅವಿಚ್ಛಿನ್ನ ಪ್ರಚಾರ ನಡೆಸುತ್ತಿವೆ. ತಮ್ಮ ತತ್ವಗಳನ್ನು ಅನುಷ್ಠಾನಕ್ಕೆ ತರಲು ಮಹಾಪುರುಷರು ಸತತ ಪ್ರಯತ್ನ ನಡೆಸುತ್ತಿರುತ್ತಾರೆ. ಹೀಗಿರುವಲ್ಲಿ ಗಾಂಧಿಯ ಜೀವಿತ ಕಾಲದಲ್ಲಿಯೇ ಆತನ ನಡೆನುಡಿಗಳನ್ನು, ಸಿದ್ಧಾಂತಗಳನ್ನು ವ್ಯಕ್ತಿಯಿಂದ ಪ್ರತ್ಯೇಕಿಸಿ ಅವುಗಳಿಗೆ ಶಾಸ್ತ್ರೀಯ ರೂಪು ಕೊಡುವುದು ಸುಲಭವಲ್ಲ. ಆದರೂ, ಚಿತ್ರದ ಪರದೆಯಂತೆ ಗಾಂಧಿಯ ಜೀವನವನ್ನು ಹಿನ್ನೆಲೆಯಾಗಿ ಮಾಡಿಕೊಂಡು ವಿನಯ ನಮ್ರತೆಯಿಂದ ಈ ಸಣ್ಣ ಹೊತ್ತಿಗೆ ಆ ಮಹಾ ಪ್ರಯತ್ನಕ್ಕೆ ಕೈಯಿಟ್ಟಿದೆ.

ಸಮ್ಯಗ್ ಜಾನಾತಿ ವೈ ಕೃಷ್ಣಃ ।

ಕಿಂಚಿತ್ ಪಾರ್ಥೋ ಧನುರ್ಧರಃ ॥

The name of Gandhi even in his life - time has passed beyond the meaning of an individual to the meaning of a way of living in our troubled modern world. ...Pearl Buck

I have sacrificed no principle to gain a political advantage. ...Gandhi

೨. ಹಿಂದ್ - ಸ್ವರಾಜ್

" ಗಾಂಧೀವಾದ ಎಂಬ ಮತವಿಲ್ಲ ; ಪ್ರತ್ಯೇಕ ವಾದವಿಲ್ಲ. ಗಾಂಧಿ ಪಂಥ, ಗಾಂಧಿ ಅನುಯಾಯಿಗಳು ಎಂಬ ಪ್ರತ್ಯೇಕ ಪಂಗಡ ನನ್ನಿಂತರುವಾಯ ಸ್ಥಾಪಿಸುವ ಉದ್ದೇಶ ನನಗಿಲ್ಲ. ಹೊಸ ತತ್ವಗಳಾಗಲಿ, ಹೊಸ ಧರ್ಮವಾಗಲಿ ನಾನು ಪ್ರತಿಪಾದಿಸಿಲ್ಲ. ಸನಾತನವೂ ನಿತ್ಯವೂ ಆದ ಸತ್ಯ ಮಾನವನ ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ಬರಲೆಂಬ ಪ್ರಯತ್ನ ಮಾತ್ರ ಮಾಡಿದ್ದೇನೆ ನಾನು. ನಾಳೆ ಅವು ಮಾರ್ಪಡಬಹುದು. ನನ್ನ ಅಭಿಪ್ರಾಯಗಳೂ, ತೀರ್ಮಾನಗಳೂ ಕಡೆಯ ಮಾತಲ್ಲ. ನನ್ನ ಅಭಿಪ್ರಾಯ ನಾನೇ ಬದಲಾಯಿಸಬಹುದು. ಪ್ರಪಂಚಕ್ಕೆ ತಿಳಿಸಲು ಹೊಸದಾವುದೂ ನನ್ನಲ್ಲಿಲ್ಲ. ಸತ್ಯ ಅಹಿಂಸೆಗಳು ಹಿಮಾಚಲದಂತೆ ಪುರಾತನವಾದವು. ಸತ್ಯ ನನ್ನ ಸಹಜ ಒಡನಾಡಿ. ಸತ್ಯಶೋಧನೆಯಲ್ಲಿ ಅಹಿಂಸಾಪಥ ನನಗೆ ಗೋಚರವಾಯಿತು. ಸತ್ಯ ಮತ್ತು ಅಹಿಂಸಾ ತತ್ವಗಳನ್ನು ಸಾಧ್ಯವಾದಷ್ಟು ವಿಸ್ತೃತ ರಂಗದಲ್ಲಿ ಆಚರಣೆಗೆ ತರುವ ಪ್ರಯತ್ನ ನಾನು ಮಾಡಿದೇನೆ. ಇದೇ ನನ್ನ ಭಾಗದ ಭಾಗ್ಯ. ಈ ಪಥದಲ್ಲಿ ನಡೆಯುತ್ತಾ, ಎಡವುತ್ತಾ, ಎಡರು ತೊಡರು ಎದುರಿಸುತ್ತಾ, ತಪ್ಪು ತಿದ್ದಿಕೊಳ್ಳುತ್ತಾ, ಪಾಠ ಕಲಿಯುತ್ತಾ ಮುಂದುವರಿಯುತ್ತಿದ್ದೇನೆ. ಆದುದರಿಂದಲೇ ಜೀವ ಮತ್ತು ಜೀವನ ಸಮಸ್ಯೆಗಳು, ಸತ್ಯ ಮತ್ತು ಅಹಿಂಸಾ ಸಂಶೋಧನೆಯ ರೂಪ ರೂಪಾಂತರಗಳಾಗಿ ಹೋಗಿವೆ ನನಗೆ. ಈ ಜೀವನಧರ್ಮ — ಮತವೆನಿಸಿಕೊಳ್ಳುವುದಾದರೆ — ಇದೇ ನನ್ನ ಮತ. ಆದರೆ ಇದು

'ಗಾಂಧೀವಾದ' ಎನಿಸಿಕೊಳ್ಳಲಾರದು. ಇದರಲ್ಲಿ 'ವಾದ' ಯಾವುದೂ ಇಲ್ಲ" ಹೀಗೆಂದು ಮಹಾತ್ಮಾ ಗಾಂಧಿಯೇ ಹೇಳಿರುವಾಗ 'ಗಾಂಧೀ ವಾದ' ಪ್ರಸ್ತಾಪ ಮಾಡುವುದು ಎದೆಗಾರಿಕೆಯೇ ಸರಿ.

ಗಾಂಧಿ ೧೯೦೯ರಲ್ಲಿ 'ಹಿಂದ್ ಸ್ವರಾಜ್ಯ' ಎಂಬ ಸಣ್ಣ ಹೊತ್ತಿಗೆಯಲ್ಲಿ ಹಿಂದುಸ್ಥಾನದ ಅವನತಿಯ ಕಾರಣ; ಅದು ಬ್ರಿಟಿಷರ ವಶವಾದುದು; ಸ್ವರಾಜ್ಯ ಎಂದರೇನು; ಸ್ವರಾಜ್ಯ ಗಳಿಸುವುದು ಹೇಗೆ ಮೊದಲಾದ ವಿಚಾರ ಪ್ರಸ್ತಾಪ ಮಾಡಿರುತ್ತಾರೆ. ಇದನ್ನು ಓದಿದರೆ ಗಾಂಧಿ ಎಂತಹ ಓಬೀರಾಯನ ಕಾಲದ ವ್ಯಕ್ತಿ, ಎಂತಹ ವಕ್ರದೃಷ್ಟಿ ಅವನದು ಎನಿಸದಿರದು. ಈ ಪುಸ್ತಕ ಪ್ರಕಟವಾಗಿ ಹನ್ನೆರಡು ವರುಷಗಳಮೇಲೆ 'ಇದರಲ್ಲಿ ಏನಾದರೂ ವ್ಯತ್ಯಾಸ ಮಾಡುವಿರಾ' ಎಂದು ಕೇಳಿದರೆ—"ಇಂಗ್ಲೆಂಡಿನ ಪಾರ್ಲಿಮೆಂಟನ್ನು ವೇಶ್ಯೆಗೆ ಹೋಲಿಸಿರುವುದು ಕೆಲವು ಮಹಿಳೆಯರಿಗೆ ಒಪ್ಪಿಲ್ಲ; ಆ ಒಂದು ಶಬ್ದ ವಿನಾ ಬೇರೆ ಬದಲಾವಣೆಯ ಆವಶ್ಯಕತೆ ಕಾಣಬರುವುದಿಲ್ಲ" ಎಂದು ಉತ್ತರ ಕೊಟ್ಟನು. ಗಾಂಧಿಯ ಮನದೋಟ ಯಾವರೀತಿ ಇದೆ ಎಂಬುದನ್ನು ಈ ಪುಸ್ತಕದಿಂದ ತಿಳಿಯಬಹುದು:—

"(೧) ಪೂರ್ವಪಶ್ಚಿಮಗಳ ಐಕ್ಯತೆಗೆ ಯಾವ ಕೋಟಿ ಕಂದಕಗಳೂ ಅಡ್ಡಿಬಾರವು (೨) ಪಶ್ಚಿಮಾರ್ಧ ಗೋಳದ್ದೆಂದು ಪ್ರತ್ಯೇಕ ನಾಗರಿಕತೆಯಿಲ್ಲ. ಇದನ್ನು ಪಾಶ್ಚಿಮಾತ್ಯ ನಾಗರಿಕತೆ ಎನ್ನುವ ಬದಲು ಪ್ರಾಪಂಚಿಕ ಅಥವ ಭೌತಿಕ ನಾಗರಿಕತೆ ಎಂಬುದು ಉಚಿತ. (೩) ಆಧುನಿಕ ನಾಗರಿಕತೆಯ ಹಿಡಿತಕ್ಕೆ ಸಿಲುಕುವ ಮುನ್ನ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯಗಳಲ್ಲಿ ಹೆಚ್ಚು ಸಾಮರಸ್ಯ ಮತ್ತು ಅನ್ಯೋನ್ಯತೆ ಇತ್ತು. (೪) ಬಾಹುಬಲದಿಂದ, ಕತ್ತಿ ಮೊನೆಯಿಂದ ಬ್ರಿಟಿಷರು ಹಿಂದುಸ್ಥಾನ ಆಕ್ರಮಿಸಲಿಲ್ಲ. ಭಾರತೀಯ ಜಡ ಪ್ರಕೃತಿ, ಆಲಸ್ಯ, ನಂಬಿಕೆ ಗುಣ, ಬ್ರಿಟಿಷರ ಠಕ್ಕು ವಿದ್ಯೆ— ಇವು ಹಿಂದುಸ್ಥಾನ ಬ್ರಿಟಿಷರ ವಶವಾಗಿ, ಅವರು ಇಲ್ಲಿಯೇ ನೆಲೆಯೂರಲು ಸಹಕಾರಿಯಾದುವು. (೫) ಹಿಂದುಸ್ಥಾನ ಆಳುತ್ತಿರುವುದು ಆಧುನಿಕ ನಾಗರಿಕತೆ—ಬ್ರಿಟಿಷರಲ್ಲ. ಆಧುನಿಕ ನಾಗರಿಕತೆ—ತಂತಿ, ಟಪಾಲು ಟೆಲಿಫೋನ್, ಇಂಗ್ಲೀಷ್ ಭಾಷೆ, ರೈಲ್ವೆ, ಆಸ್ಪತ್ರೆ, ಕೋರ್ಟು ವ್ಯವಹಾರ—ಇವುಗಳೇ ಹಿಂದುಸ್ಥಾನ ಆಳುತ್ತಿವೆ. ವಾಹನ ಸೌಲಭ್ಯ ಅಂಟುಜಾಡ್ಯ ವ್ಯಾಪನೆಗೆ

ಸಹಕಾರಿ ; ಕೋರ್ಟು ಅಂತಃಕಲಹ ಬೆಳೆಸುತ್ತದೆ ; ಪರಭಾಷೆ ರಾಷ್ಟ್ರಭಾಷೆಗೆ ಆಘಾತ. (೬) ಬೊಂಬಾಯಿ, ಕಲ್ಕತ್ತಾ ಮೊದಲಾದ ದೊಡ್ಡ ಪಟ್ಟಣಗಳು ಪಾಪಕೂಪದ ನೆಲೆವೀಡು. ಯಾಂತ್ರೀಕರಣದ ಸಮಸ್ತ ಸಂಕಟಗಳಿಗೂ ಆಶ್ರಯಸ್ಥಾನ. (೭) ಬ್ರಿಟಿಷರಿಗೆ ಬದಲಾಗಿ ಭಾರತೀಯರೇ ರಾಜ್ಯಸೂತ್ರ ವಹಿಸಿ, ಆಧುನಿಕ ನಾಗರಿಕತೆ, ಶಿಷ್ಟಾಚಾರ ಅನುಸರಿಸಿ ರಾಜ್ಯಭಾರ ನಡೆಸುವುದರಲ್ಲಿ ಸಧ್ಯದ ಪರಿಸ್ಥಿತಿ ಮಾರ್ಪಡದು. ಇಂಗ್ಲೆಂಡಿಗೆ ಹರಿದೋಗುತ್ತಿರುವ ಹೊನ್ನಿನ ಹೊಳೆಯಲ್ಲಿ ಸ್ವಲ್ಪ ಉಳಿತಾಯವಾಗಬಹುದು, ಅಷ್ಟೇ. ಇದಕ್ಕೂ ಹೆಚ್ಚು ಪ್ರಯೋಜನವಾಗದು. (೮) ತಮ್ಮ ಆಧುನಿಕ ನಾಗರಿಕತೆ ಪಾಶ್ಚಿಮಾತ್ಯ ರಾಷ್ಟ್ರಗಳು ತೊರೆಯುವುದರಿಂದ ಅಥವಾ ಪೌರ್ವಾತ್ಯಗಳು ಆಧುನಿಕ ನಾಗರಿಕತೆ ಅನುಸರಿಸಿ ಹಾಗೆಯೇ ಆಗುವಲ್ಲಿ ಪೂರ್ವ ಪಶ್ಚಿಮಗಳು ಐಕ್ಯವಾದಂತೆ ಭಾಸವಾಗಬಹುದು. ಆದರೆ ಇದು ಶಾಶ್ವತವಲ್ಲ. ಜರ್ಮನಿ ಮತ್ತು ಇಂಗ್ಲೆಂಡಿನ ತಾತ್ಕಾಲಿಕ ಒಪ್ಪಂದದಂತೆಯೇ ಆತ್ಮ ರಕ್ಷಣೆಗಾಗಿ ಉಭಯತ್ರರೂ 'ಮೃತ್ಯುಮಂದಿರದಲ್ಲಿ' ಆಶ್ರಯ ಪಡೆದಂತೆ. (೯) ಇಡೀ ಪ್ರಪಂಚ ಸುಧಾರಿಸುವುದು ಸಾಧ್ಯವೆಂದು ಭಾವಿಸುವುದಾಗಲಿ ಪ್ರಯತ್ನಿಸುವುದಾಗಲಿ ಕೇವಲ ಮೂರ್ಖತನ. ವೇಗವಾಹನ, ವಾಹಕಗಳಿಂದ ಇದನ್ನು ಸಾಧಿಸಬಹುದೆಂದ. ತಿಳಿಯುವುದು ಅಸಾಧ್ಯ ಸಾಧಿಸ ಹೊರಟಂತೆ. (೧೦) ಐಹಿಕ ಸುಖಸಾಧನೆಗಳ ಶೇಖರಣೆ ಮಾನವನ ನೈತಿಕ ಕಲ್ಯಾಣಕ್ಕೆ ಎಂದಿಗೂ ಒದಗಿರಬಾರದು. (೧೧) ಪಾಶ್ಚಿಮಾತ್ಯ ವೈದ್ಯವಿದ್ಯೆ ಮಾಟಗಾರ ವಿದ್ಯೆ, ವಿಷವೃಕ್ಷ. ಶಸ್ತ್ರವಿಶಾರದನಿಗಿಂತ ಅಳಲೇಕಾಯಿ ಪಂಡಿತನೇ ಮೇಲು. (೧೨) ಆಸ್ಪತ್ರೆ ಅನಾಚಾರದ ಆವಾಸಸ್ಥಾನ. ಅಜೀರ್ಣ ಗುಣಪಡಿಸಿ, ಮರಳಿ ಮಿತಿ ಮೀರಿ ತಿನ್ನಲು ಅಲ್ಲದೆ ತಪ್ಪುಮಾಡಿ ತಂದುಕೊಂಡ ರೋಗ ಗುಣಪಡಿಸಿ, ಪಾಪಕೃತ್ಯ ಪ್ರೋತ್ಸಾಹಿಸುವುದೂ ಆಸ್ಪತ್ರೆ. ಪ್ರಾಣಿಹಿಂಸೆಯ ಆವಾಸಸ್ಥಾನ; ಹಿಂದು-ಮುಸಲ್ಮಾನರು ತಮ್ಮ ಆಚಾರ-ವ್ಯವಹಾರಗಳಿಗೆ ವಿರುದ್ಧ ಔಷಧ ಸೇವಿಸುವಂತೆ ಮಾಡುವುದು ಈ ಪಾಪಕೂಪ. (೧೩) ಕಳೆದ ಐವತ್ತು ವರುಷಗಳಲ್ಲಿ ಆಧುನಿಕ ನಾಗರಿಕತೆಯಿಂದ ಕಲಿತುದನ್ನು ಮರೆಯಬೇಕು. ಆಗ ಹಿಂದುಸ್ಥಾನದ ಉದ್ಧಾರವಾದೀತು. ರೈಲ್ವೆ, ತಂತಿ, ಆಸ್ಪತ್ರೆ, ವಕೀಲವೃತ್ತಿ, ವೈದ್ಯಕೀಯ ಇವೆಲ್ಲ ತೊಲಗಬೇಕು. (೧೪) ಖಾದಿ ಧರಿಸಬೇಕು. ಪರದೇಶದ ಅಥವಾ ಸ್ವದೇಶದ ಗಿರಣಿಬಟ್ಟೆ ಧರಿಸಲಾಗದು.

(೧೫) ಇಂಗ್ಲೆಂಡ್ ಸಹ ಹಿಂದುಸ್ಥಾನಕ್ಕೆ ಈ ಕೆಲಸದಲ್ಲಿ ನೆರವಾಗಬೇಕು. (೧೬) ಹಿಂದಿನ ಪೂಜ್ಯರು, ಋಷಿಪುಂಗವರು ಸುಖಜೀವನದ ಸಾಧನೆ ತಗ್ಗಿಸಿ, ಲೋಕದಲ್ಲಿ ಸುಖ ಶಾಂತಿ ನೆಲೆಸುವಂತೆ ಮಾಡಿದ್ದರು. ದೀರ್ಘಕಾಲ ಬದುಕಿ ಬಾಳುತ್ತಿದ್ದರು. ೫೦೦೦ ವರುಷಗಳ ಪುರಾತನ ಮರದ ನೇಗಿಲೇ ಇಂದಿಗೂ ಭಾರತ ಭೂಮಿಯ ರೈತನ ಆಧಾರ."

೧೯೩೮ರಲ್ಲಿ 'ಹಿಂದ್ ಸ್ವರಾಜ್ಯ'ದ ಹೊಸ ಸಂಸ್ಕರಣ ಹೊರಬಿತ್ತು. ಈ ಪುಸ್ತಕದ ಯಾವ ವಾಕ್ಯವನ್ನೂ ಗಾಂಧಿ ತಿದ್ದಿ ಬರೆಯಲಾರ ಎಂದು ಮಹದೇವ ದೇಸಾಯಿ ಮುನ್ನುಡಿಯಲ್ಲಿ ಸೂಚಿಸಿದ್ದಾರೆ. ಲಾರ್ಡ್ ಲೋಥಿಯನ್ 'ಹಿಂದ್ ಸ್ವರಾಜ್ಯ' ಓದಿನೋಡಿ, 'ಗಾಂಧಿಯ ರಾಜಕೀಯ ಮತ ಇದರಲ್ಲಿ ಸ್ಪಷ್ಟವಿದೆ. ಅವರನ್ನು ಪ್ರಶ್ನಿಸಬೇಕಾದ್ದು ಅನವಶ್ಯಕ' ಎಂದ.

"ಇವು ನನ್ನ ನಿಶ್ಚಿತ ತೀರ್ಮಾನಗಳು. ನಾಗಾಲೋಟದ ಈ ಹುಚ್ಚು ಯಂತ್ರಯುಗದಲ್ಲಿ, ಈ ನನ್ನ ಮತ ಅಂಗೀಕೃತವಾಗಿ, ಆಚರಣೆಗೆ ಬಂದು, ಪ್ರಪಂಚ ಸುಧಾರಣೆಯಾದೀತೆ ಎಂಬ ಶಂಕೆ ಸತ್ಯಶೋಧಕನಾದ ನನ್ನನ್ನು ಬಾಧಿಸದು. ಪ್ರಪಂಚ ಈ ಅಭಿಪ್ರಾಯ ಸ್ವೀಕರಿಸುವವರೆಗೆ ನಾನು ಕಾಯಲಾರೆ. ಸತ್ಯವೆಂದು ತೋರುವ ದಾರಿಯಲ್ಲಿ ನಾನು ಮುಂದುವರಿಯುವುದು ಖಂಡಿತ" ಎ-ದು ಗಾಂಧಿ ನುಡಿ-ನಡೆ ಒಂದುಮಾಡಿ ಮುಂದುವರಿಯುತ್ತಿದಾನೆ.

ರೌಲಟ್ ಮಸೂದೆ ಪ್ರತಿಭಟಿಸಲು ೧೯೧೯ರಲ್ಲಿ ಗಾಂಧಿ ಹೂಡಿದ ಅಸಹಕಾರ ಚಳವಳಿಯ ಮೂಲ 'ಹಿಂದ್-ಸ್ವರಾಜ್ಯ' ದಲ್ಲಿ ಅಡಕವಾಗಿದೆ. ವಿದ್ಯಾಸಂಸ್ಥೆಗಳ ಬಹಿಷ್ಕಾರ, ರಾಷ್ಟ್ರೀಯ ಶಾಲೆಗಳ ಸ್ಥಾಪನೆ, ಕೋರ್ಟುಗಳ ಬಹಿಷ್ಕಾರ—ಪಂಚಾಯತಿಗಳ ಸ್ಥಾಪನೆ, ಪರದೇಶವಸ್ತ್ರ ಬಹಿಷ್ಕಾರ, ಖಾದೀ ಪ್ರೋತ್ಸಾಹ, ಬಿರುದು ಬಾವಲಿಗಳ ಧಿಕ್ಕಾರ, ಹಿಂದೀ ಭಾಷಾ ಪ್ರಚಾರ, ಸೈನ್ಯಕ್ಕೆ ಸೇರಲು ನಿರಾಕರಣೆ, ರೈಲ್ವೆ ಸಂಚಾರ ತಗ್ಗಿಸುವುದು ಮೊದಲಾದ ಕಾರ್ಯಕ್ರಮಗಳ ಮೂಲ 'ಹಿಂದ್-ಸ್ವರಾಜ್' ಎನ್ನುವುದರಲ್ಲಿ ಸಂದೇಹವೇನು?

Life has become a series of vicious circles in which cause and effect feed each other and a whole process of courting evils and finding remedies constitute the programme from morn to cve and eve to morn. ...Dr. Pattabhi

೩. ಆರ್ಥಿಕ ವಿಷ ಚಕ್ರ

ಆರ್ಥಿಕವಿಲ್ಲದ ರಾಜಕೀಯವಿಲ್ಲ. ಆರ್ಥಿಕ ಜೀವನ ಸರಿಪಡಿಸುವುದೇ ರಾಜಕೀಯದ ಉದ್ದೇಶ. ಆರ್ಥಿಕ ಸಮಸ್ಯೆಗಳ ನಿವಾರಣೆಗಾಗಿಯೇ ಅನೇಕ ರಾಜಕೀಯ ಸಿದ್ಧಾಂತಗಳು ತಲೆದೋರಿವೆ. ಸಮಾಜವಾದ, ಸಮತಾವಾದ ಗಳ ಮೂಲ ಆರ್ಥಿಕ. ಆದರೆ ಪ್ರಪಂಚದ ಈ ತುತ್ತಿನಚೀಲದ ಸಮಸ್ಯೆ ಹೇಗೆ ಬಗೆಹರಿಸುವುದು ಎಂಬುದಕ್ಕೆ ಸಮರ್ಪಕ, ಸಾರ್ಥಕ ಉತ್ತರ ಇನ್ನೂ ಯಾರೂ ಕೊಟ್ಟಿಲ್ಲ.

ವ್ಯಕ್ತಿಯ ಉದರ ಅನೇಕ ರೋಗಗಳಿಗೆ ಹೇಗೆ ಮಾತೃಸ್ಥಾನವೋ ಹಾಗೆಯೇ ಪ್ರಪಂಚದ ನಾನಾ ಕಷ್ಟ ಸಂಕಟಗಳಿಗೂ, ಯುದ್ಧ-ವಿಪ್ಲವ ಗಳಿಗೂ ಆರ್ಥಿಕ ಜೀವನವೇ ಮುಖ್ಯ ಕಾರಣ. ಮನುಷ್ಯನ ಶಕ್ತಿ-ಸಾಮ ರ್ಥ್ಯಗಳನ್ನು ಹೆಚ್ಚಿಸುವ ಯಂತ್ರ ಮತ್ತು ಯಂತ್ರಕ್ಕೆ ಶಕ್ತಿ ಕೊಡುವ ನೀರು, ಹಬೆ, ಎಣ್ಣೆ, ಗಾಳಿ, ವಿದ್ಯುತ್ ಮೊದಲಾದ ಸಾಧನಗಳು ಬಳಕೆಗೆ ಬರುತ್ತಾ, ತುತ್ತಿನ ಚೀಲದ ಸಮಸ್ಯೆ ಸುಲಭವಾಗಿ ಬಗೆ ಹರಿಯುವದೆಂಬ ಆಶಾಕಿರಣ ಎಲ್ಲೆಲ್ಲಿಯೂ ತಲೆದೋರಿತು. ಆದರೆ ಬಂಡವಾಳಶಾಹಿ ಇದನ್ನು ಬಗೆಹರಿ ಸದೆಹೋಯಿತು. ಸರಕು ಹೇರಳವಾಗಿ ಉತ್ಪನ್ನವಾಗುತ್ತ, ಒಂದೆಡೆ ಅತಿ ಶಯ ದಾರಿದ್ರ್ಯ, ಮತ್ತೊಂದೆಡೆ ಅಪಾರ ಐಶ್ವರ್ಯ ಈ ರೀತಿ ಮಾನವ ಸಮಾಜದಲ್ಲಿ ವಿಶೇಷ ಅಂತರ ತಲೆದೋರುತ್ತ ಬಂದಿದೆ.

ಐಶ್ವರ್ಯ ಗಳಿಸಿದ ವ್ಯಕ್ತಿ ಪರರ ಅಸೂಯೆಗೆ ಕಾರಣನಾಗುತ್ತಾನೆ. ಅಂತೆಯೇ ನಿಜ ಸಂಪದ್ ಸಮೃದ್ಧಿ ರಾಷ್ಟ್ರ. ತನಗೆ ಸಾಕಷ್ಟು ಆಹಾರ ಬೆಳೆ

ಯಲಾರದ ರಾಷ್ಟ್ರ ಬೆಳೆ ಸಮೃದ್ಧಿ ರಾಷ್ಟ್ರವನ್ನು ಆಕ್ರಮಿಸಲು ಹಾತೊರೆಯುತ್ತದೆ. ಹೇರಳ ಬೆಳೆಯಾಗುವ ರಾಷ್ಟ್ರದ ಜನ ಸುಖಜೀವಿಗಳೂ, ನಿರ್ವೀರ್ಯರೂ ಆಗುತ್ತಾರೆ. ಆದರೂ ಐಶ್ವರ್ಯ ಸಹಾಯದಿಂದ ಆತ್ಮರಕ್ಷಣೆ ಮಾಡಿಕೊಳ್ಳಬಲ್ಲರು. ನಿರ್ಗತಿಕ ರಾಷ್ಟ್ರ, ಎಷ್ಟೇ ಬಲಯುತವಾದರೂ, ದೀರ್ಘಕಾಲ ಯುದ್ಧ ನಡೆಸದು. ಆದುದರಿಂದ ಐಶ್ವರ್ಯ ರಹಿತ ರಾಷ್ಟ್ರಗಳು ಒಂದಾಗಿ, ಸಂಪದ್ಯುಕ್ತ ರಾಷ್ಟ್ರದ ಮೇಲೆ ಯುದ್ಧ ಹೂಡುತ್ತವೆ.

ಸಂಪದ್ಯುಕ್ತ ರಾಷ್ಟ್ರ ತನಗೆ ಬೇಡದ ಸರಕನ್ನು ಪರದೇಶಗಳ ಮೇಲೆ ಹೊರಿಸಲು ಪ್ರಯತ್ನಿಸುತ್ತದೆ; ಬಲಪ್ರಯೋಗ ಮಾಡುತ್ತದಲ್ಲದೆ ಯುಕ್ತಿ, ತಂತ್ರ, ಸಂಧಾನ, ಲಂಚ, ಮೋಸ ಮೊದಲಾದ ರಾಜತಂತ್ರ ಹೂಡುತ್ತದೆ. ಶಕ್ತಿರಹಿತವಾದರೂ ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳು ಈ ಬಲಪ್ರಯೋಗ ಪ್ರತಿಭಟಿಸುತ್ತದೆ. ಹೀಗೂ ಸಂಕಟ, ಹಾಗೂ ಸಂಕಟ. ಈ ರೀತಿ ಪ್ರಪಂಚದ ಹೋರಾಟ ಸಾಗುತ್ತಲೇ ಇದೆ.

ದೇವದತ್ತ ವಿಪುಲ ಸೃಷ್ಟಿ ಸಂಪತ್ತೇ ಹಿಂದುಸ್ಥಾನಕ್ಕೆ ಶತ್ರುವಾಗಿ ಪರಿಣಮಿಸಿದೆ. ಗ್ರೀಕರು, ತುರುಷ್ಕರು, ಬರ್ಬರರು, ಮೊಗಲರು, ಡಚ್ಚರು, ಫ್ರೆಂಚರು, ಆಂಗ್ಲೇಯರು ಮೊದಲಾಗಿ ಎಲ್ಲರೂ ಹಿಂದುಸ್ಥಾನದ ಕಲ್ಪವೃಕ್ಷ ಕಾಮಧೇನುಗಳ ಸೂರೆಗಾಗಿಯೇ ಬಂದವರು. ಮೆಣಸು, ಜೀರಿಗೆ, ಚಿನ್ನ, ಬೆಳ್ಳಿ, ರೇಷ್ಮೆ ಹತ್ತಿ ಬಟ್ಟೆ, ಶ್ರೀಗಂಧ ಮೊದಲಾದುವುಗಳನ್ನು ತಮ್ಮ ದೇಶಗಳಿಗೆ ಒಯ್ಯಲು ಬಂದವರು, ಕ್ರಮೇಣ ದೇಶ ಆಕ್ರಮಿಸಿ, ಹೊನ್ನಿನ ಸಿರಿನಾಡನ್ನು ಕಷ್ಟಸಂಕಟಗಳಿಗೆ ತಳ್ಳಿ, ದಾರಿದ್ರ್ಯ ದಾಸ್ಯದ ಬೀಡಾಗಿ ಮಾಡಿರುವುದು ಚರಿತ್ರಾರ್ಹ.

ಅತ್ಯುತ್ಪಾದನೆಯು ವಿರೋಧಾಭಾಸ; ಬಂಡವಾಳ ಪದ್ಧತಿ ಬಗೆಹರಿಸದ ವಿಚಿತ್ರ ಸಮಸ್ಯೆ! ಒಂದೆಡೆ ಕೋಟ್ಯಾಂತರ ಜನ ಹೊಟ್ಟೆಬಟ್ಟೆಗಿಲ್ಲದೆ ಹಾಹಾಕಾರ ಮಾಡುತ್ತಿರುವಲ್ಲಿ, ಇನ್ನೊಂದೆಡೆ ಹೇರಳ ಆಹಾರ ಸಾಮಗ್ರಿಗಳನ್ನು ಅಗ್ನಿದೇವನಿಗೆ ಆಹುತಿಮಾಡುವ ವಿಲಕ್ಷಣ ನೀತಿ! 'ಅತಿ ವೃಷ್ಟಿ ಆದರೆ ಕುಡಿಯಲು ನೀರಿಲ್ಲ' ಎಂಬಂತೆ ಅತ್ಯುತ್ಪಾದನೆ ಎಂಬ ಪದವೇ ಆಭಾಸವಲ್ಲವೇ? ಹಸಿದ ಜನಜಂಗುಳಿ ಅನ್ನಕ್ಕಾಗಿ ಬಾಯಿಬಾಯಿ ಬಿಡುತ್ತಿದ್ದರೆ, ಬೆಳೆಯನ್ನು ಬೂದಿಮಾಡುವುದು ಈ ಅತ್ಯುತ್ಪಾದನೆಯ ವೈಪ-

ರೀತ್ಯ. ೧೯೩೧ರಲ್ಲಿ ಬ್ರೆಜಲ್‌ನಲ್ಲಿ ೧೮೫ ಕೋಟಿ ಪೌಂಡುಗಳ ಕಾಫಿಬೀಜ ನಾಶಮಾಡಿದರು. ೧೯೩೩ರ ಹೊತ್ತಿಗೆ ೨೯೦ ಕೋಟಿ ರೂಪಾಯಿಗಳ ಕಾಫಿ ಬೆಂಕಿ ಅಥವ ನೀರಿನ ಪಾಲಾಯಿತು. ಕಾಫಿಬೀಜ ಯಾವ ರೀತಿ ನಾಶ ಮಾಡುವುದೆಂಬುದೇ ದೊಡ್ಡ ಸಮಸ್ಯೆಯಾಯಿತು. ಸುಡುವುದೋ ಹೂಳುವುದೋ, ನೀರಿನ ಪಾಲುಮಾಡುವುದೋ ? ಮೂರು ಪ್ರಯತ್ನಗಳೂ ನಡೆದವು. ಇದ್ದಲಿಗೆ ಬದಲಾಗಿ ರೈಲ್ವೆ ಇಂಜಿನಗಳಿಗೆ ಕಾಫಿಬೀಜ ಹಾಕಿ ಸುಟ್ಟರು. ಉತ್ತಮ ಗೊಬ್ಬರವಾದೀತೆಂದು ಭೂಮಿಯಲ್ಲಿ ಹಾಕಿದರೆ, ಭೂಸಾರವನ್ನೇ ಕಾಫಿ ಹೀರಿಬಿಟ್ಟಿತು ! ಜಹಜುಗಳಲ್ಲಿ ಒಯ್ದು ಸಮುದ್ರಕ್ಕೆ ಸುರಿದರೆ, ಕಾಫಿಯ 'ನಿಕೊಟಿನ್' ಎಂಬ ವಿಷ, ಸಮುದ್ರದ ಮೀನು ಮೊದಲಾದ ಜಲಚರಗಳನ್ನು ಕೊಂದು, ಸಮುದ್ರತೀರದ ಸೀರೆಲ್ಲ ವಿಷಮಯವಾಗಿ ದುರ್ಗಂಧ ತಡೆಯಲಸಾಧ್ಯವಾಯಿತು. ಸಕ್ಕರೆ ಬೆಲೆ ಏರಿಸುವ ಉದ್ದೇಶದಿಂದ ಕ್ಯೂಬಾ ಮತ್ತು ವೆಸ್ಟಇಂಡಿಯ ದ್ವೀಪಗಳಲ್ಲಿ ಕಬ್ಬಿನ ಪೈರನ್ನು ಬೆಂಕಿಹಚ್ಚಿ ಸುಟ್ಟರು. ಈಜಿಪ್ಟಿನಲ್ಲಿ ಹತ್ತಿ ಬೆಳೆಯ ಜಮೀನು ಮೂರು ಪಾಲು ಇಳಿಸಿದರು. ಹಾಲು ಕರೆದು ಹೊಳೆಗೆ ಚೆಲ್ಲಿ ಸಾಕಾಗಿ, ಅಮೇರಿಕದ ಜೆರ್ಸಿ ನಗರದ ಹಸುಗಳನ್ನು ಗೊಡ್ಡು ಬಿಟ್ಟರು. ಸೌದೆ ಮತ್ತು ಇದ್ದಲಿಗೆ ಬದಲಾಗಿ ಗೋಧಿಯನ್ನು ಒಲೆಗೆ ಹಾಕಿ ಸುಟ್ಟರು. ಅಂಜೂರದ ಧಾರಣೆ ಏರಿಸಲು ಮೆಕ್ಸಿಕೋದಲ್ಲಿ ಗಿಡದಲ್ಲಿಯೇ ಹಣ್ಣು ಕೊಳೆಯಬಿಟ್ಟರು. ಅಮೇರಿಕದಲ್ಲಿ ಹತ್ತಿಸಹಿತ ಸಸಿಯನ್ನು ಮಣ್ಣುಪಾಲು ಮಾಡಿದರು. ರಬ್ಬರು, ಟೀ ಇವುಗಳ ಫಸಲು ತಗ್ಗಿಸಿ ಸುಟ್ಟು ಬೂದಿಮಾಡಿದರು. ೧೯೩೪ರಲ್ಲಿ ೮,೮೪,೦೦೦ ಟನ್ ಗೋಧಿ; ೧,೪೪,೦೦೦ ವ್ಯಾಗನ್ ಅಕ್ಕಿ, ೩೨,೦೦೦ ಚೀಲ ಕಾಫಿ, ೧೨೦ ಲಕ್ಷ ಟನ್ ಸಕ್ಕರೆ, ೮ ಲಕ್ಷ ದನ, ೬೦ ಲಕ್ಷ ಹಂದಿ, ಅಸಂಖ್ಯ ದ್ರಾಕ್ಷಿ ಫಸಲು ನಾಶಮಾಡಿದರು. ಮಾಲು ಕಡಿಮೆ ಮಾಡಿ ಧಾರಣೆ ಹೆಚ್ಚಿಸಬೇಕೆಂಬುದೇ ಈ ಅಕೃತ್ಯಗಳ ಮೂಲ. ಪ್ರಪಂಚದ ಜನವೆಲ್ಲ ಕೆಲಸ ಮಾಡದೆ ಕುಂಭಕರ್ಣನಂತೆ ದೀರ್ಘ ನಿದ್ರಾವಿಶಿಷ್ಟರಾದರೂ ಸಕಲರಿಗೂ ಇಪ್ಪತ್ತೇಳು ತಿಂಗಳು ಒದಗುವ ಆಹಾರ, ದವಸಧಾನ್ಯ, ವಸ್ತ್ರ, ಭೋಗವಸ್ತು ಸಾಕಷ್ಟು ಇರುವುದಾಗಿ ಸರ್ ಹೇನ್ರಿ ಸ್ಟ್ರೋಕ್ ಎಂಬ ಅರ್ಥ ಶಾಸ್ತ್ರವೇತ್ತನು ೧೯೩೧ರಲ್ಲಿ ಪ್ರಕಟಿಸಿದನು. ಏನು ದುರ್ದಸೆ ! ಅದೇ

ವರುಷ ಅಸಂಖ್ಯಾತ ಜನ ಹೊಟ್ಟೆಗಿಲ್ಲದೆ ರಷ್ಯ, ಚೀನಗಳಲ್ಲಿ ಹುಳ ಹುಪ್ಪಟೆ ಗಳಂತೆ ಸತ್ತರು.

ಇದು ಅತ್ಯುತ್ಪಾದನೆಯೋ, ಧನಪಿಶಾಚದ ಪ್ರಾಬಲ್ಯವೋ? ಹತ್ತು ಜನರ ಊಟ ತಾನೇ ಉಂಡವನೊಬ್ಬ—ಮಿಕ್ಕ ಒಂಭತ್ತು ಜನ ಹಸಿವಿ ನಿಂದ ಸಾಯುತ್ತಿದ್ದರೆ- ಅಡಿಗೆ ಮಾಡಿದ್ದೇ ಅಧಿಕ-ಎಂದು ಹೇಳುವುದು ಎಷ್ಟು ಉಚಿತವೋ, ಅಷ್ಟೇ ಸತ್ಯವಿದೆ ಈ ಅತ್ಯುತ್ಪಾದನೆಯಲ್ಲಿ. ಭೀಕರ ಹಸಿವಿನಿಂದ ಒಂದೆಡೆ ಜನಕೋಟಿ ಸಾಯುತ್ತಿದ್ದರೆ, ಮತ್ತೊಂದೆಡೆ, ದವಸ ಧಾನ್ಯ ಭಸ್ಮಮಾಡುವುದು ಪೈಶಾಚಿಕ ಕೃತ್ಯವಲ್ಲದೆ ಮತ್ತೇನು? ಇದು ಅತ್ಯುತ್ಪಾದನೆಯೋ, ಅವಶ್ಯವಾದುದನ್ನು ಕೊಳ್ಳಲಾಗದ ದುಸ್ಸಹ ಬಡ ತನದ ಫಲವೊ? ಒಡೆಯನಿಗೆ ಲಾಭ ಬೇಕು. ಸರಕು ವಿಪುಲವಾದರೆ ಧಾರಣೆ ಇಳಿಯುತ್ತದೆ, ಲಾಭ ಕಡಮೆಯಾಗುತ್ತದೆ. ಆದುದರಿಂದಲೇ ಮಾಲು ನಾಶಪಡಿಸಿ, ಅದನ್ನು ಅಲಭ್ಯ ಮಾಡುವುದು. ಅಲಭ್ಯವಾದುದಕ್ಕೆ ಗಿರಾಕಿ ಹೆಚ್ಚು. ಏನು ಬೆಲೆಯಾದರೂ ಕೊಟ್ಟು ಕೊಳ್ಳುತ್ತಾರೆ. ಹೆಚ್ಚು ಲಾಭ ಸಂಪಾದನೆಯಾಗುತ್ತೆ. ತನ್ನ ದೇಶದಲ್ಲಿಯೇ ಮಾಲಿಗೆ ಗಿರಾಕಿ ದೊರೆಯದಿದ್ದರೆ, ಅರ್ಥಾತ್ ಸಾಕಷ್ಟು ಲಾಭ ಗಿಟ್ಟದಿದ್ದರೆ, ಅಲಭ್ಯ ದೇಶಕ್ಕೆ ಮಾಲು ಒಯ್ದು ಮಾರುವುದು ಮತ್ತೊಂದು ಮಾರ್ಗ. ಭತ್ತ ಬೆಳೆಯುವಲ್ಲಿ ಅಕ್ಕಿಯ ಅಭಾವ, ಕಬ್ಬು ಬೆಳೆಯುವಲ್ಲಿ ಸಕ್ಕರೆ ಅಭಾವ ಅನೇಕರ ಅನುಭವಕ್ಕೆ ಬಂದಿರಬೇಕು. ಮುಂಗಡ ಹಣ ಕೊಟ್ಟು, ದೂರ ಪ್ರದೇಶಗಳಿಗೆ ವರ್ತಕನು ಮಾಲು ಸಾಗಿಸುವುದೇ ಇದಕ್ಕೆ ಕಾರಣ. ದೀಪದ ಕಂಬದ ಕೆಳಗೆ ಕತ್ತಲೆ!

ಆದರೆ ಸ್ವದೇಶಪ್ರಿಯನು ಪರದೇಶೀ ವಸ್ತು ಕೊಳ್ಳಲು ಇಚ್ಛಿಸುವು ದಿಲ್ಲ. ತನ್ನ ದೇಶದಲ್ಲಿ ತಯಾರಾದ ವಸ್ತು ಕೊಳ್ಳುವುದರಿಂದ ಹಣ ಸ್ವದೇಶದಲ್ಲಿಯೇ ಉಳಿಯುತ್ತದೆ. ಪರದೇಶೀ ಮಾಲಿಗಿಂತ ಸ್ವದೇಶೀ ಮಾಲಿನ ಬೆಲೆ ಅಧಿಕವಿರಬಹುದು. ಆದರೆ ಸ್ವದೇಶೀ ಮಾಲು ಕೊಳ್ಳುವು ದರಿಂದ ಸ್ವಬಂಧುಗಳಿಗೆ ಸಹಾಯವಾಗುತ್ತದೆ. ಸಂಚಾರ ಸೌಕರ್ಯದಿಂದ —ಎಂದರೆ ವೇಗವಾಗಿ ಚಲಿಸುವ ಜಹಜು, ವಿಮಾನ, ರೈಲ್ವೆ, ಮೋಟಾರ್ ಗಳ ಪರಿಣಾಮವಾಗಿ ದೂರ ಪ್ರದೇಶಗಳಿಗೆ ತ್ವರಿತ ಸಾಮಾನು ಸಾಗಿಸ

ಬಹುದು. ಪ್ರಪಂಚ ಸಂಕುಚಿತವಾಗುತ್ತಿದೆ. ಮಾಲು ಬಹುಕಾಲ ಕೆಡದಂತೆ ವಿಜ್ಞಾನಶಾಸ್ತ್ರ ಉಪಾಯ ತೋರಿದೆ. ಮಾಂಸ, ಕೋಳಿ ಮೊಟ್ಟೆ, ತರಕಾರಿ, ಹಣ್ಣು ಹಂಪಲುಗಳನ್ನು ಕೆಡದಂತೆ ಎಷ್ಟೋ ದಿನ ಇರಿಸಬಹುದು. ಇದರಿಂದ ಆಸ್ಟ್ರೇಲಿಯದ ಗೋಧಿ, ಮಾಂಸ; ಅಮೇರಿಕದ ದವಸ-ಧಾನ್ಯ ; ಹಾಲೆಂಡಿನ ಹಾಲು ಇವುಗಳನ್ನು ಇಂಗ್ಲೆಂಡಿನಂತಹ ದೂರ ಸ್ಥಳಗಳಿಗೆ ಸಾಗಿಸಲು ಸಾಧ್ಯವಾಗಿದೆ. ಅಂತರ ರಾಷ್ಟ್ರೀಯ ವ್ಯಾಪಾರಕ್ಕೆ ವಿಶೇಷ ಪ್ರೋತ್ಸಾಹ ದೊರೆತಿದೆ. ಆದರೂ ವ್ಯಾಪಾರ ಎಷ್ಟು ಬೆಳೆಯಬೇಕಾಗಿತ್ತೋ ಅಷ್ಟು ಬೆಳೆದಿಲ್ಲ. ಪರರು ಹೇಗಾದರೂ ಸಾಯಲಿ, ತಾನು ಸುಖವಾಗಿ ಬಾಳಬೇಕೆಂಬ ತೀವ್ರ ಸ್ವಾರ್ಥಾಭಿಮಾನ ವ್ಯಾಪಾರಕ್ಕೆ ಅಡ್ಡಿಯಾಗುತ್ತದೆ. ರಾಷ್ಟ್ರೀಯ ಮನೋಭಾವನೆಯ ಸರ್ಕಾರ ತನ್ನ ದೇಶದ ಕೈಗಾರಿಕೋದ್ಯಮ ಬೆಳೆಸಲು ಪರದೇಶಗಳಿಂದ ಆಮದಾಗುವ ಸರಕಿನ ಮೇಲೆ ರಕ್ಷಣಾ ಸುಂಕ ಹೊರಿಸುತ್ತೆ. ಪರದೇಶೀಯರ ಕಣ್ಣು ಕೆಂಪೇರುತ್ತೆ. ತಕ್ಕ ಪ್ರತೀಕಾರ ಮಾಡಲು ತನ್ನ ದೇಶಕ್ಕೆ ಆಮದಾಗುವ ಸರಕಿನಮೇಲೆ ಆ ದೇಶವೂ ವಿಶೇಷ ತೆರಿಗೆ ವಿಧಿಸುತ್ತೆ. ಈ ರೀತಿ ಸುಂಕ ಯುದ್ಧ ಉಪಕ್ರಮವಾಗುತ್ತೆ. ಅಂತರರಾಷ್ಟ್ರೀಯ ಅನ್ಯೋನ್ಯ ಭಾವನೆ ಬೆಳೆಯುವುದಕ್ಕೆ ಪ್ರತಿಯಾಗಿ ಅಸೂಯೆ, ವೈಮನಸ್ಯ ಬೆಳೆದು ಯುದ್ಧದಲ್ಲಿ ಕೊನೆಗೊಳ್ಳುತ್ತದೆ.

ಈ ರಕ್ಷಣಾತೆರಿಗೆ ಅಥವಾ ' ಟ್ಯಾರಿಫ್ ' ವಿಧಿಸುವುದರಿಂದ ಸ್ವದೇಶಕ್ಕೆ ಸ್ವಲ್ಪ ಅನುಕೂಲವಾಗುವುದರಲ್ಲಿ ಸಂದೇಹವಿಲ್ಲ. ಮ್ಯಾಂಚೆಸ್ಟರ್ ಮತ್ತು ಜಪಾನಿ ಅರಿವೆಗಳ ಮೇಲೆ ರಕ್ಷಣಾತೆರಿಗೆ ವಿಧಿಸಿದ್ದರಿಂದ ಬೊಂಬಾಯಿ, ಅಹಮದಾಬಾದು ಹತ್ತಿ ಗಿರಣಿಗಳು ಬೆಳೆಯಲು ಸಹಾಯವಾಯಿತು. ಜಾವಾ, ಸುಮಾತ್ರಗಳಿಂದ ಬರುತ್ತಿದ್ದ ಸಕ್ಕರೆಮೇಲೆ ರಕ್ಷಣಾತೆರಿಗೆ ವಿಧಿಸಿದ್ದರಿಂದಲೇ ಸ್ವದೇಶಿ ಸಕ್ಕರೆ ಕಾರ್ಖಾನೆಗಳು ತಲೆ ಎತ್ತಲು ಸಾಧ್ಯವಾದುದು. ನೂರುವರುಷಗಳ ಮೊದಲು ಐರ್ಲೆಂಡಿನಲ್ಲಿ ೬,೭೦,೦೦೦ ಎಕರೆಗಳಲ್ಲಿ ಗೋಧಿ ಬೆಳೆಯಾಗುತ್ತಿತ್ತು. ಇಂಗ್ಲೆಂಡಿನ ಅನಿರ್ಬಂಧ ವ್ಯಾಪಾರ ನಿಯಮದ ಫಲವಾಗಿ ಐರ್ಲೆಂಡಿನ ಸುವರ್ಣಭೂಮಿ ಸ್ಮಶಾನವಾಯಿತು. ಆಸ್ಟ್ರೇಲಿಯ ಗೋಧಿ ಐರ್ಲೆಂಡನ್ನು ಸೂರೆಗೊಂಡಿತು. ಐರ್ಲೆಂಡ್

ಸ್ವಾತಂತ್ರ್ಯ ಗಳಿಸಿ, ಡಿವೇಲರ ಅಧಿಕಾರಕ್ಕೆ ಬರುತ್ತಲೇ ಅನಿರ್ಬಂಧ ವ್ಯಾಪಾರ ನಿರ್ಬಂಧಿಸಿ, ರಕ್ಷಣಾತೆರಿಗೆ ವಿಧಿಸಿದನು. ಇದರ ಪರಿಣಾಮವಾಗಿ ಸಾಗುವಳಿ ೨೧,೦೦೦ ದಿಂದ ನಾಲ್ಕು ವರುಷಗಳಲ್ಲಿ ೧,೭೦,೦೦೦ ಎಕರೆಗಳಿಗೆ ಏರಿತು.

ಆದರೆ ಈ ರೀತಿಯ ನಿರ್ಬಂಧಿತ ಹತೋಟಿ ವ್ಯಾಪಾರ ಅನೇಕ ನೂತನ ಸಮಸ್ಯೆಗಳಿಗೆ ಆಸ್ಪದ ಕೊಡುತ್ತದೆ. ವ್ಯಾಪಾರದಲ್ಲಿ ಹಕ್ಕುದಾರಿಗೆ ಆಸ್ಪದವಾಗುತ್ತದೆ. ದೊಡ್ಡ ರಾಷ್ಟ್ರಗಳು ಸಣ್ಣ ರಾಷ್ಟ್ರಗಳ ವ್ಯಾಪಾರ ನುಂಗಿಬಿಡುತ್ತವೆ. ಒಳದೇಶದಲ್ಲಿಯೂ ಭಾರಿ ಬಂಡವಾಳಸ್ಥರು ಸಣ್ಣ ವರ್ತಕರನ್ನು ಅದುಮುತ್ತಾರೆ. ವ್ಯಾಪಾರ ಸಂಸ್ಥೆಗಳು ಹಲವರ ಕೈಗೊಂಬೆಗಳಾಗುತ್ತವೆ. ಪರದೇಶದೊಡನೆ ಪೈಪೋಟಿ ನಡೆಸುವ ನೆಪದಲ್ಲಿ ಕೂಲಿ ದರ ಇಳಿಸುವುದೇ ಮೊದಲಾಗಿ ಅನೇಕ ಖೋತಾ ಪ್ರಯತ್ನಗಳು ನಡೆಯುತ್ತವೆ. ಕೂಲಿ ಕಡಮೆಯಾಗಿ ಶ್ರಮ ಜೀವಿಗಳ ಜೀವನಮಟ್ಟ ತಗ್ಗುತ್ತದೆ, ಕೊಳ್ಳುವ ಸಾಮರ್ಥ್ಯ ತಗ್ಗುತ್ತದೆ. ಕೊಳ್ಳುವವರಿಲ್ಲದೆ ಧಾರಣೆ ಇಳಿಯುತ್ತದೆ. ಆದರೂ ಕಡಮೆ ದರದಲ್ಲಿ ಮಾಲು ವಿಕ್ರಯಿಸಲು ಬಂಡವಾಳಗಾರ ಒಡಂಬಡ. ಅತ್ಯುತ್ಪಾದನೆ ಬೊಬ್ಬೆಯಿಡುತ್ತದೆ. ಹೀಗೆ ಆದ್ಯಂತವಿಲ್ಲದೆ ಬಂಡವಾಳಶಾಹಿಯ ಆರ್ಥಿಕ ವಿಷಚಕ್ರ ಭ್ರಮಿಸುತ್ತಿರುತ್ತದೆ.

ಆಧುನಿಕ ನಾಗರೀಕತೆಯ ಬಂಡವಾಳ ಪದ್ಧತಿಯ ಆರ್ಥಿಕ ಯಂತ್ರದಲ್ಲಿ ಇನ್ನೂ ಕೆಲ ವಿಷಚಕ್ರಗಳಿವೆ. ಆಧುನಿಕ ಪ್ರಪಂಚದ ಹಣ ಪ್ರಾಧಾನ್ಯ ಎಲ್ಲರಿಗೂ ತಿಳಿದ ವಿಷಯ. 'ಹಣವೊಂದಿದ್ದರೆ—' ಎಂದು ಪುರಂದರದಾಸರೇ ಹಣದ ಮಹಿಮೆ ಸಾರಿದ್ದಾರೆ. ಮೂರು ತುಂಬಿದ ಮಗುವೂ 'ಮೂರು ಕಾಸು, ಅಪ್ಪಾ' ಎಂದು ಹಟಮಾಡುತ್ತದೆ. ಮೂರು ಕಾಸಿಗೆ ಮಿಠಾಯಿ ಕೊಳ್ಳಬಹುದೆಂದು ಅದೂ ಬಲ್ಲದು ಹಣದ ಬೆಲೆ. ಕ್ರಯ ವಿಕ್ರಯ ಅಥವಾ ವಿನಿಮಯ ಸಾಧನ ಹಣ. "ವಸ್ತುಗಳ ಬೆಲೆ ಅಳೆದು ಎಲ್ಲವನ್ನೂ ಬೇಕು ಬೇಕಾದಂತೆ ಸಂಗ್ರಹಿಸಬಲ್ಲ ಧನದ ಪ್ರತಿನಿಧಿ—ಹಣ. ಸಾಮಾನ್ಯವಾಗಿ ಯಾವ ಪದಾರ್ಥದ ಪ್ರಭಾವದಿಂದ ಇತರ ಎಲ್ಲ ಪದಾರ್ಥಗಳನ್ನು ಪಡೆಯುವ ಅಧಿಕಾರವೂ ಸೌಲಭ್ಯವೂ ದೊರೆಯುವುವೋ; ಯಾವ ವಸ್ತುಗಳಿದ್ದರೆ ವ್ಯಕ್ತಿಯ ಮತ್ತು ಕುಟುಂಬಗಳ ಸುಖ, ಸೌಕರ್ಯ,

ಶಕ್ತಿ, ಪುಷ್ಟಿ, ಪ್ರತಿಷ್ಠೆಗಳು ಉಂಟಾಗುವುವೋ ಆ ಎಲ್ಲ ವಸ್ತುಗಳ ಸಮುದಾಯವೇ ಧನ". ಹಣವೇ ಐಶ್ವರ್ಯವಲ್ಲ, ವ್ಯಾಪಾರ ಸುಗಮಮಾಡುವ ಸಾಧನ—ಹಣ. ಈ ಸಾಧನ ಸಂಕೇತವೇ—ನಾಣ್ಯ. ಆದರೆ ಕಾಲಾನುಗುಣವಾಗಿ ಹಣದ ಮೂಲ ಉದ್ದೇಶವೇ ಮರೆಯಾಗಿ ಹಣ ಸಂಗ್ರಹಣವೇ ಪ್ರಧಾನವಾಗುತ್ತ ಬಂತು. ನಿಜ ಧನ, ನಿಜ ಐಶ್ವರ್ಯ ಸಂಗ್ರಹಣಕ್ಕಿಂತ ಹಣ ಸಂಗ್ರಹಣ ಸುಲಭವಾಯಿತು. ಪದಾರ್ಥ ಕೆಡುತ್ತದೆ, ಕೊಳೆಯುತ್ತದೆ; ಜೀವರಾಶಿಗೆ ಕಾಯಿಲೆಯಾಗುತ್ತೆ, ಸಾವು ನೋವು ಬರುತ್ತೆ. ೧ ಲಕ್ಷ ರೂಪಾಯಿ ಬೆಲೆಯ ಅಕ್ಕಿ ಸಂಗ್ರಹಿಸಲು ಆಗುವ ಕಷ್ಟ, ಒಂದು ಲಕ್ಷ ರೂಪಾಯಿಗಳನ್ನಿಡಲು ಆಗುತ್ತದೆಯೇ? ೧ ಲಕ್ಷ ಗೋಧನ ಕಾಪಾಡಲು ಅದೆಷ್ಟು ಶ್ರಮ! ಆದರೆ, ಬ್ಯಾಂಕು ೧ ಲಕ್ಷ ರೂಪಾಯಿ ಸುರಕ್ಷಿತವಿಡುವುದಲ್ಲದೆ ಬಡ್ಡಿ ಬೇರೆ ಕೊಡುತ್ತದೆ. ಆದುದರಿಂದ ಸಕಲವನ್ನೂ ಕೊಳ್ಳುವ, ಕೊಡಿಸುವ ಹಣಸಂಗ್ರಹಣ ಆಧುನಿಕ ಕಾಲದಲ್ಲಿ ಪ್ರಥಮ ಸ್ಥಾನ ಪಡೆಯುತ್ತದೆ. ಆಧುನಿಕ ನಾಗರಿಕತೆಯ ಆರ್ಥಿಕ ಕಟ್ಟಡದ ತಳಹದಿ ಹಣ.

ಹಣದ ಮೂಲಸ್ವರೂಪ ಬಯಲಿಗೆ ಬರುತ್ತದೆ—ಆರ್ಥಿಕ ಮುಗ್ಗಟ್ಟು ತಲೆದೋರಿದಾಗ. ಅಂತೆಯೇ ಯುದ್ಧ ಸಂಭವಿಸಿದಾಗ ಮಾಲಿನ ಅಭಾವ ಮಾತ್ರವಲ್ಲ, ನಾಣ್ಯದ ಬೆಲೆ ಇಳಿಯುವುದೂ, ಧಾರಣೆ ಏರಿಳಿತಗಳಿಗೆ ಒಂದು ಕಾರಣ. ಮೊದಲು ರೂಪಾಯಿಗೆ ಹನ್ನೆರಡು ಸೇರು ರಾಗಿ ದೊರೆಯುತ್ತಿದ್ದರೆ, ಆರ್ಥಿಕ ಮುಗ್ಗಟ್ಟಿನ ಪರಿಣಾಮವಾಗಿ ರೂಪಾಯಿಗೆ ಆರು ಸೇರು ರಾಗಿಯಾದರೆ ಧಾರಣೆ ಏರಿತು ಎನ್ನುವುದು ವಾಡಿಕೆ. ಅಂದರೆ ಹನ್ನೆರಡು ಸೇರು ರಾಗಿಕೊಳ್ಳಲು ಒಂದು ರೂಪಾಯಿ ಕೊಡುತ್ತಿದ್ದಲ್ಲಿ ಈಗ ಎರಡು ರೂಪಾಯಿ ತೆರಬೇಕಾಯಿತು. ಅಂದರೆ, ನಾಣ್ಯದ ಕೊಳ್ಳುವ ಶಕ್ತಿ ತಗ್ಗಿತು, ಅರ್ಥಾತ್ ರೂಪಾಯಿ ಬೆಲೆ ಇಳಿಯಿತು. ಧಾರಣೆ ಏರಿತು ಎನ್ನುವುದಕ್ಕಿಂತ ಹಣದಕೊಳ್ಳುವ ಸಾಮರ್ಥ್ಯ ಇಳಿಯಿತು ಎನ್ನುವುದು ಶಾಸ್ತ್ರೀಯ.

ಯುದ್ಧ ಅಥವ ಇತರ ವಿಶೇಷ ಕಾರಣಗಳಿಂದ ಸರಕಾರಿ ವೆಚ್ಚ ಏರುತ್ತದೆ. ಸರಕಾರಕ್ಕೆ ಹೆಚ್ಚು ಹಣ ಬೇಕಾಗುತ್ತದೆ. ಕಂದಾಯ ಏರಿಸುವುದು, ಹೊಸ ತೆರಿಗೆ ವಿಧಿಸುವುದು, ಸಾಲ ತೆಗೆಯುವುದಲ್ಲದೆ ತನಗೆ ಅವಶ್ಯವಾದಂತೆ ಸರಕಾರ ಹೆಚ್ಚಿಗೆ ನಾಣ್ಯಛಾಪಿಸತೊಡಗುತ್ತೆ. ಭಂಗಾರ ಅಥವಾ

ಬೆಳ್ಳಿಯ ಅಭಾವದಿಂದ ನೋಟು ಅಧಿಕವಾಗಿ ಹೊರಬೀಳುತ್ತೆ. ಇದೇ ಇನ್ಫ್ಲೇಷನ್. ಈ ನೋಟು ನಿಜ ಐಶ್ವರ್ಯವಲ್ಲ. ಸರ್ಕಾರ ಜನರಿಂದ ಪಡೆಯುವ ಒಂದು ಬಗೆಯ ಸಾಲವೆನ್ನಬಹುದು. ತಾನು ಮುದ್ರಿಸುವ ಪ್ರತಿ ನೋಟಿಗೂ ಒಂದು ನಿರ್ದಿಷ್ಟ ಪರಿಮಾಣದಲ್ಲಿ ಚಿನ್ನ-ಬೆಳ್ಳಿಯನ್ನು ಸರ್ಕಾರ ಬೊಕ್ಕಸದಲ್ಲಿರಿಸಬೇಕು. ನೋಟಿಗೆ ಬದಲು ನಾಣ್ಯ ಕೊಡಲು ಸರ್ಕಾರ ಬದ್ಧ. ಆದರೆ ಆತುರ ಸರಕಾರ ನೋಟು ಮನಸ್ವಿ ಮುದ್ರಿಸುತ್ತೆ. ಆಧಾರವಾಗಿ ಚಿನ್ನಬೆಳ್ಳಿ ಶೇಖರಿಸಿಡಬೇಕಾದ ನಿಯಮ ಅತಿಕ್ರಮವಾಗುತ್ತೆ, ಉಲ್ಲಂಘಿಸಲ್ಪಡುತ್ತೆ. ತತ್ಪರಿಣಾಮ ನಾಣ್ಯದ ಬೆಲೆ ಬಹಳ ಇಳಿಯುತ್ತೆ. ಹೀಗೆ ಆಧಾರರಹಿತವಾಗಿ ಎಷ್ಟು ನೋಟು ಹೊರಬೀಳುತ್ತದೆಯೋ, ಅಷ್ಟೂ ನಾಣ್ಯದ ಕೊಳ್ಳುವ ಶಕ್ತಿ ಇಳಿಮುಖವಾಗುತ್ತ ಬರುತ್ತದೆ. ಧಾರಣೆ ಏರಲು ಇದೊಂದು ಮುಖ್ಯಕಾರಣ. ಸಾಮಾನ್ಯವಾಗಿ ಚಾಲ್ತಿಯಲ್ಲಿರುವುದಕ್ಕಿಂತ ಸುಮಾರು ಐದು ನೂರು ಕೋಟಿ ರೂಪಾಯಿ ನೋಟು ಹಿಂದುಸ್ಥಾನದಲ್ಲಿ ಈಗ ಹೆಚ್ಚು ಚಲಾವಣೆಯಲ್ಲಿರುವದರಿಂದ ನಾಣ್ಯದ ಬೆಲೆ ಇಳಿದಿದೆ. ಕಳೆದ ಯುದ್ಧದ ತರುವಾಯ ಇದೇ ಪರಿಸ್ಥಿತಿ ಜರ್ಮನಿಯಲ್ಲಿ ತಲೆದೋರಿತು. ಯುದ್ಧದಂಡವಾಗಿ ಜರ್ಮನಿಯು ಮಿತ್ರರಾಷ್ಟ್ರಗಳಿಗೆ ೬,೫೭,೬೦,೦೦,೦೦೦ (೬೬೦ ಕೋಟಿ) ಪೌಂಡುಗಳ ದಂಡ ಕಂತು ಕಂತಾಗಿ ಸಲ್ಲಿಸಬೇಕೆಂದು ವರ್ಸೇಲ್ಸ್ ಸಮ್ಮೇಳನ ತೀರ್ಮಾನಿಸಿತು. ಈ ಸಾಲ ಕೊಡಲು ಸಾಧ್ಯವಾಗದೆ ಜರ್ಮನ್ ಸರಕಾರ ನೋಟು ಮುದ್ರಿಸತೊಡಗಿತು. ಒಳದೇಶದ ಚಲಾವಣೆಗಾಗಿ ಪರದೇಶಗಳಿಗೆ ಭಂಗಾರ ಅಥವಾ ಮಾಲು ಕೊಡಬೇಕು. ನೋಟು ನಾಣ್ಯಗಳನ್ನು ಅವು ಸ್ವೀಕರಿಸವು. ಆದರೆ ಈ ನೋಟಿಗೆ ಅದು ಮುದ್ರಿತವಾದ ಕಾಗದದ ಬೆಲೆ ಕೂಡ ಇಲ್ಲವಾಯಿತು. ಒಂದು ಅಂಚೆ ಚೀಟಿ ಕೊಳ್ಳಲು ಲಕ್ಷಾಂತರ ಮಾರ್ಕುಗಳು (ಮಾರ್ಕು, ಜರ್ಮನ್ ನಾಣ್ಯ). ಹೀಗಾದರೂ ಈ ಅಪಾರ ಸಾಲ ಜರ್ಮನಿ ತೀರಿಸಲಾರದಾಯಿತು. ತಮಗೆ ಸಲ್ಲಬೇಕಾದ ಕಂತು ಸಂದಾಯವಾಗಲಿಲ್ಲವೆಂದು ಬೆಲ್ಜಿಯಂ ಮತ್ತು ಫ್ರಾನ್ಸ್ ಸೈನ್ಯಗಳು ಕಾರಖಾನೆಗಳಿಂದ ಭರಿತವಾದ ರ್ಹೂರ್ ಪ್ರಾಂತ ಆಕ್ರಮಿಸಿದವು. ಫ್ರಾನ್ಸ್ ಮತ್ತು ಇಟಲಿ ದೇಶಗಳಲ್ಲಿಯೂ ಇದೇ ರೀತಿ ನಾಣ್ಯದ ಬೆಲೆ ಇಳಿಯಿತು.*

---

* ಈ ಆಕ್ರಮಣ ಪ್ರತಿಭಟಿಸಲು ಜರ್ಮನಿ ಹೂಡಿದ ಅಸಹಕಾರ ಬೇರೆ ಕಡೆ ಕೊಟ್ಟಿದೆ.

ನಾಣ್ಯದ ಬೆಲೆಯ ಏರಿಳಿತಗಳಿಂದ ಅನೇಕ ವಿಷಮ ಚಿತ್ರಗಳು ಉದ್ಭವಿಸುತ್ತವೆ. ಹಣದ ಚಲಾವಣೆ ಹೆಚ್ಚಿ ಎಲ್ಲರ ಕೈತುಂಬ ಹಣ ಸೇರುತ್ತದೆ. ಬ್ಯಾಂಕಿನಲ್ಲಿ ಹಣ ಜಮೆಯಾಗುತ್ತದೆ. ಅಧಿಕ ಹಣ ಅನುಪಯುಕ್ತವಾಗಿ ಶೇಖರಿಸಿಡಲು ಇಷ್ಟಪಡದೆ, ಬ್ಯಾಂಕುಗಳು ದರವನ್ನಿಳಿಸಿ ಸುಲಭ ದರದಲ್ಲಿ ಸಾಲ ಕೊಡುತ್ತವೆ. ಇದರಿಂದ ಕೈಗಾರಿಕೆಗಳಿಗೆ ಅನುಕೂಲ. ಕೈಗಾರಿಕೆಗಳು ಬ್ಯಾಂಕಿನ ಅಗ್ಗ ದರದ ಸಾಲದಿಂದ ಬೆಳೆಯುತ್ತವೆ. ಅಗ್ಗದಲ್ಲಿ ಹಣ ಪಡೆದು ಹಳೆ ಸಾಲ ತೀರಿಸಲು ಸಾಲಗಾರನಿಗೂ ಅನುಕೂಲ, ಇನ್ಫ್ಲೇಷನ್.

ಆದರೆ ಬ್ಯಾಂಕುಗಳಿಗೂ ಸಾಲ ವಸೂಲ್ಮಾಡಿಕೊಳ್ಳುವ ಸಾಹುಕಾರನಿಗೂ ಇದರಿಂದ ಹೆಚ್ಚು ಅನುಕೂಲವಿಲ್ಲ. ಬಡ್ಡಿದರ ಕಡಮೆ, ಜವಾಬ್ದಾರಿ ಹೆಚ್ಚು. ಆದ್ದರಿಂದ ಬ್ಯಾಂಕುಗಳಿಗೆ 'ಇನ್ಫ್ಲೇಷನ್'ಗೆ ವಿರುದ್ಧವಾದ 'ಡಿಫ್ಲೇಷನ್'ನಿಂದ ಅನುಕೂಲ ಜಾಸ್ತಿ. ಅಂದರೆ ಇಳಿಮುಖವಾಗುತ್ತಿರುವ ನಾಣ್ಯದ ಬೆಲೆಯನ್ನು ಕೃತ್ರಿಮ ಸಂಧಾನಗಳಿಂದ ಏರಿಸುವುದು; ಅಥವಾ ಪದಾರ್ಥಗಳ ಬೆಲೆ ಇಳಿಸುವುದು. ಹಣಾಭಾವದಿಂದ ಕೈಗಾರಿಕೋದ್ಯಮಗಳಿಗೆ ತೊಂದರೆಯಾಗುತ್ತದೆ. ಕೂಲಿ, ಸಂಬಳ ಕಡಮೆಯಾಗುತ್ತದೆ. ಆಮದು ಹೆಚ್ಚುತ್ತೆ, ರಫ್ತು ಇಳಿಯುತ್ತೆ. ಇಳಿಮುಖವಾಗುವ ಜೀವನ ಮಟ್ಟ ಏರಿಸಿಕೊಳ್ಳಲು ಕೆಲಸಗಾರರು ಮುಷ್ಕರ ಹಿಡಿಯುತ್ತಾರೆ. ಮತ್ತೆ ಮುಷ್ಕರ, ತೊಂದರೆ, ಗಲಾಟೆ ಹೀಗೆ ವಿಷಚಕ್ರ ಎಲ್ಲವನ್ನೂ ಧ್ವಂಸ ಮಾಡುತ್ತ ನಿಷ್ಕರುಣೆಯಿಂದ ಉರುಳುತ್ತಿರುತ್ತೆ.

ಯುದ್ಧಾನಂತರ ಇಂಗ್ಲೆಂಡಿನ ಆರ್ಥಿಕ ಪ್ರಪಂಚದಲ್ಲಿ ತಲೆದೋರಿದ ಏರಿಳಿತಗಳು ಗಮನಾರ್ಹವಾದವು. ತನ್ನ ಆರ್ಥಿಕ ಪ್ರಪಂಚದ ಅಗ್ರಗಣ್ಯ ಸ್ಥಾನ ಉಳಿಸಿಕೊಳ್ಳಲು, 'ಪೌಂಡ್ ಸ್ಟರ್ಲಿಂಗ್' ಬೆಲೆಯನ್ನು ಮೊದಲ ಮಟ್ಟಕ್ಕೇ ೧೯೨೫ರಲ್ಲಿ ಇಂಗ್ಲೆಂಡ್ ಏರಿಸಿತು. ಇದರಿಂದ ಧಾರಣೆ ಏರಿ, ಇಂಗ್ಲೆಂಡಿನ ವ್ಯಾಪಾರ ಪರಹಸ್ತವಾಯಿತು. ನಿದರ್ಶನವಾಗಿ, ಹಿಂದುಸ್ಥಾನ ಹೆಚ್ಚು ದರ ಕೊಟ್ಟು ಇಂಗ್ಲೆಂಡಿನಿಂದ ಮಾಲು ಕೊಳ್ಳುವ ಬದಲು, ಜಪಾನ್‌ನಿಂದ ಕೊಳ್ಳತೊಡಗಿತು. ಹಣ ದೊರೆಯುವುದು ದುಸ್ತರವಾಗಿ ಬ್ಯಾಂಕುಗಳು ಬಡ್ಡಿದರ ಏರಿಸಿದವು; ಹಿಡಿತ ಬಿಗಿಮಾಡಿದವು. ಕೈಗಾರಿಕೋದ್ಯಮಗಳಿಗೆ ಸಾಕಷ್ಟು ಹಣ ದೊರೆಯದೆ ಶಿಥಿಲವಾದವು. ನಿರುದ್ಯೋಗ ಹೆಚ್ಚಿತು.

೩೦ ಲಕ್ಷ ಮಂದಿ ನಿರುದ್ಯೋಗಿಗಳಾದರು. ಸಂಬಳ ಹೆಚ್ಚಿಸಬೇಕೆಂದು ಗಣಿ ಕೆಲಸಗಾರರು ಮುಷ್ಕರ ಹಿಡಿದರು. * ಚರಿತ್ರಾರ್ಹವಾದ ಸಾರ್ವಜನಿಕ ಮುಷ್ಕರ ನಡೆದು, ಸರಕಾರ ತಲ್ಲಣಿಸಿತು. ನಾಣ್ಯದ ಬೆಲೆ ಏರಿಸಿಯೂ ಏನೂ ಪ್ರಯೋಜನವಾಗದಿರಲು ಇಂಗ್ಲೆಂಡ್ ಬೇರೆ ದಾರಿ ಹಿಡಿಯಿತು. ೧೯೩೧ರಲ್ಲಿ 'ಗೋಲ್ಡ್ ಸ್ಟಾಂಡರ್ಡ್' ರದ್ದು ಮಾಡಿತು. ನೋಟಿಗೆ ಬದಲು ಭಂಗಾರ ಕೊಡುವುದು ಅಸಾಧ್ಯವಾಗಲು, ಹಾಗೆ ಕೊಡಲು ತಾನು ಬದ್ಧ ವಲ್ಲವೆಂದು ಮುಚ್ಚುಮರೆ ಇಲ್ಲದೆ ಸರ್ಕಾರ ಸಾರಿತು. ಭಂಗಾರದ ತೆರಾಣೆ ನಿಂತು ಬೊಕ್ಕಸದಲ್ಲಿ ಭಂಗಾರ ಭರ್ತಿಯಾಗಲು ಅನುಕೂಲವಾಯಿತು. ಪರದೇಶಗಳಿಂದ ಇಂಗ್ಲೆಂಡ್ ಹೆಚ್ಚು ಹೆಚ್ಚಾಗಿ ಭಂಗಾರ ತರಿಸಿಕೊಂಡಿತು. ಹಿಂದುಸ್ಥಾನ, ಈಜಿಪ್ಟ ಮೊದಲಾದ ಸಾಮ್ರಾಜ್ಯ ಭಾಗಗಳಿಂದ ಹೊನ್ನು ಹೊಳೆ ಇಂಗ್ಲೆಂಡಿಗೆ ಹರಿಯಿತು. ಸಾಕಷ್ಟು ಭಂಗಾರ ಬೊಕ್ಕಸದಲ್ಲಿ ಸೇರು ತ್ತಲೇ 'ಗೋಲ್ಡ್ ಸ್ಟಾಂಡರ್ಡ್' ಮತ್ತೆ ಜಾರಿಗೆ ಬಂತು. ವಿಷಚಕ್ರ ಭ್ರಮಣ ಪುನಶ್ಚ ಉಪಕ್ರಮವಾಯಿತು. ಜಗನ್ನಾಥಚಕ್ರದಂತೆ ಉರುಳು ತ್ತಲೇ ಇದೆ.

ಪ್ರಪಂಚದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯ ಅತಿ ದೊಡ್ಡದು. ಈ ಚಕ್ರಾಧಿ ಪತ್ಯದಲ್ಲಿ ಸೂರ್ಯ ಅಸ್ತಮಿಸುವದಿಲ್ಲ, ಎಂಬುದು ಆಂಗ್ಲೇಯನ ಹೆಮ್ಮೆ. ಈ ವಿಶಾಲ ಸಾಮ್ರಾಜ್ಯದಿಂದ ಇಂಗ್ಲೆಂಡಿನ ವ್ಯಾಪಾರಕ್ಕೆ ವಿಶೇಷ ಅನುಕೂಲ. ತನಗೆ ಅವಶ್ಯಕವಾದ ಹತ್ತಿ, ಎಣ್ಣೆ ಬೀಜ, ರಬ್ಬರ್, ಪೆಟ್ರೋಲ್ ಮೊದಲಾದ ಕಚ್ಚಾ ಸರಕು ಕೊಂಡು ತನ್ನ ಕಾರ್ಖಾನೆಗಳಲ್ಲಿ ಸಿದ್ಧವಾದ ಯಂತ್ರ, ಯಂತ್ರ ನಿರ್ಮಿತ ಸರಕು ಅಧೀನ ರಾಜ್ಯಗಳಿಗೆ ಇಂಗ್ಲೆಂಡ್ ಮಾರುತ್ತದೆ. ಬುದ್ಧಿ, ಸಾಮರ್ಥ್ಯ, ದಕ್ಷತೆ, ಕೈಗಾರಿಕೆ, ವಿಜ್ಞಾನ, ಜ್ಞಾನ ಇವುಗಳಲ್ಲಿ ಇಂಗ್ಲೆಂಡಿಗೆ ಸಮತೂಗುವ ಜರ್ಮನಿಯ ಅಸೂಯೆಗೆ ಇದು ಕಾರಣವಾಯಿತು. ವಸಾಹತುಗಳಿಲ್ಲದ ಎಲ್ಲ ರಾಷ್ಟ್ರಗಳಿಗೂ, ವಸಾಹತು ವುಳ್ಳ ಸಾಮ್ರಾಜ್ಯ ರಾಷ್ಟ್ರಗಳ ಮೇಲೆ ಅಸೂಯೆ. ಸಾಮ್ರಾಜ್ಯ ದಾಹವೇ ಮೊದಲ ಘೋರ ಯುದ್ಧದ ಮೂಲ.

---

* (೨) 'ಅಸಹಕಾರ ವ್ಯಾಪ್ತಿ' ಪರಿಚ್ಛೇದ ನೋಡಿ.

ಯೂರೋಪಿನ ಸಣ್ಣ ಪುಟ್ಟ ರಾಜ್ಯಗಳೂ ಪೂರ್ವಾರ್ಧ ಗೋಳದಲ್ಲಿ ವಸಾಹತು ಕಲ್ಪಿಸಿಕೊಂಡಿರುವುದಕ್ಕೆ ಮೂಲಕಾರಣ ವ್ಯಾಪಾರ ಮತ್ತು ಸಾಮ್ರಾಜ್ಯದಾಹ. ಪೂರ್ವಾರ್ಧ ಗೋಳವೆಲ್ಲ, ಪಾಶ್ಚಿಮಾತ್ಯರ ವಶವಾಗಿ ಹರಿದು ಹಂಚಿಹೋಗಿದೆ. ಫಲಭರಿತ ಭಾರತ, ಐಶ್ವರ್ಯಯುಕ್ತ ಆಫ್ರಿಕ, ಜನರಹಿತ ಆಸ್ಟ್ರೇಲಿಯ, ವಿಸ್ತೃತ ಕೆನಡ, ಸೊಬಗಿನ ಬರ್ಮ, ಸುಂದರ ಸಿಲೋನ್, ಸಕ್ಕರೆಯ ಜಾವಾ ಸುಮಾತ್ರ, ವಿಶಾಲ ಚೈನಾ ಭಾಗಗಳು ಎಲ್ಲ ಬ್ರಿಟಿಷ್ ಸಾಮ್ರಾಜ್ಯಸಿಂಹದ ಅಧೀನ. ಪಾಶ್ಚಿಮಾ ರಾಷ್ಟ್ರಗಳು ತಮ್ಮೊಳಗೆ ಪ್ರಪಂಚದ ಹತ್ತಿ ಬೆಳೆಯ ನೂರರಲ್ಲಿ ೮೧ ಭಾಗ, ಕಬ್ಬಿಣದಲ್ಲಿ ೭೦, ಕಲ್ಲಿದ್ದಲಲ್ಲಿ ೭೪, ಪೆಟ್ರೋಲಿನಲ್ಲಿ ೬೭, ತವರದಲ್ಲಿ ೯೨, ಮ್ಯಾಂಗನೀಸ ದಲ್ಲಿ ೯೨ ಮತ್ತು ಚಿನ್ನದಲ್ಲಿ ೮೬ ಭಾಗದ ಮೇಲೆ ಹತೋಟಿ ಹೊಂದಿವೆ. ಪ್ರಪಂಚದ ಶೇಕಡ ೭೦ ಭಾಗ ರಬ್ಬರು (ಡಚ್ಚರ) ಈಸ್ಟ್ ಇಂಡಿಯ ದ್ವೀಪ ದಲ್ಲಿ ಬೆಳೆಯಾಗುತ್ತೆ. ಸಾಮ್ರಾಜ್ಯ ತೃಷ್ಣೆಯ ಏಷ್ಯದ ಜಪಾನಿಗೆ ಕಣ್ಣು ಕೆಂಪಾಗಲು ಇದಕ್ಕೂ ಹೆಚ್ಚಿನ ಕಾರಣಬೇಕೆ?

ಯುದ್ಧದಲ್ಲಿ ಪರಾಜಯ ಪಡೆದ ಜರ್ಮನಿ, ಯುದ್ಧ ದಂಡ ತೀರಿಸಲು ಹೂಡಿದ ವಿಫಲ ಯತ್ನ ಹಿಂದೆಯೇ ತಿಳಿಸಿದೆ. ಹಣ ಕೊಡದ ಜರ್ಮನಿ ಅದಕ್ಕೆ ಪ್ರತಿಯಾಗಿ ಸರಕು ಕೊಡಲು ಒಪ್ಪಿತು. ಯಂತ್ರಾಲಯಗಳು ಜರ್ಮನಿಯಲ್ಲಿ ಹಗಲು ರಾತ್ರಿ ಕೆಲಸ ಮಾಡತೊಡಗಿದವು. ಕಬ್ಬಿಣ, ಕಲ್ಲಿದ್ದಲು, ಯಂತ್ರಸಾಧನಗಳು ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂಗಳಿಗೆ ಸಾಗಿತು. ಜರ್ಮನಿಯಿಂದ ಸಾಮಾನು ಬರುವುದು ಹೆಚ್ಚಿದಂತೆ ಇಂಗ್ಲೆಂಡ್, ಫ್ರಾನ್ಸ್ ಈ ರಾಷ್ಟ್ರಗಳ ಯಂತ್ರಾಲಯಗಳಿಗೆ ಕೆಲಸವಿಲ್ಲದೆ, ನಿರುದ್ಯೋಗ ಬೆಳೆಯತೊಡಗಿತು. ಈ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿ ಹದಗೆಟ್ಟು, ಅಮೇರಿಕೆಗೆ ಸಲ್ಲಿಸಬೇಕಾದ ಕಂತು ಇವು ಸಲ್ಲಿಸಲಾರದೆ ಹೋದವು. ಆದುದರಿಂದ ಅರ್ಥಶಾಸ್ತ್ರ ಚತುರರು ಇದಕ್ಕೊಂದು ಉಪಾಯ ಹೂಡಿದರು. ಸರಕು ತಯಾರಿಸಲು ಅಮೇರಿಕ, ಜರ್ಮನಿಗೆ ಸಾಲ ಕೊಡುವುದು. ಸಾಲ ಪಡೆದು, ಸರಕು ಸಿದ್ಧಪಡಿಸಿ ಇಂಗ್ಲೆಂಡ್ ಫ್ರಾನ್ಸ್‌ಗಳಿಗೆ ಜರ್ಮನಿ ಮಾಲು ಒದಗಿಸುವುದು. ಮಾಲು ಮಾರಿ ಮಿತ್ರ ರಾಷ್ಟ್ರಗಳು ಅಮೇರಿಕದ ಸಾಲ ತೀರಿಸುವು ದು.ಎಷ್ಟು ಸುಲಭ 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ!

ಇದರಿಂದ ಅಮೇರಿಕದ ಐಶ್ವರ್ಯ ಅಪಾರ ಬೆಳೆಯುತೊಡಗಿತು. ಯುದ್ಧಕ್ಕೆ ಮೊದಲು ಅಮೇರಿಕ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಮೂರು ಸಾವಿರ ದಶಲಕ್ಷ ಡಾಲರು ಸಾಲ ತೆರಬೇಕಾಗಿತ್ತು. ಆದರೆ ಯುದ್ಧಾನಂತರ ೧೯೨೬ರಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳೇ ಅಮೇರಿಕಾಗೆ ೨೫,೦೦೦ ದಶಲಕ್ಷ ಡಾಲರು ಕೊಡಬೇಕಾಯಿತು. ಸಾಲಕೊಟ್ಟು ಅಮೇರಿಕ ಬೇಸತ್ತಿತ್ತು. ಬಂಡವಾಳ ಹಾಗಿರಲಿ. ಬಡ್ಡಿಯೂ ಹುಟ್ಟದು! ತಾವು ಪಡೆದ ಅಪಾರ ಸಾಲದ ಬಡ್ಡಿ ಸಹ ಕೊಡಲು ಸಾಧ್ಯವಿಲ್ಲವೆಂದು ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ ಈ ರಾಷ್ಟ್ರಗಳು ಅಮೇರಿಕಾಗೆ ಸ್ಪಷ್ಟ ತಿಳಿಸಿದವು. ಯುದ್ಧಾನಂತರ ಇಂಗ್ಲೆಂಡಿನ ರಾಷ್ಟ್ರೀಯ ಸಾಲವೇ ೬೫೦ ಕೋಟಿ ಪೌಂಡುಗಳು. ಇದರ ಮೇಲೆ ಬಡ್ಡಿ ತೆರುವುದೇ ಅಸಾಧ್ಯವಾಗಿರುವಲ್ಲಿ, ಅಸಲು ಹೇಗೆ ತೀರಿಸುವುದು? ಅಮೇರಿಕದಿಂದ ಜರ್ಮನಿಗೆ, ಜರ್ಮನಿಯಿಂದ ಮಿತ್ರರಾಷ್ಟ್ರಗಳಿಗೆ, ಪುನಶ್ಚ ಅಮೇರಿಕೆಗೆ ಇಂಗ್ಲೆಂಡ್, ಫ್ರಾನ್ಸ್‌ಮೊದಲಾದ ಮಿತ್ರರಾಷ್ಟ್ರಗಳಿಂದ ಹಣ ಓಡಾಡುತ್ತಿದ್ದರೆ ಚಕ್ರಸುಲಭವಾಗಿ ಉರುಳುತ್ತಿತ್ತು. ಆದರೆ ಅಮೇರಿಕ, ಜರ್ಮನಿಗೆ ಸಾಲಕೊಡಲು ನಿರಾಕರಿಸಿ, ಫ್ರಾನ್ಸ್ ಇಂಗ್ಲೆಂಡ್ ಮೇಲೆ ಕಂತಿಗಾಗಿ ತಗಾದೆ ಹೂಡಲು ಆರ್ಥಿಕ ರಥ ಮುರಿದು ಬಿತ್ತು.

ಹೀಗೆ ಮುರಿದ ಚಕ್ರಸರಿಪಡಿಸಿ, ಆರ್ಥಿಕ ರಥ ಸಾಗಿಸಲು ೧೯೩೦ರಿಂದ ಅನೇಕ ಅಂತರರಾಷ್ಟ್ರೀಯ ಸಮ್ಮೇಳನಗಳು ನಡೆದವು. ಪ್ರವೀಣರು ಅಂತರರಾಷ್ಟ್ರೀಯ ಸೌಹಾರ್ದ, ಐಕ್ಯತೆ, ಆರ್ಥಿಕ ಸಮಾಲೋಚನೆ ವಿಷಯವಾಗಿ ದೊಡ್ಡ ದೊಡ್ಡ ಭಾಷಣಮಾಡಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು! ಬ್ಯಾಂಕ್ ಆಫ್ ಇಂಗ್ಲೆಂಡಿನ ಅಧ್ಯಕ್ಷ ಆರ್ಥಿಕ ಪ್ರವೀಣ ಸರ್ ನಾರ್ಮನೆ—“ಅಸದೃಶವೂ, ಅಪರಿಮಿತವೂ, ಅಗಾಧವೂ ಆದ ಈ ಜಟಿಲ ಆರ್ಥಿಕ ತೊಡಕು ಬಿಡಿಸಲು ದಿಕ್ಕು ತೋರದಂತೆ ಅಜ್ಞಾನ ಅಂಧಕಾರ ನನ್ನನ್ನು ಕವಿದು ಬಿಟ್ಟಿದೆ” ಎಂದಿದ್ದಾನೆ. ಈಗ ಈ ಸಮಸ್ಯೆ ನಾವು ಬಗೆಹರಿಸದೆ ಹೋದರೆ, ಬಂಡವಾಳ ಪದ್ಧತಿಯೇ ಕುಸಿದು ಹೋದೀತೆಂದು ಅನೇಕ ತಜ್ಞರು ಕಳವಳಗೊಂಡರು. ಅಂತರರಾಷ್ಟ್ರೀಯ ಸಮ್ಮೇಳನವೂ ನಡೆಯಿತು. ಆದರೇನು? ‘ತಾ ಬಾಳಿದರೆ, ಜಗ ಬಾಳಿದಂತೆ’ ಎಂದು ಪ್ರತಿಯೊಂದು ರಾಷ್ಟ್ರವೂ ತನ್ನ ವಿನಃ, ಇತರ ರಾಷ್ಟ್ರಗಳು ತ್ಯಾಗಮಾಡ

ಬೇಕೆಂದು ಸೂಕ್ತ ಸಲಹೆ ಮಾಡಿತು! ಅಂತೂ ಜಯಪ್ರದವಾಯಿತು ಸಮ್ಮೇಳನ, ಕರತಾಡನ, ಭಾಷಣಗಳಲ್ಲಿ!

ಅಂತರರಾಷ್ಟ್ರೀಯ ಸಮ್ಮೇಳನ ಹೀಗಾಗಲು ಭೂಭಾಗದಲ್ಲಿ ಐದನೇ ಒಂದು ಭಾಗ ಆಕ್ರಮಿಸಿರುವ ಬ್ರಿಟಿಷ್ ಸಾಮ್ರಾಜ್ಯ ಒಟ್ಟಾವದಲ್ಲಿ ತನ್ನದೇ ಪ್ರತ್ಯೇಕ ಸಮ್ಮೇಳನ ನಡೆಸಿತು. ತನಗೆ ಬೇಕಾದ ಕಚ್ಚಾ ಮಾಲು ಬ್ರಿಟನ್ ತನ್ನ ಅಧೀನ ರಾಷ್ಟ್ರಗಳಿಂದಲೇ ತರಿಸಿಕೊಳ್ಳುವುದೆಂದೂ, ಅಧೀನ ಅಂತರ್ಗತ ರಾಜ್ಯಗಳು ಇಂಗ್ಲೆಂಡಿನಿಂದಲೇ ಸಿದ್ಧವಾದ ಸರಕುಗಳನ್ನು ತರಿಸಿಕೊಳ್ಳುವುದರಲ್ಲಿ ಪ್ರಾಧಾನ್ಯತೆ ತೋರಬೇಕಾಗಿಯೂ ಸಮ್ಮೇಳನ ತೀರ್ಮಾನಿಸಿತು. ಇದರಿಂದ ಬ್ರಿಟಿಷ್ ಸಾಮ್ರಾಜ್ಯದಿಂದ ಬಾಹ್ಯವಾದ ರಾಷ್ಟ್ರಗಳಿಗೂ, ಸಾಮ್ರಾಜ್ಯ ವ್ಯಾಪಾರ ತಪ್ಪಿತು. ಇತರ ರಾಷ್ಟ್ರಗಳಿಗೆ ಕಚ್ಚಾ ಮಾಲು ದೊರೆಯುವುದು ದುಸ್ತರವಾಯಿತು. ಯಂತ್ರಸಿದ್ಧ ಸರಕು ಮಾರಾಟ ಮಾಡಲು ಅವರಿಗೆ ಗಿರಾಕಿ ಇಲ್ಲವಾಯಿತು. ಈಗ ತಾನೆ ಪ್ರವರ್ಧವಾಗುತ್ತ, ಯೂರೋಪಿನ ರಾಷ್ಟ್ರಗಳೊಡನೆ ಪೈಪೋಟಿಗೆ ನಿಂತಿದ್ದ ಜಪಾನಿಗೆ ವಿಶೇಷ ಪೆಟ್ಟಾಯಿತು. ಅಂತರರಾಷ್ಟ್ರೀಯ ವಿಷಯಗಳಲ್ಲಿ ಕೈಹಾಕದಿರುವುದೇ ಕ್ಷೇಮ ಎನಿಸಿತು ಅಮೇರಿಕೆಗೆ. ಅಂತೂ ಇಂತೂ ಸಮಸ್ಯೆ ಬಗಿ ಹರಿಯದೆ, ಆರ್ಥಿಕ ಮುಗ್ಗಟ್ಟು, ಅಂತಃಕಲಹ, ವೈಮನಸ್ಯ ಈ ಸಮಸ್ಯೆಗಳನ್ನು ಬಿಡಿಸಲು ದಾರಿಕಾಣದೆ, ಯುದ್ಧ ಅನಿವಾರ್ಯ.

ಯುದ್ಧ, ಅಪಾರ ನಷ್ಟ, ಶಾಂತಿ-ಸಂಧಾನ, ಯುದ್ಧ ದಂಡ, ಹೊಣೆಗಾರಿಕೆ, ಸಾಲ, ಸಾಲ ತೀರಿಸುವ ಅಶಕ್ತಿ, ಇನ್ಫ್ಲೇಷನ್, ಡಿಫ್ಲೇಷನ್ ನಿರುದ್ಯೋಗ, ಜೀವನ ಮಟ್ಟದ ಇಳಿತ, ಕೈಗಾರಿಕೋದ್ಯಮಗಳ ನಾಶ, ಮತ್ತೆ ಪೈಪೋಟಿ, ಅಂತಃಕಲಹ—ಅಂತಿಮದಲ್ಲಿ ಯುದ್ಧ, ಎಂತಹ ಚಕ್ರವ್ಯೂಹ—ಆಧುನಿಕ ಆರ್ಥಿಕ ಪದ್ಧತಿ! ರೋಡ್ ಇಂಜಿನ್ ರಸ್ತೆಯ ಜಲ್ಲಿಕಲ್ಲುಗಳನ್ನೂ ಅಡಿ ಸಿಕ್ಕುವ ಜೀವರಾಶಿಗಳನ್ನೂ ನಿಷ್ಪಕ್ಷಪಾತದಿಂದ ನಿರ್ದಯದಿಂದ ಕಟಕಟನೆ ಪುಡಿಮಾಡಿ, ತುಳಿದು ಧ್ವಂಸಮಾಡುತ್ತ ಮುಂದೆ ಸರಿಯುವಂತೆ ಈ ಆರ್ಥಿಕ ವಿಷಮಚಕ್ರ—ಮಾನವ ಸಂಸ್ಕೃತಿ, ಮಾನವತ್ವವನ್ನೇ ಧ್ವಂಸಮಾಡುತ್ತ ಸಾಗಿದೆ. ಈ ಸಮಸ್ಯೆ ಬಗೆಹರಿಯುವುದು—ಎಂದು, ಎಂತು?

The control of the production of wealth is the control of human life itself. ...Hilaire Belloc

We are steadily steering towards an economic oligarchy. A mere builder of more industrial plants, a creator of railways systems is as likely to be a danger as a help. ...Roosevelt

It is thoroughly misleading to describe war as senseless and purposeless. War is at the present time the most powerful of all our social institutions and we shall make no progress towards its elimination until we recognise and provide for the essential social function which it performs. Prof. E. H. Carr

೪. ಪರಿಣಾಮ

ಸಾಮ್ರಾಜ್ಯ ವಿಸ್ತರಿಸಲು ಪರರಾಷ್ಟ್ರಗಳ ಮೇಲೆ ದಂಡೆತ್ತಿ ಧಾಳಿ ಮಾಡಿ, ಯುದ್ಧದಲ್ಲಿ ಸೋಲಿಸಿ, ಶತ್ರುಶರಣು ಹೋಗಿ ಭೂಭಾಗ ವಶಪಡಿಸಿಕೊಂಡು, ಪ್ರಭುತ್ವ ಸ್ಥಾಪಿಸುವುದು ಒಂದು ಮಾರ್ಗ; ಕಾಡು ಪುರಾತನ ಪದ್ಧತಿ. ಇದಕ್ಕೂ ಹಿಂದೆ ಅಲ್ಲಿಯ ನಿವಾಸಿಗಳನ್ನು ಸೆರೆ ಹಿಡಿದು ಪರದೇಶಗಳಿಗೆ ಒಯ್ದು ಗುಲಾಮರಾಗಿ ಮಾರುವದು ವಾಡಿಕೆ. ಕಾಲಕ್ಕೆ ತಕ್ಕಂತೆ ಸಾಮ್ರಾಜ್ಯ ವಿಸ್ತರಿಸುವ ಆಧುನಿಕ ವಿಧಾನವೇ ಪ್ರತ್ಯೇಕ. ನೂತನ ವಿಧಾನದಲ್ಲಿ ಭೂ-ಆಕ್ರಮಣ ಅನವಶ್ಯಕ. ದೇಶದ ಐಶ್ವರ್ಯ ಮತ್ತು ಉತ್ಪಾದನಾಸಾಧನ ವಶಪಡಿಸಿಕೊಳ್ಳುವುದೇ ಈ ನೂತನ ಮಾರ್ಗ. ಯುದ್ಧ, ಆಕ್ರಮಣ, ರಾಜಕೀಯ ದಬ್ಬಾಳಿಕೆ ಈ ಹಿಂಸಾಕೃತ್ಯಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡದೆ ತನ್ನ ಆರ್ಥಿಕಜಾಲ ಉಪಾಯವಾಗಿ ಹರಡುತ್ತದೆ, ಈ ಸಾಧನ. ರಾಜ್ಯಭಾರದ ಹೊರೆಯೂ ತಪ್ಪಿ, ಅದರಿಂದ ಆಕ್ರಮಿತರ

ಮೇಲೆ ಉಂಟಾಗುವ ಕಹಿ ಭಾವನೆಗೆ ಎಡೆಯಿಲ್ಲ. ಜಿಗಣೆ ರಕ್ತ ಹೀರು ವಂತೆ, ಜನತೆಗೆ ಅರಿವಾಗದಂತೆ ದೇಶದ ಐಶ್ವರ್ಯ ಸೂರೆಮಾಡುತ್ತದೆ—ಈ ನೂತನ ಅಗೋಚರ ಆರ್ಥಿಕ ಸಾಮ್ರಾಜ್ಯ. ದಾಸ್ಯಕೂಪದಲ್ಲಿ ಮುಳುಗಿ ರುವವರಿಗೆ ಈ ಮರ್ಮ ವೇದ್ಯವಾಗದೆ, ಸ್ವತಂತ್ರರೆಂದೇ ಅವರು ಭಾವಿಸಿ ಕೊಳ್ಳುತ್ತಾರೆ. ರಾಜಕೀಯ ಆಕ್ರಮಣ ಮತ್ತು ರಾಜ್ಯಭಾರದಲ್ಲಿ ದಬ್ಬಾಳಿಕೆ ಎದ್ದು ಕಾಣುತ್ತೆ. ಆದರೆ ಆರ್ಥಿಕ ಆಕ್ರಮಣದಲ್ಲಿ ಇದು ಅವ್ಯಕ್ತ. ಅನೇಕ ಪೌರ್ವಾತ್ಯ ರಾಷ್ಟ್ರಗಳು ಇಂದು ಪಾಶ್ಚಿಮಾತ್ಯರ ಸಹಾಯವಿಲ್ಲದೆ ದಿನಚರಿ ಕಾರ್ಯಗಳನ್ನು ಸಹ ನಿರ್ವಹಿಸಲಾರವು. ಅಮೇರಿಕದ ನಿಗ್ರೋ ನಿವಾಸಿಗಳು ಹೆಸರಿಗೆ ಮಾತ್ರ ಸ್ವತಂತ್ರರು. ಅಂತೆಯೇ ಅಲ್ಲಿ ನೆಲೆಸಿರುವ ಭಾರತೀಯರು. ಭಾರತೀಯರು ತಾವು ಆರ್ಜಿ ಸಿದ ಹಣದಿಂದ ಅಫ್ರಿಕದಲ್ಲಿ ಆಸ್ತಿ ಮಾಡುವಂತಿಲ್ಲ, ಸ್ವದೇಶಕ್ಕೆ ಹಣ ಕಳುಹಿ ಸುವಂತಿಲ್ಲ. ಹಿಂದುಸ್ಥಾನ ರಾಜಕೀಯ ಸ್ವಾತಂತ್ರ್ಯ ಗಳಿಸಿ, ಆರ್ಥಿಕ ಸ್ವಾತಂತ್ರ್ಯ ಆರ್ಜಿಸದಿದ್ದರೆ, ಅದು ಪೂರ್ಣ ಸ್ವಾತಂತ್ರ್ಯ ಗಳಿಸಿದಂತೆ ಆಗದು. ಆದುದರಿಂದಲೇ ರಾಜಕೀಯ ಮಾತ್ರವಲ್ಲದೆ ಆರ್ಥಿಕ, ಸಾಂಸ್ಕೃ ತಿಕ, ನೈತಿಕ ಸ್ವಾತಂತ್ರ್ಯ ಗಳಿಸಬೇಕೆಂಬುದೇ ಕಾಂಗ್ರೆಸ್ಸಿನ ಪೂರ್ಣ ಸ್ವಾತಂತ್ರ್ಯದ ಸಂಕಲ್ಪ.

ಆರ್ಥಿಕ ಸ್ವಾತಂತ್ರ್ಯವಿಲ್ಲದ ಭಾರತ ಎಷ್ಟುಮಟ್ಟಿಗೆ ಶೋಷಿಸಲ್ಪಟ್ಟಿದೆ ಎಂಡು ನಿದರ್ಶಿಸಲು, ಭಾರತ ಒಪ್ಪದ ‘ಒಟ್ಟಾವ ಒಪ್ಪಂದ’, ಎಕ್ಸ್‌ಛೇಂಜ್ ದರ ಇವೆರಡೇ ಸಾಕು. ಇಲ್ಲಿಯ ಉದ್ಯಮ ನಾಶ ಮಾಡಿ, ಮ್ಯಾಂಚೆಸ್ಟರ್ ಬಟ್ಟೆ ಹಿಂದುಸ್ಥಾನದ ಮೇಲೆ ಬ್ರಿಟನ್ ಹೊರಸಿದ್ದು ಸರ್ವರಿಗೂ ವೇದ್ಯ. ‘ಡಾಕಾ ಮಸ್ಲಿನ್ ತಯಾರಾಗುತ್ತಿದ್ದ ಮುರ್ಷಿದಾಬಾದು ವಿಸ್ತಾರ, ಜನ ಬಾಹುಳ್ಯ, ಐಶ್ವರ್ಯದಲ್ಲಿ ಲಂಡನ್ನಿಗೆ ಮೀರಿತ್ತು’ ಎಂದು ಲಾರ್ಡ್ ಕ್ಲೈವ್ ೧೭೫೭ರಲ್ಲಿ ಬರೆದಿದ್ದಾನೆ. ಈಸ್ಟ್ ಇಂಡಿಯ ಕಂಪೆನಿಯ ಆರ್ಥಿಕ ಜಾಲಕ್ಕೆ ಹಿಂದುಸ್ಥಾನ ಬೇಟೆಯಾದುದೇ ಇದರ ನಾಶಕ್ಕೆ ಕಾರಣ.

ಹಿಂದುಸ್ಥಾನ ರಾಜಕೀಯ, ಆರ್ಥಿಕ ಸ್ವಾತಂತ್ರ್ಯಗಳೆರಡನ್ನೂ ಕಳೆದು ಕೊಂಡಿದೆ. ರಾಜಕೀಯ ಸ್ವಾತಂತ್ರ್ಯವಿದ್ದು, ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಅಧೋಗತಿಗೆ ಇಳಿದಿರುವ ನಿದರ್ಶನ ಚೀನ. ತನ್ನ ಕೈಗಾರಿಕೋದ್ಯಮ ಬೆಳೆ

ಸಲು ಅಮೇರಿಕ, ಇಂಗ್ಲೆಂಡ್ ಮೊದಲಾದ ದೇಶಗಳಿಂದ ಚೀನ ಸಾಲ ಪಡೆಯಿತು. ಇದರ ಪರಿಣಾಮವಾಗಿ ಚೀನ ಆರ್ಥಿಕ ಸ್ವಾತಂತ್ರ್ಯ ಕಳೆದುಕೊಂಡಿತು. ಇಂದು ಚೀನದ ಬಂದರುಗಳು ಮತ್ತು ಹೊರ ವ್ಯಾಪಾರ ಪರದೇಶೀಯರ ಅಧೀನ. ಇದರಿಂದ ಬೇಡವಾದ ಅಫೀಮು ಕೊಳ್ಳಲೇಬೇಕಾಯಿತು ಚೀನ. ಬ್ರಿಟನ್ನು ಅಫೀಮನ್ನು ಚೀನದ ಮೇಲೆ ಒತ್ತಾಯದಿಂದ ಹೊರಿಸಿತು. ಉತ್ತರ ಅಮೇರಿಕವು ರೈಲ್ವೆ, ರಹದಾರಿ, ಗಣಿ, ಬ್ಯಾಂಕು ಮೊದಲಾದ ವ್ಯಾಪಾರೋದ್ಯಮಗಳಿಗಾಗಿ ಅಪಾರ ದ್ರವ್ಯ ಸುರಿದು, ದಕ್ಷಿಣ ಅಮೇರಿಕವನ್ನು ಆರ್ಥಿಕ ಅಧೀನಕ್ಕೆ ತೆಗೆದುಕೊಂಡಿದೆ. ಫಿಲಿಪ್ಪೈನ್ ದ್ವೀಪ ಅಮೇರಿಕದ ವಶವಾದುದೂ ಹೀಗೆಯೆ. ಆದುದರಿಂದಲೇ ಬ್ರಿಟನ್ ಮತ್ತು ಅಮೇರಿಕ ಯಾವ ರಾಷ್ಟ್ರಕ್ಕಾದರೂ ಸಾಲಕೊಡಲು ಸದಾ ಸಿದ್ಧ!

ಹಣ ಪ್ರಾಧಾನ್ಯ ವ್ಯಕ್ತಪಡಿಸಲು ೨೦ನೆಯ ಶತಮಾನವನ್ನು 'ಸಾಂಪತ್ತಿಕ ಯುಗ' ಎಂದು ಕರೆಯುವುದೂ ಉಂಟು. ವ್ಯವಸಾಯ, ವಾಣಿಜ್ಯ, ರೈಲ್ವೆ ಮೊದಲಾದ ಕೈಗಾರಿಕೋದ್ಯಮಗಳಿಗೆ ಹಣ ಪೂದಗಿಸುತ್ತವೆ. ಇದರಿಂದ ಈ ಉದ್ಯಮಗಳ ಮೇಲೆ ಬ್ಯಾಂಕಿನ ಹಿಡಿತ ಬೆಳೆಯುತ್ತದೆ. ಸರ್ಕಾರ ಸಹ ಬ್ಯಾಂಕುಗಳ ಮರೆಹೋಗಬೇಕಾಗುವ ಸಂದರ್ಭಗಳು ಅನೇಕ. ಆರ್ಥಿಕ ಸ್ಥಿತಿ ಒಳಿತಾಗಲಿ ಅಥವ ಕೆಡಲಿ, ಹೇಗಾದರೂ ಬ್ಯಾಂಕುಗಳಿಗೆ ಬಾಧಕವಿಲ್ಲ. ವ್ಯಾಪಾರ ಉತ್ತಮಗೊಂಡರೆ ವರ್ತಕರಿಗೆ ಕೈತುಂಬ ಹಣ ಸೇರಿ, ಬ್ಯಾಂಕುಗಳ ಖಜಾನೆ ತುಂಬುತ್ತೆ. ಮುಗ್ಗಟ್ಟಿನ ಕಾಲದಲ್ಲಿ ಹಣ ಕೊಡಲು ಬ್ಯಾಂಕು ಹಿಂತೆಗೆಯುತ್ತೆ. ಕೈಗಾರಿಕೆ ಉದ್ಯಮಗಳಿಗೆ ವಿಶೇಷ ಪೆಟ್ಟಾಗುತ್ತೆ. ಅನೇಕ ಸಂಸ್ಥೆಗಳು ದಿವಾಳಿಯಾಗುತ್ತೆ. ಈ ದಿವಾಳಿ ಸಂಸ್ಥೆಗಳನ್ನು ಬ್ಯಾಂಕುಗಳೇ ಕೊಂಡು ಸಂದರ್ಭ ಕಾದು ಮಾರುತ್ತವೆ. ಆರ್ಥಿಕ ಏರಿಳಿತಗಳು ಬ್ಯಾಂಕುಗಳಿಗೆ ಅನುಕೂಲ. ಆದುದರಿಂದ ಕೃತ್ರಿಮ ಸಂಧಾನಗಳಿಂದ ಈ ಏರಿಳಿತಗಳನ್ನು ಬ್ಯಾಂಕುಗಳು ಕಲ್ಪಿಸುವುದೂ ಉಂಟು.

ಜಾಯಿಂಟ್‌ಸ್ಟಾಕ್ ಪದ್ಧತಿಯ ಬೆಳವಣಿಗೆ ಆರ್ಥಿಕ ಪ್ರಪಂಚದಲ್ಲಿ ನವೀನ ಸಮಸ್ಯೆಗೆ ಕಾರಣವಾಗಿದೆ. ಬಂಡವಾಳವಿಲ್ಲದ ಬಡಾಯಿ ಕಂಪನಿಗಳು ತಲೆಯೆತ್ತಿ ಮೆರೆಯಲು ಈ ಪದ್ಧತಿ ಅವಕಾಶ ಕಲ್ಪಿಸುತ್ತದೆ. ಅಂದರೆ

ಬಂಡವಾಳವಿಲ್ಲದೆ ಕಂಪನಿಗಳು ಕೆಲಸಮಾಡಬಲ್ಲವು ಎಂದಲ್ಲ. ಖಾಸಗಿ ಸಂಸ್ಥೆ ಗಳಿಗಿಂತ ಅಧಿಕೃತ ಸಂಸ್ಥೆಗಳಿಗೆ ಹೆಚ್ಚು ಬಂಡವಾಳ ಆವಶ್ಯಕ—ಏಕೆಂದರೆ ಅವುಗಳ ವ್ಯಾಪ್ತಿ ಮತ್ತು ವೆಚ್ಚದ ಪರಿಣಾಮ ಬಹಳ ಹೆಚ್ಚು. ಸಾವಿರಾರು ಪಾಲು ಗಾರರು ಜಾಯಿಂಟ್‌ಸ್ಟಾಕ್ ಕಂಪನಿಗಳಿಗೆ ಬಂಡವಾಳ ಒದಗಿಸುತ್ತಾರೆ. ಅವರವರ ಪಾಲಿಗನುಗುಣವಾಗಿ ಪ್ರತಿಯೊಬ್ಬನೂ ಕಂಪನಿಯ ಒಡೆಯನೇ ಹೌದು. ಖಾಸಗಿ ಅಂಗಡಿಯ ಜಮಾ-ಖರ್ಚು ಒಡೆಯನೇ ನೋಡಿಕೊಳ್ಳು ತ್ತಾನೆ. ಹತ್ತು ಸಾವಿರ ಪಾಲುಗಾರರ ಕಂಪನಿಗೆ ಒಡೆಯನಾರು? 'ಹತ್ತು ಸಾವಿರ ಭಾಗಾಂಶದ ಒಂದು ಭಾಗದ ಒಡೆಯ ನಾನು' ಎಂದು ಪ್ರತಿಯೊಬ್ಬ ಪಾಲು ಗಾರನೂ ಭಾವಿಸಿಕೊಳ್ಳಬಹುದೇ ? ಹತ್ತು ಸಾವಿರ ಭಾಗಸ್ತರೂ ಕಂಪನಿ ನಿರ್ವಹಣೆ ವಹಿಸಿಕೊಂಡರೆ, ಒಬ್ಬ ರೋಗಿಗೆ ಹತ್ತು ಮಂದಿ ವೈದ್ಯರು ಚಿಕಿತ್ಸೆ ನಡೆಸಿದಂತೆ ಆಗುತ್ತೆ,—ಕಂಪನಿ ಗತಿ! ಆದುದರಿಂದಲೇ ಪಾಲುಗಾರರ ಸಂಖ್ಯೆ ಏರಿದಷ್ಟೂ, ಹೊಣೆಗಾರಿಕೆ ಹರಿದು ಹಂಚಿ, ಮ್ಯಾನೇಜಿಂಗ್ ಡೈರೆಕ್ಟ ರುಗಳಿಗೆ ಅನುಕೂಲ. ಪಾಲುಗಾರರು ಒಂದಾಗಿ ಅಧಿಕಾರವರ್ಗ ತಳ್ಳಿ ಹಾಕುವುದು ಅಪರೂಪ. "ದೊಡ್ಡ ಸಂಸ್ಥೆಯ ಕಾರ್ಯಭಾರ ಮೇಲ್ವಿಚಾ ರಣೆ ಸುಲಭವಲ್ಲ. ವಿಶೇಷ ಪರಿಜ್ಞಾನ, ಪರಿಶ್ರಮ ಬೇಕು. 'ಟೆಕ್ನಿಕಲ್' ಜ್ಞಾನಬೇಕು. ಇದೆಲ್ಲ ಬಲ್ಲ ಮ್ಯಾನೇಜಿಂಗ್ ಡೈರೆಕ್ಟರ್ ಕೂಟ 'ತೆಗೆದು ಕೊಳ್ಳಿ ನಮ್ಮ ರಾಜೀನಾಮೆ' ಎಂದು ಪಾಲುಗಾರರನ್ನೇ ದರ್ಪದಿಂದ ಬೆದರಿ ಸುತ್ತೆ. ವ್ಯಾಪಾರದ ಆಂತರ್ಯ ಬಲ್ಲ ಡೈರೆಕ್ಟರುಗಳ ಬದಲಾವಣೆಯಿಂದ ಕಂಪನಿಯೇ ನಾಶವಾಗಬಹುದು. ಹೀಗಾಗಿ ಪರ ಬಂಡವಾಳ ಬಲದಿಂದ ಸ್ವಾಮಿಕಾರ್ಯ ಮತ್ತು ಸ್ವಕಾರ್ಯ ನಡೆಸುವ ಮ್ಯಾನೇಜಿಂಗ್ ಡೈರೆಕ್ಟರು ಗಳ ಅಧಿಕಾರ, ದರ್ಪ, ಸ್ವೇಚ್ಛಾವೃತ್ತಿ, ಬೇಜವಾಬ್ದಾರಿ ಮಿತಿಯಿಲ್ಲದೆ ನಡೆ ಯುತ್ತದೆ." ಕಾಲಾನುಗುಣವಾಗಿ ಒಂದೇ ಬಗೆಯ ಸಂಬಂಧಿತ ಕಂಪನಿ ಗಳು ಒಂದಾಗಿ ಸಂಘಟನೆ ಮಾಡಿಕೊಳ್ಳುತ್ತವೆ. ಒಂದೇ ಉದ್ಯಮದ ಹತ್ತು ಕಂಪನಿಗಳ ಸಂಯೋಜನೆಯಿಂದ ಪೈಪೋಟಿ ದೂರವಾಗಿ, ವ್ಯಾಪಾರ ಹತೋಟಿಗೆ ಬರುತ್ತೆ. ಒಂದು ಕಂಪನಿಯ ಮೇಲ್ವಿಚಾರಕರೇ ಇತರ ಕಂಪನಿ ಗಳ ಕಾರ್ಯ ನಿರ್ವಹಣೆ ವಹಿಸುವುದರಿಂದ, ಒಬ್ಬ ವ್ಯಕ್ತಿ ಹತ್ತೂ ಕಂಪನಿಗಳ ಡೈರೆಕ್ಟರ್ ಅಥವ ಅಧ್ಯಕ್ಷನಾಗಬಹುದು. ಇದರಿಂದಲೂ ಪೈಪೋಟಿ ದೂರ

ವಾಗುತ್ತೆ. ಹತ್ತು ಅಂಗಡಿಗಳ ಒಡೆಯ ಒಬ್ಬನೇ ಆದಂತೆ. ಅವರು ಹೇಳಿದ್ದೇ ಬೆಲೆ, ಆಡಿದ್ದೇ ಆಟ. ಹತ್ತಿ, ಸಕ್ಕರೆ, ಸಾಬೂನು, ಕೆಮಿಕಲ್ಸ್, ಪೆಟ್ರೋಲ್, ಸೀಮೆ ಎಣ್ಣೆ, ಸಿಗರೇಟು, ಬೆಂಕಿಪೆಟ್ಟಿಗೆ ಮೊದಲಾದುವುಗಳ ಏಕ ಬೆಲೆಗೆ ಇದೇ ಕಾರಣ. ಪ್ರಪಂಚದಲ್ಲೆಲ್ಲಾ ಒಂದೇ ಧಾರಣೆ. ಅಪಾರ ಶಕ್ತಿ ಸಾಮರ್ಥ್ಯಗಳನ್ನು ಈ ಕಂಪನಿಗಳೂ ಬ್ಯಾಂಕುಗಳೂ ಗಳಿಸಿ ಸರ್ಕಾರ ವನ್ನೇ ಬೆದರಿಸುತ್ತವೆ. ಅಮೇರಿಕ ಮತ್ತು ಜಪಾನ್ ದೇಶಗಳ ದೊಡ್ಡ ಕಂಪನಿಗಳು ತಮ್ಮದೇ ಪ್ರತ್ಯೇಕ ರೈಲ್ವೆ, ತಂತಿ, ಟೆಲಿಫೋನ್, ಜಹಜು ಏರ್ಪಡಿಸಿಕೊಂಡಿವೆ. ಪ್ರಜಾಭಿಪ್ರಾಯ ರೂಪುಗೊಳಿಸುವ ಅನೇಕ ಪತ್ರಿಕೆ ಗಳು ಸಹ ತಮ್ಮದೇ ಕಾಗದ ಕಾರ್ಖಾನೆ, ತಮ್ಮದೇ ಪ್ರತ್ಯೇಕ ತಾರು, ತಂತಿ, ಟೆಲಿಫೋನ್, ರೇಡಿಯೋ, ಮೋಟಾರು, ವಿಮಾನ, ಜಹಜು ವ್ಯವಸ್ಥೆ ಮಾಡಿಕೊಂಡಿವೆ. ಇಂತಹ ಅಪಾರ ಪ್ರಭಾವ ಶಕ್ತಿಯುತ ನಾಲ್ಕಾರು ಪತ್ರಿಕೆಗಳ ಒಡೆಯ ಒಬ್ಬನೇ, ಒಂದೇ ವಾರ್ತಾ ಸಂಸ್ಥೆ. ಪತ್ರಿಕೆಗಳು ಹಲವು, ಆದರೂ ಅಭಿಪ್ರಾಯ ಒಂದೇ. ಇದರಿಂದ ಪ್ರಜಾಪ್ರಭುತ್ವಕ್ಕೆ ಅಪಾರ ಅಪಾಯ ಉಂಟು. ಪ್ರಜಾ ಪ್ರಭುತ್ವದ ಅಡಿಗಲ್ಲು ಪ್ರಜಾಭಿ ಪ್ರಾಯ. ಈ ಪ್ರಜಾಭಿಪ್ರಾಯ ನಿರ್ಬಂಧರಹಿತವಾಗಿ, ಸ್ವತಂತ್ರವಾಗಿ ಹೊರಬೀಳುವ ಅವಕಾಶ ತಪ್ಪಿದರೆ ಪ್ರಜಾಪ್ರಭುತ್ವದ ಮೂಲಕ್ಕೇ ಸಂಚಕಾರ ಬರುತ್ತದೆ. ಲಕ್ಷಾಂತರ ಪ್ರತಿಗಳು ದಿನವಹಿ ಹೊರಬೀಳುವ ಈ ಪತ್ರಿಕೆಗಳು ತಮಗೆ ಅನುಕೂಲವಾದಂತೆ ಜನಾಭಿಪ್ರಾಯ ರೂಪಾಂತರಗೊಳಿಸಬಲ್ಲವು. ಸತ್ಯ ಸುಳ್ಳಾಗಿಯೂ, ಸುಳ್ಳು ಸತ್ಯವಾಗಿಯೂ, ಮಾಡಬಲ್ಲವು. ಪ್ರಜಾಭಿ ಪ್ರಾಯವನ್ನೇ ಮರೆಮಾಚಬಲ್ಲವು. ವಿರುದ್ಧ ಅಭಿಪ್ರಾಯ ಹೊರಬೀಳ ದಂತೆ ಮಾಡಬಲ್ಲವು. ಇಂತಹ ಅಪಾರ ಶಕ್ತಿಯುತ ಪತ್ರಿಕೆಗಳ ಬೆನ್ನು ಚಪ್ಪರಿಸಿ ತಮ್ಮ ವಶದಲ್ಲಿಟ್ಟುಕೊಳ್ಳಲು ಎಲ್ಲ ಸರ್ಕಾರಗಳೂ ಪ್ರಯತ್ನಿಸು ತ್ತವೆ. ಆರ್ಥಿಕ ಪ್ರಪಂಚದಲ್ಲಿಯೂ ಹೀಗೆಯೇ. ಕಾರ್ಯಕ್ರಮ ಇಷ್ಟು ಬಹಿರಂಗವಲ್ಲ. ಮಿಟ್ಸು, ಮಿಟ್ಸುಬಿಷೀ, ಕೈಷಾ ಎಂಬ ಐದಾರು ಬೃಹದ್‌ಸಂಸ್ಥೆಗಳು ಜಪಾನ್ ಸಾಮ್ರಾಜ್ಯದ ಇಡೀ ವ್ಯಾಪಾರ ತಮ್ಮ ಕರಗತ ಮಾಡಿಕೊಂಡಿವೆ. ಈ ಕಂಪನಿಗಳ ನಿವ್ವಳ ಹುಟ್ಟುವಳಿ ಸರ್ಕಾರದ ವರಮಾನಕ್ಕೂ ಹೆಚ್ಚು. ಈ ಕಂಪನಿಗಳನ್ನು ಕೆಣಕ

ದಿರುವುದೇ ಮೇಲೆಂದು ಸರಕಾರವೇ ತಗ್ಗಿ ನಡೆಯುತ್ತೆ. ಅಮೇರಿಕದ ಕಾರಖಾನೆಗಳಲ್ಲಿ ದುಡಿಯುವ ಅಸಂಖ್ಯ ಕೆಲಸಗಾರರಲ್ಲಿ ನೂರಕ್ಕೆ ತೊಂಭತ್ತೆರಡು ಜನ ಜಾಯಿಂಟ್‌ಸ್ಟಾಕ್ ಕಂಪನಿಗಳ ಆಶ್ರಯದಲ್ಲ ದುಡಿದು ಅನ್ನ ಪಡೆಯುತ್ತಾರೆ. ಅಂದರೆ ಕೋಟ್ಯಾಂತರ ಜನರ ಅನ್ನ ಹಲವು ಕೋಟ್ಯಾಧೀಶ್ವರರ ಪರಾಧೀನ. ಇಂತಹ ಕೋಟ್ಯಾಧೀಶ್ವರರ ಸಂಖ್ಯೆ ವರ್ಷೇ ವರ್ಷೇ ಬೆಳೆಯುತ್ತಿದೆ. ಇವರಲ್ಲಿ ಒಗ್ಗಟ್ಟೂ ವೃದ್ಧಿಯಾಗುತ್ತಿದೆ. "ಅಮೇರಿಕದ ಸುಮಾರು ಇನ್ನೂರು ಕಂಪನಿಗಳು ಆ ದೇಶದ ಸಿವ್ವಳ ಐಶ್ವರ್ಯದ ಅರ್ಧಭಾಗದ ಒಡೆತನವನ್ನೂ; ಸ್ಟಾಕ್ ಎಕ್ಸ್‌ಛೇಂಜ್ ಷೇರುಗಳ ಶೇಕಡಾ ೮೦, ಹೊಸ ಉದ್ಯಮಗಳ ಬಂಡವಾಳದಲ್ಲಿ ಶೇಕಡಾ ೬೭ ಭಾಗವನ್ನೂ ತಮ್ಮ ಹತೋಟಿ ಮತ್ತು ಮೇಲ್ವಿಚಾರಣೆಯಿಲ್ಲಿಟ್ಟುಕೊಂಡಿರುವುದಾಗಿ" ಡರ್ಲಿನ್ ಪರಿಗಣಿಸುತ್ತಾನೆ. ೧೯೫೦ರ ಒಳಗಾಗಿ ಅಮೇರಿಕದ ಕಂಪನಿಗಳ ಅಪಾರ ಐಶ್ವರ್ಯದ ಶೇಕಡ ೭೦ ಅಂಶ ಈ ೨೦೦ ಕಂಪನಿಗಳ ಹಸ್ತಗತವಾಗಬಹುದೆಂದು ನಿರೀಕ್ಷಿಸಿದೆ. ಇಂದು ಅಮೇರಿಕದ ವ್ಯಾಪಾರದಲ್ಲಿ ೪೦ ಭಾಗ ಈ ಕಂಪನಿಗಳ ಅಧೀನ. ತಮ್ಮ ಲಾಭದೃಷ್ಟಿಯಿಂದ ಪರದೇಶಗಳೊಡನೆ ಪೈಪೋಟಿ, ಪರದೇಶಗಳ ಮೇಲೆದಂಡಯಾತ್ರೆ, ಪರದೇಶ ಆಕ್ರಮಣ ಬಯಸಿ ಈ ಸಂಸ್ಥೆಗಳು ಸರಕಾರಗಳನ್ನು ಎತ್ತಿಕಟ್ಟುತ್ತವೆ.

ಮದ್ದು, ಗುಂಡು, ತೋಪು, ತುಪಾಕಿ ಇವುಗಳನ್ನು ಸಜ್ಜುಗೊಳಿಸುವ ಕಾರಖಾನೆಗಳು ಯುದ್ಧ ಬೆಳೆಸಲು ಮಾಡಿರುವ ಚಿತಾವಣೆ ಅಂತರರಾಷ್ಟ್ರೀಯ ಸಮಿತಿ (ಲೀಗ್ ಆಫ್ ನೇಷನ್ಸ್) ವರದಿಗಳಿಂದ ತಿಳಿಯಬಹುದು. ಈ ಕಂಪನಿಗಳ ಸುಗ್ಗಿ ಕಾಲ ಯುದ್ಧ. ಯುದ್ಧವಿಲ್ಲದಿದ್ದರೆ ಈ ಕಂಪನಿಗಳಿಗೆ ಉದ್ಯೋಗವೆಲ್ಲಿ? ಆದುದರಿಂದಲೇ ಒಂದು ರಾಷ್ಟ್ರವನ್ನು ಮತ್ತೊಂದು ರಾಷ್ಟ್ರದಮೇಲೆ ಎತ್ತಿಕಟ್ಟಲು ಬೇಕಾದ ಚತುರೋಪಾಯ ಈ ಕಂಪನಿಗಳು ನಡೆಸಲು ಹಿಂತೆಗೆಯುವುದಿಲ್ಲ. "ಅಪಾರ ಹಣ ವ್ಯಯ ಮಾಡುತ್ತಿದೆ ಶಸ್ತ್ರಗಳಿಗಾಗಿ ಜಪಾನ್" ಎಂದು ಉತ್ಪ್ರೇಕ್ಷೆಮಾಡಿ ಸುದ್ದಿಹರಡುವುದು, ಸುದ್ದಿ ಹರಡಲು ಪತ್ರಿಕೆಗಳಿಗೆ ಲಂಚ. 'ಜಪಾನ್ ಇಷ್ಟೇಕೆ ಯುದ್ಧ ಸಾಧನ ಸಂಗ್ರಹಿಸುತ್ತಿದೆ' ಎಂದು ಶಂಕಿಸಿ ಅಮೇರಿಕ, ರಷ್ಯ, ಚೈನ ತಾವೂ ಹೆಚ್ಚುಹೆಚ್ಚಾಗಿ ಶಸ್ತ್ರಕ್ಕಾಗಿ ವ್ಯಯಮಾಡುವುವು. ಈ ಎಲ್ಲ ರಾಷ್ಟ್ರಗಳಿಗೂ

ಯುದ್ಧ ಸಾಧನ ಒದಗಿಸುವ ಕಂಪನಿ ಒಂದೇ. ಒಂದು ದೇಶದಿಂದ ಹೆಚ್ಚು ಬೇಡಿಕೆ ಬಂದಿದೆ ಎಂದು ಮತ್ತೊಂದು ರಾಷ್ಟ್ರವೂ ತನ್ನಲ್ಲಿ ಬೇಡಿಕೆ ಕೊಡುವಂತೆ ಹುರಿದುಂಬಿಸುವುದು. ಪಾರ್ಲಿಮೆಂಟಿನ ಮಾನ್ಯ ಸದಸ್ಯರಾದ ಫೆನ್ನರ್ ಬ್ರಾಕ್‌ವೇ ಅವರ 'ರಕ್ತವ್ಯಾಪಾರ (Bloody Traffic) ಎಂಬ ಪುಸ್ತಕದಲ್ಲಿ ಇಂತಹ ನಿದರ್ಯಗಳನೇಕ ಇವೆ. "ಶಸ್ತ್ರಸನ್ಯಾಸ ಸಮ್ಮೇಳನ ನಿಷ್ಫಲವಾಗಲು ಈ ಶಸ್ತ್ರಕಂಪನಿಗಳ ಒಳಸಂಚು ಮುಖ್ಯ ಕಾರಣ" ಎಂದು ಲೀಗ್ ಆಫ್ ನೇಷನ್ಸ್ ವರದಿ ಮಾಡಿದೆ. ಶಾಂತಿ ಸಮ್ಮೇಳನದ ರಾಯಭಾರಿಗಳೇ ಶಸ್ತ್ರಕಂಪನಿಯ ಡೈರೆಕ್ಟರುಗಳು—ಬೆಕ್ಕು ಸನ್ಯಾಸ ಸ್ವೀಕರಿಸಿದಂತೆ! ಚೈನ-ಜಪಾನ್ ಯುದ್ಧದಿಂದ ಅಮೆರಿಕ ಮತ್ತು ಯುರೋಪಿನ ಶಸ್ತ್ರ ಕಾರಖಾನೆಗಳಿಗೆ ಸುಗ್ಗಿ. ಅಮೇರಿಕದ ಇಂಜನಿಯರುಗಳೇ ಜಪಾನ್ ನೌಕಾ ಮತ್ತು ವಿಮಾನ ಕಾರಖಾನೆಗಳ ನಿಪುಣರು. ಅಮೇರಿಕದಲ್ಲಿ ತಯಾರಾದ ಗುಂಡು ಅಮೇರಿಕ ಸೈನಿಕರ ಮೇಲೆ ಜಪಾನ್ ಸೈನಿಕರಿಂದ ಪ್ರಯೋಗವಾಗಿದೆ! ಹಾಗೆಯೇ ಸ್ಲೊವೇಕಿಯ, ಜರ್ಮನಿ ಮತ್ತು ಇತರ ರಾಷ್ಟ್ರಗಳು. ಸರ್ ಬೇಸಿಲ್ ಜೋಗ್‌ರಾವ್ ಎಂಬ ಆಂಗ್ಲೇಯನು ಬಾಲ್ಕನ್ ಯುದ್ಧದಿಂದ ಅಪಾರ ದ್ರವ್ಯ ಸಂಗ್ರಹಿಸಿದ. ಆದರೆ ಆಸೆ ತೀರಲಿಲ್ಲ. ಗ್ರೀಕರನ್ನು ಹುರಿದುಂಬಿಸಿ, ಅವರು ಇಂಗ್ಲಿಷ್ ನೌಕಾಪಡೆಗಳಲ್ಲಿ ಟರ್ಕಿಯಮೇಲೆ ಬೀಳುವಂತೆ ಮಾಡಿದ ಈ ಸಾಹಸಿ. ಈ ಯುದ್ಧ ನಡೆಸಲು ಗ್ರೀಕ್ ಸರಕಾರಕ್ಕೆ ಹತ್ತುಕೋಟಿ ಡಾಲರು ಸಾಲ ಕೊಟ್ಟ. ತನ್ನ ಕಂಪನಿಯಿಂದಲೇ ಯುದ್ಧ ಸಾಧನ ಒದಗಿಸಿದ! ಜವಾಹಿರರು ತಮ್ಮ 'ಜಗತ್ ಕಥಾವಲ್ಲರಿ'ಯಲ್ಲಿ ಈ ದೃಷ್ಟಾಂತ ಕೊಡುತ್ತಾರೆ. ಆದುದರಿಂದಲೇ ಖಾಸಗಿ ಕಂಪನಿಗಳು ಶಸ್ತ್ರಾಸ್ತ್ರ ತಯಾರಿಸದಂತೆ ನಿರ್ಬಂಧಿಸಬೇಕಾಗಿ 'ಲೀಗ್ ಆಫ್ ನೇಷನ್ಸ್' ಉಪಸಮಿತಿ ಸೂಚಿಸಿತು. ಆದರೆ ಯುದ್ಧ ನಿಲ್ಲಲಿಲ್ಲ, ಶಸ್ತ್ರ ತಯಾರಿಕೆ ಕಂಪನಿಗಳು ಕದ ಹಾಕಲಿಲ್ಲ.

ಪೂರ್ವಕಾಲದ ಯುದ್ಧಕ್ಕೂ ಆಧುನಿಕ ವಿಜ್ಞಾನ ಯುದ್ಧಕ್ಕೂ ಅಜಗಜಾಂತರ. ಪೂರ್ವಕಾಲದಲ್ಲಿ ಸೈನಿಕರು ಯುದ್ಧರಂಗಕ್ಕೆ ತೆರಳಿ, ಕೈ ಕೈ ಸೇರಿಸಿ ಧೈರ್ಯದಿಂದ ಕಾದು ಮಡಿಯುತ್ತಿದ್ದರು. ಘೋರ ಸಂಗ್ರಾಮ ಎಲ್ಲೋ ನಡೆಯುತ್ತಾ, ನಿತ್ಯ ಜೀವನ ಎಂದಿನಂತೆ ಸಾಗುತ್ತಿತ್ತು. ರೈತರು

ಭೂಮಿ ಉತ್ತು ಬಿತ್ತು ಬರುತ್ತಿದ್ದರು; ಕಮ್ಮಾರ, ಅಕ್ಕಸಾಲಿಗ ಮೊದಲಾದವರು ಹೆಚ್ಚು ಉತ್ಸಾಹದಿಂದ ಕೆಲಸ ಸಾಗಿಸುತ್ತಿದ್ದರು. ಪ್ರಭುತ್ವ ಬದಲಾಯಿಸಿದರೂ, ಸಿಂಹಾಸನಗಳೇ ಉರುಳಿ ಹೋದರೂ, ಯಾವ ವ್ಯತ್ಯಾಸವೂ ಆಗಿಲ್ಲವೇನೋ ಎಂಬಂತೆ ನಿತ್ಯಜೀವನ ನಡೆಯುತ್ತಿತ್ತು.

ಆದರೆ ಆಧುನಿಕ ಯುದ್ಧದಲ್ಲಿ ಅಪಾರ ಪ್ರಾಣ ಹಾನಿ ಮಾತ್ರವಲ್ಲದೆ ಎಣಿಸಲಶಕ್ಯವಾದ ಸರಕು ಸರಂಜಾಮುಗಳ ನಷ್ಟ ಸಂಭವಿಸುತ್ತೆ. ೧೯೧೪-೧೮ರ ಘೋರ ಯುದ್ಧದಲ್ಲಿ ಮಿತ್ರಮಂಡಳಿಗೆ ಪ್ರತ್ಯಕ್ಷ ೧೮೬,೦೦೦,೦೦೦,೦೦೦ ಡಾಲರುಗಳೂ, ಪರೋಕ್ಷ ೧೫೧,೦೦೦,೦೦೦,೦೦೦-ಅಂದರೆ ಒಟ್ಟು ಸುಮಾರು ಒಂದು ಲಕ್ಷ ಕೋಟಿ ನಷ್ಟ. ಉಭಯ ಪಕ್ಷಗಳಿಗೂ ಸೇರಿ ೫೬,೦೦೦ ದಶ ಲಕ್ಷ ಡಾಲರುಗಳು. ಆರು ಕೋಟಿ ಯುದ್ಧ ಸನ್ನದ್ಧರಾಗಿ, ೪೦ ಲಕ್ಷ ಮಡಿದರು. ಗಾಯಗೊಂಡವರು ಒಂದು ಕೋಟಿ ತೊಂಭತ್ತು ಲಕ್ಷ, ಶತ್ರುವಶರಾದವರು ೭೦ ಲಕ್ಷ. ಯುದ್ಧದ ದುಷ್ಪರಿಣಾಮಗಳಾದ ಕ್ಷಾಮಡಾಮರಗಳಿಂದ ಸತ್ತವರು ಸುಮಾರು ನಾಲ್ಕು ಕೋಟಿ. ಶಿಶುಜನನ ಒಂದು ಕೋಟಿಯಷ್ಟು ಕಡಮೆ. ಯುದ್ಧ ಕ್ಷೇತ್ರದಲ್ಲಿ ಒಬ್ಬ ಯೋಧ ಸತ್ತರೆ, ಅನ್ನ ನೀರಿಲ್ಲದೆ ಸರಾಸರಿ ಐದು ನಾಗರೀಕರು ಪ್ರಾಣಬಿಟ್ಟರು. ಸುಮಾರು ಒಂದೂವರೆ ಕೋಟಿ ಕುಟುಂಬಗಳು ಅನಾಥವಾದವು. ದೇಶಭ್ರಷ್ಟರ, ದಿಕ್ಕು ದೆಸೆಯಿಲ್ಲದ ನಿರ್ಗತಿಕರ ರಕ್ಷಣೆ ಸರ್ಕಾರಗಳು ವಹಿಸಬೇಕಾಯಿತು. ಇಂದಿನ ಮಹಾಯುದ್ಧದ ನಷ್ಟ ಇನ್ನೂ ಲೆಕ್ಕ ಆಗಿಲ್ಲ. ಲೆಕ್ಕ ಮಾಡಲಾದರೂ ಸಾಧ್ಯವೇ ? ಸಿಂಗಪುರದ ಬಳಿ ಮುಳುಗಿದ ಪ್ರಿನ್ಸ್ ಆಫ್ ವೇಲ್ಸ್ ಯುದ್ಧ ನೌಕೆ ಕಟ್ಟಲು ರೂಪಾಯಿ ಹದಿನೈದು ಕೋಟಿ; ಸಬ್ ಮೆರೈನ್ ಐವತ್ತು ಲಕ್ಷ; ಜಹಜುಗಳಲ್ಲಿ ಏರಿಸುವ ಪ್ರತಿಯೊಂದು ಹದಿನಾರು ಅಂಗುಲ ವ್ಯಾಸದ ತೋಫು, ಆರು ಲಕ್ಷ; ಟಾರ್ಪೆಡೊ ನಾಲ್ವತ್ತು ಸಾವಿರ. ಇನ್ನು ಮೆಷಿನ್‌ಗನ್, ವಿಮಾನ, ಟ್ಯಾಂಕು, ಬಾಂಬು, ವಿಮಾನಧ್ವಂಸ ಫಿರಂಗಿ ಅದೆಷ್ಟು ನಾವೆಗಳು ಮಾಲು ಸಹಿತ ನೀರ ಪಾಲಾದವು, ಎಷ್ಟು ವಿಮಾನ ಸುಟ್ಟು ಭಸ್ಮವಾದವು, ಎಷ್ಟು ಮನೆಗಳು ನಾಶವಾದವು ಎಷ್ಟು ಟ್ಯಾಂಕುಗಳು ಪುಡಿಯಾದವು. ಅಟ್ಲಾಂಟಿಕ್ ಮಹಾಸಾಗರ ತನ್ನ ಒಡಲಲ್ಲಿ ಹುದುಗಿಸಿರುವ ತೋಫು, ವಿಮಾನ, ಜಹಜು ಇವುಗಳನ್ನು ತೋರಿಕೊಟ್ಟರೆ ಈ

ಮಹಾ ಸಂಗ್ರಾಮದಲ್ಲಿ ಸಂಭವಿಸಿರುವ ಅಪಾರ ನಷ್ಟದ ಸ್ವಲ್ಪ ಭಾಗ ವೇದ್ಯ ವಾದೀತು. ಒಂದು ಬಾಂಬರ್ ವಿಮಾನ ಮಾಡುವ ಅನಾಹುತ, ವಿನಾಶ ತೈಮೂರನ ೫೦,೦೦೦ ಸೈನಿಕರಿಂದ ಆಗದು! ದಕ್ಷಿಣ ಅಮೇರಿಕದ ಪುಟ್ಟ ಪರಗ್ವೆಯ ಯುದ್ಧದ ಪರಿಣಾಮವಾಗಿ ಅದರ ಪ್ರಜಾಸಂಖ್ಯೆ ಹದಿಮೂರು ಲಕ್ಷದಿಂದ ಎರಡೂವರೆ ಲಕ್ಷಕ್ಕೆ ಇಳಿಯಿತು. ಕಳೆದ ಘೋರ ಯುದ್ಧದ ರಣಕ್ಷೇತ್ರದಲ್ಲಿ ಸತ್ತವರಿಗಿಂತ, ತದನಂತರ ತಲೆದೋರಿದ ಇನ್‌ಫ್ಲುಯಂಜಾ ಜ್ವರದಲ್ಲಿ ಹೆಚ್ಚುಮಂದಿ ಸತ್ತರು. ಗಟ್ಟಿಮುಟ್ಟಾದ ಆಯ್ದ ತರುಣರು, ಯಾರಿಗೋಸ್ಕರ ಯುದ್ಧ ನಡೆಯುತ್ತೋ ಆ ಭಾವೀ ಜನಾಂಗ, ಯುದ್ಧದಲ್ಲಿ ಸಾಯುವರು. ಉಳಿಯುವರು ಮುದುಕರು, ಮಕ್ಕಳು, ಹೆಂಗಸರು, ಅಂಗ ಹೀನರು, ನಿರಾಶ್ರಿತ ನಿರ್ಗತಿಕರು. ಇಷ್ಟು ಅಪಾರ ನಷ್ಟ-ಪ್ರಾಣ ಹಾನಿ, ಅರ್ಥ ಹಾನಿ-ಆದರೂ ಯುದ್ಧ ಅವಶ್ಯಕ ಎಂದು ಹಿಟ್ಲರಿಝಂ, ಫ್ಯಾಸಿಝಂ, ಮೊಳಗುತ್ತವೆ. 'ಶಾಂತಿ ಚಿರಾಯುವಾಗಲಿ' ಎಂದು ಫಾಸಿಝಂ, ಪ್ರಾರ್ಥಿಸದು. "ಮಾನವನ ಕ್ರಿಯಾ ವಿಚಾರ, ಸಂಯೋಜನೆ, ಸಂಶೋಧನೆ, ವಿಜ್ಞಾನ ಶಕ್ತಿ ಹೊರಬೀಳಲು ಯುದ್ಧ ಅವಶ್ಯಕ. ಪರಾಕ್ರಮದಿಂದ ಕಾದುವ ಜನಾಂಗಕ್ಕೆ ಗೌರವ ಮುದ್ರೆ ಒತ್ತುತ್ತದೆ ಯುದ್ಧ" ಎನ್ನುತ್ತಾನೆ ಮುಸೋಲಿನಿ. ಹೊಣೆಯಾರು ಈ ಅಪಾರ ನಷ್ಟಕ್ಕೆ?

"ಈ ಘೋರ ಸಂಗ್ರಾಮಕ್ಕೆ ಹಿಟ್ಲರ್, ಮುಸೋಲಿನಿ, ಫ್ರಾನ್ಸ್, ಜಪಾನ್, ಸೈನ್ಯಶಾಖೆಗಳ ರಕ್ತದಾಹ ಕಾರಣವಿರಬಹುದು. ಆದರೆ ಹಿಟ್ಲರ್, ಮುಸೋಲಿನಿ ತಲೆಯೆತ್ತಲು ನಾವಲ್ಲವೆ ಕಾರಣ?" ಎಂದು ಪ್ರಶ್ನಿಸುತ್ತಾನೆ ಲೂಯಿ ಫಿಷರ್. "ಹಿಟ್ಲರಸಿಗೆ ತಲೆ ತಿರುಗಿರಬಹುದು; ಹುಚ್ಚು ಹಿಡಿದಿರ ಬಹುದು, ಪಿತ್ತ ಏರಿರಬಹುದು. ಆದರೆ, ಅವರ ಜನ್ಮದಾತೃ ಆಧುನಿಕ ನಾಗರಿಕತೆ ಎಂಬುದು ನೆನಪಿರಲಿ. ನಮ್ಮ ಸುಸಂಸ್ಕೃತ ಸಮಾಜದ ಶಿಶು ಹಿಟ್ಲರ್. ಜರ್ಮನಿಯ ತೇಜ ನಾವು ನಾಶಮಾಡಿದೆವು; ಆದರೆ ಇವನಿಗೂ ಕೆಡುಕನಾದ ಮತ್ತೊಬ್ಬ ಹಿಟ್ಲರ್ ಜನ್ಮ ತಾಳದಿರನು. ಹಿಟ್ಲರಿಝಂ ನಾಶ ವಾಗಬೇಕಾದರೆ, ಅದಕ್ಕೆ ಅವಕಾಶ ಕಲ್ಪಿಸುವ ಕ್ಷೇತ್ರ ಮತ್ತು ಬೀಜ ನಾಶ ವಾಗಬೇಕು. ಪ್ರಜಾ ಪ್ರಭುತ್ವದ ಮಧ್ಯದಲ್ಲಿ ತಲೆ ಎತ್ತಿ ಮೆರೆಯುವ ಏಕ ನಾಯಕ ಪ್ರಭುತ್ವ, ಮತ್ತು ಸಣ್ಣ ಪುಟ್ಟ ಹಿಟ್ಲರ್ ಮುಸೋಲಿನಿ ಮೂರ್ತಿಗಳು ನಾಶವಾಗಬೇಕು" ಎಂದು ಫಿಷರ್ ಬರೆಯುವುದು. ಎಷ್ಟು ಅರ್ಥಗರ್ಭಿತ!

I am absolutely convinced that no wealth in the world can help humanity forward, even in the hands of the most devoted worker in this cause. The examples of great and pure characters is the only thing that can produce fine ideas and noble deeds. ...Albert Einstein

Bankers create financial credit; Gandhi creates moral trust, faith and credit...Money, now the most powerful of modern symbols and schemes of value, wiil be weakned and will be corrected or supplemented by symbols, values and modes of activity that are nearer to human activity. Trust is created by unselfish service, not by the issue of coins or pieces of paper by bank or Government. ...R. B. Gregg

೫. ಗಾಂಧಿ ನಾಣ್ಯ ನಂಬಿಕೆ

ಮಾನವ ಜೀವನದಲ್ಲಿ ಹಣದ ಪ್ರಾಬಲ್ಯ, ಹಣ ಗಳಿಸುವ ಸನ್ನಾಹ, ಅದರ ದೋಷ, ದೋಷ ನಿವಾರಿಸುವ ಸಾಹಸ, ಆರ್ಥಿಕ ವಿಷಚಕ್ರ, ಅದರ ಪರಿಣಾಮ ಇವುಗಳನ್ನು ಹಿಂದಿನ ಎರಡು ಪರಿಚ್ಛೇದಗಳಲ್ಲಿ ವಿಮರ್ಶಿಸಲಾಗಿದೆ. ಹಣ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಮೂಲಕಾರಣವೆಂಬುದು ಸರ್ವಸಮ್ಮತ. ಆದರೆ ಇಹಲೋಕದ ಸುಖ ದುಃಖಗಳಿಂದ ಅಲಿಪ್ತರಾಗಿ ಪಾರಮಾರ್ಥಿಕ ದೃಷ್ಟಿಯುಳ್ಳವರ ವಿನಾ, ಧನಾರ್ಜನೆ ಬೇಡವೆಂದು ಯಾರೂ ಬಯಸರು. ಹಣ ಸಂಗ್ರಹಣದಲ್ಲಿ ತಪ್ಪೇನು? ದೋಷವೇನು? ದೋಷವಿದ್ದರೆ ಅದು ವಿನಿಯೋಗದಲ್ಲಿ. ಸ್ವಾರ್ಥಿ ತನ್ನ ಇಂದ್ರಿಯ ಸುಖ, ಪ್ರತಿಷ್ಠೆ, ದರ್ಪ, ಅಧಿಕಾರ ಇವುಗಳಿಗೆ ಹಣ ವಿನಿಯೋಗಿಸಬಹುದು. ತೆಂಗಿನ ರಸದಿಂದ ಬೆಲ್ಲ ಮಾಡಬಹುದು,

ಸಾರಾಯಿ ಇಳಿಸಬಹುದು. ದೋಷ ತೆಂಗಿನಮರದ್ದಲ್ಲ. ಅಂತೆಯೇ ಹಣ ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ಒದಗುತ್ತದೆ. ಹಣದಲ್ಲಿಯ ದೋಷ ಅದರ ಒಡೆಯನದು.

ಈ ವಾದ ಮಿಥ್ಯವೆಂದು ಪೂರ್ಣ ತಿರಸ್ಕರಿಸುವುದು ದುಸ್ಸಾಧ್ಯವಾ ವಾದರೂ ಬೆಳಕಿನ ಬೆನ್ನಿನ ನೆರಳಿನಂತೆ, ಹಣವಿರುವಲ್ಲಿ ದೋಷ ಇದ್ದೇ ಇರುತ್ತದೆ. ಹಣದ ಮಹಿಮೆಯೇ ಹಾಗೆ. ಅಧಿಕಾರವಿದ್ದೆಡೆ, ಅಹಂಕಾರ, ದರ್ಪ ಸಹಜ. ಹಣ ನಿಜ ಐಶ್ವರ್ಯವಾಗದಿದ್ದರೂ ಇತರರ ಮೇಲೆ ತನ್ನ ಸಂಗ್ರಹಕಾರನಿಗೆ ಒಂದು ಹಿಡಿತ ಕೊಡುತ್ತದೆ. ಉದಾಹರಣೆಗಾಗಿ, ಒಬ್ಬನಲ್ಲಿ ಅಕ್ಕಿ ಮತ್ತೊಬ್ಬನಲ್ಲಿ ಹತ್ತಿ ಇದೆ ಎಂದು ತಿಳಿಯೋಣ. ಅಕ್ಕಿಯುವನಿಗೆ ಹತ್ತಿಯೂ, ಹತ್ತಿಯುವನಿಗೆ ಅಕ್ಕಿಯೂ ಬೇಕಾದರೆ ಉಭಯತ್ರರೂ ತಮ್ಮ ಮಾಲು ಅದಲು ಬದಲು ಮಾಡಬಹುದು. ಆದರೆ ಹತ್ತಿಯುವನಿಗೆ ಅಕ್ಕಿ ಬೇಕಿಲ್ಲದೆ, ಎಣ್ಣೆ ಅಥವ ಬೇರೆ ಏನಾದರೂ ಬೇಕಿದ್ದರೆ ಅಕ್ಕಿಯುವನಿಂದ ಪ್ರಯೋಜನವಿಲ್ಲ. ಆದರೆ ಅಕ್ಕಿಯುವನಿಗೆ ಹತ್ತಿಯೇ ಬೇಕಾದರೆ, ಹತ್ತಿಯುವನನ್ನು ಆಶ್ರಯಿಸದೆ ತೀರದು. ಈ ಸಮಯ ನೋಡಿ ಹತ್ತುಸೇರು ಅಕ್ಕಿ ಕೊಡುವಲ್ಲಿ, ಇಪ್ಪತ್ತು ಸೇರು ಅಕ್ಕಿ ಬೇಡುತ್ತಾನೆ ಹತ್ತಿಯುವನು. ಅಕ್ಕಿಯಾಗಲಿ, ಹತ್ತಿಯಾಗಲಿ ಬಹುಕಾಲ ಸಂಗ್ರಹಿಸಿಡಲು ಸಾಧ್ಯವಾಗದು. ಹಣವಿದ್ದ ಮೂರನೆಯನು ಮಧ್ಯೆ ಪ್ರವೇಶಿಸಿದರೆ ಹತ್ತಿಯುವನ ದರ್ಪ ಇಳಿಯುತ್ತದೆ. ಹಣಗಾರ ಇಬ್ಬರೊಡನೆಯೂ ವ್ಯಾಪಾರ ಮಾಡಬಲ್ಲ. ಈ ರೀತಿ ಹಣ ತನ್ನ ಸಂಗ್ರಾಹಕನಿಗೆ ಇತರರ ಜೀವನದ ಮೇಲೆ ಒಂದು ಬಗೆಯ ಹಿಡಿತ ಕೊಡುತ್ತದೆ. ಧನಿಕನ ಮುಂದೆ ನಿಜ ಐಶ್ವರ್ಯ ನಿರ್ಮಾಣಕನಾದ ರೈತ, ಶ್ರಮಜೀವಿ, ಮೇಧಾವಿ ಎಲ್ಲ ತಲೆ ಬಾಗಬೇಕಾಗುತ್ತದೆ. ಇದು ನೈಜವಲ್ಲ, ಕೃತ್ರಿಮ.

ಸ್ವಾವಲಂಬನೆ ಮತ್ತು ವಿಧಾಯಕ ಕಾರ್ಯಕ್ರಮಗಳಿಂದ ಹಣದ ಈ ಹಿಡಿತ ತಗ್ಗಿಸುವುದೇ ಗಾಂಧೀವಾದದ ಗುರಿ. ಆಧುನಿಕ ಸರಕಾರಗಳಿಗೆ ತಮ್ಮ ಅಧಿಕಾರ ನಡೆಸಲು ಐದು ಮುಖ್ಯ ಸಾಧನಗಳಿವೆ ಎಂದು ರಿಚರ್ಡ್ ಗ್ರೆಗ್ ವಿಂಗಡಿಸುತ್ತಾನೆ:—(೧) ಹಣ (೨) ಶರೀರ ಭಯ (ಎಂದರೆ ಕೋರ್ಟು, ಪೊಲೀಸು, ಸೈನ್ಯ ಇವುಗಳ ಮೂಲಕ ಶಾರೀರ ಸೌಖ್ಯಕ್ಕೆ

ನಾನಾ ರೂಪಗಳಲ್ಲಿ ಬಾಧೆ ಕೊಡುವ ಭಯ) (೩) ಸಮಾಜ ಭೇದ ಕಲ್ಪನೆ (ಜಾತಿ, ಮತ, ಸಿರಿತನ, ಬಡತನ ಇತ್ಯಾದಿಯಾಗಿ) ಮತ್ತು ಬಿರುದುಬಾವಲಿ ದಯಪಾಲಿಸಿ ಬಿರುದಾಂಕಿತರನ್ನು ಕೃತಜ್ಞರಾಗಿ ಅರ್ಥಾತ್ ದಾಸರಾಗಿ ಮಾಡಿಕೊಳ್ಳುವುದು. (೪) ಪಾರ್ಲಿಮೆಂಟರಿ ಅಥವಾ ಶಾಸನಸಭಾ ಪದ್ಧತಿಯಿಂದ ತನ್ನ ಅಡಿಯಾಳುಗಳ ಸಹಾಯದಿಂದಲೇ ರಾಜ್ಯ ನಡೆಸಿಕೊಂಡು ಬರುವ ಮರ್ಮ ಮತ್ತು (೫) ವಿರಾಟ್ ಸಂಸ್ಥೆಗಳ ಸ್ಥಾಪನೆ. ಇದಕ್ಕೆ ಪ್ರತಿಯಾಗಿ, ಈ ಐದು ಸಾಧನಗಳ ಪ್ರಭಾವ ತಗ್ಗಿಸಿ ಆಡಳಿತಗಾರರ ಹಿಡಿತ ಸಡಲಿಸುವ ಪ್ರಯತ್ನ ಮಾಡುತ್ತದೆ ಗಾಂಧೀವಾದ.

ಭಾರತ ರೈತರ ನಾಡು. ನೇಗಿಲಯೋಗಿಯ ನೆಲವೀಡು. ಸರಕಾರಕ್ಕೆ ಭೂ ಕಂದಾಯ ದೊಡ್ಡ ಪ್ರಮಾಣದ ವರಮಾನ. ಕಂದಾಯ ಸಕಾಲದಲ್ಲಿ ಸಲ್ಲಿಸುವುದು ರೈತನಿಗೊಂದು ದೊಡ್ಡ ಹೊಣೆ. ದವಸ ಮಾರಿ ರೈತ ಕಂದಾಯ ಸಲ್ಲಿಸುತ್ತಾನೆ. ಧಾರಣೆ ಇಳಿದರೆ, ನಿಷ್ಕೃತ ಕಂದಾಯ ತೆರಲು ರೈತ ಹೆಚ್ಚು ಪ್ರಮಾಣದಲ್ಲಿ ದವಸ ಮಾರಬೇಕು. ಅನಿಶ್ಚಿತ ಭೂ ಉತ್ಪತ್ತಿಗೂ, ರೈತನ ಆವಶ್ಯಕತೆಗೂ, ನಿಷ್ಕೃತ ಕಂದಾಯಕ್ಕೂ ತಾಳೆ ಇಲ್ಲ.

ರೈತ ಧಾನ್ಯರೂಪದಲ್ಲಿ ಕಂದಾಯ ಸಲ್ಲಿಸುವಂತೆ ಅನುಕೂಲ ಕಲ್ಪಿಸುವುದು ಒಂದು ಉಪಾಯ, ಈ ದೋಷ ತಗ್ಗಿಸಲು. ಆಗ ಧಾರಣೆಯ ಏರಿಳಿತಗಳಿಂದ ರೈತನು ಅಷ್ಟು ಘಾಸಿಯಾಗುವುದಿಲ್ಲ. ಈಗ ರಷ್ಯದಲ್ಲಿ ಈ ಪದ್ಧತಿ ಜಾರಿಯಲ್ಲಿದೆ. ಮುಂದಿನ ಬಿತ್ತನೆಗೆ ಬೀಜ, ದನಗಳ ಮೇವಿಗೆ, ರೈತನ ಕುಟುಂಬಕ್ಕೆ, ಸಾಮುಷ್ಟಿ ಕ್ಷೇತ್ರಕ್ಕೆ ಇಂತಿಷ್ಟು ದವಸ ಮೀಸಲಾಗಿಟ್ಟು, ಒಂದು ನಿರ್ದಿಷ್ಟ ಫಸಲಿನ ಭಾಗ ಸರ್ಕಾರ ಕಂದಾಯ ರೂಪವಾಗಿ ಪಡೆಯುತ್ತದೆ. ದವಸ ವಸೂಲಿ, ದಾಸ್ತಾನು, ಮಾರಾಟ ಇವು ಸರ್ಕಾರಕ್ಕೆ ಹೆಚ್ಚು ಶ್ರಮವೆನ್ನಬಹುದು. ಸಾಧು; ಆದರೆ ರೈತನಿಗಾಗಿ ಸರ್ಕಾರವಿರುವುದಾದರೆ ಈ ಕಷ್ಟ ನಿರ್ವಹಿಸಲೇಬೇಕು. ಶಕ್ತಿಹೀನನೂ, ಅಲ್ಪನೂ ಆದ ರೈತನೇ ಈ ಕಾರ್ಯ ನಿರ್ವಹಿಸಿಕೊಂಡು ಬರುತ್ತಿರುವಲ್ಲಿ ಸರ್ವ ಶಕ್ತಿಯುಳ್ಳ ಸರ್ಕಾರಕ್ಕೆ ಇದೊಂದು ದೊಡ್ಡ ಕಷ್ಟವಾಗದು. ಮಾತ್ರವಲ್ಲ, ಆವಶ್ಯ ಆಹಾರ ದವಸಗಳ ಹತೋಟಿಯಿಂದ, ಬಜಾರಿನ ಧಾರಣೆಯನ್ನು ಹತೋಟಿಯಲ್ಲಿಡಲು ಸರ್ಕಾರಕ್ಕೆ ಇದರಿಂದ ಸಹಾಯವೇ. ಈಗಿನ ಆಹಾರ ವಿಷಮ

ಸಮಸ್ಯೆ ಇಷ್ಟು ಉಗ್ರವಾಗುತ್ತಿರಲಿಲ್ಲ. ಪೂರ್ವದಲ್ಲಿ ಗ್ರಾಮ ನೌಕರರಿಗೆ ಪೋಟಗಿ ಕೊಡುತ್ತಿದ್ದಂತೆ, ಸರ್ಕಾರಿ ನೌಕರರಿಗೆ ಅವರ ಸಂಬಳದ ಒಂದು ಭಾಗ ದವಸ ರೂಪದಲ್ಲಿ ಕೊಡಬಹುದು. ಇದರಿಂದ ದವಸ ದಾಸ್ತಾನು ಮಾಡುವ ಹೊಣೆ ಸ್ವಲ್ಪ ಕಡಮೆಯಾಗುತ್ತದೆ.

ದೇಹಶ್ರಮ ಅಥವ ಯಂತ್ರ ಉಪಯೋಗದಿಂದ ಕಚ್ಚಾ ಮಾಲು ಪರಿಷ್ಕೃತ ಸಾಮಾನಾಗಿ ಮಾರ್ಪಾಟಾಗುತ್ತದೆ. ಒಂದು ಪದಾರ್ಥ ರೂಪಾಂತರ ಹೊಂದಿ ಸಿದ್ಧ ಸರಕಾಗಿ ನಮ್ಮ ಕೈ ಸೇರುವಾಗ ಅದರ ಮೂಲ ರೂಪ ನಿರ್ಧರಿಸುವುದು ಅಸಾಧ್ಯವಾಗಬಹುದು. ಕಬ್ಬಿಣದ ಪದಾರ್ಥ ಉಪ ಯೋಗಿಸುವಾಗ ಅದರ ಮೂಲಸ್ವರೂಪ ಕಲ್ಲುಮಣ್ಣುಗಳಿಂದ ಕೂಡಿದ ಅದುರೆಂದು ಊಹಿಸಬಹುದು. ಆದರೆ ಪ್ರತಿದಿನ ಉಪಯೋಗಿಸಲ್ಪಡುವ ಗಾಜಿನ ಮೂಲರೂಪ ಬೆಣಚು ಕಲ್ಲು ಎಂದು ಗ್ರಹಿಸುವುದು ಸುಲಭವಲ್ಲ. ವೈದ್ಯಶಾಸ್ತ್ರದ ಔಷಧಗಳು, ರಸಾಯನ ದ್ರಾವಕಗಳು ಇವುಗಳ ಮೂಲ ಸ್ವರೂಪ ನಿರ್ಧರಿಸುವುದು ಕಷ್ಟ. ಮೂಲಪದಾರ್ಥ ಎಷ್ಟು ರೂಪಾಂತರ ಹೊಂದುತ್ತದೆಯೋ ಹಂತಹಂತಕ್ಕೂ ಅದರ ಬೆಲೆ ಏರುತ್ತಾ ಹೋಗುತ್ತದೆ. ಅಂತೆಯೇ ಅದರ ಮೇಲಿನ ಲಾಭ. ಸಾಮಾನ್ಯವಾಗಿ ಮೂಲ ಮಾಲಿನ ಮೇಲೆ ಹೆಚ್ಚು ಲಾಭ ಹೊರಿಸುವುದು ಕಷ್ಟ. ಹತ್ತಿ ಬೆಳೆಯುವ ರೈತನಿ ಗಿಂತ, ಬಟ್ಟೆ ಮಾರುವ ವರ್ತಕ ಹೆಚ್ಚು ಲಾಭ ಗಳಿಸುತ್ತಾನೆ. ಕಲ್ಲು ಮಾರುವವನಿಗಿಂತ ಗಾಜು ಮಾರುವವನು ಹೆಚ್ಚು ಲಾಭ ಪಡೆಯುತ್ತಾನೆ. ಕಚ್ಚಾಮಾಲು ಕೂಡಲೆ ಉಪಯೋಗಕ್ಕೆ ಬಾರದು. ಕಚ್ಚಾ ಮಾಲನ್ನು ಬಹಳ ಕಾಲ ಇಡುವುದೂ ಸಾಧ್ಯವಾಗದು. ಆದುದರಿಂದ ಇದಕ್ಕೆ ಗಿರಾಕಿ ಕಡಮೆ. ಸಿದ್ಧವಾದ ಸರಕಿಗೆ ಗಿರಾಕಿ ಹೆಚ್ಚು; ಅದನ್ನು ದೀರ್ಘ ಕಾಲ ಇಡಲೂ ಬಹುದು. ಗಿರಾಕಿ ಇರುವಲ್ಲಿ ಸಾಗಿಸಿ ಹೆಚ್ಚು ಲಾಭ ಪಡೆಯ ಬಹುದು. ಹತ್ತು ರೂಪಾಯಿ ಮಾಲು ಸುಮಾರು ಹತ್ತಾಣೆ ಲಾಭ ಕೊಟ್ಟೀತು. ರೂಪಾಂತರ ಹೊಂದಿದ ಅದೇ ಮಾಲನ್ನು ನೂರು ರೂಪಾಯಿ ಗಳಿಗೆ ಮಾರುವಾಗ ಹತ್ತು ರೂಪಾಯಿ ಲಾಭ ಪಡೆಯುವುದು ಸುಲಭ. ಬಟ್ಟೆ ಕೊಳ್ಳುವವನು ತಾನು ಕೊಡುವ ಹಣದಲ್ಲಿ ಎಷ್ಟೆಷ್ಟು ಭಾಗ ಯಾರ್ಯಾರ ಕೈ ಸೇರುತ್ತದೆ ಎಂದು ಲೆಕ್ಕ ಹಾಕುವುದಿಲ್ಲ. ನೂಲುವವನಿಗೆ, ನೇಕಾರ

ನಿಗೆ, ಪಿಂಜಾರ, ಅಗಸ, ರಂಗಾರಿ ಹೀಗೆ ಪ್ರತಿಯೊಬ್ಬನಿಗೂ ಶ್ರಮಾನುಗುಣ ವಾಗಿ ತಕ್ಕ ಲಾಭ ಸಂದಾಯವಾಗಿದೆ ಎಂದು ಅವನು ತಿಳಿಯಬಹುದು. ಆದರೆ, ಹಿಂದೆ ಹೇಳಿದ ಕಾರಣಗಳಿಂದ, ಬಟ್ಟೆ ಮಾರಾಟ ಮಾಡುವ ವರ್ತಕ ನಿಗೆ ದೊರೆಯುವ ಪ್ರಮಾಣದಲ್ಲಿ ನೇಕಾರನಿಗೂ, ನೂಲುವವನಿಗೂ ಲಾಭ ದೊರೆಯದು. ಬಟ್ಟೆ ಯಾವ ದರದಲ್ಲಿ ವಿಕ್ರಯವಾದರೂ ವರ್ತಕನಿಗೆ ಅವನ ದಳ್ಳಾಳಿ ತಪ್ಪಿದ್ದಲ್ಲ. ಹೆಚ್ಚು ಬೆಲೆಗೆ ಮಾರಾಟವಾದರೆ 'ಅಧಿಕಸ್ಯ ಅಧಿಕಂ ಫಲಂ' ಆ ಲಾಭವನ್ನೂ ವರ್ತಕನೇ ಪಡೆಯುತ್ತಾನೆ. ಹತ್ತಿ ಬೆಳೆದ ರೈತನ ವರೆಗೆ, ಹಂತಹಂತವಾಗಿ ಬೆಲೆ ಏರಿದಂತೆ, ಈ ಲಾಭ ಹಂಚಿಕೆಯಾಗುವು ದಿಲ್ಲ. ಇದನ್ನರಿತೇ ಗಾಂಧಿ ನೂಲುವವನಿಗೆ ಕನಿಷ್ಟಪಕ್ಷ ದಿನವಹಿ ಎಂಟಾಣೆ ಗಳಾದರೂ ಕೊಡಬೇಕೆನ್ನುತ್ತಾನೆ. ಮೇಲಿಂದ ಕೆಳಗಿನ ಹಂತಕ್ಕೆ ಲಾಭ ಹಂಚಿಕೆ ಇಳಿಮುಖವಾಗುವುದನ್ನು ತಪ್ಪಿಸಿ, ಕೆಳಗಿನ ಶ್ರೇಣಿಗಳಲ್ಲಿ ಹೆಚ್ಚು ಲಾಭ ದೊರೆಯುವಂತೆ ಮಾಡುವುದೇ ಗಾಂಧೀ ವಾದದ ಉದ್ದೇಶ. ಆದು ದರಿಂದ ಕಚ್ಚಾ ಪದಾರ್ಥವನ್ನು ಸ್ವಸ್ಥಳದಲ್ಲಿಯೇ ಪರಿಷ್ಕೃತ ಮಾಲಾಗಿ ಸಿದ್ಧಪಡಿಸಿದರೆ ಅವನಿಗೆ ಹೆಚ್ಚು ಲಾಭ. ಖಾದಿಯಲ್ಲಿ ಅಡಕವಾಗಿರುವ ಸಿದ್ಧಾಂತವೇ ಇದು.

ಸ್ವಪರಿಪೂರ್ಣತೆಯ ಅಡಿಗಲ್ಲು ಸ್ವಾವಲಂಬನೆ. ವ್ಯಕ್ತಿ ಹಾಗು ಗ್ರಾಮ ಸ್ವಾವಲಂಬಿಯಾಗಬೇಕು. ಪಾಶ್ಚಿಮಾತ್ಯಕ್ಕೂ, ಗಾಂಧೀವಾದಕ್ಕೂ ಇದರಲ್ಲಿ ಅತುಳ ವ್ಯತ್ಯಾಸ. ಪಾಶ್ಚಿಮಾತ್ಯದ ಗುರಿ ಕೇಂದ್ರೀಕರಣ, ಸಾಮೂಹಿಕ ಉತ್ಪಾದನೆ, ಯಾಂತ್ರೀಕರಣ, ಯಂತ್ರ ಸಹಾಯದಿಂದ ಉತ್ಪನ್ನ ವಿಶೇಷವಾಗಿ ಬೆಳಸಿ, ದೇಶವಿದೇಶಗಳಲ್ಲಿ ವಿಕ್ರಯಿಸಿ ಲಾಭಗಳಿಸು ವುದು. ಕಚ್ಚಾ ಮಾಲು ದೊರೆಯುವಲ್ಲಿಯೇ ಕಾರ್ಖಾನೆ ಇರಬೇಕಾದ್ದು ಅಷ್ಟು ಮಹತ್ವದ್ದಲ್ಲ. ಅಗ್ಗದ ಕೂಲಿ, ಪವರ್, ಸಂಚಾರ ಸೌಲಭ್ಯ ಗಮನಿಸಿ ಕಾರ್ಖಾನೆ ಸ್ಥಾಪಿಸುತ್ತಾರೆ.

ಇದರ ನೇರ ವಿರೋಧಿ ಗಾಂಧೀ ವಾದ. ಗಾಂಧೀ ವಾದದ ಗುರಿ ವಿಕೇಂದ್ರೀಕರಣ, ಸ್ವಾವಲಂಬನೆ ಮತ್ತು ಯಂತ್ರನಿರೋಧ. ಕೇಂದ್ರೀ ಕರಣ ಅಧಿಕಾರ ಲಾಂಛನ ಮತ್ತು ಆರ್ಥಿಕ ಪಾರತಂತ್ರ್ಯಕ್ಕೆ ಆಸ್ಪದ ಕೊಡುತ್ತೆ. ಸಾಮೂಹಿಕ ಉತ್ಪಾದನೆ, ಅತ್ಯುತ್ಪಾದನೆ ಮತ್ತು ಇತರ

ವಿಷಮ ಪರಿಸ್ಥಿತಿಗಳಿಗೆ ಎಡೆಗೊಡುತ್ತೆ. ದೊಡ್ಡ ಗಿರಣಿಗಳಲ್ಲಿ ದುಡಿಯುವವನು ತನ್ನ ವ್ಯಕ್ತಿತ್ವ ಕಳೆದುಕೊಳ್ಳುತ್ತಾನೆ; ಬಲಾತ್ಕಾರ ದುಡಿತ, ಅನಾರೋಗ್ಯವಾಸ, ಖಾಯಿಲೆ, ವ್ಯಭಿಚಾರ, ಅಲ್ಪಾಯುಷ್ಯ, ಜನಸಾಂದ್ರತೆ, ಸಮಾಜವಿಚ್ಛೇದನ, ದುರಾಚಾರ, ದುರ್ನೀತಿ ಮೊದಲಾದುವುಗಳ ಆಶ್ರಯಸ್ಥಾನ ದೊಡ್ಡ ಕೈಗಾರಿಕೆ ಕ್ಷೇತ್ರಗಳು. ಈಜಿಪ್ಟ್ ಮತ್ತು ಹಿಂದುಸ್ಥಾನದಲ್ಲಿ ಬೆಳಯುವ ಹತ್ತಿ ಮಾಂಚೆಸ್ಟರಿನಲ್ಲಿ ಬಟ್ಟೆಯಾಗುವುದು ನೈಜವಲ್ಲ. ಈ ಬೆಳವಣಿಗೆ ನಿಸರ್ಗ ನಿಯಮಕ್ಕೆ ವಿರುದ್ಧ. ನಿಸರ್ಗನಿಯಮ ಉಲ್ಲಂಘನೆಯ ಪರಿಣಾಮಗಳನ್ನು ಹಿಂದೆಯೇ ವಿವರಿಸಿದೆ. ಕೇಂದ್ರೀಕರಣದ ಸಲಕರಣೆ, ಸರಪರಾಜು, ಕಚ್ಚಾ ಮಾಲು ವಹಿವಾಟು, ಈ ವ್ಯವಸ್ಥೆಗಳ ಯಾವ ಅಂಗದಲ್ಲಾದರೂ ಸ್ವಲ್ಪ ಶಿಥಿಲತೆ ತಲೆದೋರಿದರೂ ಇಡೀ ವ್ಯವಸ್ಥೆಯೇ ಹಠಾತ್ತಾಗಿ ಕುಸಿದು ಬಹು ಜನಕ್ಕೆ ತೊಂದರೆಯಾಗಬಹುದು. ವಿಕೇಂದ್ರೀಕರಣ, ಸ್ವಾವಲಂಬನೆ, ಸ್ವಪರಿಪೂರ್ಣತೆಗಳೇ ಈ ವಿಪತ್ತಿಗೆ ಮದ್ದು.

ಸ್ವದೇಶೀ ಮಮತೆ ತೊರೆದು ಪರದೇಶೀ ಮಾಲಿಗೆ ಉತ್ತೇಜನಕೊಡಲು ತೊಡಗಿದುದರಿಂದ ಹಿಂದುಸ್ಥಾನದ ಅನೇಕ ಕುಶಲ ಕಲೆಗಳೂ ಕೈಗಾರಿಕೆಗಳೂ ನಾಶವಾದವು. ಪರದೇಶಕ್ಕೆ ತಾನು ಸಾಗಿಸುತ್ತಿದ್ದ ಸರಕು ಪರದೇಶಗಳಿಂದ ತಾನೇ ತರಿಸಿಕೊಳ್ಳುವ ದುಸ್ಥಿತಿ ಬಂತು. "ಭಾರತದ ಕುಶಲ ಬಡಗಿ ನಿರ್ಮಿಸಿದ ಗಟ್ಟಿಮುಟ್ಟಾದ ನಾವೆಗಳು, ಹಿಂದುಸ್ಥಾನದ ಉತ್ತಮ ಸರಕುಗಳ ಸಮೇತ ಲಂಡನ್ ಬಂದರು ಪ್ರವೇಶಿಸುತ್ತಲೇ, ವರ್ತಕವೃಂದದಲ್ಲಿದೊಡ್ಡದೊಂದು ಕ್ರಾಂತಿಯೇ ತಲೆದೋರಿತು. ಶತ್ರು ನೌಕಾಪಡೆಗಳು ಕಾಣಿಸಿಕೊಂಡರೂ ಇಷ್ಟು ವಿಸ್ಮಯ, ಹಾಹಾಕಾರ ಬಹುಶಃ ಉಂಟಾಗುತ್ತಿರಲಿಲ್ಲ" ಎಂದು ಬರೆಯುತ್ತಾನೆ ಮೆಡೋಸ್ ಟೇಲರ್.

'ಹಿತ್ತಲಗಿಡ ಮದ್ದಲ್ಲ' ಎಂಬುದು ಪರಾವಲಂಬನೆಯ ಹೆಗ್ಗುರುತು. ತಾಳೆ, ತೆಂಗು ಇವುಗಳಿಂದ ಬೆಲ್ಲ ಮಾಡುವುದು ಸಾಧ್ಯವಾದರೂ, ಶ್ರಮದಿಂದ ಕಬ್ಬು ಬೆಳೆದು ಸಕ್ಕರೆ ಮಾಡುವುದು ಒಂದು ದೃಷ್ಟಾಂತ. ತೆಂಗಿನ ಬೆಲ್ಲ ಅಷ್ಟು ಸ್ವಾದಿಷ್ಟವಿಲ್ಲದಿರಬಹುದು. ಈ ಲೋಪ ಹೋಗಲಾಡಿಸಬೇಕಾದುದು ವಿಜ್ಞಾನಿಯ ಕೆಲಸ. ಹತ್ತಿ, ಕಬ್ಬು, ನೆಲಗಡಲೆ, ಎಣ್ಣೆ ಬೀಜ, ಸೆಣಬು ಮೊದಲಾದ ಲಾಭದಾಯಕ ಫಸಲು ಬೆಳೆಯುವ ರೈತ, ಒಂದು

ದೃಷ್ಟಿಯಿಂದ, ಗಿರಣಿಗಳ ಒಂದು ಅಂಗವೇ ಸರಿ. ಇಂದು ಸಕ್ಕರೆ ಕಾರ್ಖಾನೆಗೆ ಕಬ್ಬು ಬೇಕಾಗಿದೆ. ಅದಕ್ಕಾಗಿ ಕಬ್ಬಿನ ಬೆಳೆ ಪ್ರೋತ್ಸಾಹಿಸುತ್ತದೆ. ನಾಳೆ ಅದೇ ಕಾರ್ಖಾನೆ ಬೇರೆ ಕಡೆಯಿಂದ ಕಬ್ಬು ತರಿಸಿಕೊಂಡರೆ ಮೊದಲ ರೈತ ತಬ್ಬಿಬ್ಬಾಗುತ್ತಾನೆ. ನಿಸ್ಸಹಾಯಕನಾಗುತ್ತಾನೆ. ಕಾರ್ಖಾನೆ ಗೊತ್ತುಮಾಡಿದ ಧಾರಣೆಗೆ ಕಬ್ಬು ಮಾರಬೇಕಾಗುತ್ತದೆ. ಚೌಕಸಿಮಾಡುವಂತಿಲ್ಲ, ಸ್ವಾವಲಂಬನೆ ಕಳಕೊಂಡ ರೈತ. ದೊಡ್ಡ ಯಂತ್ರಾಲಯುಗಳು ಶತ್ರು ವಿಮಾನಧಾಳಿಯಲ್ಲಿ ನಾಶವಾಗಬಹುದು. ಅಷ್ಟು ಯಾಂತ್ರೀಕರಣವಾಗಿಲ್ಲದ ಚೀನ ಐದು ವರುಷಗಳಿಂದ ಜಪಾನ್ ಧಾಳಿಯನ್ನು ಎದೆಗುಂದದೆ ಎದುರಿಸಲು ಶಕ್ತಿ ಕೊಟ್ಟಿರುವುದು ಅದರ ಸ್ವಾವಲಂಬನೆ, ವಿಕೇಂದ್ರೀಕರಣ ಮತ್ತು ಗೃಹ ಕೈಗಾರಿಕೆ.

ಪಾಶ್ಚಿಮಾತ್ಯರು ಪರಾವಲಂಬಿಗಳು, ಆದುದರಿಂದ ತದನುಗುಣ ಆರ್ಥಿಕ ಸಿದ್ಧಾಂತ ಅವರು ಪ್ರತಿಪಾದಿಸುತ್ತಾರೆ. ವ್ಯವಸಾಯಕ್ಕಿಂತ ಕೈಗಾರಿಕೆಗೆ ವಿಶೇಷ ಸ್ಥಾನ ಕೊಡುತ್ತವೆ ಪಾಶ್ಚಿಮಾತ್ಯ ದೇಶಗಳು. ತರಿಸಿಕೊಳ್ಳುವುದು ಕಚ್ಚಾಮಾಲು, ಸಾಗಿಸುವುದು ಸಿದ್ಧ ಸರಕು. ತಾನು ಬೆಳೆಯುವ ದವಸ ಇಂಗ್ಲೆಂಡಿಗೆ ವರುಷದಲ್ಲಿ ಐದು ವಾರ ಸಹ ಪೂರೈಸದು. ಮಿಕ್ಕ ನಲವತ್ತೇಳು ವಾರಗಳ ಊಟ ಪರದೇಶಗಳಿಂದ ಬರಬೇಕು. ಎಪ್ಪತ್ತು ಕೋಟಿ ರೂಪಾಯಿಗಳ ಬೆಣ್ಣೆ ತರಿಸಿಕೊಳ್ಳುತ್ತದೆ ಇಂಗ್ಲೆಂಡ್. ಪಾಶ್ಚಿಮಾತ್ಯ ಆರ್ಥಿಕ ಸ್ವಾವಲಂಬನೆಯ ವಿರೋಧಿ. ಡೆನ್ಮಾರ್ಕ್, ಸ್ವಿಟ್ಜರ್ಲೆಂಡ್, ಹಾಲೆಂಡ್ ಮೊದಲಾದ ಪ್ರಗತಿ ರಾಷ್ಟ್ರಗಳು ವಿದ್ಯುತ್, ತಂತಿ, ಟೆಲಿಫೋನ್ ಇವುಗಳಿಗೆ ಅಗ್ಗದ ಸಾಗವಾನಿ ಕಂಬಗಳನ್ನು ಬಳಸುತ್ತವೆ. ಅದಕ್ಕೂ ಅಗ್ಗವಾಗಿ, ಹೇರಳವಾಗಿ ಸಾಗುವಾನಿ ಕಂಬಗಳು ನಮ್ಮಲ್ಲಿ ದೊರೆತರೂ ನಾವು ಬಳಸುವುದು ಕಬ್ಬಿಣದ ಕಂಬಗಳನ್ನೇ.

ಕೋಟ್ಯಾಧೀಶರ ಮತ್ತು ಪಟ್ಟಣವಾಸಿಗಳ ವರಮಾನವೂ ಸೇರಿ ಭಾರತೀಯನ ಸರಾಸರಿ ವಾರ್ಷಿಕ ಆದಾಯ ರೂ. ೬೫ರಿಂದ ೮೦ ರೂ. ಎಂದು ಲೆಕ್ಕವಾಗಿದೆ. ಕೇವಲ ಹಳ್ಳಿಗರ ವರಮಾನ ಇದಕ್ಕೂ ತೀರ ಕಡಮೆ. ಮಧ್ಯಪ್ರಾಂತದ ೬೦೬ ಗ್ರಾಮಗಳ ಪರಿಶೀಲನೆ ನಡೆಸಿ ಗ್ರಾಮವಾಸಿಗಳ ಸರಾಸರಿ ವಾರ್ಷಿಕ ಆದಾಯ ಹನ್ನೆರಡು ರೂಪಾಯಿ ಎಂದು

ಕುಮಾರಪ್ಪನವರು ನಿಷ್ಕರ್ಷಿಸಿದ್ದಾರೆ. ಏಳು ಲಕ್ಷ ಗ್ರಾಮಗಳಲ್ಲಿ ವಾಸಿಸುವ ಭಾರತೀಯರ ಮಾಸಿಕ ಆದಾಯ ಒಂದು ರೂಪಾಯಿ. ಭಾರತದ ದೊಡ್ಡ ಸಮಸ್ಯೆ ಉದರ ಪೋಷಣೆ. 'ಭಾರತದ ರಾಜಕೀಯ ಅನ್ನಬ್ರಹ್ಮ' ಎಂದು ಬರೆಯುತ್ತಾನೆ ಲೂಯಿ ಫಿಷರ್. ಇದನ್ನು ಬಗೆಹರಿಸುವುದೇ ಗಾಂಧೀ ವಾದದ ಗುರಿ. ಉದರ ಪೋಷಣೆಯ ನಿಮಿತ್ತ ಆಡಂಬರ ರಹಿತ ಸರಳ ಜೀವನವೇ ಗಾಂಧೀ ವಾದದ ಆದರ್ಶ. ಭಾರತೀಯರಿಗೆ ಇದು ಆಶ್ಚರ್ಯ ವನ್ನುಂಟುಮಾಡದು. ಪೂರ್ವದಿಂದ ಸಾಧು ಸಂತರೂ ಸತ್ಪುರುಷರೂ ಇದೇ ಸರಳ ಜೀವನದ ಆದರ್ಶ ಎತ್ತಿ ಹಿಡಿದಿರುತ್ತಾರೆ. ಆದರೆ ಪಾಶ್ಚಾತ್ಯ ಆರ್ಥಿಕ ಸಿದ್ಧಾಂತ ಈ ತತ್ವಕ್ಕೆ ವಿರುದ್ಧ. ಹೆಚ್ಚು ಹೆಚ್ಚು ಗಳಿಸಬೇಕು, ಹೆಚ್ಚು ಹೆಚ್ಚು ವೆಚ್ಚಮಾಡಿ ಆರ್ಥಿಕ ಜೀವನಮಟ್ಟ ಏರಿಸಬೇಕು ಎಂಬುದೇ ಅವರ ಮತ. ಮನುಷ್ಯ ಹುಟ್ಟಿರುವುದು ಸುಖಪಡಲು; ಮಡಿಯಬೇಕು, ಆರ್ಜಿಸಬೇಕು, ವೆಚ್ಚಮಾಡಬೇಕು. ಪ್ರತಿಯೊಬ್ಬನೂ ಒಂದು ಮೋಟಾರ್ ಇರಿಸಿಕೊಳ್ಳಲು ಪ್ರಯತ್ನಿಸಬೇಕು. ಭೋಗ ವಸ್ತುಗಳಿರುವದೇಕೆ? 'ಸಂಬಳ ಏರಿಸಬೇಕು, ಖರ್ಚು ಮಾಡಿಸಬೇಕು' ಎಂಬುದು ಅವರ ಪಲ್ಲವಿ. ವ್ಯಕ್ತಿಯ ಜೀವನ ಮಟ್ಟ ಏರಿದಂತೆ, ದೇಶದ ಆರ್ಥಿಕ ಉನ್ನತಿ ಬೆಳೆಯು ತ್ತದೆ. ಇದಂ ಪಾಶ್ಚಿಮಾತ್ಯ ಆರ್ಥಿಕ ಸಿದ್ಧಾಂತ.

ಇಂಗ್ಲೆಂಡಿನ ಜೀವನ ಅಂತಸ್ತು ಒಂದು ಆದರ್ಶ. ಆದರೆ ಏಷ್ಯ, ಆಫ್ರಿಕ ಭಾಗಗಳನ್ನು ಸೂರೆಗೊಂಡು ಇಂಗ್ಲೆಂಡ್ ಹೇಗೆ ಸಂಪದ್ಯುಕ್ತವಾಗಿದೆ ಎಂದು ಮರೆಯಲಾಗದು. ಮೂರು ಕೋಟಿ, ನೂರು ಕೋಟಿಯು ಪರಪೀಡ ನೆಯಿಂದ ಐಶ್ವರ್ಯ ಗಳಿಸಿದೆ. ಹಿಂದುಸ್ಥಾನದ ಮೂವತ್ತುಕೋಟಿಯು ಇದೇ ಮಟ್ಟದ ಜೀವನ ನಡೆಸುವುದಾದರೆ ಸೃಷ್ಟಿಯಲ್ಲಿರುವ ಭೋಗ್ಯ ವಸ್ತುಗಳೆಲ್ಲ ಒಂದೇ ದಿನದಲ್ಲಿ ನಾಶವಾಗಬಹುದು. ವಿಶ್ವಕುಟುಂಬಿ ಸೃಷ್ಟಿಕರ್ತ ಈ ನಾಶ, ಈ ದುರುಪಯೋಗ ಸೈರಿಸನು, ಎನ್ನುತ್ತಾರೆ ವಿನೋಬ.

ಗಾಂಧೀ ವಾದದ ಗುರಿ ಕೇವಲ ಐಹಿಕವಲ್ಲ, ಪಾರಮಾರ್ಥಿಕವೂ ಹೌದು. ಐಹಿಕ ಸುಖ ಹೆಚ್ಚಿದಂತೆ ಸ್ವಾರ್ಥ ಬೆಳೆಯುತ್ತದೆ; ಭವಬಂಧನ ಬಿಗಿಯಾಗುತ್ತದೆ. ಈ ಬಂಧನದಿಂದ ಪಾರಾಗುವುದೇ ಮಾನವನ ಅಂತ್ಯ ಧ್ಯೇಯ. ಸುಖ ಜೀವನವಿರಲಿ, ಆದರೆ ಅದು ಸರಳವಿರಲಿ. ಭೋಗಾಸಕ್ತ

ಜೀವನ ಬೇಡ. ಈಗಿನ ದೇಶ ಸ್ಥಿತಿಯಲ್ಲಿ ಜೀವನ ಖರ್ಚು ಮತ್ತು ಮಟ್ಟ ಏರಿಸುವುದು ಕ್ರೂರ ಹಾಸ್ಯವಲ್ಲವೆ? 'ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಜಾಜಿ ಹೂವು.' "ಹಸಿವಿನ ಬೇಗೆಯಿಂದ ತುತ್ತಿನ ಚೀಲ ಬೊಬ್ಬೆಯಿಡುತ್ತಿರುವಾಗ, ಜೀವನ ಖರ್ಚು ಏರಿಸುವುದು, ಉರಿಯುವ ಬೆಂಕಿಗೆ ತುಪ್ಪ ಹಾಕಿದಂತೆ" ಎನ್ನುತ್ತಾನೆ ಕುಮಾರಪ್ಪ.

ಹಣದ ಪ್ರಭಾವ ತಗ್ಗಿಸಲು, ಒಂದು ಪದಾರ್ಥಕ್ಕೆ ಮತ್ತೊಂದು ಪದಾರ್ಥ ಬದಲು ಮಾಡಿಕೊಳ್ಳುವ ಪುರಾತನ ವಿನಿಮಯ ಪದ್ಧತಿ ಒಂದು ಉಪಾಯ. ಹಣವಾದರೂ ಏನು? ಹಣ-ನಾಣ್ಯ ನಂಬಿಕೆಯ ಅಧಿಕೃತ ಚಿಹ್ನೆ. ನೋಟಿನಲ್ಲಿಯೂ ಸಹ ಅದರಲ್ಲಿ ನಮೂದಾಗಿರುವ ಹಣ ಕೊಡುವುದಾಗಿ ಸರ್ಕಾರ ಭರವಸೆ ಕೊಡುತ್ತದೆ—ಲೇವಾದೇವಿಯ ಪ್ರಾಮಿಸರಿ ಪತ್ರದಂತೆ. ನಾಣ್ಯವೂ ಅಷ್ಟೇ. ಒಂದು ದೃಷ್ಟಿಯಲ್ಲಿ, ನಾಣ್ಯ ಅಥವಾ ನೋಟು ಅದನ್ನು ಹೊರಡಿಸುವ ಸರ್ಕಾರದಲ್ಲಿ ಜನತೆಗಿರುವ ನಂಬಿಕೆ. ನಾಣ್ಯ ಅಥವಾ ನೋಟನ್ನು ತಿರಸ್ಕರಿಸುವುದು ಅಪನಂಬಿಕೆ, ವ್ಯಕ್ತಪಡಿಸಿದಂತೆ ಆ ನಾಣ್ಯ ಚಾಲ್ತಿಯಿರುವ ರಾಜ್ಯದಲ್ಲಿ.

ನಾಣ್ಯ ಒಂದು ಪದಾರ್ಥದ ಬೆಲೆ ನಿರ್ದಿಷ್ಟ ಮಾಡುವ ಸಾಧನ ಎಂದು ಹಿಂದೆಯೇ ವಿವರಿಸಿದೆ, ಅಲ್ಲದೆ ಒಂದು ಪದಾರ್ಥವನ್ನು ಉಪಯುಕ್ತ ಮಾಡಲು ಎಷ್ಟು ಶ್ರಮ ವಿನಿಯೋಗವಾಯಿತೆಂಬುದನ್ನು ನಿರ್ದೇಶಿಸಲು ಹಣ ಸಹಕಾರಿಯಾಗಿದೆ. ಅನೇಕ ಕಾರಣಗಳಿಂದ ಭಂಗಾರ ಪ್ರಪಂಚದಲ್ಲೆಲ್ಲಾ ಶ್ರೇಷ್ಠ ನಾಣ್ಯವಾಗಿದೆ. ಕವಡೆ ಶಂಖ, ಗೋವು, ತೊಗಲು, ಟೀ ಸೊಪ್ಪು ಮೊದಲಾದವು ನಾಣ್ಯ ಜಾರಿಗೆ ಬರುವ ಮೊದಲು ಅದರ ಕಾರ್ಯ ನಿರ್ವಹಿಸುತ್ತಿದ್ದವು. ಮುಖ್ಯವಾದುದು ಸರ್ವಾದರಣ ನಂಬಿಕೆ. ಈ ನಂಬಿಕೆ ಬೆಳ್ಳಿ, ತೊಗಲು, ಕಾಗದ ಯಾವ ರೂಪದಲ್ಲಿಯಾದರೂ ವ್ಯಕ್ತವಾಗಬಹುದು. ಹಣದ ಪ್ರಭಾವ ತಗ್ಗಿಸಿ, ಶ್ರಮದ ಬೆಲೆ ಏರಿಸಲು ಕೈಯಿಂದ ನೂತ ನೂಲನ್ನು ಜಡ ನಾಣ್ಯಕ್ಕೆ ಬದಲಾಗಿ ಉಪಯೋಗಿಸಬಹುದೆಂದು ಗಾಂಧೀ ವಾದ ಸೂಚಿಸುತ್ತದೆ. ದೋಷಭರಿತ ಧನ ಸಂಗ್ರಹಣಕ್ಕೆ ಇದು ಹೆಚ್ಚು ಅವಕಾಶ ಕೊಡದು. ವರ್ಧಾದಲ್ಲಿ ಇದರ ಪ್ರಯೋಗ ನಡೆಯಿತು. ಆಹಾರ ಪದಾರ್ಥ, ಬಟ್ಟೆ, ಎಣ್ಣೆ, ಉಪ್ಪು, ಬೆಂಕಿಪೆಟ್ಟಿಗೆ ಇತ್ಯಾದಿ ಗ್ರಾಮ

ವಾಸಿಗಳ ಅಗತ್ಯ ವಸ್ತು ಗ್ರಾಮಸೇವಾ ಸಂಘದಲ್ಲಿ ಸಂಗ್ರಹಿತವಾಯಿತು. ಒಂದು ಲಡಿ ದಾರಕ್ಕೆ—ದಾರ ತೆಗೆಯಲು ವ್ಯಯವಾದ ಶ್ರಮಕ್ಕನುಗುಣ ವಾಗಿ—ಸಾಮಾನು ಬದಲಾಯಿಸಬಹುದು. ನಾಣ್ಯಕ್ಕೆ ಬದಲಾಗಿ ಇಲ್ಲಿ ವಸ್ತು ದೊರೆಯದು. ಕೈಯಿಂದ ನೂತ ದಾರ ಕೊಟ್ಟೇ ಮಾಲು ಪಡೆಯ ಬೇಕು. ಇದರಿಂದ ನೂಲು ಮಾರಿ, ನಾಣ್ಯ ಪಡೆದು, ಸರಕು ಕೊಳ್ಳ ಬೇಕಾದ ತೊಂದರೆ ಅಗತ್ಯ, ಮತ್ತು ಹಣದ ಪ್ರಭಾವ ತಕ್ಕಮಟ್ಟಿಗೆ ಕಡಮೆ ಯಾಯಿತು. ಒಂದು ಲಡಿ ದಾರ ತೆಗೆಯಲು ಎರಡು ಘಂಟೆ ಕಾಲ. ಎಂಟು ಘಂಟೆಗಳಿಗೆ ನಾಲ್ಕು ಲಡಿ ದಾರ. ನಾಲ್ಕು ಲಡಿ ದಾರಕ್ಕೆ ಎರಡೂ ವರೆ ಸೇರು ಅಕ್ಕಿ ದೊರೆತರೆ, ಅಷ್ಟೇ ಘಂಟೆಗಳ, ಅಷ್ಟೇ ದೇಹಶ್ರಮದ ಬೇರೊಂದು ಕೆಲಸಕ್ಕೂ ಎರಡೂವರೆ ಸೇರು ಅಕ್ಕಿ ಎಂದು ನಿರ್ಧರಿಸಿದಂತಾ ಯಿತು. ಅಧಿಕ ಶ್ರಮದ ಕೆಲಸ, ಅಲ್ಪ ಕಾಲದಲ್ಲಿ ನಿರ್ವಹಿಸಿದರೂ ಎರಡೂ ವರೆ ಸೇರು ಅಕ್ಕಿಯೇ. ಅಂದರೆ, ಕೆಲಸವೇನೇ ಇರಲಿ, ದುಡಿಯುವವನಿಗೆ ದುಡಿಸಿಕೊಳ್ಳುವವನು ಎರಡೂವರೆ ಸೇರು ಅಕ್ಕಿಯ ಪ್ರತಿಫಲ ದೊರೆಯು ವಷ್ಟು ಸರಕು ಅಥವ ನಾಣ್ಯ ಕೊಡಬೇಕು. ಹಾಗೆ ಪ್ರತಿಫಲ ದೊರೆಯು ದಿದ್ದರೆ ಚರಖದಿಂದ ನೂತು ಅಗತ್ಯ ಪದಾರ್ಥ ಭಂಡಾರದಿಂದ ಪಡೆಯಬಹು ದೆಂಬ ನಂಬಿಕೆ ಉತ್ಪನ್ನವಾಯಿತು. ಈ ನಂಬಿಕೆಯೇ ನಿಜ ಧನ, ಐಶ್ವರ್ಯ. 'ನಂಬಿಕೆಯೇ ನಾಣ್ಯ' ಎಂಬುದಕ್ಕೆ ಚಿಲ್ಲರೆನಾಣ್ಯ ಅಭಾವದಿಂದ ಉಂಟಾದ ಪರಿಸ್ಥಿತಿ ಒಳ್ಳೆಯ ನಿದರ್ಶನ. ಹೋಟೆಲು, ಮೋಟಾರು, ಟ್ರಾಂ ಮಾಲೀ ಕರು ತಮ್ಮದೇ ಚಿಲ್ಲರೆ ಚೀಟಿ ಹೊರಡಿಸಿದರು. ಇದರ ಸ್ವೀಕರಣೆ ಆಯಾ ಮಾಲೀಕರಲ್ಲಿ ನಂಬಿಕೆಯ ಸೂಚನೆ. ಅಂತೆಯೇ ನಾಣ್ಯ ಆಯಾ ಸರ್ಕಾರ ಗಳ ಆರ್ಥಿಕ ಭದ್ರತೆಯಲ್ಲಿರುವ ನಂಬಿಕೆಯ ಅಳತೆ. ನಾಣ್ಯದ ಏರಿಳಿತ ಹತೋಟಿ ತರಲು, ಪ್ರಪಂಚದಲ್ಲಿ 'ಬ್ಯಾಂಕರ್' ಎಂಬ ಭಂಗಾರದ ಏಕಮಾತ್ರ ನಾಣ್ಯ ಚಾಲ್ತಿಗೆ ತರಬೇಕೆಂದು ಸುಪ್ರಸಿದ್ಧ ಅರ್ಥಶಾಸ್ತ್ರವೇತ್ತ ನಾದ ಕೀನ್ಸ್ ಸಲಹೆ ಮಾಡುತ್ತಾನೆ.

ಗಾಂಧೀವಾದ ಅನುಕಂಪ, ಪ್ರೇಮ, ಸೇವಾತತ್ಪರತೆ ಇವುಗಳ ಸಹಾಯ ದಿಂದ ನಂಬಿಕೆ, ಅನ್ಯೋನ್ಯಭಾವನೆ ಹುಟ್ಟಿಸಿ, ಹಣದ ಪ್ರಭಾವ ಕುಗ್ಗಿಸಿ, ನಿಜ ಐಶ್ವರ್ಯ ವೃದ್ಧಿಪಡಿಸುತ್ತದೆ. ಗಾಂಧೀ ನಾಣ್ಯ ಸೇವಾಧರ್ಮದಿಂದ ಉಪಜಾತವಾಗುವ ನಂಬಿಕೆ, ಪ್ರೇಮ, ವಿಶ್ವಾಸ—ಭಂಗಾರದ ನಾಣ್ಯವಲ್ಲ, ಕಾಗದದ ನೋಟಲ್ಲ.

The way to liberty, the way to equality of opportunity lies through power; the machine is only an incident. The function of the machine is to liberate man from brute burdens and release his energies to the building of his intellectual and spiritual powers for conquests in the fields of thought and higher action ...Henry Ford

Of one thing I am certain This same technical progress which, in itself, might relieve mankind of a great part of labour necessary to its subsistence, is the main cause of our present troubles. ...Einstein

Fifty years of brilliant inventions and discoveries has not added one inch to the moral height of mankind. ...Wallace

೬. ಯಂತ್ರ ಮತ್ತು ಮಾನವ ಶ್ರೇಷ್ಠತೆ

"ಬಾಪು, ನೀವು ಯಂತ್ರವಿರೋಧಿಗಳೇ, ಯಂತ್ರವೆಂಬುದನ್ನೇ ಬೇಡವೆನ್ನುತ್ತೀರಾ?"

"ಉಂಟೆ? ಈ ದೇಹವೇ ಅತಿ ಸೂಕ್ಷ್ಮ ಯಂತ್ರ. ಚರಖವೂ ಒಂದು ಯಂತ್ರ. ಯಂತ್ರವನ್ನಲ್ಲ ನಾನು ಬೇಡೆಂಬುದು; ಯಂತ್ರ ಯಂತ್ರ ಎಂಬ ಹುಚ್ಚು ಭ್ರಾಂತಿಯನ್ನು. ದೇಹಶ್ರಮ ದುಡಿತ ತಗ್ಗಿಸುವ ಸಂವಿಧಾನ ದಿನ ದಿನಕ್ಕೆ ಬೆಳೆಯುತ್ತ, ಸಾವಿರಾರು ಜನ ಉದ್ಯೋಗವಿಲ್ಲದೆ ನಿರ್ಗತಿಕರಾಗಿ ಬೀದಿ ಬೀದಿ ಅಲೆಯುತ್ತಾರೆ. ಹಲವರಿಗೆ ಮಾತ್ರ ದುಡಿತ ಮತ್ತು ಸಹಾಯ ಉಳಿಸಬೇಕೆಂಬುದು ನನ್ನ ಉದ್ದೇಶವಲ್ಲ. ಇಡೀ ಮಾನವಕೋಟಿಗೆ ಈ ಉಳಿತಾಯ ಅನ್ವಯಿಸಬೇಕು. ಕೆಲವರಲ್ಲಿ ಮಾತ್ರ ಧನ ಸಂಗ್ರಹವಾಗ

ಲೆಂಬುದು ನನ್ನ ಬಯಕೆಯಲ್ಲ. ಅಲ್ಪ ಸಂಖ್ಯೆ ಸಾವಿರಾರು ಜನರ ಮೇಲೆ ಸವಾರಿ ಮಾಡುವ ಅವಕಾಶ ಕೊಟ್ಟಿದೆ ಯಂತ್ರ. ಶ್ರಮ ಕಡಮೆ ಮಾಡಬೇಕೆಂಬ ಔದಾರ್ಯವಲ್ಲ ಇದರ ಹಿನ್ನೆಲೆ, ಆದರೆ ದುರಾಸೆ. ನಾನು ವಿರೋಧಿಸುವುದು ಈ ಪದ್ಧತಿಯನ್ನು. ಈ ಪದ್ಧತಿ ವಿರೋಧಿಸಲು ನನ್ನ ಸರ್ವ ಶಕ್ತಿಯೂ ವಿನಿಯೋಗವಾಗುತ್ತಿದೆ" ಎಂದೆನ್ನುತ್ತಾನೆ ಗಾಂಧಿ.

ದುಡಿತ ತಗ್ಗಿಸಬೇಕು, ಅಧಿಕ ಶ್ರಮವಿಲ್ಲದೆ ಉತ್ಪಾದನೆ ಹೆಚ್ಚಿಸಬೇಕು ಎಂದು ಯಂತ್ರ ನಿರ್ಮಿತವಾಯಿತು. 'ಸ್ಪಿನ್ನಿಂಗ್ ಜೆನ್ನಿ' ಎಂಬ ನೇಯಿಗೆ ಯಂತ್ರ ತಲೆದೋರಿದಾಗ, ಹತ್ತು ಜನರ ಕೆಲಸ ಒಂದು ಯಂತ್ರ ನಿರ್ವಹಿಸಿ ನೂರು ಜನರ ಬಾಯಿಗೆ ಮಣ್ಣು ಹಾಕುತ್ತದೆ ಎಂದು ಇಂಗ್ಲೆಂಡಿನ ಕಾರ್ಮಿಕರು ಅದನ್ನು ನಾಶಮಾಡಿದರು. ಆದರೆ ಬಂಡವಾಳ ಪ್ರಭುತ್ವದಲ್ಲಿ ಕೂಲಿಗಾರನ ಮಾತು ಕೇಳುವವರಾರು? ಯಂತ್ರ ಬೆಳೆಯುತ್ತಲೇ ಬಂತು. ಹಸಿವಿನ ಬೇಗೆ ತಡೆಯದೆ, ಯಂತ್ರ ನಿರೋಧಿಸಿದ ಕಾರ್ಮಿಕರೇ ಯಂತ್ರಾಲಯಗಳಿಗೆ ಹೋಗಿ, 'ನಮಗೆ ಕೆಲಸ ಕೊಡಿ' ಎಂದು ಅಂಗಲಾಚುವ ಸ್ಥಿತಿ ಬಂತು. ಯಂತ್ರ ಯಥೇಚ್ಛ ಸರಕು ಸಿದ್ಧಪಡಿಸುವುದರಿಂದ, ಅಗ್ಗದ ದರದಲ್ಲಿ ಸುಗ್ಗಿಯ ಮಾಲನ್ನು ಕೊಳ್ಳಬಹುದೆಂದು ಯಂತ್ರೋಪಾಸಕರು ಸಾರಿದರು. ಆದರೆ, ಯಂತ್ರ ನಿರ್ಮಿತ ಮಾಲು ಪರದೇಶಗಳಲ್ಲಿ ಮಾರಾಟವಾಗಿ ಹಣ ಹಿಂದಕ್ಕೆ ಬಂದು ಕೈ ಸೇರಲು ಬಹಳ ಕಾಲವಾಗುತ್ತದೆ. ಯಂತ್ರ ಕೊಳ್ಳಲು ವಿಶೇಷ ಬಂಡವಾಳ ಬೇಕು. ಯಂತ್ರ ರಿಪೇರಿ, ಸಿಬ್ಬಂದಿ, ಡೆಪ್ರಿಸಿಯೇಷನ್, ಬಡ್ಡಿ ಇತ್ಯಾದಿ ಖರ್ಚು ಹೆಚ್ಚಿತು. ಯಂತ್ರದೊಡನೆ ಪೈಪೋಟಿ ನಡೆಸಲಾರದ ಕಾರ್ಮಿಕರು ತಮ್ಮ ಉಪಕರಣಗಳನ್ನು ಮಾರಿಕೊಂಡು, ಸ್ವತಂತ್ರ ಜೀವನಾಧಾರ ಶಕ್ತಿ ಕಳೆದ-ಕೊಂಡು, ಯಂತ್ರದಾಸರಾದರು. ಈ ದುರ್ಧರ ಸಮಯ ಕಾದು ಖರ್ಚು ಕಡಮೆ ಮಾಡಲು ತಾನು ಸಲ್ಲಿಸುವ ಕೂಲೀ ದರ ಇಳಿಸುತ್ತ ಬಂದ ಶ್ರಮಜೀವಿಗಳು ಒಂದಾಗಿ ಸಂಘ ಸ್ಥಾಪನಾ ಸ್ವಾತಂತ್ರ್ಯ ಪಡೆಯುವವರೆಗೆ ಇವರ ಸ್ಥಿತಿ ಶೋಚನೀಯವಿತ್ತು. ತದನಂತರ ಸ್ವಲ್ಪ ಚೇತನ ಬಂತು. ಆದರೂ ದಿನಂಪ್ರತಿ ಬಂಡವಾಳಗಾರನಿಗೂ—ಕಾರ್ಮಿಕನಿಗೂ ಘರ್ಷಣೆ ತಪ್ಪಿದ್ದಲ್ಲ. ಮಾರ್ಕ್ಸ್‌ನ 'ಕ್ಯಾಪಿಟಲ್' ಎಂಬ ವಿಖ್ಯಾತ ಗ್ರಂಥಕ್ಕೆ ಇದು ಮೂಲಾಧಾರ. 'ಪ್ರಪಂಚದಲ್ಲಿ ದುಡಿ

ಯುವ ಶ್ರಮಜೀವಿ, ದುಡಿಸಿಕೊಳ್ಳುವ ಬಂಡವಾಳಗಾರ ಎಂಬ ಈ ವರ್ಗ ವಿನ್ಯಾಸ ನಾಶವಾಗಬೇಕು. ಪ್ರಪಂಚದ ಶ್ರಮಜೀವಿಗಳೆಲ್ಲರೂ ಒಂದಾಗಿ, ಬಂಡವಾಳ ಶಾಹಿಯನ್ನು ಧ್ವಂಸಮಾಡಿ, ಸರ್ಕಾರ ತಮ್ಮ ಸ್ವಾಧೀನಪಡಿಸಿಕೊಳ್ಳಬೇಕು. ಅದುವರೆಗೆ ಘರ್ಷಣೆ ತಪ್ಪಿದ್ದಲ್ಲ' ಎಂಬ ಸಿದ್ಧಾಂತ ಸಾರಿದನು.

ಯಂತ್ರಕ್ರಿಯಾಶಕ್ತಿ ಬೆಳೆದಂತೆ, ವ್ಯಕ್ತಿ ಕ್ರಿಯಾಶಕ್ತಿ ಕಡಮೆಯಾಗುತ್ತ, ನಿರುದ್ಯೋಗ ಬೆಳೆಯುತೊಡಗಿತು. ೧೯೧೯-೧೯೩೩ರಲ್ಲಿ ಅಮೇರಿಕದ ಯಂತ್ರಕ್ರಿಯಾಶಕ್ತಿ ನೂರಕ್ಕೆ ೭೧೯ರಷ್ಟು ಬೆಳೆಯಿತು. ನಿರುದ್ಯೋಗಿಗಳ ಸಂಖ್ಯೆ ೧೫ ಲಕ್ಷದಿಂದ ಒಂದು ಕೋಟಿ ಇಪ್ಪತ್ತು ಲಕ್ಷಕ್ಕೆ ಏರಿತು. ಇಂಗ್ಲೆಂಡಿನ ನಿರುದ್ಯೋಗಿಗಳ ಸಂಖ್ಯೆ ೩೦ ಲಕ್ಷವಾಯಿತು. ವ್ಯವಸಾಯಕ್ಕಾಗಿ ಯಂತ್ರ ಸಲಕರಣೆಗಳನ್ನು ವಿಶೇಷ ಉಪಯೋಗಿಸತೊಡಗಿದ ರಷ್ಯದಲ್ಲಿ ಮೂರು ಕೋಟಿ ರೈತರಿಗೆ ಕೆಲಸವಿಲ್ಲದಾಯಿತು. ಫ್ರಾನ್ಸ್ ದೇಶದ ಐವ್ರಿ ಎಂಬ ಊರಿನ ಒಂದು ಕಾರ್ಖಾನೆಯಲ್ಲಿ ೧೯೩೨ರಲ್ಲಿ ಒಂದು ನಿಮಿಷಕ್ಕೆ ೨,೫೦೦ ಸಿಗರೇಟುಗಳನ್ನು ತಯಾರಿಸಲು ೨೫೦ ಹೆಂಗಸರು ಕೆಲಸ ಮಾಡುತ್ತಿದ್ದರು. ೧೯೩೫ರಲ್ಲಿ ಹೊಸ ಯಂತ್ರ ಬಂದು, ೨೪೮ ಸ್ತ್ರೀಯರನ್ನು ಮನೆಗೆ ಕಳುಹಿಸಿತು. ಒಂದು ದೊಡ್ಡ ಜಹಜಿಗೆ ಕಲ್ಲಿದ್ದಲು ಭರ್ತಿಮಾಡಲು ೧೯೩೪ರಲ್ಲಿ, ೨೫೦ ಜನ ೨,೦೦೦ ಘಂಟೆಗಳು ದುಡಿಯಬೇಕಿತ್ತು. ಡೈಸಲ್ ಎಣ್ಣೆ ಬಳಕೆಗೆ ಬಂತು. ಎಣ್ಣೆ ಭರ್ತಿಮಾಡುವ ಕೆಲಸ ಇಬ್ಬರು ಹದಿನಾರು ಘಂಟೆಗಳಲ್ಲಿ ಮುಗಿಸುತ್ತಾರೆ. ಹಿಂದುಸ್ಥಾನದಲ್ಲಿ ಸ್ಥಾಪಿಸುವ ಪ್ರತಿ ಭತ್ತದ ಗಿರಣಿ ೭,೦೦೦ ಜನರ ಅನ್ನ ಅಪಹರಿಸುತ್ತದೆ. ನೇಯ್ಗೆ ಕಾರ್ಖಾನೆ ೧,೦೦೦ ಕುಟುಂಬ, ಅಥವಾ ೫,೦೦೦ ಹೊಟ್ಟೆಗಳಿಗೆ ಅನ್ನವಿಲ್ಲದಂತೆ ಮಾಡುವುದು ಮಾತ್ರವಲ್ಲದೆ, ಉಪಕಸಬುಗಳ ನಾಶದಿಂದ ಇನ್ನೂ ೨೦೦ ಕುಟುಂಬಗಳಿಗೆ ಅನ್ನವಿಲ್ಲದಾಗುತ್ತದೆ ಎಂದು ಪಟ್ಟಾಭಿ ಸೀತಾರಾಮಯ್ಯನವರು ಲೆಕ್ಕ ಮಾಡಿದಾರೆ.

"ರಾಜಕೀಯ ಸಾಧಿಸದ ಸ್ವಾತಂತ್ರ್ಯ, ಸಮಾನತೆ, ಸಮಾನ ಅವಕಾಶಗಳನ್ನು ಯಂತ್ರಶಕ್ತಿ ಕಲ್ಪಿಸಿದೆ" ಎನ್ನುತ್ತಾನೆ ಮೋಟಾರ್ ನಿರ್ಮಾಣಕ ಹೆನ್ರಿಫೋರ್ಡ್. ಸೋವಿಯಟ್ ಸಿದ್ಧಾಂತವೂ ಈ ಸೂತ್ರವನ್ನೇ ಅನುಮೋದಿಸುತ್ತದೆ. ದೋಷ ಯಂತ್ರದಲ್ಲಿಲ್ಲ. ಆದರೆ ಯಂತ್ರ ಬಳಸುವ

ಮಾನವನಲ್ಲಿ, ಸಮಾಜದಲ್ಲಿ ಎಂಬುದೇ ಅವರ ವಾದ. ತನ್ನ ಮೇಧಾಶಕ್ತಿಯಿಂದ ಅದ್ಭುತ ಯಂತ್ರಗಳನ್ನು ಮಾನವ ಸೃಜಿಸಿದ್ದಾನೆ. ಯಂತ್ರ ಉತ್ಪಾದಕ ಅಥವ ವಿಧ್ವಂಸಕ ಆಗಬಹುದು. ಸಂಶೋಧನೆಯ ಫಲವನ್ನು ಅವನು ಸದುಪಯೋಗಪಡಿಸಬಹುದು, ದುರುಪಯೋಗಮಾಡಲೂಬಹುದು. ಆದುದರಿಂದ ಉತ್ಪಾದನಾ ಸಾಧನಗಳನ್ನೂ, ಶಕ್ತಿ ಸಂಚಲನಗಳನ್ನೂ ಸಮಾಜದ ನಿಜ ಪ್ರತಿನಿಧಿಯಾದ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು, ಜನತೆಯ ಸೇವೆಯಲ್ಲಿ ಅದನ್ನು ಸದ್ವಿನಿಯೋಗಪಡಿಸಬೇಕು.

ಯಂತ್ರವೆಂದರೇನು? ಯಂತ್ರದ ಗುರಿ ಏನು? ಎಂಬುದೇ ದೊಡ್ಡ ಪ್ರಶ್ನೆ. ಈ ದೇಹವೇ ಅತಿ ಸೂಕ್ಷ್ಮ ಅದ್ಭುತ ಯಂತ್ರ. ಆಹಾರ ಜೀರ್ಣ ಮಾಡಿ ರಕ್ತಗತ ಮಾಡುವ ಶಕ್ತಿ ಮನುಷ್ಯನಿರ್ಮಿತ ಯಂತ್ರದಿಂದ ಸಾಧ್ಯವಿಲ್ಲ. ಹುಲ್ಲು ಮೇದು ಹಸು ಅಮೃತ ಕೊಡುತ್ತದೆ. ಹುಲ್ಲಿಂದ ಹಾಲು ಮಾಡುವ ಯಂತ್ರ ಇನ್ನೂ ನಿರ್ಮಾಣವಾಗಿಲ್ಲ. ಹಲ್ಲಿನ ಸ ದಿಯಲ್ಲಿ ಸಿಕ್ಕುವ ಕಶ್ಮಲ ಕಡ್ಡಿಯಿಂದ ತೆಗೆಯುವುದೂ ಯಂತ್ರಕ್ರಿಯೆ ಎನ್ನುತ್ತಾನೆ ಗಾಂಧಿ. ಇಂದ್ರಿಯಶಕ್ತಿ ವೃದ್ಧಿಮಾಡಿಸುವ ಬಾಹ್ಯ ಚೇತನ ಸಾಧನಗಳೆಲ್ಲ ಯಂತ್ರ ಎನ್ನುತ್ತಾನೆ ಸ್ಟುವರ್ಟ್ ಚೇಸ್.

ಮಾನವ ಶಕ್ತಿಗೆ ಬಾಹ್ಯವಾದ ಇದ್ದಿಲು, ನೀರು, ಎಣ್ಣೆ, ವಿದ್ಯುತ್, ವಾಯು ಮೊದಲಾದ ಚೇತನಗಳನ್ನು ವಿನಿಯೋಗಿಸಿ ಕಾರ್ಯ ಮಾಡುವುದು 'ಯಂತ್ರ' ಎಂದೂ, ಬಾಹ್ಯ ಶಕ್ತಿಯ ಸಹಾಯವಿಲ್ಲದೆ ಮಾನವಶಕ್ತಿ ವಿಸ್ತರಿಸಿ ಅಥವಾ ಮಾರ್ಪಾಟು ಮಾಡುವುದು 'ಉಪಕರಣ' ಎಂದೂ ಹೇಳಬಹುದು. ಬಾಹ್ಯಶಕ್ತಿಯ ಸಹಾಯವಿಲ್ಲದೆ, ದೇಹಶಕ್ತಿಯ ಸಹಾಯ ಮಾತ್ರದಿಂದ ಕಾರ್ಯ ನಿರ್ವಹಿಸುವ ಫೌಂಟನ್ ಪೆನ್, ಸೀಸದ ಕಡ್ಡಿ, ಬೈಸಿಕಲ್, ಟೈಪ್ ರೈಟರ್, ಕ್ಷೌರ ಕತ್ತಿ, ಬೀಸುವ ಕಲ್ಲು, ಕನ್ನಡಕ, ಸೂಕ್ಷ್ಮದರ್ಶಕ, ಉಷ್ಣ ಮಾಪಕ ಇವುಗಳನ್ನು ಯಾವ ಶ್ರೇಣಿಗೆ ಸೇರಿಸುವುದು? 'ಯಾವದಾದರೂ ನಿರ್ದಿಷ್ಟ ಉದ್ದೇಶಕ್ಕಾಗಿ, ಶಕ್ತಿ ಅಥವ ಚೇತನ ಕೇಂದ್ರೀಕರಿಸಿ ವಿನಿಯೋಗಿಸಲು ಸಹಾಯಕವಾದ ಸಾಧನ ಅಥವ ಯುಕ್ತಿಯಂತ್ರ'ಎಂದು ವಿಶ್ವಕೋಶ ವಿವರಿಸುತ್ತದೆ.

ಆಧುನಿಕ ಯಂತ್ರಾಲಯಗಳ ಅಡಿಗಲ್ಲು ಸುವ್ಯವಸ್ಥೆ ಮತ್ತು ಸುಮನ್ವಯ. ಗಡಿಯಾರದಂತೆ ಪ್ರತಿಯೊಂದು ಭಾಗವು ತನ್ನ ತನ್ನ ಕೆಲಸಗಳನ್ನು ಸಕಾಲದಲ್ಲಿ ಸರಿಜೋಡಿಸಿ ಮಾಡಬೇಕು. ಒಂದು ಅಂಗ ಅವ್ಯವಸ್ಥಿತವಾದರೂ ಇಡೀ ವ್ಯವಸ್ಥೆಯೇ ಕೆಡುತ್ತದೆ. ಗಡಿಯಾರದ ಸಣ್ಣ ಮುಳ್ಳು, 'ನಾನು ನಿಮಿಷಕ್ಕೆ ಇನ್ನೂರು ಸುತ್ತು ಸುತ್ತುವೆನು' ಎಂದು ಸುತ್ತುತೊಡಗಿದರೆ ಗಡಿಯಾರದ ಗತಿ ಏನಾದೀತು ? ಅಂತೆ ಯಂತ್ರಾಲಯ ವ್ಯವಸ್ಥೆ. ಬೆಲ್ಟ್ (Belt) ಕನ್ವೇಯರ್ ಪದ್ಧತಿ ಇದರ ಪರಿಧಿ. ತಾಳಕ್ಕನುಗುಣವಾಗಿ ಶೃತಿಗೂಡಿಸಿ ಹಾಡುವಂತೆ, ಯಂತ್ರವೇಗಕ್ಕನುಗುಣವಾಗಿ ಇಂದ್ರಿಯ ಕಾರ್ಯಗಳನ್ನು ಸರಿಜೋಡಿಸಬೇಕು. ಈ ರೀತಿ ಮಾಡುತ್ತ ಕಾರ್ಯದಲ್ಲಿ ತಲ್ಲೀನನಾಗಿ, ಅಭ್ಯಾಸಯೋಗದಿಂದ ಯಂತ್ರದೊಡನೆ ಯಂತ್ರನಾಗುತ್ತಾನೆ ಮಾನವ. ವಿಖ್ಯಾತ ವಿದೂಷಕ ಚಾರ್ಲಿ ಚಾಪ್ಲಿನ್ ಚಲನ ಚಿತ್ರದಲ್ಲಿ ಈ ಪದ್ಧತಿಯನ್ನು ಬಹು ಚೆನ್ನಾಗಿ ತೋರಿಸುತ್ತಾನೆ. ಧಾರಾಕಾರವಾಗಿ, ನಿಯತ ನಿಯಮ ಅನುಸರಿಸಿ ಒಂದರ ಹಿಂದೆ ಒಂದಾಗಿ 'ಬೆಲ್ಟ್' ಮೇಲೆ ಬರುವ ಸ್ಕ್ರೂಗಳಿಗೆ ತಿರುಪು ಕೊಡುವುದು ಚಾರ್ಲಿಯ ಕೆಲಸ. ಮುಖದ ಮೇಲೆ ಕೂಡುವ ನೊಣ ಓಡಿಸಲು ವಿರಾಮವಿಲ್ಲ. ಅಷ್ಟರಲ್ಲಿ ಹತ್ತು ಸ್ಕ್ರೂಗಳು ಮುಂದೆ ಸಾಗುತ್ತವೆ. ಅವುಗಳಿಗೆ ತಿರುಪು ಕೊಡಲು ಅಟ್ಟಿಕೊಂಡು ಸುತ್ತುವುದರಲ್ಲಿ ಬುಗುರಿಯಂತೆ ಸುತ್ತುತ್ತಾ ತಲೆತಿರುಗಿ ಬೀಳುತ್ತಾನೆ. ಉತ್ಪ್ರೇಕ್ಷೆಯಿದ್ದರೂ ಮನ ನಾಟುತ್ತದೆ. ಆದರೆ ಮಾನವಶರೀರ ಯಂತ್ರದಂತೆ ದುಡಿಯಲು ರಚಿತವಾಗಿಲ್ಲ. ದಿನ ದಿನಕ್ಕೂ ಮಾನವ ಅಂಗಗಳು ಬೆಳೆಯುತ್ತವೆ. ಬುದ್ಧಿಸಾಮರ್ಥ್ಯ, ದೇಹದಾರ್ಢ್ಯ ಮಾರ್ಪಾಟಾಗುತ್ತದೆ. ಸುಖ ದುಃಖಗಳಿಗೆ ಮನಸ್ಸು ಮರಗುತ್ತದೆ. ಮನೆಯಲ್ಲಿ ಯಾರಾದರೂ ಮೃತರಾದರೆ ಯಂತ್ರಕ್ಕೆ ನೋವಾಗದು. ಆದರೆ ಚಾಲಕನಿಗೆ ದುಃಖ ಇಳಿಯುವ ವರೆಗೆ ಕೆಲಸಮಾಡಲು ಮನ ಒಪ್ಪದು. ರಕ್ತ ಮಾಂಸದಿಂದ ಕೂಡಿದ ಈ ದೇಹ ಯಂತ್ರದೊಡನೆ ಯಂತ್ರವಾಗುವುದು ಅಷ್ಟು ಸುಲಭವಲ್ಲ. ಸತತ ಪ್ರಯತ್ನಬೇಕು. ಈ ಪ್ರಯತ್ನದಲ್ಲಿ ಮನಸ್ಸಿಗೂ ದೇಹಕ್ಕೂ ವಿಶೇಷ ಶ್ರಮವಾಗುತ್ತದೆ. ಕೆಲಸ ರೂಢಿಸಿದ ಮೇಲೆ ಈ ಶ್ರಮ ಅದನ್ನು ಅನುಭವಿಸುವ ವ್ಯಕ್ತಿಗೇ ಭಾಸವಾಗದೆ ಹೋಗಬಹುದು. ಉತ್ತಮ

ಸೈಕಲ್ ಸವಾರನಿಗೆ ತಾನು 'ಬ್ಯಾಲೆನ್ಸ್' ಸರಿದೂಗಿಸಿ ಸವಾರಿ ಮಾಡುತ್ತಿರುವುದು ಭಾಸವಾಗವಿರಬಹುದು, ನಡುವವನಿಗೆ ನಡಗೆಯಂತೆ. ಆದರೆ ಇಬ್ಬರೂ ಎದ್ದು ಬಿದ್ದು ಅಭ್ಯಾಸಮಾಡಿದ್ದು ಸುಳ್ಳಾಗದು. ಯಂತ್ರದ ವೇಗ, ಗತಿ, ಕ್ರಿಯಾಶಕ್ತಿಯೊಡನೆ ಶೀತೋಷ್ಣ ಸುಖದುಃಖಗಳಿಗೆ ಎಡೆಗೊಡದೆ ಸಮನ್ವಯಗೊಳಿಸುವುದರಲ್ಲಿ ಶ್ರಮವೇದ್ಯವಾಗದಿರಬಹುದು. ಆದರೆ, ಶ್ರಮವಿದ್ದೇ ಇರುತ್ತದೆ.

'ನನ್ನ ಜೀವಮಾನವೆಲ್ಲ ಗುಂಡುಸೂಜಿಯ ಹದಿನೆಂಟನೇ ಒಂದು ಭಾಗ ಮಾಡುವುದರಲ್ಲಿ ವಿನಿಯೋಗವಾಯಿತು' ಎಂಬುದು ಎಷ್ಟು ಶೋಚನೀಯ ಎಂದು ಪ್ರಲಾಪಿಸುತ್ತಾನೆ ಕಲಾಭಿಮಾನಿ ರಸ್ಕಿನ್. ಆತ್ಮಸಂತೃಪ್ತಿ, ಆತ್ಮವಿಕಾಸಕ್ಕೆ ಆಸ್ಪದವಿಲ್ಲ. ಸಾಮೂಹಿಕ ನಿರ್ಮಾಣ ವ್ಯವಸ್ಥೆಯಲ್ಲಿ ಕೈಮಗ್ಗದಲ್ಲಿ ಬಟ್ಟೆ ನೇಯುವ ನೇಕಾರನಿಗೆ, ಕುರ್ಚಿ ಮಾಡುವ ಬಡಿಗನಿಗೆ, ವಿಗ್ರಹ ಕಡಿಯುವ ಶಿಲ್ಪಿಗೆ, ಚಿತ್ರಕಾರನಿಗೆ ಆಗುವ ಆತ್ಮತೃಪ್ತಿ ಸೂಜಿಯ ಹದಿನೆಂಟನೇ ಒಂದು ಭಾಗ ಮಾಡಿದವನಿಗೆ ಅರಿವಾಗದು. ಮೋಟಾರು ತಯಾರಿಕೆಯಲ್ಲಿ ೪೦,೦೦೦ ಪ್ರತ್ಯೇಕ ಅಳತೆ ತೆಗೆಯಬೇಕು. ವಿಮಾನದಲ್ಲಿ ೩೨,೦೦೦ ಪ್ರತ್ಯೇಕ ಭಾಗಗಳಿವೆ. ರಂಧ್ರಮಾಡುವನೊಬ್ಬ, ಮೊಳೆ ಮಾಡುವನೊಬ್ಬ, ಜೋಡಿಸುವವ ಮಗದೊಬ್ಬ. ೫,೦೦೦ ಕೆಲಸಗಾರರಲ್ಲಿ ವಿಮಾನ ಮಾಡಿದವ ನಾನು ಎಂದು ಯಾರು ಹೇಳಿಕೊಳ್ಳಬಲ್ಲರು? ತಾನೇ ತವರದಲ್ಲಿ ಆಟದ ವಿಮಾನ ಮಾಡಿ ಆನಂದ ಪಡುವ ಕೆಲಸಗಾರನಷ್ಟು ತೃಪ್ತಿ ಪಡೆಯ ಅದೇ ವಿಮಾನ ಕಾರ್ಖಾನೆಯ ಕೆಲಸಗಾರ. ಅಲ್ಲಿಯ ದುಡಿಮೆ ಪರರಿಗೆ, ದುಡ್ಡಿಗೆ. ತನ್ನ ಮನೋಚಿತ್ರಕ್ಕೆ ರೂಪುಗೊಟ್ಟು ಚಿತ್ರ ಬರೆಯುವ ಚಿತ್ರಗಾರನಿಗೆ ಅದೆಷ್ಟು ಸ್ವಾನಂದ? ಗುಂಪಿನ ಗೋವಿಂದನಾಗಿ ಯಂತ್ರಾಲಯದಲ್ಲಿ ದುಡಿಯುವ "೨೨೧ನೇ" ನಂಬರು ಇಷ್ಟು ಆತ್ಮಾನಂದ ಅನುಭವಿಸಬಲ್ಲನೇ?

ಸಮಾಜವಾದದಲ್ಲಿ ಸಾಮೂಹಿಕ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹ. ಸಾಮೂಹಿಕ ವ್ಯವಸಾಯ ಸೋವಿಯೆಟ್ ರಷ್ಯದ ಹೆಮ್ಮೆ. ವ್ಯಕ್ತಿ ಸಮಾಜ ಅರ್ಥಾತ್ ಸರ್ಕಾರದ ಅಡಿಯಾಳು. ಸಮಾಜದ ಬೆಳವಣಿಗೆಯಾದರೆ ವ್ಯಕ್ತಿಯ ಬೆಳವಣಿಗೆಯೂ ತಾನಾಗಿಯೇ ಆಗುತ್ತದೆ. ಆದರೆ ಗಾಂಧೀ

ವಾದದಲ್ಲಿ ವ್ಯಕ್ತಿಯೇ ಶ್ರೇಷ್ಠ. ವ್ಯಕ್ತಿಯೇ ಸಮಾಜ, ಸಮಾಜಕ್ಕಾಗಿ ವ್ಯಕ್ತಿಯಲ್ಲ. ವ್ಯಕ್ತಿಯಲ್ಲಿ ಸುಪ್ತವಾಗಿರುವ ಶ್ರೇಷ್ಠ ದೈವೀಗುಣಗಳನ್ನು ಪ್ರಚೋದಿಸುವುದು ಗಾಂಧೀ ವಾದದ ಗುರಿ. ಸಾಮೂಹಿಕ ಪದ್ಧತಿಯಲ್ಲಿ ಕೀಲು ಬೊಂಬೆಗಳಂತೆ ಎಲ್ಲ ಒಂದೇ ಅಚ್ಚು. ವ್ಯಕ್ತಿಯ ವಿಶೇಷ ವ್ಯಕ್ತಿತ್ವ ಬೆಳೆಯಲು ಆಸ್ಪದವಿಲ್ಲ. 'ಕೋಟಿ ಗ್ರಹಗಳಲ್ಲಿ ಸೂರ್ಯನೊಬ್ಬ ಮೇಲು' ಎಂಬುದು ಗಾಂಧೀ ವಾದ. ಜಕೀಂದ್ರ, ಭನ್‌ಸಾಲೆ, ವಿನೋಬ ಪ್ರಪಂಚಕ್ಕೇ ಆದರ್ಶ. ಹಳ್ಳಿಯ ಹರಕು ಮುರುಕು ಕುಟೀರದಲ್ಲಿ ವಾಸಿಸುವ ಕೌಪೀನ ಧಾರಿ ವೃದ್ಧ ವ್ಯಕ್ತಿಯೊಬ್ಬ ಉಪವಾಸಕ್ಕೆ ತೊಡಗಿದರೆ ಅತುಲ ಶಕ್ತಿಯುತ ಮಹಾ ಸಾಮ್ರಾಜ್ಯವೇ ತಲ್ಲಣಿಸುವುದು. "ಜೀವನದ ನಾನಾ ಕ್ಷೇತ್ರ ಗಳಲ್ಲಿ ನಡೆಯುತ್ತಿರುವ ಆತ್ಮೋಲ್ಲಂಘನೆಯ ನಿರಂತರ ನೈತಿಕ ಪ್ರತಿಭಟ ನೆಯೇ ಗಾಂಧಿಯ ಅಸ್ತಿತ್ವದ ತಿರುಳು. ಆತ್ಮ ಶಕ್ತಿಯ ಮೂರ್ತೀ ಭಾವ ನೆಯೇ ಗಾಂಧಿ" ಎಂದು ಸ್ತುತಿಗೈಯುತ್ತಾನೆ ಗಗನವಿಹಾರಿ ಮೇಥಾ. ಆತ್ಮವನ್ನು ಬದಿಗೊತ್ತಿ ಮಾನವನನ್ನು ಯಾಂತ್ರಿಕನನ್ನಾಗಿ ಮಾಡುವ ಪ್ರಯತ್ನ ಪ್ರತಿಭಟಿಸುವುದು ಗಾಂಧೀ ವಾದ. ಆತ್ಮವಿಕಾಸಗೊಳಿಸಿ ಆತ್ಮ ಜ್ಯೋತಿ ಬೆಳಗಿಸುವುದು ಗಾಂಧೀ ವಾದ.

ಮೋಹನದಾಸನನ್ನು ಮಹಾತ್ಮನಾಗಿ ಮಾಡಿರುವುದು ಗಾಂಧೀ ವಾದ. ವಿಷಯಾಂತರವಾಗಿರಬಹುದು ಆದರೆ—ಯಂತ್ರಶ್ರೇಷ್ಠವೋ ವ್ಯಕ್ತಿ ಶ್ರೇಷ್ಠ ನೋ ಎಂಬುದಕ್ಕೆ ಮೋಹನದಾಸನಿಗೂ ಮಿಗಿಲಾದ ನಿದರ್ಶನ ದೊರೆಯು ವುದೇ? ಮೋಹನದಾಸ ಗಾಂಧೀವಾದ ಅನುಸರಿಸದೆ ಕಾರಕೂನನಾಗಿದ್ದರೆ--?

ಯಂತ್ರಾಲಯದ ಕೆಲಸಗಾರ ಒಂದೇ ಮಾದರಿ ಕೆಲಸವನ್ನೇ ಹಗಲಿ ರುಳೂ ಒಂದೇ ವಸ್ತು ನಿರ್ಮಾಣದಲ್ಲಿ ಕಳೆಯುವನು. ಹೀಗೆಯೇ ಅವನು ಪ್ರವೀಣನಾಗಬೇಕು. ಕಾರಖಾನೆ ಅಪೇಕ್ಷಿಸುವ ಈ ನೈಪುಣ್ಯದಾಹ ಕೆಲವು ಸಂದರ್ಭಗಳಲ್ಲಿ, ಆಭಾಸ. ಪ್ರವೀಣನಿಗೆ ತನ್ನ ವಿಷಯ ವಿನಾ ಇತರ ಕೆಲಸ ಗಳಲ್ಲಿ ಪರಿಜ್ಞಾನ ಕಡಿಮೆ. ಇಂಜನಿಯರಿಗೆ ವೈದ್ಯಕೀಯ ತಿಳಿಯದು. ಪೂರ್ವದಲ್ಲಿ ವಿದ್ಯಾವಂತರಿಗೆ ಅನೇಕ ವಿದ್ಯೆಗಳ ಅರಿವಿದ್ದಿತು. ಲೋಕ ವ್ಯವಹಾರಜ್ಞಾನವಿತ್ತು. ಸರ್ವಾಂಗ ಸುಂದರ ಬೆಳವಣಿಗೆಗೆ ಆಸ್ಪದವಿತ್ತು.

ನಿಪುಣನಾಗಬೇಕೆಂಬ ಆಸೆ ಕೆಲಸದ ನಾವೀನ್ಯತೆಯನ್ನು ಹೋಗಲಾಡಿಸುತ್ತೆ. ಕಾಲಾನುಕ್ರಮವಾಗಿ ಕೆಲಸದಲ್ಲಿ ಅಭಿರುಚಿ ತಪ್ಪಿ ಜಿಗುಪ್ಸೆ ಹುಟ್ಟುತ್ತದೆ.

ಪರಾಶ್ರಯ ದುಡಿಮೆ ವ್ಯಕ್ತಿತ್ವಕ್ಕೆ ಸಂಚಕಾರ ತರುವದಲ್ಲದೆ ಕ್ರಮೇಣ ದಾಸ್ಯಮನೋವೃತ್ತಿ ಬೆಳಸುತ್ತದೆ. ಆತ್ಮಾವಲಂಬನೆ, ಆತ್ಮಶಕ್ತಿ ಉಡುಗಿ ಹೋಗುತ್ತದೆ. ತಾನೊಂದು ಸೂಚನೆಯಿತ್ತರೆ-'ಅಧಿಕ ಪ್ರಸಂಗಿ, ಹೇಳಿದ್ದು ಮಾಡು, ಹರಟಬೇಡ' ಎಂದು ಸದಾ ಗದರಿಸಿ ಅವನು ತಲೆ ಎತ್ತದಂತೆ ಆಗುತ್ತದೆ. ಕಂಡಕಂಡವರೆಲ್ಲರೂ ಒಬ್ಬನನ್ನು 'ಹುಚ್ಚ, ಹುಚ್ಚ' ಎನ್ನುತ್ತಿದ್ದರೆ, ಕಡೆಗೆ ಅವನು ಹುಚ್ಚನೇ ಆಗುತ್ತಾನೆ ಎಂದು ಮನೋವಿಜ್ಞಾನಶಾಸ್ತ್ರ ತಿಳಿಸುತ್ತದೆ. ಪ್ರಭಾವಶಾಲಿಯಾದ ವ್ಯಕ್ತಿ ಈ ತುಳಿತ ಪ್ರತಿಭಟಿಸುತ್ತಾನೆ. ಅದರಿಂದ ಕಡೆಗೆ ಕೆಸಲಕ್ಕೆ ಸಂಚಕಾರ ಬರಬಹುದು. ಆದರೆ ಹೊಟ್ಟೆಪಾಡಿಗೆ ತಗ್ಗಿ ನಡೆಯುವ ಆಳು ತನ್ನ ವ್ಯಕ್ತಿತ್ವ, ಸ್ವಾತಂತ್ರ್ಯ, ವಿಚಾರಶಕ್ತಿ ಕಳೆದು ಕೊಳ್ಳುತ್ತಾನೆ. ಒಳಗಿನ ಬೆಳಕು ಪ್ರಕಾಶಕ್ಕೆ ಬಾರದೆ ಒಳಗೇ ನಂದಿ ಹೋಗುತ್ತದೆ. ಆದುದರಿಂದಲೇ ಗಾಂಧೀ ವಾದ ಸ್ವತಂತ್ರ ವಾತಾವರಣದಲ್ಲಿ ಸಾಧ್ಯವಾಗುವ ಐಚ್ಛಿಕ ಗೃಹಕೈಗಾರಿಕೆ, ಗ್ರಾಮೋದ್ಯೋಗ ಪ್ರೋತ್ಸಾಹಿಸುತ್ತದೆ. ಸ್ವತಂತ್ರ ಸ್ನೇಹಪೂರಿತ ವಾತಾವರಣದಲ್ಲಿ ಮಡದಿಮಕ್ಕಳಿಂದೊಡಗೂಡಿದ ಕೆಲಸದಲ್ಲಿ ದೇಹಕ್ಕೂ ಮನಸ್ಸಿಗೂ ಹೆಚ್ಚು ಆಯಾಸ ತೋರದು.

ಸುಖಜೀವನಕ್ಕೆ ಅವಶ್ಯ ವಿರಾಮ. ಅಲ್ಪಕಾಲದಲ್ಲಿ, ವಿಶೇಷ ಶ್ರಮವಿಲ್ಲದೆ ಹೆಚ್ಚು ಫಲ ಕೊಡುವುದು ಯಂತ್ರ. ಯಂತ್ರ ವಿಶೇಷ ಬಳಕೆಗೆ ತಂದು ವಿರಾಮ ಕಲ್ಪಿಸಿತು ರಷ್ಯ. ದಿನಕ್ಕೆ ಆರು ಘಂಟೆ ದುಡಿತ, ಆರು ದಿನಗಳ ವಾರದಲ್ಲಿ ಐದೇ ದಿವಸ ಕೆಲಸ. ಈ ಬಿಡುವಿನ ಭ್ರಾಂತಿಯಿಂದ ಮತ್ತೊಂದು ಸಮಸ್ಯೆ ತಲೆದೋರಿತು. ವಿರಾಮ ವಿನಿಯೋಗ ಹೇಗೆ? ವಿರಾಮ ವಿನಿಯೋಗಕ್ಕಾಗಿ ನಾನಾ ಯೋಜನೆಗಳು, ಲಕ್ಷಾಂತರ ರೂಪಾಯಿಗಳ ವೆಚ್ಚ ಸರಕಾರ ಕೈಕೊಳ್ಳಬೇಕಾಯಿತು. 'ಸೋಮಾರಿ ಬುದ್ಧಿ ಶನಿಕಾಟ ಸಿದ್ಧಿ' ಇದರಲ್ಲಿಯೂ ಸಾಮೂಹೀಕರಣ! ಸಾಮೂಹಿಕ ವಿನೋದ ಯೋಜನೆ ವ್ಯಕ್ತಿತ್ವದ ಮತ್ತೊಂದು ಶತ್ರು. ಉದ್ದೇಶರಹಿತ ಯಂತ್ರಜೀವನ ಬೇಸರಿಕೆ, ಜಿಗುಪ್ಸೆಯಾಗುತ್ತೆ' ಎಂದು ವ್ಯಸನಪಡುತ್ತಾರೆ ಆಲ್ಡಸ್ ಹಕ್ಸ್ಲಿ ಮತ್ತು ಜೋಡ್. ಸಾಮೂಹಿಕ ವಿನೋದ

ಯೋಜನೆ ಸಹ ಯಾಂತ್ರಿಕ ಕಲೆಯಾಗಿದೆ. ಒಂದೇ ಚಲನಚಿತ್ರ ನೂರು ದಿನ ಚಲಿಸುತ್ತೆ. ನೋಡದವನೇ ಪಾಪಿ. ಅದೇ ಹಾಡು, ಅದೇ ರಾಗ. ಅಂತೆಯೇ ರೇಡಿಯೋ, ಒಂದೇ ಅಭಿಪ್ರಾಯ ಎಲ್ಲರ ತಲೆಯಲ್ಲೂ ತುಂಬಿ, ಸ್ವತಂತ್ರ ವಿವೇಚನಾಶಕ್ತಿ ನಾಶಮಾಡಿ ಪ್ರತಿಧ್ವನಿಯಂತ್ರ ಮಾಡುತ್ತಿದೆ. ಕುಸ್ತಿ, ಪಂದ್ಯ, ಸಿನಿಮಾನೋಟಕ್ಕೆ ಕುರಿಮಂದಿಯಂತೆ ಜನಸಂದಣಿ. ಆಟದ ಗಂಧ ತಿಳಿಯದವರೂ ಸೋಮಾರಿ ಕ್ರಿಕೆಟ್ ಪಂದ್ಯ ಬೆಳಗಿನಿಂದ ಸಂಜೆಯವರೆಗೆ ನೋಡುತ್ತ ಬಿಡುವಿನ ಬೇಸರಿಕೆ ಕಳೆಯುವರು. ಗಾಂಧಿಗೆ ಸಿನಿಮಾ, ರೇಡಿಯೋ ಅಗತ್ಯವಿಲ್ಲ. ಬಿಡುವಿನ ಬೇಸರಿಕೆ ಅರಿಯನಾತ. ಮುಂಜಾನೆ ೪-೩೦ ಯಿಂದ ರಾತ್ರಿ ೧೦ ಘಂಟೆವರೆಗೆ 'ನಹಿ ಕ್ಷಣಮಪಿ ಜಾತು ತಿಷ್ಠತ್ಯ-ಕರ್ಮಕೃತ್' ಎಂದು ಅವಿಚ್ಛಿನ್ನ ದುಡಿಯುವನು.

ವಿರಾಮ ಬೇಕೆಂಬುದಲ್ಲ ಭಾರತದ ಸಮಸ್ಯೆ. ಏಳುಲಕ್ಷ ಗ್ರಾಮಗಳಲ್ಲಿಯೂ, ಪಟ್ಟಣಗಳಲ್ಲಿಯೂ ವಾಸಿಸುವ ಮಾನವಕೋಟಿಗೆ ಉದ್ಯೋಗ ಹೇಗೆ ಕಲ್ಪಿಸುವುದು ಎಂಬುದೀಗ ಪ್ರಶ್ನೆ. ಅಲ್ಲಿ ಬಿಡುವು ಬೇಕು, ಇಲ್ಲಿ ಉದ್ಯೋಗ ಬೇಕು. ವಿರಾಮ ಕಲ್ಪಿಸಲು ಅಲ್ಲಿ ಯಂತ್ರ ಸಹಾಯ ಬೇಕು; ಕೆಲಸ ಕೊಡಲು ಇಲ್ಲಿ ಯಂತ್ರ ಹೋಗಬೇಕು. ಯಂತ್ರ ಮತ್ತು ಯಂತ್ರಾಲಯ ನಿರುದ್ಯೋಗ, ಬಿಡುವಿನ ಭ್ರಾಂತಿ ಹೆಚ್ಚಿಸುತ್ತೆ, ತಗ್ಗಿಸದು. ಫಲಾಪೇಕ್ಷೆಯಿಲ್ಲದೆ, ಉದ್ಯೋಗಕ್ಕಾಗಿಯೇ ಉದ್ಯೋಗ ಮಾಡಬೇಕು. 'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ' ಎಂಬ ಗೀತಾವಾಕ್ಯದಂತೆ ಫಲಾಪೇಕ್ಷರಹಿತ ಕೆಲಸದಲ್ಲಿ ಲಾಭ ನಷ್ಟ, ಜಯ ಅಪಜಯ ಮನಸ್ಸಿಗೆ ಹೆಚ್ಚು ವಿಕಲ್ಪಮಾಡದು, ಶ್ರಮತೋರದು. ಶ್ರಮ ಅಧಿಕವಾದರಲ್ಲವೇ ವಿರಾಮ? ದುಡಿತದಲ್ಲಿಯೇ ಆನಂದ ಅಡಗಿದೆ. ಆದುದರಿಂದ ಬಿಡುವಿನ ಭ್ರಾಂತಿಯ ಸಮಸ್ಯೆಗೆ ಗಾಂಧೀ ವಾದ ಎಡೆಗೊಡದು.

ಬೆಂಕಿಯಿದ್ದೆಡೆ ಹೊಗೆಯಾಡುವಂತೆ—ಯಂತ್ರವಿದ್ದೆಡೆ ಅದರ ದುಷ್ಪರಿಣಾಮಗಳೂ ಇರುತ್ತವೆ. ಯಂತ್ರದಿಂಧ ದುಷ್ಟ ಗುಣಗಳನ್ನು ಪ್ರತ್ಯೇಕಿಸುವುದು ಅಷ್ಟು ಸುಲಭವಲ್ಲ. ಆದಷ್ಟು ಯಂತ್ರ ವಿನಿಯೋಗ ತಗ್ಗಿಸಬೇಕೆಂಬುದೇ ಗಾಂಧೀ ವಾದದ ಮತ. 'ವೈದ್ಯನು ವಿಷವನ್ನು ಅಸಾಧಾರಣ ಸಂದರ್ಭಗಳಲ್ಲಿ ವಿಶೇಷ ಜಾಗರೂಕತೆಯಿಂದ ಪ್ರಯೋಗಿಸುವಂತೆ, ಯಂತ್ರ

ಶಕ್ತಿಯ ವಿನಿಯೋಗವಾಗಬೇಕು.' ಯಂತ್ರವನ್ನು ತನ್ನ ಹತೋಟಿಗೆ ಒಳಪಡಿಸಿ ಸಮಾಜಸೇವೆ ಮಾಡುವುದಾಗಿ ಸಮತಾವಾದ ಹೇಳಬಹುದು. ಯಾಂತ್ರೀಕರಣವೇ ತನ್ನ ಗುರಿಯಾದ ಸಮಾಜ ಅಥವ ಸಮತಾವಾದ ಶ್ರೀಮಂತವರ್ಗವನ್ನು ನಾಶಪಡಿಸಬಹುದು. ಯಂತ್ರಗಳು ಅದರ ಅಧೀನವಾಗಬಹುದು. ಯಂತ್ರದ ಮಾಲೀಕ ವ್ಯಕ್ತಿಯಿರಲಿ, ಅಥವ ಸರ್ಕಾರವಿರಲಿ, ಅದರ ಒಡೆತನದಲ್ಲಿಯೇ ದೋಷವಿದೆ. ಪರಾನ್ನ ಜೀವನವೇ ಈ ದೋಷ. ಈ ಪರಾನ್ನ ಜೀವನ ಸಕಲ ಹಿಂಸೆಗಳಿಗೂ, ಯುದ್ಧಗಳಿಗೂ ಮೂಲ. ಆದುದರಿಂದ ಯಂತ್ರ ಸರಕಾರದ ವಶವಾದರೂ ಅದು 'ಪರಾನ್ನ ಜೀವಿಯನ್ನು ಯುದ್ಧ, ಹಿಂಸೆಗಳನ್ನು ನಾಶಪಡಿಸದು.' ಜೀವನವೇ ಹಿಂಸಾಮಯ. ಹೀಗೆಂದು ಜೀವ ತೊರೆಯುವುದು ಮೂರ್ಖತನ. ಅಂತೆಯೇ ಯಂತ್ರ ವಿನಾಶಕಾರಿಯಾದರೂ ಯಂತ್ರವನ್ನು ಪೂರ್ಣ ತೊರೆಯುವುದು ದುಸ್ಸಾಧ್ಯ. ಯಂತ್ರವನ್ನು ಒಂದು ಮಿತಿಯಲ್ಲಿಡುವುದೇ ಇದಕ್ಕೆ ಉಪಾಯ. 'ವಿಜ್ಞಾನದ ಸತ್ಯಸೂತ್ರಗಳು, ಶೋಧನೆಗಳು ಲೋಭಾಲಾಭದ ಸಾಧನವಾಗಬಾರದು. ದುರಾಸೆಯ ಸ್ಥಾನದಲ್ಲಿ ಪ್ರೇಮ ಅಂಕುರಿಸಬೇಕು, ಮಾನವ ಕಲ್ಯಾಣವೇ ಯಂತ್ರೋಪಯೋಗದ ಮುಖ್ಯ ಗುರಿಯಾಗಬೇಕು. ಹಲವರನ್ನು ಸೂರೆಹೊಡೆದು ಒಬ್ಬ ಐಶ್ವರ್ಯವಂತನಾಗಲು ಯಂತ್ರ ಆಸ್ಪದ ಕೊಡಬಾರದು. ಸಿಂಗರ್ ಹೊಲಿಗೆ ಯಂತ್ರದ ಹಿನ್ನಲೆ ಪ್ರೇಮ. ತನ್ನ ಹೆಂಡತಿ ಕೈಯಿಂದ ಬಟ್ಟೆ ಹೊಲಿಯುವ ಕಷ್ಟ ನೋಡದೆ, ಸಿಂಗರ್ ಈ ಯಂತ್ರ ತಯಾರಿಸಿದ. ವ್ಯಕ್ತಿಯ ದುಡಿತ ಕಡಮೆಮಾಡುವ ಉದ್ದೇಶ ಪ್ರಾಮಾಣಿಕವಿರಬೇಕು. ವ್ಯಕ್ತಿಮೇಲೆ ಸವಾರಿಯಲ್ಲ; ಆದರೆ ವ್ಯಕ್ತಿಸೇವೆ ಸಮಾಜಸೇವೆ ಯಂತ್ರದ ಗುರಿ. ಯಂತ್ರ ವ್ಯಕ್ತಿಯ ಅಧೀನವಿರಬೇಕು. ಮಾನವನ ವ್ಯಕ್ತಿತ್ವ ತುಳಿಯಲು ಎಂದು ಯಂತ್ರ ಆರಂಭಿಸುತ್ತದೆಯೋ, ಅಂದೇ ಅದು ಅವನ ವೈರಿ, ತ್ಯಾಜ್ಯಯೋಗ್ಯ. ಮಾನವನ ಕೈಕಾಲು ಕಟ್ಟಿ ಹಾಕಿ ಅವನ ಅವಯುವಗಳನ್ನು ನಿಷ್ಪ್ರಯೋಜಕ ಮಾಡಲಾಗದು ಯಂತ್ರ.

ಆದರೆ ಪ್ರೇಮದ ಹಿನ್ನೆಲೆಯುಳ್ಳ 'ಸಿಂಗರ್' ಇಂತಹ ಸಣ್ಣ ಯಂತ್ರ ತಯಾರಿಸಲು ದೊಡ್ಡ ಯಂತ್ರಗಳು ಅವಶ್ಯ ಎಂದು ಗಾಂಧೀವಾದ ಒಪ್ಪುತ್ತೆ. ಮೂಲ ಯಂತ್ರಗಳು ರಾಷ್ಟ್ರಾಧೀನವಾಗಬೇಕು ಎಂಬ ತತ್ವ ಅನುಮೋದಿ

ಸುತ್ತದೆ. ಆದರೆ ರಷ್ಯದ ಸಮಾಜವಾದಕ್ಕಿರುವ ಯಾಂತ್ರೀಕರಣದ ಹುಚ್ಚು ಗಾಂಧೀವಾದಕ್ಕಿಲ್ಲ. ಪ್ರತಿಯೊಬ್ಬನೂ ಒಂದು ಮೋಟಾರು ಹೊಂದಿರಬೇಕೆಂದು ಸಮಾಜವಾದ ಹೇಳಿದರೆ, ಮೋಟಾರ್ ಏಕೆ? ಎಂದು ಗಾಂಧೀವಾದ ಪ್ರಶ್ನಿಸುತ್ತದೆ. ಒಂದೆಡೆಯಿಂದ ಮತ್ತೊಂದೆಡೆಗೆ ಸದಾ ಓಡಾಡುವುದು ಮಾನವನ ಮೂಲ ಆವಶ್ಯಕತೆಯಲ್ಲ. ಆದರ್ಶ ದೃಷ್ಟಿಯಿಂದ ಸಕಲ ಯಂತ್ರಗಳೂ ತ್ಯಾಜ್ಯ—ಗಾಂಧೀವಾದಕ್ಕೆ. ಯಂತ್ರಮಯ ದೇಹ ಮೋಕ್ಷ ಸಾಧನೆಗೆ ಅಡ್ಡಿಯಾಗಿ ಹೇಗೆ ತ್ಯಾಜ್ಯವೋ, ಹಾಗೆ ಯಂತ್ರವೂ ತ್ಯಾಜ್ಯವೇ. ದೇಹವೆಂಬ ಯಂತ್ರ ಬಿಟ್ಟು ಜೀವ ಪ್ರತೀಕವಿರಲಾರದು. ಅಂತೆಯೇ ಮಾನವ ಮತ್ತು ಯಂತ್ರ. ಮೋಕ್ಷ ಸಾಧನೆಗೆ ದೇಹಯಂತ್ರದ ವಾಸನೆಗಳನ್ನು ತ್ಯಜಿಸುವುದು ಆವಶ್ಯ ಎಂದು ಸಾರುತ್ತೆ ಸನಾತನ ಕರ್ಮಸಿದ್ಧಾಂತ. ಹಾಗೆಂದಮಾತ್ರ ಅದು ಆತ್ಮಹತ್ಯ ಪ್ರೋತ್ಸಾಹಿಸದು. ದೇಹ ಉಳಿಸಿಕೊಂಡು ಮೋಕ್ಷ ಸಾಧಿಸಲು ವ್ಯಕ್ತಿ ನಿರಂತರ ಶ್ರಮಿಸುತ್ತಾನೆ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಯಂತ್ರ ಅಡ್ಡಿ ಬಂದಿದೆ. ಯಂತ್ರ ಆವಶ್ಯಕವೆನ್ನುತ್ತದೆ ಸಮಾಜ. ಆದರೆ ವ್ಯಕ್ತಿಗೆ ಬೇಡದ್ದು ಸಮಾಜಕ್ಕೆ ಬೇಕು. ಹೀಗೆ ದ್ವಂದ್ವಭಾವನೆ. ಗಾಂಧೀವಾದ ಯಂತ್ರವಿರೋಧಿಯಾದರೂ ಒಂದೇ ಉಸಿರಿನಲ್ಲಿ ಯಂತ್ರಕ್ಕೆ ತಿಲತರ್ಪಣ ಕೊಡಿ ಎಂದು ಹೇಳದು. ಮಾನವ ಯಂತ್ರಪೂಜಾರಿಯಾಗಬಾರದು, ಯಂತ್ರ ದಾಸನಾಗಬಾರದು. ಸಮಾಜಸೇವೆಗೆ ಯಂತ್ರವಿರಲಿ, ಯಂತ್ರ ಸಮಾಜ ಸೇವಕನಾಗಿರಲಿ.

The supreme consideration is man. The machine should not tend to make atrophied the limbs of man.
...Gandhi

Use your own property in such a way that you hurt no one else's is not merely a good axium, but a grand doctrine of life. ...Gandhi

Swadeshi is that spirit in us which restricts us to the use and service of our immediate surroundings to the exclusion of the more remote.
...Gandhi

೭ ಸ್ವದೇಶಿ ಮತ್ತು ಅಂತರರಾಷ್ಟ್ರೀಯತೆ

"ಗಾಂಧೀ ತತ್ವಗಳು ಭಾರತಕ್ಕೆ ಮಾತ್ರ ಅನ್ವಯಿಸುವ ಸಂಕುಚಿತ ರಾಷ್ಟ್ರವಾದ. ಇಡೀ ಪ್ರಪಂಚಕ್ಕೇ ಅನ್ವಯಿಸುವ ವೈಶಾಲ್ಯತೆಯಿಲ್ಲದ್ದು. ಇಡೀ ಪ್ರಪಂಚದ ಕೆಲಸಗಾರರನ್ನು ಒಂದುಗೂಡಿಸಿ, ಐಕ್ಯತೆ, ಸಮಾನತೆ ಭ್ರಾತೃಭಾವನೆ ನೆಲಸುವಂತೆ ಮಾಡುವುದು ಸಮಾಜವಾದದ ಉದಾತ್ತ ಧ್ಯೇಯ. ಇದಕ್ಕೆ ಪ್ರತಿಯಾಗಿ ಗಾಂಧೀವಾದ ಸ್ವದೇಶಿ, ಖಾದಿ, ಗ್ರಾಮ ಕೈಗಾರಿಕೆ, ಗೃಹ ಕೈಗಾರಿಕೆ ಎಂಬ ಸಂಕುಚಿತ ವೃತ್ತಿ ತಾಳುತ್ತಾ ಬರುತ್ತದೆ" ಎಂದು ಗಾಂಧೀವಾದಕ್ಕೆ ಆಪಾದನೆ.

ಈ ಆಪಾದನೆ ಮಾಡುವವರು ತಮ್ಮ ದೋಷ ಗ್ರಹಿಸದೆ, ಪರನಿಂದೆಯಲ್ಲಿ ಉತ್ಸಾಹ ತೋರುವದು ಸೋಜಿಗ. ಸಮಾಜವಾದ ಸಿದ್ಧಾಂತಕ್ಕೆ ಆಶ್ರಯವಾದ ರಷ್ಯ ಸಹ ತನ್ನ ದೇಶದ ಜನ ಹೊಟ್ಟೆಗಿಲ್ಲದೆ ಸಾಯುತ್ತಿದ್ದರೆ ಪರದೇಶದವರಿಗೆ ಅನ್ನ ನೀಡಬೇಕೆಂದು ತವಕಪಡುವದಿಲ್ಲ. ತನ್ನ ದೇಶ ಸ್ವಯಂಪರಿಪೂರ್ಣವಾಗಬೇಕೆಂಬ ನಿರಂತರ ಪ್ರಯತ್ನದಲ್ಲಿ ರಷ್ಯ ಮಗ್ನವಾಗಿದೆ. ಪರದೇಶೀ ಮಾಲಿಗೆ ರಷ್ಯದಲ್ಲಿ ಸ್ಥಾನವಿಲ್ಲ. 'ಟಾಗಸಿನ್' ಎಂಬ ಸರ್ಕಾರ ಅಧೀನ ಅಂಗಡಿಗಳಲ್ಲಿ ಮಾತ್ರ ಹೊರದೇಶದ ಸರಕು ಪರದೇಶೀಯರು ಕೊಳ್ಳಬಹುದು. ಇಡೀ ಪ್ರಪಂಚ ಸಮಾಜವಾದ ತತ್ವ ಅಂಗೀಕರಿಸುವಂತೆ ಮಾಡಬೇಕೆಂಬ ಮಹತ್ವಾಕಾಂಕ್ಷೆಯು 'ಇಂಟರ್ ನ್ಯಾಷನಲ್'

ಯುದ್ಧಾನಂತರ ರದ್ದಾಯಿತು. ಹೀಗೆ ಮಾಡಬೇಕಾಗಿ ಬಂದ ಆವಶ್ಯಕತೆ ಸಮರ್ಥಿಸಿ ವಾದ ಹೂಡಬಹುದು. ರಾಜಕೀಯ ಚಾತುರ್ಯ ಇದರಲ್ಲಿ ಇರಬಹುದು. ಆದರೆ ಈ ತಾತ್ಕಾಲಿಕ ಧ್ಯೇಯಪತನ ಗಾಳಿ ಎತ್ತಕಡೆ ಬೀಸುತ್ತಿದೆ ಎಂಬುದನ್ನು ವ್ಯಕ್ತಪಡಿಸುತ್ತೆ. ಧ್ಯೇಯದ ಸತ್ವಪರೀಕ್ಷೆ ಯಾಗುವುದು ಇಂತಹ ಸಂದಿಗ್ಧ ವಿಷಮ ಸನ್ನಿವೇಶದಲ್ಲಿ. ಬಂಡವಾಳ ಶಾಹಿ ರಾಷ್ಟ್ರಗಳ ಸಹಾಯ ಪಡೆದು ತನ್ನ ಸ್ವತಂತ್ರ ರಕ್ಷಣೆ ಮಾಡಿಕೊಳ್ಳಲು ರಷ್ಯ ಹಿಮ್ಮೆಟ್ಟಲಿಲ್ಲ. "ಸಂಕಟ ಸಮಯಒದಗಿದಾಗ ಪ್ರಜೆಯಾದ ಕಾರ್ಮಿ ಕನು ತನ್ನ ರಾಷ್ಟ್ರ (ಆಳುವ ಸರ್ಕಾರ) ಕ್ಕಾಗಿ ಪರದೇಶದ ಸಹೋದರ ಕಾರ್ಮಿಕನಿಗೆ ವಿರೋಧ ಹೋರಾಟ ನಡೆಸುವುದು ಗಮನಾರ್ಹ" ಎಂದು ಅಲ್ಡಸ್ ಹಕ್ಸಲಿ ಟೀಕಿಸುತ್ತಾನೆ. ಸ್ಪೇನ್, ಚೈನಾ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕ ಸರ್ಕಾರಗಳಿಗೆ ದೊರೆತ ಸಹಾಯಕ್ಕೂ ಹೆಚ್ಚಿನ ನಿದರ್ಶನ ಬೇಕೆ? ರಷ್ಯ ಅಥವ ಸಮಾಜವಾದವನ್ನು ಹಳಿಯಬೇ ಕೆಂಬ ಉದ್ದೇಶ ನಮಗಿಲ್ಲ. ರಷ್ಯದಲ್ಲಿ ನಮಗೆ ಪೂರ್ಣ ಅಭಿಮಾನ, ಪ್ರೇಮ, ಸಹಾನುಭೂತಿಯಿದೆ.

ರಾಷ್ಟ್ರವಾದ ಮತ್ತು ಅಂತರರಾಷ್ಟ್ರೀಯವಾದ ಬೆಳೆಯುವ ರಾಷ್ಟ್ರೀಯ ಭಾವನೆಯ ಹಂತಗಳು. ರಾಷ್ಟ್ರಭಾವನೆಯ ವಿಕಾಸವೇ ಅಂತರರಾಷ್ಟ್ರೀಯ ಭಾವನೆ. ಪರದೇಶದಂತೆ ನನ್ನ ದೇಶ, ನನ್ನಂತೆ ಪರ ಎಂಬ ವೈಶಾಲ್ಯ ತೆಯೇ ಅಂತರರಾಷ್ಟ್ರೀಯ ಭಾವನೆ. ಪರರಾಷ್ಟ್ರನಾಶವಾದರೂ ಚಿಂತೆ ಯಿಲ್ಲ, ನನ್ನದೇಶ ಬದುಕಿ ಬಾಳಿದರೆ ಸಾಕು ಎಂಬ ಸಂಕುಚಿತ ಅಂತರರಾ ಷ್ಟ್ರೀಯತೆಯೇ ರಾಷ್ಟ್ರಭಾವನೆ. ಎಲ್ಲ ಸರಕಾರಗಳಲ್ಲಿಯೂ, ಜನತೆಯ ಬಾಳ್ವೆಯಲ್ಲಿಯೂ ಈ ಎರಡು ಭಾವನೆಗಳೂ ಸಮ್ಮಿಶ್ರಿತವಾಗಿ ಇರುತ್ತವೆ. ಸಮಾಪವರ್ತಿಯಾಗುತ್ತಿರುವ ಈ ಪ್ರಪಂಚದ ಯಾವ ದೇಶವೂ ತನಗೆ ತಾನೇ ಪ್ರತ್ಯೇಕವಾಗಿ ಬಾಳದು—ತನ್ನ ಅವಯವಗಳನ್ನು ಸಂಕುಚಿಸಿ ಕೊಂಡು ಜೀವಿಸುವ ಶಂಕದ ಹುಳುವಿನಂತೆ. ಶಂಕದ ಹುಳುವು ಆಹಾರ ಕ್ಕಾಗಿ ಗೂಡಿನಿಂದ ಹೊರಬರಬೇಕು. ಇದಕ್ಕೆ ವಿರುದ್ಧ ತನ್ನ ದೇಶ ಹಾಳಾ ದರೂ ಸರಿ, ಪರದೇಶ ಸುಖವಾಗಿ ಬಾಳಲಿ ಎಂಬ ಉದಾತ್ತ ಭಾವನೆಯು ಇತಿಹಾಸದಲ್ಲೇ ಇಲ್ಲ. ಹೀಗಿರುವಲ್ಲಿ ತನ್ನ ದೇಶಕ್ಕೆ ಮೃತ್ಯುಪ್ರಾಯ

ವಾದ ಪರದೇಶೀ ಸರಕು ಬಹಿಷ್ಕರಿಸಿ, ಸ್ವದೇಶಿಗೆ ಪ್ರೋತ್ಸಾಹವಿತ್ತರೆ ಗಾಂಧೀವಾದ ಸಂಕುಚಿತ ಭಾವನೆಯುಳ್ಳದ್ದು ಎಂದು ಹಳಿಯುವುದು ಸಾಧ್ಯವೇ ? ತನ್ನ ದೇಶವನ್ನು ಸ್ವಾವಲಂಬಿಯಾಗಿ ಮಾಡಿ, ತದನಂತರ ವಿಶಾಲ ಅಂತರರಾಷ್ಟ್ರೀಯ ಭಾವನೆ ವ್ಯಕ್ತಪಡಿಸುವುದು ಎಲ್ಲ ರಾಷ್ಟ್ರಗಳ ಚರಿತ್ರೆಗಳಲ್ಲಿಯೂ ಕಾಣಬಹುದು.

ಆರ್ಥಿಕ ಪ್ರಪಂಚದಲ್ಲಿ ಅನಿರ್ಬಂಧ ವ್ಯಾಪಾರತತ್ವ ಪ್ರತಿಪಾದಿಸುತ್ತಿದ್ದ ರಾಷ್ಟ್ರಗಳಲ್ಲಿ ಇಂಗ್ಲೆಂಡಿಗೇ ಅಗ್ರಸ್ಥಾನ. ಆದರೆ ಇದರಿಂದ ತನ್ನ ದೇಶದ ಕೈಗಾರಿಕೋದ್ಯಮಗಳಿಗೆ ಧಕ್ಕೆಯಾದೀತು ಎಂದು ತೋರುತ್ತಲೇ, ಈ ತತ್ವ ತೊರೆದು, ಆಮದು ಸರಕಿನಮೇಲೆ ವಿಶೇಷ ತೆರಿಗೆ ಹೊರಿಸಿತು, ಇಂಗ್ಲೆಂಡ್. ಹಿಂದುಸ್ಥಾನದಿಂದ ಆಮದಾಗಿ ಬರುತ್ತಿದ್ದ ಹತ್ತಿ ಮತ್ತು ರೇಷ್ಮೆ ಬಟ್ಟೆ ವ್ಯಾಪಾರ ನೋಡಿ ಗಾಬರಿಗೊಂಡ ಇಂಗ್ಲೆಂಡ್, ಹಿಂದುಸ್ಥಾನದ ವಸ್ತ್ರ ಬಳಸುವ ಪ್ರತಿಯೊಬ್ಬನೂ ೫ ಪೌ. ದಂಡ ಕೊಡಬೇಕೆಂದು ೧೭೦೦ರಲ್ಲಿ ಶಾಸನ ಮಾಡಿತು. ಈ ವಸ್ತ್ರ ಮಾರಾಟಮಾಡುವ ಪ್ರತಿ ವರ್ತಕನೂ ೨೫ ಪೌ. ದಂಡ ತೆರಬೇಕೆಂದು ಮತ್ತೆ ೧೭೩೫ರಲ್ಲಿ ಶಾಸನವಾಯಿತು. ಈ ನಿರೋಧಕ ಶಾಸನಗಳಲ್ಲದೆ ಹೆಣಕ್ಕೆ ಹೊದಿಸುವ ವಸ್ತ್ರ ಉಣ್ಣೆಯದೇ ಆಗಿರಬೇಕು, ಎಂಬ ಪ್ರೋತ್ಸಾಹಕ ಶಾಸನ ಬೇರೆ ಆಚರಣೆಗೆ ಬಂತು. ಉಣ್ಣೆಬಟ್ಟೆ ಇಲ್ಲದೆ ಬೇರೆ ವಸ್ತ್ರ ಉಪಯೋಗಿಸಿದರೆ ೫ ಪೌ. ದಂಡ. ಈ ಶಾಸನಗಳ ಪರಿಣಾಮವಾಗಿ ಇಂಗ್ಲೆಂಡಿಗೆ ಹತ್ತಿ ಮತ್ತು ರೇಷ್ಮೆ ವಸ್ತ್ರಗಳ ಆಮದು ಸಂಪೂರ್ಣ ನಿಂತಿತು. ಅಲ್ಲದೆ ೧೮೦೩ ರಲ್ಲಿ ಮೂರು ಲಕ್ಷ ರೂಪಾಯಿಗಳ ವಸ್ತ್ರ ಇಂಗ್ಲೆಂಡಿನಿಂದ ಹಿಂದುಸ್ಥಾನಕ್ಕೆ ಬಂತು. ೧೯೨೯ಕ್ಕೆ ಈ ವ್ಯಾಪಾರ ರೂ. ೨೩ ಕೋಟಿಗೆ ಏರಿತು. ಗಾಂಧೀವಾದ ನಿರೋಧಿಸುವುದು ಈ ಅಂತರರಾಷ್ಟ್ರೀಯ ಸೂರೆ!

ಗಾಂಧಿಗೆ ಸ್ವದೇಶಿ ಒಂದು ಧಾರ್ಮಿಕ ವ್ರತ, ಕೇವಲ ರಾಜಕೀಯ ಅಥವ ಆರ್ಥಿಕ ವಿಚಾರವಲ್ಲ. ರಾಜಕೀಯ ಫಲಾಪೇಕ್ಷೆಯಿಂದ ಸ್ವದೇಶೀ ಕೈಕೊಳ್ಳುವವನು ಫಲ ದೊರತಮೇಲೆ ಸ್ವದೇಶೀವ್ರತ ತ್ಯಜಿಸಬಹುದು. ಆದರೆ ಧಾರ್ಮಿಕ ದೃಷ್ಟಿಯಿಂದ ಸ್ವದೇಶೀವ್ರತ ಧಾರಣೆ ಮಾಡುವವನು, ಕಡೆಯವರೆಗೂ ಅದನ್ನು ಬಿಡನು. ಶಾಖಾವ್ರತ ಹಿಡಿದರೆ ಏನೇ ಕಷ್ಟ ಬರಲಿ

ಆ ಮಾಸದಲ್ಲಿ ತರಕಾರಿ ಉಪಯೋಗಿಸುವಂತಿಲ್ಲ. 'ಸ್ವಧರ್ಮೇ ನಿಧನಂ ಶ್ರೇಯಃ' ಎಂದು ಸನಾತನಿಯು ಅನ್ಯಮತೀಯನ ಹಸ್ತದಿಂದ ನೀರು ಕುಡಿಯದಿರಲು ಇದೇ ಕಾರಣ. ಅವನು ಅನ್ಯಮತೀಯನನ್ನು ದ್ವೇಷಿಸನು, ಸ್ವಧರ್ಮವನ್ನು ಬಿಡನು. 'ಸ್ವಧರ್ಮ' 'ಸ್ವದೇಶೀ' ಎಂಬ ಪದಗಳನ್ನು ಮೇಲಿನ ಗೀತಾರ್ಥದಲ್ಲಿ ಪಲ್ಲಟ ಮಾಡುವುದೇ, ಸ್ವದೇಶಿ. ಕೆಲವು ಸ್ವದೇಶೀ ಪದಾರ್ಥಗಳು ದೊರೆಯದಾದರೆ ಸ್ವದೇಶಿ ವ್ರತಧಾರಿ ಅವುಗಳನ್ನು ತೊರೆದು ಜೀವನಪಥ ಮುಂದುವರಿಸುವನು; ಆದರೆ ಪರದೇಶೀ ವಿನಿಯೋಗಿಸನು. ಮೊದಲು ಅತ್ಯಾವಶ್ಯಕವೆನಿಸಿದ ಪದಾರ್ಥಗಳು ಅಂದು ತ್ಯಾಜ್ಯವಾಗುತ್ತವೆ. ಆಶ್ರಮವಾಸಿಗಳ ಅಪರಿಗ್ರಹ ದೀಕ್ಷೆಯ ಅರ್ಥವೂ ಇದೇ. 'ಅ-ಪರಿಗ್ರಹ' ಎಂದರೆ ಪರಿಗ್ರಹಿಸದಿರುವುದು ಮಾತ್ರವಲ್ಲ, ಆವಶ್ಯಕತೆ ತಗ್ಗಿಸಿಕೊಳ್ಳುವುದು ಎಂದೂ ಭಾವಿಸಬೇಕು.

"ಜನ್ಮಭೂಮಿಯ ಸೇವೆಯಲ್ಲಿ ನನ್ನ ದೇಶವಾತ್ಸಲ್ಯ ಅಂತರ್ಗತ, ಸಂಕುಚಿತ ಎಂದರೂ ಚಿಂತೆಯಿಲ್ಲ. ನನ್ನ ದೇಶಪ್ರೇಮದಲ್ಲಿ ಇತರ ದೇಶಗಳೊಡನೆ ವಿನಾಶಕ ಸ್ಪರ್ಧೆ ಇಲ್ಲದಿರುವುದರಿಂದ ಅದು ವಿಶಾಲವಾದುದು. ಹೀಗೆ ನನ್ನ ದೇಶಪ್ರೇಮ ಎಷ್ಟು ಸಂಕುಚಿತವೋ ಅಷ್ಟೇ ವಿಶಾಲವೂ ಹೌದು. 'ನಿನ್ನ ಶಕ್ತಿ ಮತ್ತು ಐಶ್ವರ್ಯ ಪರರಿಗೆ ತೊಂದರೆಯಾಗದಂತೆ ಅನುಭವಿಸು' ಎಂಬುದು ಉತ್ತಮ ನೀತಿ ಮಾತ್ರವಲ್ಲ, ಆದರ್ಶ ಧರ್ಮವೂ ಅಹುದು" ಎನ್ನುತ್ತಾನೆ ಗಾಂಧಿ.

ಪರದೇಶೀ ಬಹಿಷ್ಕಾರ ಮತ್ತು ಸ್ವದೇಶಿ ಪ್ರೋತ್ಸಾಹಕ್ಕೆ ಪರದೇಶೀ ವಸ್ತ್ರದಹನ ಗಾಂಧಿ ಆರಂಭಿಸಿದ. ಈ ಬೆಂಕಿ ತಡೆಯಲಾರದೆ ದೀನಬಂಧು ಆಂಡ್ರೂಸ್ ಮತ್ತು ರವೀಂದ್ರನಾಥ ಟಾಗೂರ್ ಅವರು ಈ ದಹನ ಸಂಸ್ಕಾರ 'ಪರದ್ವೇಷ ಪ್ರದರ್ಶನ' ಎಂದು ಖಂಡಿಸಿ ಪತ್ರ ಬರೆದರು. 'ಸ್ವದೇಶದಲ್ಲಿ ಬಟ್ಟೆಯಿಲ್ಲದೆ ಬೆತ್ತಲೆಯಾಗಿ ಅಲೆಯುವ ದರಿದ್ರರಿಗಾದರೂ ಪರದೇಶದ ಈ ಜೀರ್ಣ ವಸ್ತ್ರ ಕೊಡಬಾರದೆ' ಎಂದರು ಕವಿವರ್ಯರು. ಈ ಇಬ್ಬರಿಗೂ ಉತ್ತರ ಕೊಡುತ್ತ, ಗಾಂಧಿ ಹೀಗೆ ಬರೆದನು—"ಪರದೇಶೀ ವಸ್ತ್ರ ವಿಷವೆಂದು ತಿಳಿಯಬೇಕು. ಕೈಯಲ್ಲಿ ಮುಟ್ಟಲು ಸಹ ಅದು ಯೋಗ್ಯವಲ್ಲ. ಸಿಡುಬು, ಕಾಲರ ಮೊದಲಾಗಿ ಅಂಟುಜಾಡ್ಯ ಸೋಂಕಿದ ವಸ್ತ್ರದಂತೆ ಇದನ್ನು ಬೆಂಕಿ

ಹಚ್ಚಿ ಸುಡಬೇಕು. ಮೊದಲೇ ದಾರಿದ್ರ್ಯ ಹೊರಿಸಿ ಅನ್ಯಾಯಕೂಪಕ್ಕೆ ತಳ್ಳಿ ರುವವರಿಗೆ ಈ ತ್ಯಾಜ್ಯವಸ್ತು ಕೊಟ್ಟು ಮತ್ತಷ್ಟು ಅವಮಾನ ಮಾಡಲೆ? ಈ ಪಾಪಕೃತ್ಯ ನಾನೆಂದಿಗೂ ಮಾಡಲಾರೆ. ಅದಕ್ಕೆ ಪ್ರತಿಯಾಗಿ ಚರಖ ಕೊಡಿಸಿ, ಅವರ ವಸ್ತ್ರ ಅವರೇ ಮಾಡಿಕೊಳ್ಳುವ ಸಾಮರ್ಥ್ಯ ಕೊಡಲು ಪ್ರಯತ್ನಿಸಬೇಕು. ಅದೀಗ ಸರಿಯಾದ ಸ್ವದೇಶೀ ಧರ್ಮ."

ಪರದೇಶೀ ವಸ್ತ್ರ ಬಹಿಷ್ಕಾರದಿಂದ ಮಾಂಚೆಸ್ಟರಿನ ಅನೇಕ ಗಿರಣಿಗಳು ಮುಚ್ಚಿದವು, ಮತ್ತು ಅನೇಕರಿಗೆ ಉದ್ಯೋಗವಿಲ್ಲವಾಯಿತು. ದುಂಡು ಮೇಜಿನ ಪರಿಷತ್ತಿಗಾಗಿ ಲಂಡನ್‌ಗೆ ಹೋಗಿದ್ದಾಗ ಗಾಂಧಿ ಈ ನಿರುದ್ಯೋಗಿ ಗಳ ಭೇಟಿ ಮಾಡಿದ. ಇಂಗ್ಲೆಂಡಿನ ಸರ್ಕಾರ ಪರದೇಶ ಸುಲಿಗೆ ಮಾಡ ಬೇಕೆಂಬ ಘೋರಣೆ ಸಾಮ್ರಾಜ್ಯದಾಹ ಇವು ಈ ನಿರುದ್ಯೋಗಕ್ಕೆ ಕಾರಣ ವೆಂಬುದನ್ನು ವಿವರಿಸಿ, ಹಿಂದುಸ್ಥಾನದ ಘೋರ ಬಡತನ ಅವರಿಗೆ ತೋರಿದ. 'ತಮ್ಮ ಸರ್ಕಾರದ ಅನೀತಿಯ ಫಲದ ಪ್ರಾಯಶ್ಚಿತ್ತ' ಎಂದು ಹಸಿದ ಕೂಲಿ ಗಾರರು ತಾವೇ ಸಮಾಧಾನ ತಂದುಕೊಂಡರು. ಪರದೇಶೀ ವಸ್ತ್ರಬಹಿಷ್ಕಾರ ಭಾರತದಲ್ಲಿ ಗಾಂಧಿ ನಿಲ್ಲಿಸಲಿಲ್ಲ.

ಪರದೇಶೀ ಪದಾರ್ಥಗಳ ಮೋಹದಿಂದ ನಮ್ಮ ದೇಶದ ಐಶ್ವರ್ಯ ಸೂರೆಯಾಗುತ್ತಿದೆ. ಅಂಗಡಿಗಳಲ್ಲಿ ಸ್ವದೇಶಿಗಿಂತ ಪರದೇಶೀ ಪದಾರ್ಥವೇ ಹೆಚ್ಚು. ಕೆಲವು ಅಂಗಡಿಗಳಲ್ಲಿ ಸ್ವದೇಶಿ ಸೊಂಕೇ ಇಲ್ಲ. ಪರದೇಶೀ ಮಾಲಿಗೆ ಬೆಲೆ ಹೆಚ್ಚು. ಆದುದರಿಂದ ಹೆಚ್ಚು ಹಣ ನಮ್ಮ ದೇಶದಿಂದ ಹೊರಕ್ಕೆ ಸಾಗುತ್ತದೆ. ನಮ್ಮ ದೇಶದಲ್ಲಿ ಕೃಷಿಯೇ ಮುಖ್ಯ ಉದ್ಯೋಗ. ದವಸಧಾನ್ಯಗಳ ಬೆಲೆ ಕಡಮೆ. ತಾನು ಬೆಳೆದ ಧಾನ್ಯ ಅಲ್ಪ ಬೆಲೆಗೆ ಮಾರಿ, ಸ್ವಲ್ಪ ಹಣ ಗಳಿಸಿ, ಪರದೇಶದ ತುಟ್ಟಿ ಸರಕು ಕೊಳ್ಳಲು ಇದ್ದಬದ್ದ ಹಣ ಸಾಲದೆ, ಸಾಲಮಾಡಿಕೊಳ್ಳುತ್ತಾನೆ, ರೈತ. ಇದರಿಂದ ದೇಶದ ದಾರಿದ್ರ್ಯ ಹೆಚ್ಚುತ್ತದೆ. ಅಲ್ಲದೆ ಹಿಂದುಸ್ಥಾನ ಪರದೇಶಗಳಿಗೆ ರಫ್ತುಮಾಡುವ ಕಚ್ಚಾ ಮಾಲು ದವಸ ಧಾನ್ಯಗಳ ಧಾರಣೆ; ಕಡಮೆ ತರಿಸಿಕೊಳ್ಳುವ ಸಿದ್ಧ ಸರಕಿನ ಬೆಲೆ ಹೆಚ್ಚು. ಈ ಪರಿಸ್ಥಿತಿ ಪರಿವರ್ತನೆ ಹೊಂದಬೇಕು. ನಮ್ಮ ದೇಶದಲ್ಲಿ ಹಣ ಉಳಿಯಬೇಕಾದರೆ ನಾವು ಹೊರಕ್ಕೆ ಕಳುಹಿಸುವ ಸಾಮಾನಿನ ಬೆಲೆ ತರಿಸಿಕೊಳ್ಳುವ ಸಾಮಾನಿನ ಬೆಲೆಗಿಂತ ಅಧಿಕವಿರಬೇಕು. ಹೆಚ್ಚಿನ ದರದಲ್ಲಿ,

ಕಡಮೆ ಪ್ರಮಾಣದಲ್ಲಿ ಪರದೇಶಗಳಿಗೆ ಮಾಲು ಮಾರಿ ಆಯ-ವ್ಯಯ ಸರಿದೂಗಿಸಬಹುದು ಎಂದು ಆಚಾರ್ಯ ವಿನೋಬಾ ವಾದಿಸುತ್ತಾರೆ.

ಸ್ವದೇಶೀ ಉಪಯೋಗ ಆಶ್ರಮವಾಸಿಗಳ ಒಂದು ನಿಯಮ. "ಯಾವ ಪದಾರ್ಥದ ನಿರ್ಮಾಣದಲ್ಲಿ ಸಂಶಯಕ್ಕೆ ಆಸ್ಪದವಿದೆಯೋ ಅಂತಹ ವಸ್ತು ಬಳಸುವುದು ಸತ್ಯಕ್ಕೆ ವಿರುದ್ಧ. ಮ್ಯಾಂಚೆಸ್ಟರ್, ಜರ್ಮನಿ ಅಥವ ಭಾರತ, ಎಲ್ಲಿಯೇ ಆಗಲಿ, ಗಿರಣಿಗಳ ಮಾಲಿನಲ್ಲಿ ಮೋಸವಿಲ್ಲೆಂಬ ವಿಶ್ವಾಸ ಆಶ್ರಮವಾಸಿಗಿರದು. ಗಿರಣಿಗಳಲ್ಲಿ ದುಡಿಯುವವನು ವಿಶೇಷ ಸಂಕಟಕ್ಕೊಗುರಿಯಾಗುತ್ತಾನೆ. ಅಗ್ನಿ ಬಳಸುವವರಿಂದ ಗಿರಣಿಗಳಲ್ಲಿ ವಿಶೇಷ ಪ್ರಾಣಹಾನಿಯಾಗುತ್ತದೆ ಮತ್ತು ಅನೇಕರು ಅಕಾಲ ಮೃತ್ಯುವಿಗೆ ತುತ್ತಾಗುತ್ತಾರೆ. ಆದುದರಿಂದ ಅಹಿಂಸಾವಾದಿ ಪರದೇಶದ ಮತ್ತು ಯಂತ್ರನಿರ್ಮಿತ ವಸ್ತು ಬಳಸಲಾರ. ಅವುಗಳನ್ನು ಉಪಯೋಗಿಸುವುದರಿಂದ ಅಸ್ತೇಯ ಮತ್ತು ಅಪರಿಗ್ರಹ ವ್ರತಕ್ಕೆ ಲೋಪ ಬರುತ್ತದೆ. ನಮ್ಮ ದೇಶದ ಕೈಮಗ್ಗದ ಬಟ್ಟೆಗೆ ಬದಲಾಗಿ, ಪರದೇಶದ ಥಳುಕಿನ ಬಟ್ಟೆ ತೊಡುವುದರಲ್ಲಿ ದೊಡ್ಡಸ್ತಿಕೆ ಇದೆ ಎಂಬ ಮೂಢ ಭ್ರಮೆ ನಮ್ಮಲ್ಲಿ ನೆಲೆಸಿದೆ. ಕೃತಕ ರೀತಿಯಲ್ಲಿ ಸೌಂದರ್ಯ ಹೆಚ್ಚಿಸಿಕೊಳ್ಳುವುದು ಬ್ರಹ್ಮಚರ್ಯಕ್ಕೆ ಒಪ್ಪದು. ಸಾಮಾನ್ಯ ಸರಳ ವಸ್ತು ಬಳಕೆಯೇ ಅವನ ಧರ್ಮ. ಸ್ವದೇಶೀ ಉಪಾಸಕನು ಪರದೇಶದ ಕಾಲರ್, ಕೋಟು, ಹ್ಯಾಟು, ಗುಂಡಿ ಮೊದಲಾದ ಕೃತಕ ವೇಷ ಭೂಷಣ ತೊರೆಯಲು ಯತ್ನಿಸುವನು. ಸ್ವದೇಶೀ ಮಾಲು ಬಳಸುವುದರಲ್ಲಿ ಮಾತ್ರ ಸ್ವದೇಶೀ ವ್ರತ ಪೂರೈಕೆಯಾಗದು. ಜೀವನದ ಅಂಗಾಂಗಗಳಲ್ಲಿ, ಪ್ರತಿಯೊಂದು ರೂಪುರೇಖೆಯಲ್ಲಿ ಸ್ವದೇಶೀ ತುಂಬಿತುಳುಕಬೇಕು. ಸರ್ವಾಂಗ ಸುಂದರವಾದುದು ಸ್ವದೇಶಿ. ಸ್ವದೇಶೀ ವ್ರತ ಜೀವನಮಾರ್ಗವಾಗಿ ಉದ್ಭವಿಸಿ ಕಾಲಾನುಗುಣವಾಗಿ, ಜೀವನವೇ ಸ್ವದೇಶೀಮಯವಾಗಬೇಕು, ಸ್ವದೇಶಿಯಾಗಬೇಕು."

ಇನ್ನೇನು ಭಾರತ ಬಂಧ ಮುಕ್ತವಾಯಿತು ಎಂಬ ಉದಾಸೀನ ಭಾವನೆಯಿಂದ ಖಾದಿ ತೊರೆದು ಪರದೇಶೀ ವಸ್ತ್ರ ಧರಿಸಲು ಅನೇಕ ಖಾದಿ ಭಕ್ತರು ತೊಡಗಿರುವುದನ್ನರಿತು—"ಇದು ನಿಜವಿದ್ದಲ್ಲಿ ನಮ್ಮ ಸ್ವಾತಂತ್ರ್ಯ ಬಹುಕಾಲ ಬಾಳದು. ಭಾರತವು ಐಕ್ಯದ ಸಂವಾದೀಸಿಗೆಯಾಗಿ ಮೆರೆಯುವ ಭವ್ಯ ಆಸೆ ಸಂದು ಹೋದೀತು" ಎಂದು ಎಚ್ಚರಿಸುತ್ತಾನೆ.

Khadi is the livery of freedom. ...Nehru

Khadi is superior in that it operates through love and pity of the poor, rather than through hatred of the rich. ...Gregg

Gandhi's campaign for the development of the home-made cloth-industry—Khaddar—is no mere fad of a romantic eager to revive the past, but a practical attempt to relieve the poverty and uplift the standard of the Indian villager.
...G. D. H. Cole

Khadi represents human values, mill cloth represents metallic values. ...Gandhi

೮. ಸ್ವಾವಲಂಬನೆ ಮತ್ತು ಖಾದಿ

ಖಾದಿಯ ಮಹತ್ವ ಕಳೆದ ೨೫ ವರುಷಗಳಿಂದ ಕಾಂಗ್ರೆಸ್, ಗಾಂಧಿ ಮತ್ತು ಅಖಿಲಭಾರತ ಚರಖಾ ಸಂಘ ಸಾಕಷ್ಟು ಪ್ರಚಾರ ಮಾಡಿದೆ. ಭಾರತದಲ್ಲಿ ಖಾದಿ ಮಹತ್ವವರಿಯದ ವ್ಯಕ್ತಿ ಅಪರೂಪ. ಯಂತ್ರ, ವಿದ್ಯುತ್, ರೈಲ್ವೆಗಳ ಸಹಾಯದಿಂದ ಆರ್ಥಿಕ ಸ್ಥಿತಿ ಉತ್ತಮಗೊಳಿಸಲು ನಾನಾ ಯೋಜನೆಗಳನ್ನು ಆರ್ಥಿಕ ಪ್ರವೀಣರು ಸಿದ್ಧಪಡಿಸಿದ್ದಾರೆ. ಇವುಗಳನ್ನು ಕಾರ್ಯರೂಪಕ್ಕೆ ತರಲು ಕೋಟ್ಯಾಂತರ ರೂಪಾಯಿಗಳುಬೇಕು; ಆರ್ಥಿಕ ಸ್ವಾತಂತ್ರ್ಯವಿರಬೇಕು. ಆದರೆ ಈಗಿನ ಪರಿಸ್ಥಿತಿಯಲ್ಲಿ, ಅಲ್ಪ ಬಂಡವಾಳದಿಂದ ಅತಿ ಮಹತ್ವ ಫಲ ಕೊಟ್ಟಿರುವ ಏಕ ಮಾತ್ರ ಯೋಜನೆ ‘ ಖಾದಿ ’ ಎಂದು ಧೈರ್ಯವಾಗಿ ಹೇಳಬಹುದು. ಮಹಾತ್ಮನ ಇತರ ತತ್ವಗಳಲ್ಲಿ ಭಿನ್ನಾಭಿಪ್ರಾಯವಿರಬಹುದು. ಆದರೆ ಅವನ ಖಾದಿ ಮಹತ್ವ ಅಂಗೀಕರಿಸದವರು ಅತಿ ವಿರಳ. ಯಂತ್ರ ಉಚ್ಚಾಟನೆ ಮಾಡುವುದು ಚರಖಕ್ಕೆ ಸಾಧ್ಯವಿಲ್ಲದಿರಬಹುದು. ಅಂತೆಯೇ ಚರಖ ನಾಶಪಡಿಸುವುದೂ ವಿನಾಶ

ಕಾರಿ ಯಂತ್ರಕ್ಕೆ ಅಷ್ಟು ಸುಲಭವಲ್ಲ. ಆಧುನಿಕ ರಾಷ್ಟ್ರಗಳನ್ನು ತನ್ನ ಮಲ್‌ಮಲ್ ಮತ್ತು ಡಾಕಾ ಮಸ್ಲಿನ್ ಬಟ್ಟೆಗಳಿಂದ ಮುಗ್ಧಗೊಳಿಸಿದ್ದ ಕೈರಾಟಿ ಕೈಮಗ್ಗ ನಶಿಸಲಿಲ್ಲವೆ ಎಂದು ಪ್ರಶ್ನಿಸಬಹುದು. ನಿಜ, ಆದರೆ ಖಾದಿಯಲ್ಲಿ ಅಡಗಿರುವ ಆರ್ಥಿಕ ಮತ್ತು ರಾಜಕೀಯ ಗುಂಭ, ಮಹತ್ವ ನಮ್ಮ ಪೂರ್ವಜರು ಬುದ್ಧಿಪೂರ್ವಕ ಮನಗಂಡಿದ್ದರೆಂದು ಹೇಳಲಾಗದು. ಹಿಂದುಸ್ಥಾನದ ಆರ್ಥಿಕ ಮತ್ತು ರಾಜಕೀಯ ಅವನತಿ ಮತ್ತು ಪತನಕ್ಕೆ ದೇಶವಿಶಾಲವೂ, ಜನಜನಿತವೂ ಆದ ಖಾದಿಯಂತಹ ಗ್ರಾಮೋದ್ಯೋಗಗಳ ನಾಶ ಒಂದು ಕಾರಣವಾಯಿತೆಂದು ಹೇಳಬಹುದು. ಪಾಶ್ಚಿಮಾತ್ಯರು ಇದರ ಅಂತರ್ಯ ಅರಿತಿದ್ದ ಕಾರಣ ಈ ಮೂಲ ಕೈಗಾರಿಕೆಗಳನ್ನು ಮೊದಲು ನಾಶ ಪಡಿಸಿದರು. ನೂಲುವವರ ಬೆರಳು ಕತ್ತರಿಸಲು ಸಹ ಅವರು ಹಿಂಜರಿಯಲಿಲ್ಲ. ಸ್ವಾತಂತ್ರ್ಯ ಕಳೆದುಕೊಳ್ಳದ ಭಾರತ ಯಂತ್ರಮುಗ್ಧವಾಗುತ್ತಿತ್ತೋ ಖಾದಿಯನ್ನೇ ಪೋಷಿಸುತ್ತಿದ್ದಿತೋ ಎಂಬ ಸಂದಿಗ್ಧ ಪ್ರಶ್ನೆಗೆ ಉತ್ತರ ಕೊಡುವುದು ಸುಲಭವಲ್ಲ. ಆದರೆ ಭಾವೀ ಸ್ವತಂತ್ರ ಭಾರತ ಖಾದಿಗೆ ಅಗ್ರಸ್ಥಾನ ಕೊಡಬೇಕೆಂದೇ ಗಾಂಧೀ ಮತ.

ನೂಲುವ ಮತ್ತು ನೇಯುವ ಯಂತ್ರ ನಿರ್ಮಾಣವಾಗುವ ಮೊದಲು ಖಾದಿಯಲ್ಲದೆ ಬೇರೆ ಗತ್ಯಂತರವಿರಲಿಲ್ಲ. ಆಧುನಿಕ ಯಂತ್ರಯುಗದಲ್ಲಿ ಖಾದಿಗೆ ಪ್ರೋತ್ಸಾಹ ಕೊಡುವುದು ಪ್ರಗತಿ ಚಿತ್ರಕ್ಕೆ ಕೊಕ್ಕೆಯಿಟ್ಟು, ಆರ್ಥಿಕ ರಥವನ್ನು ಹಿಂತಿರುಗಿಸದಂತೆ ಆಗುತ್ತದೆ. ದೇಶದ ಐಶ್ವರ್ಯ, ಜೀವನ ಮಟ್ಟ ಮತ್ತು ಉತ್ಪಾದನೆ ಬೆಳೆಯಲು ಖಾದಿ ಅಡ್ಡಬರುತ್ತದೆ. ಯಂತ್ರ ದೊಡನೆ ಖಾದಿ ಪೈಪೋಟಿ ನಡೆಸದು. ತುಟ್ಟಿಯಾದರೂ ಚಿಂತೆಯಿಲ್ಲವೆಂದು ದೇಶಭಕ್ತರು ಹೆಚ್ಚು ಬೆಲೆ ಕೊಟ್ಟು ಖಾದಿ ಕೊಳ್ಳುತ್ತಿರುವುದರಿಂದ ಅದು ತಲೆ ಎತ್ತಲು ಸಾಧ್ಯವಾಗಿದೆ. ಈ ಪ್ರೋತ್ಸಾಹವಿಲ್ಲದೆ ಖಾದಿ ಸ್ವತಂತ್ರವಾಗಿ ಬೆಳೆಯದು. ಆದುದರಿಂದ ಚಿರಕಾಲ ಬಾಳದು ಎಂದು ಆರ್ಥಿಕತಜ್ಞರ ವಾದ. ಕೃತ್ರಿಮ ಪ್ರೋತ್ಸಾಹದಿಂದ ಒಂದು ಕೈಗಾರಿಕೆಯನ್ನು ಚಿರಕಾಲ ಬದುಕಿಸುವುದು ಗಾಂಧಿಯೂ ಒಪ್ಪರು. ಆದರೆ ಈ ಬಗೆಯ ಉತ್ತೇಜನ ದೊರೆಯುತ್ತಿರುವುದು ಯಂತ್ರ ಕೈಗಾರಿಕೆಗೆ, ಖಾದಿಗಲ್ಲ ಎಂದು ಗಾಂಧಿ ಸಾಧಿಸುತ್ತಾನೆ. ಯಂತ್ರ ಕೈಗಾರಿಕೆ ಪ್ರತ್ಯಕ್ಷವಾಗಿಯೂ,

ಪರೋಕ್ಷವಾಗಿಯೂ ನಾನಾ ರೂಪಗಳಲ್ಲಿ ಬೆಂಬಲ ದೊರೆಯುತ್ತದೆ. ಸರ್ಕಾರ ಅಥವ ಪೌರಸಭೆ ಯಂತ್ರಾಲಯಗಳಿಗೆ ಉಚಿತವಾಗಿ ಅಗ್ಗವಾಗಿ ಜಮೀನು, ನೀರು, ವಿದ್ಯುತ್ ಮೊದಲಾದ ಸೌಲಭ್ಯಗಳನ್ನು ಒದಗಿಸುತ್ತದೆ. ಬ್ಯಾಂಕುಗಳು ಸುಲಭ ದರದಲ್ಲಿ ಸಾಕಷ್ಟು ಧನ ಸಹಾಯ ನೀಡುತ್ತವೆ. ರೈಲ್ವೆ ರಿಯಾಯತಿ ದೊರೆಯುತ್ತದೆ. ಕಚ್ಚಾ ಮಾಲು ರಿಯಾಯತಿ ದರ ದಲ್ಲಿ ದೊರೆಯಲು ಏರ್ಪಾಡಾಗುತ್ತದೆ. ಇದೇ ಕೈಗಾರಿಕೆ ಸಮೀಪದಲ್ಲಿಯೇ ತಲೆದೋರಿ ಅನವಶ್ಯಕ ಪೈಪೋಟಿಗೆ ಆಸ್ಪದವಾಗದಂತೆ ನಿರ್ಬಂಧ ಮಾಡ ಲಾಗುತ್ತದೆ. ಪರದೇಶದ ಪೈಪೋಟಿಯಿಂದ ರಕ್ಷಿಸಲು ರಕ್ಷಣಾ ತೆರಿಗೆ, ಸಹಾಯ ಸುಂಕ, ಉಪಕಸಬುಗಳ ಮತ್ತು ಸಹಾಯ ಕೈಗಾರಿಕೆಗಳ ಲಾಭ, ನಿಪುಣರ ಮೇಲ್ವಿಚಾರಣೆ, ಸಹಕೈಗಾರಿಕೆಗಳು ಒಂದಾಗಿ ಪ್ರತಿ ಸ್ಪರ್ಧೆಗೆ ಅವಕಾಶ ಕೊಡದಿರುವುದು; ಈ ರೀತಿ ಪ್ರತ್ಯಕ್ಷವಾಗಿ ನಾನಾ ರೂಪಗಳಲ್ಲಿ ಪ್ರೋತ್ಸಾಹ ದೊರೆಯುವುದು ಯಂತ್ರ ಕೈಗಾರಿಕೆಗೆ. ಇದಲ್ಲದೆ ಮೋಟಾರ್, ರೈಲು, ರಸ್ತೆ, ಗೃಹವಸತಿ ಮತ್ತು ಸಿನೀಮಾ, ರೇಡಿಯೋ ಮೊದಲಾದ ವಿಹಾರ; ಪರೋಕ್ಷ ಸೌಲಭ್ಯಗಳು. ಖಾದಿ ಕೊಳ್ಳುವವನು ಪ್ರತ್ಯಕ್ಷ ರೂಪಾಯಿಗೆ ಎರಡಾಣೆ ಅಧಿಕ ತೆರುವುದಾದರೆ ಇದು ಅಸಹಜ ಹೊರೆ.

ಹಿಂದುಸ್ಥಾನದ ಪ್ರಜಾಕೋಟಿಗೆ ಸರಾಸರಿ ತಲಾ ೧೫ ಗಜ ಬಟ್ಟೆ ಒದಗಿಸುವ ಉದ್ಯೋಗ ಯಂತ್ರಗಳೇ ಮಾಡಿದರೆ ಸುಮಾರು ಇಪ್ಪತ್ತು ಲಕ್ಷ ಜನಕ್ಕೆ ಉದ್ಯೋಗ ದೊರೆಯಬಹುದು. ಖಾದಿ ಇದೇ ಉದ್ಯಮ ಕೈ ಗೊಂಡರೆ ೮೦ ಕೋಟಿ ಜನಕ್ಕೆ ಅರೆಹೊಟ್ಟೆ ಅನ್ನವಾದರೂ ದೊರೆಯುತ್ತದೆ. ೪೦,೦೦೦ ಕದರು ಮತ್ತು ಒಂದು ಸಾವಿರ ಮಗ್ಗಗಳ ಒಂದು ಬಟ್ಟೆ ಗಿರಣಿ ಮತ್ತು ೧೯೩೮ನೆ ವರುಷದ ಅ. ಭಾ. ಚ. ಸಂಘದ ವರದಿಯಿಂದ ಅಂಕಿ ಅಂಶ ಉದ್ಧರಿಸಿ ಪಟ್ಟಾಭಿ ಸೀತಾರಾಮಯ್ಯನವರು ತುಲನೆ ಮಾಡಿರುವುದು ಹೀಗಿದೆ:—

ವಿವರ		ಅ. ಭಾ. ಚ. ಸಂಘ	ಗಿರಣಿ
ಬಂಡವಾಳ	.... ರೂ.	೨೯,೫೪,೭೧೭	೫೦,೦೦,೦೦೦
ಒಟ್ಟು ಬಟ್ಟೆ ಉತ್ಪನ್ನ ಬೆಲೆ	,,	೫೫,೧೦,೫೩೫	೩೩,೫೦,೦೦೦
ಉತ್ಪನ್ನವಾದ ಬಟ್ಟೆ ಚದರ ಗಜ		೧,೩೫,೮೩,೪೯೯	೩,೭೦,೦೦,೦೦೦

ಗ್ರಾಮಗಳಲ್ಲಿ ವ್ಯಾಪನೆ	ರೂ.	೧೩,೨೬೫	— —
ನೂಲುವವರ ಸಂಖ್ಯೆ	,,	೨,೮೧,೮೮೦	೨೦೦
ನೇಕಾರರ ಸಂಖ್ಯೆ	ರೂ.	೧೮,೬೩೨	೫೦೦
ರಂಗಾರೆ, ಪಿಂಜಾರಿ, ಅಗಸ ಇತ್ಯಾದಿ		೯,೩೨೪	೬೫೦
ಒಟ್ಟು ಉಪಕೃತರಾಗುವವರು		೩,೦೯,೮೩೬	೧,೩೫೦

ಚರಖ ಸಂಸ್ಥೆಯ ಚಾಲಕರು, ಉದ್ಯೋಗಸ್ಥರು ಅಂತೆಯೇ ಮಿಲ್ಲಿನ ನೌಕರರ ಸಂಖ್ಯೆ ಇದರಲ್ಲಿ ಸೇರಿಲ್ಲ. ಮಿಲ್ಲಿನ ಅರವತ್ತು ಭಾಗದ ಬಂಡವಾಳದಿಂದ ಮಾತ್ರ ನೂರಕ್ಕೆ ೭೦ರಷ್ಟು ಬಟ್ಟೆಯನ್ನು ಖಾದಿ ಸಿದ್ಧಪಡಿಸಿದೆ. ಗಿರಣಿ ಒಬ್ಬನಿಗೆ ಉದ್ಯೋಗ ಕಲ್ಪಿಸಿದರೆ, ಖಾದಿ ೪೦೦ ಜನಕ್ಕೆ ಕೆಲಸ ಕೊಡುತ್ತದೆ. ಮೇಲ್ಕಂಡ ಗಿರಣಿಗೆ ವಿನಿಯೋಗವಾದ ಬಂಡವಾಳವನ್ನೇ ಖಾದಿಗೆ ಬಳಸಿದ್ದರೆ ೫ ಲಕ್ಷ ಜನಕ್ಕೆ ಉದ್ಯೋಗ ದೊರೆಯುತ್ತಿದ್ದಿತು. ಗಿರಣಿಯ ಯಂತ್ರಗಳಿಗೆ ವೆಚ್ಚವಾದ ಹಣ ಪರದೇಶಕ್ಕೆ ಸಾಗಿಹೋಗುತ್ತದೆ. ಖಾದಿಗೆ ವಿನಿಯೋಗವಾಗುವ ಪ್ರತಿಯೊಂದು ಬಿಡಿ ಕಾಸೂ ನಮ್ಮ ದೇಶದಲ್ಲಿಯೇ ಉಳಿಯುತ್ತದೆ. ಗಿರಣಿಗಳು ಪಟ್ಟಣದ ಜನ ಬಾಹುಳ್ಯ ಹೆಚ್ಚಿಸಿ, ಗ್ರಾಮಗಳನ್ನು ಬರಿದು ಮಾಡುತ್ತವೆ; ಬಂಡವಾಳಗಾರರಿಗೆ ಮತ್ತಷ್ಟು ಹಣ. ಗ್ರಾಮಸ್ಥನ ಮನೆಗೆ ಉದ್ಯೋಗ ಮತ್ತು ಬಟ್ಟೆ ಒಯ್ಯುತ್ತದೆ ಖಾದಿ. ಖಾದಿ ಗ್ರಾಮ ಪುನರುದ್ಧಾರಕ್ಕೆ ಸಹಕಾರಿ. ಗ್ರಾಮ ಉದ್ಯೋಗಕ್ಕೆ ಜೀವದಾತೃ.

ಗುಲ್‌ಜಾರಿಲಾಲನಂದ ಅವರು ಖಾದಿ ಮತ್ತು ಗಿರಣಿ ತುಲನೆಮಾಡಿ ವಿಮರ್ಶಿಸಿರುವ ಅಂಶಗಳು ಬಹಳ ಸ್ವಾರಸ್ಯವಾಗಿವೆ. ಭಾರತದ ಗಿರಣಿಗಳು ಸುಮಾರು ೫೦ ಕೋಟಿ ರೂ. ಬೆಲೆ ಬಾಳುವ ಬಟ್ಟೆ ಉತ್ಪನ್ನಮಾಡುತ್ತವೆ. ಮತ್ತು ಇದಕ್ಕಾಗಿ ೧೦ ಕೋಟಿ ರೂ. ಕೂಲಿ ಕೊಡುತ್ತವೆ. ಅದೇ ೫೦ ಕೋಟಿ ರೂ. ಬೆಲೆ ಬಾಳುವ ಖಾದಿ ಉತ್ಪನ್ನ ಮಾಡಲು ೩೫ ಕೋಟಿ ರೂ. ಕೂಲಿರೂಪದಲ್ಲಿ ಚರಖಾ ಸಂಸ್ಥೆ ಸಲ್ಲಿಸಬೇಕಾಗುತ್ತದೆ. ೫೦ ಕೋಟಿ ರೂ. ಬೆಲೆಯ ಬಟ್ಟೆ ಗಿರಣಿಯಲ್ಲಿ ತಯಾರಿಸಲು ವಿನಿಯೋಗವಾದ ಹಂಜಿಯಿಂದ ೧೦೦ ಕೋಟಿ ರೂ. ಖಾದಿ ಉತ್ಪನ್ನವಾಗುವುದಲ್ಲದೆ, ೭೦ ಕೋಟಿ ರೂ. ಕೂಲಿಗೆ ಹಂಚಿಕೆಯಾಗುವುದು. ಅಂದರೆ ಕಾರ್ಮಿಕರ ಕೈಸೇರುತ್ತಿದ್ದ ೬೦ ಕೋಟಿ ರೂ. ಯಂತ್ರ-ಬಕಾಸುರ ಕಬಳಿಸಿ ಬಿಡುತ್ತಾನೆ. ಪ್ರತಿ ೫೦ ಕೋಟಿ

ರೂ.ಗೆ ೧೦ ಕೋಟಿ ರೂ. ಬಡ್ಡಿ, ಬಾಡಿಗೆ, ಲಾಭ, ಯಂತ್ರ ದುರಸ್ತು ಇವು ಗಳಿಗೆ ಕೈಬಿಟ್ಟು ಹೋಗುತ್ತದೆ. ಗಿರಣಿ ಬಟ್ಟೆಗಿಂತ ಖಾದಿಗೆ ಕೊಡುವ ೫೦ ಕೋಟಿ ರೂ. ಅಧಿಕಾಂಶವು ಮಳೆ ಸುರಿದಂತೆ ದೇಶಾದ್ಯಂತವೂ ಪಸರಿಸಿ ಹೊಗುತ್ತದೆ. ಭೋ ಎಂದು ಭೋರಿಡುತ್ತ ಧುಮ್ಮಿಕ್ಕುವ ಜಲಪಾತದಂತೆ ಒಂದೇ ಕಡೆ ಸುರಿಯುವುದಿಲ್ಲ.

ಖಾದಿ ಕ್ಷಾಮಡಾಮರ ಕಾಲದಲ್ಲಿ ಉದ್ಯೋಗ ಒದಗಿಸಲು ಯೋಗ್ಯ ವಾದುದು; ಆದರೆ ಸಂಸಾರ ನಿರ್ವಹಣೆಗೆ ಅಗತ್ಯಕಾಣುವ ವರಮಾನ ಕೊಡದು ಎಂಬ ಅಪವಾದವೂ ಇದೆ. ಖಾದಿಯನ್ನೇ ಜೀವನಯಾತ್ರೆಯ ಸಾಧನವೆಂದು ಉಪಯೋಗಿಸಬೇಕಾಗಿ ಗಾಂಧೀವಾದವೂ ಹೇಳದು. ವರುಷದ ನಾಲ್ಕು ತಿಂಗಳು ಬೇಸಾಯಮಾಡಿ, ಮಿಕ್ಕ ಎಂಟು ತಿಂಗಳು ವೃಥಾ ಕಳೆಯುವ ಕೃಷೀವಲನಿಗೂ ಹೆಂಗಸರಿಗೂ ಉಪಯುಕ್ತ ಕಸಬು. ಕೂತಲ್ಲಿಯೇ ಸಂಪಾದನೆಗೆ ಸಹಾಯಮಾಡುವ ಭಾಗ್ಯಚಕ್ರ. ಭಾರತದಲ್ಲಿ ನೂರಕ್ಕೆ೯೦ ಜನ ಹಳ್ಳಿಗರು, ಅಂದರೆ ಗ್ರಾಮಗಳಲ್ಲಿ ವಾಸಿಸುವವರ ಸಂಖ್ಯೆಯ ಸುಮಾರು ೩೦ ಕೋಟಿ ತಿಂಗಳಿಗೆ ಒಂದು ರೂಪಾಯಿ ಹೆಚ್ಚು ಸಂಪಾದಿಸಿ ದರೂ ಈಗಿನ ಸರಾಸರಿ ವರಮಾನ ದ್ವಿಗುಣಿತವಾಯಿತು.

ಹಿಂದುಸ್ಥಾನ ಮಾತ್ರ ಖಾದಿ ಧಾರಿಯಾಗಬೇಕು ಎಂಬ ಸಂಕುಚಿತ ಭಾವನೆ ಗಾಂಧೀ ವಾದಕ್ಕಿಲ್ಲ. ಪ್ರತಿರಾಷ್ಟ್ರವೂ ತನ್ನ ದೇಶದ ಖಾದಿಧಾರಿ ಯಾಗಲಿ, ತನ್ನ ತನ್ನ ದೇಶದಲ್ಲಿ ದೊರೆಯುವ ಹತ್ತಿ, ಉಣ್ಣೆ ಬಳಸಿ ಕೈ ನೂಲಿಂದ ಕೈಮಗ್ಗದಲ್ಲಿ ಬಟ್ಟೆಮಾಡಿ ಧರಿಸಲಿ ಎಂದು ಗಾಂಧೀವಾದ ಬೋಧಿ ಸುತ್ತದೆ. ಯಂತ್ರಪೂಜಕ ಇಂಗ್ಲೆಂಡ್, ಸ್ಕಾಟ್ಲೆಂಡಿನ ಕೆಲವು ಗ್ರಾಮಗಳಲ್ಲಿ ಇಂದಿಗೂ ಕೈರಾಟೆ ಆಡುತ್ತಿದೆ. ಖಾದಿ ಹಿರಿಮೆ ದೀನಬಂಧು ಆಂಡ್ರೂಸ್ ಅವರು ಈ ರೀತಿ ಸಂಗ್ರಹಿಸುತ್ತಾರೆ:—

(೧) ಮೂಲಧನ ಅನವಶ್ಯ. ಕೆಲಸ ಸಾಧಿಸಲು ನಿತ್ಯ ವೆಚ್ಚವೂ ಬೇಡ. (೨) ಕೆಲಸಗಾರನಿಗೆ ಉಚ್ಚಶಿಕ್ಷಣೆ, ವಿಶೇಷ ಜಾಣ್ಮೆ ಬೇಕಿಲ್ಲ. (೩) ಅಲ್ಪ ದೇಹ ಶ್ರಮ ಸಾಕು. (೪) ಪರಂಪರೆಯಾಗಿ ನಡೆದುಬಂದ ವೃತ್ತಿ. ಮತ್ತೆ ಬಳಕೆಗೆ ತರಲು ಹೆಚ್ಚು ಶ್ರಮವಾಗದು. ಸಾಂಪ್ರದಾಯಿಕ ಉದ್ಯಮ. (೫) ಆಹಾರ ಬಿಟ್ಟರೆ, ಮಾನವನ ಎರಡನೇ ಅವಶ್ಯಕತೆ ಬಟ್ಟೆ. (೬) ಸಾಮಾ

ಜಿಕ, ಧಾರ್ಮಿಕ ಶಿಷ್ಟಾಚಾರಕ್ಕೆ ವಿರುದ್ಧವಲ್ಲ. (೭) ಕ್ಷಾಮ ನಿವಾರಣೆಗೆ ಸದಾ ಸಿದ್ಧ ಯೋಗ್ಯ ಉದ್ಯಮ. (೮) ಸಂಸಾರ ಒಡೆದು ಗ್ರಾಮವಾಸಿಯನ್ನು ಪಟ್ಟಣಕ್ಕೆ ಸಾಗಿಸುವ ಬದಲು, ಗ್ರಾಮದ ಗುಡಿಸಲಿಗೇ ಉದ್ಯೋಗ ಒಯ್ಯುವ ಕಸಬು. (೯) ಗ್ರಾಮ ಉದ್ಯೋಗಗಳಿಗೆ ಜೀವಕಳೆ ತುಂಬಿ, ಗ್ರಾಮ ಪುನರುದ್ಧಾರಕ್ಕೆ ಸಾಧನವಾದ ಮೂಲ ಕೈಕೆಲಸ. (೧೦) ಕೈಮಗ್ಗದ ಆಧಾರ, ಬೆನ್ನೆಲುಬು. (೧೧) ಗ್ರಾಮ ಜೀವನ ಸರಿದೂಗಿಸಿ ಸಮನ್ವಯಗೊಳಿಸುವ ಸಾಧನ. (೧೨) ಸಮವಾಗಿ, ಸಾರ್ವತ್ರಿಕವಾಗಿ ಐಶ್ವರ್ಯ ಹಂಚಲು ಸಹಕಾರಿಯಾದ ಯೋಜನೆ. (೧೩) ನಿರುದ್ಯೋಗ ಮತ್ತು ಸೋಮಾರಿತನ ಹೋಗಲಾಡಿಸುವ ಮದ್ದು. (೧೪) ಜಾತಿಮತಗಳ ಭೇದವಿಲ್ಲದೆ ಹಿಂದು-ಮುಸಲ್ಮಾನ್ ಆದಿ ಸಮಸ್ತರೂ ಕೈಕೊಳ್ಳಬಹುದಾದ ಧಾರ್ಮಿಕ ವೃತ್ತಿ.

ಪ್ರತಿಯೊಬ್ಬನೂ ಖಾದಿಯನ್ನೇ ವಾಡಿಕೆಯಾಗಿ ಧರಿಸಬೇಕು ಎಂಬ ನಿಯಮ, ಸಿರಿತನ-ಬಡತನ ಎಂಬ ಭೇದಭಾವಗಳನ್ನು ತೊಲಗಿಸಿ ಕಾಂಗ್ರೆಸ್ಸು ನಿಜ ಜನಪದ ಸಂಸ್ಥೆಯಾಗಲು ವಿಶೇಷ ಸಹಕಾರಿಯಾಗಿದೆ. ಒಂದು ಕಾಲದಲ್ಲಿ ಕೈಯಿಂದ ನೂತ ನೂಲೇ ಕಾಂಗ್ರೆಸ್ಸಿನ ಸದಸ್ಯತ್ವದ ಶುಲ್ಕ. ಕೀಳು-ಮೇಲು, ದರಿದ್ರ-ಧನಿಕ, ಹಳ್ಳಿಗ-ಪಟ್ಟಣಿಗ ಎಂಬ ಭಿನ್ನತೆಗಳನ್ನು ತೊಲಗಿಸಿ, ಭಾರತದ ಸ್ವಾತಂತ್ರ್ಯಕ್ಕೆ ಹೋರಾಡುವರೆಲ್ಲರೂ ಒಂದೇ ಎಂಬ ಮನೋಕ್ರಾಂತಿ, ಸಮಭಾವನೆ ತಲೆದೋರಲು ಖಾದಿಗಿಂತ ಹೆಚ್ಚು ಸಹಕಾರಿ ಯಾವುದು ?

ಖಾದಿ ಧಾರಣೆಯ ಮೂಲ ಸ್ವಾವಲಂಬನೆ. ತನ್ನ ಹಿತ್ತಲಲ್ಲಿಯೇ ಬೆಳೆದ ಹತ್ತಿಯನ್ನು ತನ್ನ ಕೈಯಿಂದಲೇ ಹಂಜಿಮಾಡಿ, ನೂಲು ನೂತು, ಬಟ್ಟೆ ನೇದು ಧರಿಸುವುದೇ ಪೂರ್ಣ ಖಾದಿ ಸ್ವಾವಲಂಬನೆ. ಖಾದಿಯನ್ನು ಕೊಂಡು ಧರಿಸುವುದು ಅಷ್ಟು ಶ್ರೇಷ್ಠವಲ್ಲ. ಖಾದಿ ವಸ್ತ್ರಾಲಯಗಳು ಖಾದಿ ಮಾರಾಟದ ಅಂಗಡಿಗಳಾಗಿರುವುದನ್ನು ತಪ್ಪಿಸಲು, ಪ್ರತಿಯೊಬ್ಬ ಖಾದೀ ಧಾರಿಯೂ ತನ್ನ ಕೈಯಿಂದಲೇ ನೂತ ನೂಲಿನ ಲಡಿ ಕೊಟ್ಟು ಬಟ್ಟೆ ಪಡೆಯಬೇಕೆಂಬ ನಿಯಮ ಈಗ ಎಲ್ಲ ಭಾಂಡಾರಗಳಲ್ಲೂ ಜಾರಿಯಲ್ಲಿದೆ.

Facism believes neither in the possibility nor the utility of perpetual peace. War alone brings up to its highest tension all human energy and puts the stamp of nobility upon the peoples who have the courage to meet it. ...Mussolini

Modern war, being largely a matter of war against economic life, has turned more and more towards the enemy's home country, and the old principle of making war only against armies and navies has been consigned to the back ground. ...Field Marshal Robertson

It's a life work to make an army.
...Gen. Mantgomery

Mantgomery sacked a Major who failed to provide Tea for a detachment of advanced troops.
...John Gunther

೯. ಪೂರ್ವ ಸಿದ್ಧತೆ

"ಹಿಂಸಾ ಮತ್ತು ಅಹಿಂಸಾ ಹೋರಾಟ ಮಾರ್ಗಗಳಲ್ಲಿ ಪೂರ್ವ ಪಶ್ಚಿಮದ ಮಹದಂತರವಿದ್ದರೂ, ಯೂರೋಪಿನ ಯುದ್ಧದಿಂದ ಅಹಿಂಸಾವಾದಿ ಗ್ರಹಿಸಬೇಕಾದ ವಿಚಾರಗಳು ಅನೇಕ. ನಾನಾ ಮುಖ ಶಾಖೋಪಶಾಖೆಗಳನ್ನು ಒಂದುಗೂಡಿಸಿ, ಬಹುರೂಪ ಕಾರ್ಯಗಳನ್ನು ಸಂಯೋಜಿಸಿ, ಒಂದಕ್ಕೊಂದು ಹೊಂದಿ ನಡೆಯುವ ಅದ್ಭುತ ಕಾರ್ಯ ವ್ಯವಸ್ಥೆಯಾಗಬೇಕು. ಯುದ್ಧ ವಿನಾಶಕಾರಿಯಾದರೂ, ಅದರ ಪೂರ್ವ ಸಿದ್ಧತೆಗಳು ವಿಧಾಯಕ. ಪ್ರತಿಯೊಬ್ಬ ವ್ಯಕ್ತಿಯು ಈ ಬೃಹತ್ ಸಂಯೋಜನೆಯಲ್ಲಿ ಸಹಕರಿಸಿ, ಸಾಧ್ಯವಾದ ಸೇವೆ ಸಲ್ಲಿಸುವಂತೆ ಮಾಡಬೇಕು" ಎಂದು ಆಚಾರ್ಯ ವಿನೋಬಾ ಬರೆಯುತ್ತಾರೆ.

ಜರ್ಮನಿಯು ೮ ಕೋಟಿ ಪ್ರಜಾ ಬಾಹುಳ್ಯದಿಂದ ೭೦ ಲಕ್ಷ ಯೋಧರನ್ನು ಸಂಗ್ರಾಮಕ್ಕೆ ಸಿದ್ಧಪಡಿಸಿತು. ಈ ಅಪಾರ ದಳಕ್ಕೆ ಮದ್ದು, ಗುಂಡು, ತೋಫು, ತುಪಾಕಿ, ಫಿರಂಗಿ, ಮೋಟಾರ್, ವಿಮಾನ; ಈ ಅಗಾಧ ಸಂಖ್ಯಾಬಲ ದೃಢಕಾಯವಾಗಿರಲು ಅವಕ್ಕೆ ಬೇಕಾದ ಅನ್ನ, ಆಹಾರ, ನೀರು, ಬಟ್ಟೆ, ಸ್ನಾನಪಾನಾದಿಗಳು, ಬೀಡಿ, ಸಿಗರೇಟ್, ವೈದ್ಯಸಹಾಯ; ಇವುಗಳನ್ನು ಸಕಾಲ ಸುರಕ್ಷಿತ ಮುಟ್ಟಿಸಲು ರೋಡು, ರೈಲ್ವೆ, ಮೋಟಾರು, ವಿಮಾನ, ಜಹಜು, ತಂತಿ, ಟಪಾಲು ಮೊದಲಾದ ಸಂಚಾರ ಸೌಲಭ್ಯ. ಎಲ್ಲ ವ್ಯವಸ್ಥೆ ಗಡಿಯಾರದಂತೆ ನಡೆಯಬೇಕು. ಇದೇ ಕಾಲದಲ್ಲಿ ರಾಷ್ಟ್ರ ನಿರ್ಮಾಣ ಸಾರ್ವಜನಿಕ ಕಾರ್ಯಗಳೂ ಎಂದಿನಂತೆ ಸಾಗುತ್ತಲಿರಬೇಕು. ಯಾವುದೂ ನಿಲ್ಲುವಂತಿಲ್ಲ.

ಬೆಳಗಿನಿಂದ ರಾತ್ರಿಯವರೆಗೆ ಒಬ್ಬ ನಾಗರಿಕ ರಾಷ್ಟ್ರಕನಿಗೆ ಬೇಕಾಗುವದನ್ನು ಗಮನಿಸಿ, ಏಕಕಾಲದಲ್ಲಿ ೭೦ ಲಕ್ಷ ಯೋಧರಿಗೆ ಈ ಪದಾರ್ಥಗಳನ್ನು ಒದಗಿಸಲು ಎಷ್ಟು ಅಪಾರ ಸಿದ್ಧತೆ ಬೇಕು ಎಂದು ಕಲ್ಪನೆ ಮಾಡಿ. ಜೀವನ ನಿರ್ವಹಣೆಗೆ ಬೇಕಾದ ದಿನವಹಿ ಆವಶ್ಯಕತೆ ಮಾತ್ರವಲ್ಲದೆ, ಆಧುನಿಕ ಯುದ್ಧಕ್ಕೆ ಬೇಕಾಗುವ ಅಪಾರ ಸಾಧನಗಳು. ಈ ವ್ಯವಸ್ಥೆಯಲ್ಲಿ ಕಿಂಚಿತ್ ಲೋಪವಾದರೂ ಅಪಜಯ ಸಿದ್ಧ. ಸರಬರಾಜು ವ್ಯವಸ್ಥೆ ನಾಶಗೊಳಿಸಲು ವಿಪಕ್ಷಿ ಹೊಂಚುಹಾಕುತ್ತಿರುತ್ತಾನೆ. ಸಕಲ ಸಾಮಗ್ರಿಗಳಿದ್ದರೂ ಸಕಾಲದಲ್ಲಿ ಯುದ್ಧಕ್ಷೇತ್ರಕ್ಕೆ ಅವುಗಳನ್ನು ಮುಟ್ಟಿಸಲು ಸಾಧ್ಯವಾಗದೆ ಅಪಜಯ ಸಂಭವಿಸಿರುವ ನಿದರ್ಶನಗಳು ಹೇರಳ. ಕುಡಿಯುವ ನೀರು ದೊರೆಯದೆ ಹಾಂಕಾಂಗ್ ಪತನವಾಯಿತು. ಬಾಂಬುಗಳ ಹೊಡೆತ ತಡೆಯಲಾರದೆ, ಹಾಹಾಕಾರವೆದ್ದು, ಪಲಾಯನವಾಗುತ್ತಿದ್ದ ಪೌರರನ್ನು ತಡೆಗಟ್ಟಲು ಸಾಧ್ಯವಿಲ್ಲದೆ ಫ್ರಾನ್ಸ್ ಸಂಧಿಮಾಡಿಕೊಂಡಿತು. ಸೊಳ್ಳೆಕಾಟ ತಡೆಯದೆ ಅಮೇರಿಕದ ಸೈನ್ಯಗಳು ಕಂಗೆಟ್ಟವು. ಬರ್ಮ, ಮಲಯ, ಫಿಲಿಫೈನ್, ಇಂಡೋ-ಚೀನಾ ಭಾಗಗಳಲ್ಲಿ ಯುದ್ಧ ಮಾಡಬೇಕಾದೀತೆಂಬ ಅರಿವಿಲ್ಲದೆ ಸೈನಿಕರಿಗೆ ಸೊಳ್ಳೆಪರದೆ ಮತ್ತು 'ಕ್ವೈನಾ' ಒದಗಿಸುವ ಪೂರ್ವ ಸಿದ್ಧತೆ ಮಾಡಿರಲಿಲ್ಲ. ನೂರಕ್ಕೆ ೯೬ ಸೈನಿಕರು ಮಲೇರಿಯಾ ಪೀಡಿತರಾಗಿ ನಿಶ್ಶಕ್ತರಾದರು. 'ಯುದ್ಧದಲ್ಲಿ ಮುಂದೆ ಗೆಲುವಾಗಬೇಕಾದರೆ ಜೆರಲ್

ಹಾರ್‌ಬರಿನಲ್ಲಿ ಕಷ್ಟದಿಂದ ರಕ್ಷಿಸಿರುವ ೨೦ ಲಕ್ಷ ಸಿಂಕೋನಾಬೀಜ, ಕೂಡಲೇ ಚೆಲ್ಲಿಸಿ ಸಸಿ ಬೆಳೆಸುವುದು ಆವಶ್ಯಕ' ಎಂದು ಪೆಸಿಫಿಕ್ ಕ್ಷೇತ್ರದ ಪ್ರಧಾನ ದಳಪತಿ ಮಾಕ್‌ಆರ್ಥರ್ ಕೇಬಲ್ ಮಾಡಿ, ವಿಮಾನದಲ್ಲಿ ಬೀಜ ಕಳುಹಿಸಿದನು. ಮೊದಲ ಯುದ್ಧ ಸೋಲಿನಮೇಲೆ. ೨೦ ವರುಷಗಳ ಪೂರ್ವಸಿದ್ಧತೆ ಜರ್ಮನಿಯು ಹಿಂದಿದೆ. ೩೦ ವರ್ಷಗಳಿಂದ ಜಪಾನ್ ಯುದ್ಧಕ್ಕೆ ಅಣಿಮಾಡಿಕೊಳ್ಳುತ್ತಿದ್ದಿತು ಎಂದು ಸಾಕ್ಷಿ-ಸಾಹಿತ್ಯ ತಿಳಿಸುತ್ತದೆ.

ಗಾಂಧೀವಾದದ ಅಹಿಂಸಾ ಹೋರಾಟದಲ್ಲಿಯೂ ಪೂರ್ವಸಿದ್ಧತೆ ಅವಶ್ಯ. ಹಿಂಸೆ ಮತ್ತು ಅಹಿಂಸೆಗಳ ಮೂಲ ಭಿನ್ನತೆಯು ಕಾರಣವಾಗಿ ಅವುಗಳ ರೂಪ, ಕ್ರಮ, ಸಂಯೋಜನೆ, ವ್ಯವಸ್ಥೆ ಈ ಪೂರ್ವಸಿದ್ಧತೆಗಳಲ್ಲಿ ಅಪಾರ ಅಂತರವಿರುವುದು ಸಹಜ. ಆದರೆ ಸತ್ಯಾಗ್ರಹ ಸಂಗ್ರಾಮಕ್ಕೂ ಪೂರ್ವಸಿದ್ಧತೆ ಅವಶ್ಯ. ವಿಧಾಯಕ ಕಾರ್ಯಕ್ರಮಗಳಲ್ಲಿ ಈ ಪೂರ್ವ ಸಿದ್ಧತೆ ಅಡಕವಾಗಿದೆ. ಗಾಂಧಿ ಸೇವಾಸಂಘದ ಉದ್ದೇಶಗಳಲ್ಲಿ ಈ ವಿಧಾಯಕ ಕಾರ್ಯಕ್ರಮ ಹೀಗೆಂದು ಉಕ್ತವಾಗಿದೆ:—

ಖಾದಿ ಪುನರುಜ್ಜೀವನ, ಗ್ರಾಮಸೇವೆ, ರಾಷ್ಟ್ರೀಯ ವಿದ್ಯಾಭ್ಯಾಸ, ರಾಷ್ಟ್ರಭಾಷಾಪ್ರಚಾರ, ಮಾದಕ ಪದಾರ್ಥಗಳ ಸೇವನೆಯ ನಿಷೇಧ, ನಿಮ್ನಪಂಗಡದ ಉದ್ಧಾರ, ಮತೀಯ ಮತ್ತು ಜಾತೀಯ ಐಕ್ಯತೆ, ಸ್ತ್ರೀಯರ ಪುರೋಭಿವೃದ್ಧಿ, ಔಷಧೋಪಚಾರ ವ್ಯವಸ್ಥೆ, ಕಷ್ಟಪರಿಹಾರ (ಅತಿವೃಷ್ಟಿ, ಅನಾವೃಷ್ಟಿ, ಕ್ಷಾಮ, ಅಂಟುಜಾಡ್ಯಗಳು, ಭೂಕಂಪ ಇವುಗಳಿಂದ ಸಂಭವಿಸುವ ಸಂಕಟ ನಿವಾರಣೆಯ ಸಮಯೋಚಿತ ಸಹಾಯ) ಪಶುಪಾಲನೆ, ಗಾಂಧಿ ಸಾಹಿತ್ಯ ಪ್ರಚಾರ ಇತ್ಯಾದಿ.

ಇವುಗಳೆಲ್ಲವೂ ವಿಧಾಯಕ ಕಾರ್ಯಕ್ರಮಗಳೇ. ಖಾದಿ, ಸ್ವದೇಶಿ, ಗ್ರಾಮಕೈಗಾರಿಕೆ, ಸ್ವಾವಲಂಬನೆ ಇವುಗಳ ಆವಶ್ಯಕತೆ ಹಿಂದಿನ ಪ್ರಕರಣಗಳಲ್ಲಿ ಪ್ರಸ್ತಾಪವಾಗಿದೆ. ಇತರ ರಚನಾತ್ಮಕ ಕಾರ್ಯಗಳನ್ನು ಮುಂದೆ ಕೊಟ್ಟಿದೆ.

The English medium has sapped the energy of the nation, it has shortened the lives of the people. It has estranged them from the masses; it has made education unnecessarily expensive. If this process is still persisted in, it bids fair to rob the nation of its soul. The sooner, therefore, educated India shakes itself free from the hypnotic spell of the foreign medium the better it will be for them and the people. ...Gandhi

The proper teaching of mother tongue is the foundation of all education. *Zakir Hussain Report.*

State education must be governed by the rule that it shall be given in the language of the student.
...Nehru

೧೦. ಏಕ ಭಾಷೆ, ಏಕ ಲಿಪಿ

ಭಾಷೆ ಐಕ್ಯತೆಯು ಒಂದು ಸಾಧನ. ಅದರ ಸಹಾಯದಿಂದ ಒಂದು ದೇಶದ ರಾಷ್ಟ್ರೀಯತೆ, ಸಂಸ್ಕೃತಿಗಳ ಎಲ್ಲೆಕಟ್ಟನ್ನು ನಿರ್ಧರಿಸಬಹುದು. ಇದನ್ನನುಸರಿಸಿ ಕಾಂಗ್ರೆಸ್ ಪ್ರಾಂತ್ಯಗಳನ್ನು ಭಾಷಾನುಸಾರ ವಿಭಜಿಸಿದೆ. ಭಾಷೆ ನಮ್ಮ ಮನೋಭಾವ ವ್ಯಕ್ತಪಡಿಸಲು ಸಹಾಯವಾದ ಒಂದು ಮಾರ್ಗ. ಅನ್ಯೋನ್ಯ ವ್ಯವಹಾರಕ್ಕೆ ಏಕಭಾಷೆ ಅವಶ್ಯ. ಅವರು ಯಾವ ಪ್ರಾಂತದಲ್ಲೇ ಇರಲಿ, ಒಂದೇ ಭಾಷೆ ಬಳಸುವವರಲ್ಲ, ಭಾಷಾಬಾಂಧವ್ಯ ಇದ್ದೇ ಇರುತ್ತದೆ. ತನ್ನ ಮಾತೃಭಾಷೆಯ ಸೋಂಕಿಲ್ಲದ ಪರದೇಶದಲ್ಲಿ ತನ್ನ ಭಾಷೆ ಬಲ್ಲವರು ಯಾರಾದರೂ ಸಿಗಲಾರರೇ ಎಂಬ ತೀವ್ರ ಆಕಾಂಕ್ಷೆ ಹೃದಯದಲ್ಲಿ ಉದ್ಭವಿಸುವುದು. ಜಾತಿ, ಮತ, ಆಹಾರ, ವ್ಯವಹಾರ ಗಳಲ್ಲಿ ಎಷ್ಟೇ ಭಿನ್ನತೆಯಿದ್ದರೂ, ಏಕಭಾಷೆ ಎಲ್ಲರಲ್ಲಿಯೂ ಐಕ್ಯ ಸಮ ಭಾವನೆ ತಲೆದೋರಲು ಸಹಕಾರಿಯಾಗುತ್ತದೆ. ನಾಲ್ಕುಸಾವಿರ ಮೈಲಿ

ಗಳ ಅಟ್ಲಾಂಟಿಕ್ ಮಹಾಸಾಗರದಿಂದ ಬೇರ್ಪಟ್ಟಿದ್ದರೂ ಇಕ್ಕೆಡೆಗಳಲ್ಲಿ ವಾಸಿಸುವ ಆಂಗ್ಲಭಾಷೆಯ ಅಮೇರಿಕದವರೂ ಆಂಗ್ಲೇಯರೂ ಈ ಮಹಾ ಸಂಗ್ರಾಮದಲ್ಲಿ ಒಂದು. ಆಂಗ್ಲಭಾಷೆ ಬಳಸುವ ಆಂಗ್ಲೇಯರೆಲ್ಲರೂ ಒಂದಾಗಿ ಈ ಮಹಾ ಸಂಗ್ರಾಮ ನಡೆಸುತ್ತಿರುವೆವು ಎಂದು ಮಹಾ ಪ್ರಧಾನಿ ಚರ್ಚಿಲ್ ಹೆಮ್ಮೆ ಪಡುತ್ತಾನೆ ಆಂಗ್ಲಭಾಷೆ ಬಳಸುವ ಬಳಸುವ ಬ್ರಿಟಿಷ್‌ಸಾಮ್ರಾಜ್ಯದ ಕೆನಡ, ಆಸ್ಟ್ರೇಲಿಯ, ಆಫ್ರಿಕಾ, ಇಂಗ್ಲೆಂಡ್ ಒಂದಾದರೂ 'ಕೆಲ್ಟಿಕ್' ಭಾಷೆ ಬಳಸುವ ಐರ್ಲೆಂಡ್ ತಾಟಸ್ಥ್ಯವಾಗಿರುವುದು ಗಮನೀಯವಾದುದು. ಪ್ರಪಂಚವನ್ನು ಒಂದುಗೂಡಿಸಲು ಆಂಗ್ಲಭಾಷಾ ಪ್ರಚಾರ ಒಂದು ಸಾಧನ ಎಂದು ಅದಕ್ಕಾಗಿ ಒಂದು ಸಂಸ್ಥೆ ಸ್ಥಾಪಿತವಾಗಿದೆ. ಹಿಂದಿಯನ್ನು ಹಿಂದುಸ್ಥಾನದ ರಾಷ್ಟ್ರಭಾಷೆಯಾಗಿ ಮಾಡಲು ಇದೇ ಕಾರಣ.

ಕಾಂಗ್ರೆಸ್ಸಿನ ಕಾರ್ಯಕಲಾಪ ಮೊದಲು ಆಂಗ್ಲಭಾಷೆಯಲ್ಲಿಯೇ ನಡೆಯುತ್ತಿದ್ದಿತು. ಪರಭಾಷಾ ಪಾಂಡಿತ್ಯ ಪಡೆದು ಸಭೆಗಳಲ್ಲಿ ನಮ್ಮ ಅಭಿಪ್ರಾಯ ಹೊರಪಡಿಸಬೇಕಾಗಿತ್ತು. ಯಾವ ಪರರಾಷ್ಟ್ರದ ಪಾಶದಿಂದ ಪ್ರತ್ಯೇಕವಾಗಲು ಪ್ರಯತ್ನ ನಡೆಯುತ್ತಿದೆಯೋ ಆ ಪರಭಾಷೆಯೇ ನಮ್ಮ ಐಕ್ಯತೆಯ ಒಂದು ಸಾಧನ! ಆಭಾಸವಾದರೂ ಪರಭಾಷಾ ಪಾಂಡಿತ್ಯ ಪ್ರದರ್ಶನದಲ್ಲಿ ಒಂದು ಹೆಮ್ಮೆ. ಈ ಮೋಹಜಾಲ ಒಡೆದು ದೇಶ ಭಾಷೆಗೆ ಅಗ್ರ ತಾಂಬೂಲವಿತ್ತ ಗೌರವ ಗಾಂಧಿಗೆ ಸಲ್ಲುತ್ತದೆ. ಕಾಶಿ ಹಿಂದೀ ವಿಶ್ವ ವಿದ್ಯಾಲಯದ ಪ್ರಾರಂಭೋತ್ಸವಕ್ಕೆ ದಿವ್ಯಾಭರಣ ಭೂಷಿತರಾಗಿ ರಾಜ ಮಹಾರಾಜರು ಸಭೆಯಲ್ಲಿ ಮಂಡಿಸಿದ್ದರು. ಇಂತಹ ಮಹಾಸಭೆ ಪ್ರವೇಶಿಸಿ ವೇದಿಕೆಯ ಮೇಲೇರಿ ರಾಜ ಮಹಾರಾಜರನ್ನುದ್ದೇಶಿಸಿ ಹಿಂದೀ ಭಾಷೆಯಲಿ ಮಾತನಾಡಿದ ಧೀರ ಗಾಂಧಿ. ವಸ್ತ್ರಭೂಷಿತರಾಗಿ, ವಜ್ರ ವೈಡೂರ್ಯ ಧರಿಸಿ, ಪೋಲೀಸು ಕಾವಲಿರಿಸಿಕೊಂಡು ಸಭೆಯಲ್ಲಿ ವಿರಾಜಮಾನರಾಗಿದ್ದ ರಾಜರುಗಳನ್ನು ಈ ಅಲಂಕಾರಕ್ಕಾಗಿ ಗಾಂಧಿ ನಿರ್ಭಯವಾಗಿ ಜರಿಯಲು, ವೇದಿಕೆಯ ಮೇಲೆ ಆಸನರಾಗಿದ್ದ ಅರಸರೆಲ್ಲ ಅದೃಶ್ಯರಾದರು. ಈ ಪ್ರಸಂಗ ನಡೆದ ಸ್ವಲ್ಪ ಕಾಲಾನಂತರ ಆಗ ವೈಸರಾಯ್ ಆಗಿದ್ದ ಲಾರ್ಡ್ ಚೆಮ್ಸ್‌ಫರ್ಡ್ ಭಾರತ ಮುಖಂಡರ ಸಭೆ ಡೆಲ್ಲಿಯಲ್ಲಿ ಕರೆದ. ಇಂತಹ ಗಣ್ಯ

ಸಭೆಯಲ್ಲೂ ಗಾಂಧಿ ಹಿಂದಿಯಲ್ಲಿಯೇ ಮಾತನಾಡಿದ್ದು ಸಭೆಗೆ ಅವಹೇಳನವೆಂದು ಹಲವರು ಗಾಬರಿಯಾದರು. ೨೦ ವರುಷಗಳಲ್ಲಿ ಎಷ್ಟು ಮಹದಂತರ! ಆಗಿನ ಕಾಂಗ್ರೆಸ್ಸಿನಲ್ಲಿ ಆಂಗ್ಲಭಾಷೆ ವಿನಃ ಬೇರೆ ಭಾಷೆಯಿಲ್ಲ. ಈಗ ಹಿಂದಿ ಮಾತನಾಡದಿದ್ದರೆ ಸಭೆ ಅವನನ್ನು ಆಲಿಸದು, ಮಾತನಾಡಲೂ ಆಸ್ಪದ ಕೊಡದು.

ಆಕ್ರಮಿತ ರಾಷ್ಟ್ರದಲ್ಲಿ ತನ್ನ ಆಳ್ವಿಕೆ ಬಲಪಡಿಸಿ ಶಾಶ್ವತ ನೆಲೆಯೂರುವಂತೆ ಮಾಡಲು ತನ್ನ ಭಾಷೆ ಆ ರಾಷ್ಟ್ರದ ಮೇಲೆ ಹೊರಿಸುವುದು ಅನೂಚಾನ ಸಾಮ್ರಾಜ್ಯ ನೀತಿ. ನಾರ್ಮನ್ನರ ಇಂಗ್ಲೆಂಡಿನ ಆಕ್ರಮಣದಿಂದ ಇಂಗ್ಲೆಂಡಿನ ರಾಜಭಾಷೆ, ಫ್ರೆಂಚ್ ಆಯಿತು. ರಾಜಾಸ್ಥಾನದಲ್ಲಿ ಅನ್ಯ ಭಾಷೆ ಬಳಸುವುದು ಅಪಮಾನವೆಂದು ಭಾವಿಸುತ್ತಿದ್ದರು. ಭಾರತೀಯರ ಸಂಸ್ಕೃತಿ ಹಾಳುಮಾಡಿ ನಮ್ಮ ವಿದ್ಯಾವಂತರನ್ನು ಕಾರಕೂನರಾಗಿ ಮಾಡಿರುವ ಇಂಗ್ಲಿಷ್ ಭಾಷೆಯೊಂದಿಗೆ ಪರಸಂಸ್ಕೃತಿಯೂ ಪೌರ್ವಾತ್ಯ ಸಂಸ್ಕೃತಿಯ ಸ್ಥಾನ ಆಕ್ರಮಿಸಿದೆ. ಆದುದರಿಂದ ಅಧೀನ ದೇಶ ಸ್ವತಂತ್ರವಾಗಲು ಪರಭಾಷಾ ಮೋಹಬಿಡಬೇಕು. ೧೦-೧೨ ವರುಷಗಳ ವ್ಯಾಸಂಗ ಮಾಡಿದರೂ ಇಂಗ್ಲಿಷ್ ಬಾರದು. ದೇಶಭಾಷಾ ವಿದ್ಯಾ ಶಿಕ್ಷಣದಲ್ಲಿ ಹೆಚ್ಚು ಫಲವಿದೆ. ವಿದ್ಯಾರ್ಥಿಯ ಗ್ರಹಣ ಶಕ್ತಿ ಬೆಳೆಯುತ್ತದೆ. ೧೦ ವರುಷಗಳಲ್ಲಿ ಅಭ್ಯಸಿಸುವ ಪಾಠಪ್ರವಚನಗಳನ್ನು ದೇಶೀಭಾಷೆಯಲ್ಲಿ ೮ ವರುಷಗಳಲ್ಲಿ ಮುಕ್ತಾಯಗೊಳಿಸಬಹುದು.

ದೇಶದ ಐಕ್ಯತೆಗೆ ಏಕ ಭಾಷೆ, ಏಕ ಲಿಪಿ ಅವಶ್ಯಕವೆಂದು ಮನಗಾಣುತ್ತಲೇ ಗಾಂಧಿಯ ನೇತೃತ್ವದಲ್ಲಿ ಕಾಂಗ್ರೆಸ್ ಮತ್ತು ಇತರ ಪ್ರತ್ಯೇಕ ಸಂಸ್ಥೆಗಳು ಭಾಷಾಪ್ರಚಾರ ಕೈಗೊಂಡವು. ಹಿಂದುಸ್ಥಾನದಲ್ಲಿ ಬಹುಸಂಖ್ಯಾತರಿಗೆ ತಿಳಿದ ಭಾಷೆ ಹಿಂದಿ. ದೇವನಾಗರಿ ಅನೇಕ ಭಾಷೆಗಳ ಮೂಲ ಲಿಪಿ. ಅಕ್ಷರ ಜ್ಞಾನವುಳ್ಳವರು ಭಾಷೆ ಕಲಿಯುವುದು ಸುಲಭ. ಭಾಷಾ ಜ್ಞಾನವುಳ್ಳವರು ಅಕ್ಷರಾಭ್ಯಾಸದಿಂದ ಹೆಚ್ಚು ಪರಿಜ್ಞಾನ ಪಡೆಯಬಹುದು. ಉರ್ದು ಬಲ್ಲವರಿಗೆ ಹಿಂದಿ ಸರಳ. ಹಿಂದಿ ಉರ್ದು ಭಾಷೆಗಳ ಸಮ್ಮಿಶ್ರಣದಿಂದ ಉಪಲಬ್ಧವಾಗಿರುವ ಹಿಂದುಸ್ಥಾನಿಯನ್ನು ಉರ್ದು ಅಥವ ದೇವನಾಗರಿಯಲ್ಲಿ ಬರೆಯಬಹುದು. ನಾನಾ ಜಾತಿ ವಿಜಾತಿ

ನುಡಿಗಳಿಂದ ಕಲಿತ ಭಾರತ ಸೈನ್ಯಶಾಖೆಯು ಪ್ರಚಲಿತ ಭಾಷೆ ಹಿಂದುಸ್ಥಾನಿ. ಉತ್ತರಭಾರತದಲ್ಲಿ ವ್ಯವಹಾರಿಕ ಭಾಷೆ ಹಿಂದಿ ಮತ್ತು ಹಿಂದುಸ್ಥಾನಿ. ದಕ್ಷಿಣದಲ್ಲಿಯೂ ಈ ಭಾಷೆ ರೂಢಿಗೆ ಬಂದರೆ ಇಡೀ ಹಿಂದುಸ್ಥಾನವನ್ನು ಏಕಭಾಷೆಯಿಂದ ಒಂದುಗೂಡಿಸುವುದು ಸುಲಭ.

ರಾಷ್ಟ್ರಭಾಷೆ, ರಾಷ್ಟ್ರೀಯಭಾವನೆ ಬೆಳಸಲು ಸಹಕಾರಿ. ಆ ರಾಷ್ಟ್ರಭಾವನೆ ಬೆಳೆದಂತೆ ನಿರ್ಜೀವವಾಗಿದ್ದ ಅನೇಕ ದೇಶೀಯ ಕಲೆಗಳು ಜೀವಧಾರಣೆ ಮಾಡಿ ಚೇತರಿಸಿಕೊಂಡವು. ಹಿಂದಿನ ಮುನ್ನಡೆ ಪ್ರಯತ್ನದಲ್ಲಿ ಪ್ರಾಂತೀಯ ಭಾಷೆಗಳೂ ಹೆಚ್ಚು ಪ್ರಾಶಸ್ತ್ಯ ಪಡೆದು ಪ್ರಕಾಶಗೊಂಡಿವೆ. ದೇಶಭಾಷೆಯ ಪ್ರಗತಿಯಿಂದ ವಿದ್ಯಾವಂತರಿಗೂ—ಅವಿದ್ಯಾವಂತರಿಗೂ, ಸುಶಿಕ್ಷಿತರಿಗೂ —ಅಶಿಕ್ಷಿತರಿಗೂ ಇದ್ದ ಅಂತರ ದೂರವಾಯಿತು. ಸಾಹಿತ್ಯ ಬೆಳೆದು ಜನಜಾಗೃತಿಯಾಗಿ ಮನೋಕ್ರಾಂತಿ ಬೆಳೆಯತೊಡಗಿತು.

ದೇಶಪ್ರೇಮ ಬೆಳೆಸಲು ದೇಶಭಾಷೆ ಎಷ್ಟು ಸಹಾಯವಾಗುತ್ತದೆ ಎಂದರಿತೇ ಡಿ'ವೇಲರ ಐರ್ಲೆಂಡಿನ ಶಾಸನ ಸಭೆಯ ನಡವಳಿಕೆ ದೇಶಭಾಷೆಯಲ್ಲಿಯೇ ನಡೆಯಬೇಕೆಂದು ತೀರ್ಮಾನಿಸಿದ. ಐರ್ಲೆಂಡಿನಲ್ಲಿಯೂ ಕೆಲ್ಟಿಕ್ ಭಾಷೆ ವ್ಯವಹಾರದಲ್ಲಿ ವಿಶೇಷವಾಗಿರಲಿಲ್ಲ. ಹೊರಗಂತೂ ಇದರ ಗಂಧವೇ ಇಲ್ಲ. ಆದರೂ ದೇಶಭಕ್ತಿ ಪ್ರೇರಿತನಾದ ಡಿವೇಲರ ವಿಶೇಷ ಶ್ರಮದಿಂದ ಭಾಷಾಪ್ರಚಾರ ನಡೆಸಿದ. ಮುಂದುವರಿದ ಜಪಾನಿನಲ್ಲಿ ಅನ್ಯಭಾಷೆ ಬಲ್ಲವರ ಸಂಖ್ಯೆ ಅತಿ ವಿರಳ. ಇದರಿಂದ ಜಪಾನಿನ ಪ್ರಗತಿಗೆ ಯಾವ ಅಡಚಣೆಯೂ ಆಗಿಲ್ಲ. ರಷ್ಯದಲ್ಲಿ ಸೋವಿಯಟ್ ಸರ್ಕಾರ ಅಧಿಕಾರ ಕೈಗೊಂಡ ಮೇಲೆ ದೇಶ ಭಾಷೆಗಳ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹ ಸಿಕ್ಕಿದೆ. ಒಂದು ಭಾಷೆ, ಒಂದು ಲಿಪಿ, ಒಮ್ಮನಸ್ಸು ಬೆಳವಣಿಗೆಗೆ, ರಾಷ್ಟ್ರಸ್ವಾತಂತ್ರ್ಯಕ್ಕೆ ಅತ್ಯಾವಶ್ಯಕ.

The only effective way of altering society is the hard and slow one of changing individuals...... The truth of our civilization is that in our anxiety to pursue the things of time, we are neglecting the things that are not of time, the enduring and the eternal. ...Sir Radhakrishnan

The school clothes men's minds with covering of ready made standard opinions, as the tailor clothes their bodies with ready made standard suits. ...C. E. M. Joad

೧೧. ರಾಷ್ಟ್ರೀಯ ಶಿಕ್ಷಣ.

ವಿದ್ಯೆ ಎಂದರೇನು ? ವಿದ್ಯಾಭ್ಯಾಸದ ಗುರಿ ಏನು ?

ಇವುಗಳಿಗೆ ಅನೇಕರು ಹಲವು ವಿಧ ವ್ಯಾಖ್ಯಾನ ಮಾಡುತ್ತಾರೆ. ಮಾನವನ ಸುಷುಪ್ತ ಜ್ಞಾನ ಜಾಗೃತಿಗೊಂಡು, ಬೆಳೆದ ಬೆಳಗಲು ಸಹಾಯ ಮಾಡುವುದೇ ವಿದ್ಯೆಯ ಮುಖ್ಯ ಗುರಿ. ಬಾಹ್ಯ ವಿಚಾರಗಳನ್ನು ಮೆದುಳಿಗೆ ತುರುಕುವುದು ಶಿಕ್ಷಣದ ಉದ್ದೇಶವಲ್ಲ. ಮೆದುಳಿನಲ್ಲಿ ಹುದುಗಿರುವ ಜ್ಞಾನ ಹೊರಬೀಳುವಂತೆ ಮಾಡುವುದೇ ಅದರ ಉದ್ದೇಶ. ಅಕ್ಷರಪ್ರಚಾರ ಅವಶ್ಯವೆನಿಸಿದರೂ, ಅಕ್ಷರಜ್ಞಾನವೇ ವಿದ್ಯೆಯಲ್ಲ. ಆದುದರಿಂದಲೇ ಅಕ್ಷರಜ್ಞಾನವಿಲ್ಲದ ಜ್ಞಾನಿಯನ್ನೂ, ಅಕ್ಷರಜ್ಞಾನವಿದ್ದರೂ ವಿವೇಕವಿಲ್ಲದ ವ್ಯಕ್ತಿಯನ್ನೂ ಕಾಣುತ್ತೇವೆ. ಅಕ್ಷರಜ್ಞಾನ ಜ್ಞಾನಾರ್ಜನೆಗೆ ಸಹಕಾರಿ. ಓದುಬರಹ ಕಲಿತಮಾತ್ರಕ್ಕೇ ಅಜ್ಞಾನಿ ಜ್ಞಾನಿಯಾಗನು. ಗ್ರಾಮಸ್ಥನು ಹಲವು ಸಂದರ್ಭಗಳಲ್ಲಿ ವಿಶ್ವವಿದ್ಯಾಲಯದ ಪದವೀಧರರಿಗೆ ತಿಳುವಳಿಕೆ ಕೊಡಬಲ್ಲ. ಅವಲೋಕನ, ಅನುಭವ, ಗ್ರಾಹ್ಯಶಕ್ತಿ, ವಿಚಾರಶಕ್ತಿ ಇವುಗಳಲ್ಲಿ ಅಡಕವಾಗಿದೆ ಜ್ಞಾನ. ಸಂಸ್ಕಾರ ಬೇಕು. ಆನುವಂಶಿಕನಾಗಿ ನಡೆದುಬಂದ ಈ ಸಂಸ್ಕಾರವೇ ಗೀತೆಯ ಗುಣಕರ್ಮ ವಿಭಾಗದ ಆರ್ಥಿಕ ಆಧಾರ. ಆಧುನಿಕ

ಶಿಕ್ಷಣಕ್ರಮ ಪುಸ್ತಕಜ್ಞಾನಕ್ಕೆ ಅನವಶ್ಯಕ ಅತಿಶಯ ಮಹತ್ವ ಕೊಡುತ್ತದೆ. ಒಂದು ದೃಷ್ಟಿಯಲ್ಲಿ, ಪುಸ್ತಕ ಪರಿಜ್ಞಾನ ವ್ಯಕ್ತಿಯ ವಿಚಾರ ಶಕ್ತಿ ಮತ್ತು ಸ್ವಜ್ಞಾನ ಕುಗ್ಗಿಸುತ್ತದೆ. ಪುಸ್ತಕದಲ್ಲಿ ಅಡಕವಾಗಿರುವುದು ಪರಾನುಭವ, ಸ್ವಾನುಭವವಲ್ಲ. 'ನಹಿ ಜ್ಞಾನೇನ ಸದೃಶಂ' ಎಂದು ಗೀತೆ ಮೊಳಗುವ ಜ್ಞಾನಾರ್ಜನೆಯೇ ಗಾಂಧೀವಾದದ ಗುರಿ.

ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರವನ್ನು ಆಕ್ರಮಿಸಿದ ತಡು ವಾಯ ಅದನ್ನು ತನ್ನ ಅಡಿಯಾಳಾಗಿ ಮಾಡಿಕೊಳ್ಳುವ ಯೋಜನೆಗಳಲ್ಲಿ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುತ್ತದೆ. ಕ್ರಾಂತಿಯ ಮುಂದಾಳುಗಳು, ಪರಿಣಾಮ ಲೆಕ್ಕಿಸದೆ ಮುನ್ನುಗ್ಗುವರು, ಬಿಸಿ ರಕ್ತದ ತರುಣರು. ಬೆಳೆಯುವ ತರುಣರ ಮೇಲೆ ಆಗುವ ಪ್ರಭಾವ ವಿಶೇಷ ಪರಿಣಾಮಕಾರಿಯಾದುದು. ತರುಣರ ಮನಕಲಕುವಷ್ಟು ಸುಲಭವಾಗಿ ವಯೋವೃದ್ಧರ ಮನ ಆಗದು. ವಯಸ್ಕರು ಹೊಸ ವಿಚಾರಗಳನ್ನು ತೂಗಿ ತುಲನೆ ಮಾಡದೆ ಗ್ರಹಿಸರು, ಅಂಗೀಕರಿಸರು. ಅಲ್ಲದೆ ಇಂದಿನ ತರುಣರೇ ಮುಂದಿನ ಜನಾಂಗವಲ್ಲವೇ ? ಆದುದರಿಂದ ತಾರುಣ್ಯದಲ್ಲಿಯೇ ತನ್ನ ಕಡೆಗೆ ಒಲಿಸಿಕೊಳ್ಳಲು ಮೊದಲಿನಿಂದಲೂ ಪ್ರಯತ್ನ. 'ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗದು' ಎಂಬುದು ಹಳೆಯ ನಾಣ್ಣುಡಿ.

ವ್ಯಕ್ತಿಯನ್ನು ಸಮಾಜಕ್ಕೆ ಸರಿಹೊಂದಿಸುವುದು ಶಿಕ್ಷಣದ ಒಂದು ಗುರಿ. ಈ ಗುರುತರ ಹೊಣೆ ಪರರಿಗೆ ಸರ್ಕಾರ ಬಿಟ್ಟುಕೊಡದು. ಶಿಕ್ಷಣಕ್ರಮ, ಪಠ್ಯ ಪುಸ್ತಕ ಇವು ಆಯಾ ಸರ್ಕಾರಗಳಿಗೆ ಅನುಸರಿಸಿ ಮಾರ್ಪಡುತ್ತವೆ. ನಿರಂಕುಶಾಧಿಕಾರದ ಝಾರ್-ಸರ್ಕಾರ ನಾಶವಾಗಿ ಸೋವಿಯಟ್ ಅಧಿಕಾರಕ್ಕೆ ಬರುತ್ತಲೇ ಸಮಾಜ-ಸಮತಾವಾದ ತತ್ವಗಳಿಗೆ ವಿಶೇಷ ಪ್ರೋತ್ಸಾಹ ದೊರೆತಿತ್ತು. ಈ ತತ್ವ ವಿರೋಧಿಸುವ ಗ್ರಂಥಗಳಿಗೆ ಸರಕಾರ ಅವಕಾಶವೇ ಕೊಡದು. 'ದೇವನಿಲ್ಲ' ಎಂಬ ನಾಸ್ತಿಕವಾದ-ಉಪಾಸಕ ಸೋವಿಯಟ್-ಸರಕಾರದಲ್ಲಿ ಧರ್ಮ ಶಿಕ್ಷಣಕ್ಕೆ ಆಸ್ಪದವಿಲ್ಲ. ಹಿಟ್ಲರ್ ಏಕನಾಯಕ ಸರ್ಕಾರ—"ನಾನೇ ಛಾಜ್ಯ, ನಾನೇ ಪ್ರಜೆ, ನನಗಿಂತ ಶ್ರೇಷ್ಠ ಈ ಜಗತ್ತಿನಲ್ಲೇ ಇಲ್ಲ. ನನ್ನದು ದೇವ ಹಸ್ತ ಎಂಬ ಹಸೀ ಸುಳ್ಳು ಭೂತಗಣಗಳಲ್ಲಿ ಅತಿ ನಿಷ್ಕರುಣೆಯಾದ ರಾಜ್ಯ ಹುಂಕರಿಸುತ್ತದೆ" ಎಂಬ ನೀಚೆಯ ತತ್ವ

ಅನುಸರಿಸಿ ಹಿಟ್ಲರೇ ದೇವದೂತ ಎನ್ನುತ್ತದೆ. "ದೇವ ಒಬ್ಬನೇ, ಹಿಟ್ಲರ್ ಒಬ್ಬೊಂಟಿಗ; ದೇವನಿಗೆ ಸಮಾನರಿಲ್ಲ; ಆದ್ದರಿಂದ ಹಿಟ್ಲರಿಗೂ ಸಮರಿಲ್ಲ!" ಎಂಬ ತರ್ಕ ಜರ್ಮನಿಯ ಪಠ್ಯ ಪುಸ್ತಕಗಳಲ್ಲಿ ಕಾಣಬಹುದು. "ಆರ್ಯರು ದೇವಪುತ್ರರು; ಜರ್ಮನರು ಆರ್ಯರು; ಆದಕಾರಣ ಜರ್ಮನರು ದೇವಾಂಶ ಸಂಭೂತರು" ಎಂದು ಮತ್ತೊಂದು ಸಿದ್ಧಾಂತ. "ಮಾನವನ ಅಂತರ್ಗತ ಶಕ್ತಿ ಸಾಮರ್ಥ್ಯಗಳು ಹೊರ ಬೀಳಲು ಯುದ್ಧ ಆವಶ್ಯಕ. ಸಬಲನು ನಿರ್ಬಲನ ಮೇಲೆ ಅಧಿಕಾರ ಮಾಡಬೇಕಾದುದು ನಿಸರ್ಗ ನಿಯಮ" ಎಂಬ ಮುಸೋಲಿನಿಯ ತತ್ವಗಳು ಬಾಲಕರ ಗ್ರಂಥದಲ್ಲಿ ತುಂಬಿರುತ್ತವೆ. ಯುದ್ಧ ಪಿಪಾಸೆ ಬೆಳೆಸುವುದೇ ಈ ಏಕಾಧಿಕಾರಿಗಳ ಉದ್ದೇಶ. ತಮಗೆ ಸರಿಹೋಗುವಂತೆ ಹಿಂದುಸ್ಥಾನದ ಇತಿಹಾಸವನ್ನು ಆಂಗ್ಲೇಯರು ಬರೆಸಿದ್ದಾರೆ. ಕ್ಲೈವನ ಸಾಹಸ, ಛತ್ರಪತಿ ಶಿವಾಜಿಯ ಮೋಸ, ಔರಂಗಜೇಬನ ಅನ್ಯಮತದ್ವೇಷ; ಬ್ರಿಟಿಷರು ಭಾರತಕ್ಕೆ ಸಲ್ಲಿಸಿರುವ ಮಹದುಪಕಾರ ಇವು ಚರಿತ್ರೆಯಲ್ಲಿ ವರ್ಣಿತ. ಬ್ರಿಟಿಷರ ಗೌರವಕ್ಕೆ ಕುಂದು ತರುವ ನಿದರ್ಶನ ಅದರಲ್ಲಿ ದೊರೆಯವು. ಹಿಂದೂದೇಶದ ಚರಿತ್ರೆಯಲ್ಲಿ ಎದ್ದು ಕಾಣುವುದು ಸಂತತಿ ಯುದ್ಧ, ಹಿಂದುಗಳ ನಿರ್ಬಲತೆ. 'ಕಲ್ಕತ್ತೆಯ ಕತ್ತಲೆ ಕೋಣೆ ನಿದರ್ಶನವೊಂದು ಸಾಕು ಆಂಗ್ಲೇಯ ಲಿಖಿತ ಹಿಂದೂದೇಶದ ಚರಿತ್ರೆಯ ಆಂತರ್ಯ ಅರಿಯಲು'.

ರಾಷ್ಟ್ರದ ನಿತ್ಯ ಜೀವನವಲ್ಲ ಯುದ್ಧ—ಅದೊಂದು ಉಲ್ಕಾಪಾತ. ಅಗ್ನಿಪರ್ವತ ಉಕ್ಕುವಂತೆ ರಾಷ್ಟ್ರದ ಶಾಂತಜೀವನದಲ್ಲಿ ಒಮ್ಮೊಮ್ಮೆ ಯುದ್ಧ ಏಳುತ್ತದೆ. ಆದರೆ ಭಾರತ ಇತಿಹಾಸ ನೋಡಿದರೆ ಅದು ಶಾಂತತೆ ಅನುಭವಿಸಿದಂತೆ ತೋರದು. ಭಾರತೀಯರು ಗುಲಾಮರಾಗಿರುವುದಕ್ಕೇ ಯೋಗ್ಯರು. ಬ್ರಿಟಿಷರು ಭಾರತ ಬಿಟ್ಟರೆ ಅನಾಹುತವಾದೀತು ಎಂಬ ಸರಣಿ ಅಗೋಚರವಾಗಿ ಹರಿಯುತ್ತದೆ. ಭಾರತದಲ್ಲಿ ಗುಲಾಂಗಿರಿ ಶಾಶ್ವತ ನೆಲೆಸಿರುವುದರಲ್ಲಿ ಆಶ್ಚರ್ಯವೇನು?

ನೂರೈವತ್ತು ವರುಷಗಳ ಬ್ರಿಟಿಷ್ ಆಡಳಿತ ನೂರಕ್ಕೆ ಹತ್ತು ಜನರನ್ನು ಅಕ್ಷರಸ್ಥರಾಗಿ ಮಾಡಿಲ್ಲ. ಇದು ಪರ—ಸರ್ಕಾರದ ವಿದ್ಯಾಪ್ರಸಾರ ಆಸಕ್ತಿಯ ವೈಖರಿಯ ನಿದರ್ಶನ. ಸ್ವಾಧೀನ ರಾಷ್ಟ್ರ ಅಜ್ಞಾನ-ಅಂಧ

ಕಾರದಲ್ಲಿ ಮುಳುಗಿರುವುದೇ ಸರ್ಕಾರಕ್ಕೆ ಕ್ಷೇಮ. ಸೋವಿಯಟ್ ಅಧಿಕಾರಕ್ಕೆ ಬರುವ ಮೊದಲು ರಷ್ಯದಲ್ಲಿ ಅಕ್ಷರಸ್ಥರ ಸಂಖ್ಯೆ ಸರಾಸರಿ ೧೨; ಆದರೆ ಇದೇ ಸಂಖ್ಯೆ ೧೦ ವರುಷಗಳಲ್ಲಿ ೯೦ ಆಯಿತು. ಜಪಾನ್‌ದೇಶದಲ್ಲಿ ನೂರಕ್ಕೆ ಇಬ್ಬರು ಮಾತ್ರ ಅನಕ್ಷರಸ್ಥರು.

ವರ್ಧಾಶಿಕ್ಷಣಕ್ರಮ ಗಾಂಧೀ ವಾದಕ್ಕೆ ಹೊಂದಿಕೆಯಾದುದು. ಹೆಚ್ಚು ವ್ಯಯವಿಲ್ಲದೆ ೭೦ ಲಕ್ಷ ಗ್ರಾಮಗಳಲ್ಲಿ ವಿದ್ಯಾಭ್ಯಾಸ ಹರಡಲು ಯೋಗ್ಯ ಶಿಕ್ಷಣ ಕ್ರಮ. ವ್ಯಾಸಂಗ ಮಾಡುತ್ತ ವಿದ್ಯಾರ್ಥಿ ಶಾಲೆಯ ವೆಚ್ಚಕ್ಕಾಗಿ ಧನವನ್ನೂ ಸ್ವಲ್ಪ ಆರ್ಜಿಸುತ್ತಾನೆ. ಅವನೂ ಸ್ವಾವಲಂಬಿಯಾಗುತ್ತಾನೆ; ಸರಕಾರಕ್ಕೂ ವೆಚ್ಚ ಕಡಮೆ. ಪ್ರತಿದಿನ ಬಳಸುವ ಯಾವದಾದರೂ ಪದಾರ್ಥ — ಉದಾಹರಣೆಗಾಗಿ ಸಕ್ಕರೆ, ಬಟ್ಟೆ, ಅವು ದೊರೆಯುವ ದೇಶ, ಬೆಳವಣಿಗೆ, ಯಂತ್ರ ಪರಿವರ್ತನೆ ಹೀಗೆ ಆಮೂಲಾಗ್ರ ವಿಷಯ ತಿಳಿಸಿ ಪಾಠ ಕಲಿಸುತ್ತಾರೆ. ತಾನು ನೋಡುವ, ಬಳಸುವ ವಸ್ತುಗಳ ವಿಷಯ ತಿಳಿಯಬೇಕೆಂಬ ಕುತೂಹಲ ವಿದ್ಯಾರ್ಥಿಯಲ್ಲಿ ಬೆಳೆಯುತ್ತದೆ. ಈ ರೀತಿ ಕುತೂಹಲ ಬೆಳೆಯಿಸಿ ಯೋಗ್ಯ ಸಮಾಧಾನ ಕೊಡುವುದೇ ನಿಜ ವಿದ್ಯಾಭ್ಯಾಸ. ಇದೇ ವರ್ಧಾಶಿಕ್ಷಣದ ಸೋಪಾನ. 'ಲೋಜಿಕ್' ಅಥವ 'ಪ್ರೊಜೆಕ್ಟ್' ಪದ್ಧತಿಯೇ ಆಧಾರ. ಈ ಶಿಕ್ಷಣದಲಿ ವ್ಯಕ್ತಿ ಬೆಳವಣಿಗೆಗೆ ಹೆಚ್ಚು ಆಸ್ಪದವಿದೆ. "ಪಾಶ್ಚಿಮಾತ್ಯ ಶಿಕ್ಷಣವು ಒಂದೇ ಶಿಕ್ಷಣಕ್ರಮ ಪಾರಂಗತರಾದ ಸಾವಿರ ಶಿಕ್ಷಕರು ಒಂದೇ ಪಡಿಯಚ್ಚಿನ ಲಕ್ಷ ವಿದ್ಯಾರ್ಥಿಗಳನ್ನು ಸೈನಿಕರಂತೆ ಅಣಿಮಾಡುತ್ತದೆ. ಸಿದ್ಧವಾದ 'ಸಿದ್ಧ' ಉಡುಪಿನಂತೆ ಈಗಿನ ಶಿಕ್ಷಣ ಪದ್ಧತಿಯು 'ಸಿದ್ಧ' ಅಭಿಪ್ರಾಯ" ಎಂದು ಜೋಡ್ ಹೀಯಾಳಿಸುತ್ತಾನೆ. ಪಾಶ್ಚಿಮಾತ್ಯ ಪದ್ಧತಿಯನ್ನು ಸಿ. ರಾಜಗೋಪಾಲಾಚಾರ್ಯರು ವಿದ್ಯಾರ್ಥಿಗಳನ್ನು ತುರಂಗದ ಬಂದಿಗಳಿಗೆ ಹೋಲಿಸುತ್ತಾರೆ. ೧೦ ವರುಷಗಳ ಶಿಕ್ಷಣ ೭ ವರುಷಗಳಲ್ಲಿ ವರ್ಧಾ ಪದ್ಧತಿ ಪೂರೈಸುತ್ತದೆ. ಶಿಕ್ಷಣ ಸರ್ವತೋಮುಖ, ವಿದ್ಯಾಭ್ಯಾಸ ಸರ್ವಾಂಗ ಸುಂದರ ಮತ್ತು ಪರಿಪೂರ್ಣ—ಹೀಗೆಂದು ಜಾಕೀರ್ ಹುಸೇನರ ಅಧ್ಯಕ್ಷತೆಯಲ್ಲಿ ಸಿದ್ಧವಾದ ವರ್ಧಾ ಶಿಕ್ಷಣಕ್ರಮ ವಿದ್ಯಾಪಾರಂಗತರ ಮನ್ನಣೆ ಪಡೆದಿದೆ.

ಪೂರ್ವಕಾಲದ ಗುರುಕುಲ ಭಾರತೀಯ ಶಿಕ್ಷಣಕ್ರಮದ ಒಂದು ವೈಶಿಷ್ಟ್ಯ. ಋಷ್ಯಾಶ್ರಮ, ಗುರುಕುಲಗಳಲ್ಲಿ ಗುರುಸೇವೆ ಮಾಡಿಕೊಂಡು ಅವರ ನಿತ್ಯಜೀವನದಿಂದ ವ್ಯವಹಾರ ಪರಿಜ್ಞಾನ ಪಡೆಯುತ್ತಿದ್ದರು. ವ್ಯಕ್ತಿ ಬೆಳವಣಿಗೆಗೆ ವಿಶೇಷ ಗಮನ ಕೊಡಲು ಇದರಿಂದ ಸಾಧ್ಯವಾಗಿತ್ತು. ಈ ಸನಾತನ ಪದ್ಧತಿಯಲ್ಲಿ ಗಾಂಧಿಗೆ ಶ್ರದ್ಧೆ ಹೆಚ್ಚು. ಟಾಲ್‌ಸ್ಟಾಯ್ ಫಾರಂ, ಸಬರ್ಮತಿ, ಸತ್ಯಾಗ್ರಹ, ವರ್ಧಾ ಆಶ್ರಮ, ಸೇವಾಗ್ರಾಮ ಇದಕ್ಕೆ ನಿದರ್ಶನ. ತನ್ನ ತತ್ವಗಳನ್ನು ತಾನೇ ಒರೆಹಚ್ಚಿ ಅನುಷ್ಠಾನಕ್ಕೆ ತರಲು ಮತ್ತು ಸೇವಾದೀಕ್ಷೆ ಕೊಡಲು ಪ್ರಯೋಗಶಾಲೆಗಳು. ಇದರಲ್ಲಿ ಪವಿತ್ರಮ ಪಡೆದವರು ಗಾಂಧೀ ಸೇವಾ ಸಂಘದ ಸದಸ್ಯರಾಗುವ ಪಾತ್ರತೆ ಪಡೆಯುತ್ತಾರೆ. ಅಖಿಲ ಭಾರತದಲ್ಲಿ ಈ ಸದಸ್ಯರ ಸಂಖ್ಯೆ ಕೇವಲ ೧೫೭. ಅಂದರೆ ವ್ಯಕ್ತಿಶಿಕ್ಷಣಕ್ಕೆ ಎಷ್ಟು ಮಹತ್ವ ಕೊಡುತ್ತದೆ ಗಾಂಧೀವಾದ ಎಂಬುದನ್ನು ಇದರಿಂದ ತಿಳಿಯಬಹುದು. ಇದರಲ್ಲಿ ಕೇವಲ ೨೭ ಸದಸ್ಯರು ೭ ರಿಂದ ೭೫ ರೂಪಾಯಿಗಳ ವರೆಗೆ ಸಂಭಾವನೆ ಪಡೆಯುತ್ತಿದ್ದರು. ಸತ್ಯ ಅಹಿಂಸಾ ದೀಕ್ಷೆ ವಹಿಸಿ ಗಾಂಧೀ ತತ್ವ ಪ್ರಚಾರ ನಡೆಸುವುದೇ ಈ ಸಂಸ್ಥೆಯ ಸದಸ್ಯ ಜೀವಿಗಳ ಆದರ್ಶ.

'ಸಾ ವಿದ್ಯಾಯಾ ವಿಮುಕ್ತಯೇ' ಎಂದರೆ ಮುಕ್ತಿಗೆ ಸಾಧಕವಾದುದೇ ಯೋಗ್ಯ ವಿದ್ಯೆ. ಇದೇ ಗಾಂಧೀವಾದ ಶಿಕ್ಷಣ ಕ್ರಮದ ಸೂತ್ರ. ಸಾವಿರಾರು ರೂಪಾಯಿಗಳನ್ನು ಗಳಿಸಿ, ಭೋಗ ಜೀವನ ನಡೆಸುವುದು ವರ್ಧಾಶಿಕ್ಷಣದ ಗುರಿಯಲ್ಲ. ತಾನು ದಾರಿದ್ರ್ಯ ಸ್ವೀಕರಿಸಿ, ತನ್ನ ಒಡೆಯರಾದ ಗ್ರಾಮವಾಸಿಗಳ ಸ್ಥಿತಿಗತಿ ಉತ್ತಮಗೊಳಿಸುವುದೇ ಈ ಶಿಕ್ಷಣ ಪಡೆಯುವ ಗುರಿ. ನಿಷ್ಕಾಮಕರ್ಮ ಮಾರ್ಗದಿಂದ ಮೋಕ್ಷ ಗಳಿಸುವುದೇ ಗಾಂಧೀವಾದದ ಅಂತಿಮ ಧ್ಯೇಯ. ಇಂಗ್ಲಿಷ್ ಶಿಕ್ಷಣಕ್ರಮ ಸಾಮ್ರಾಜ್ಯವಾದಕ್ಕೆ ಸೋಪಾನ. ಅಂತೆಯೇ ವಿಶ್ವಕುಟುಂಬಿ ಗಾಂಧೀವಾದಕ್ಕೆ ವರ್ಧಾ ಶಿಕ್ಷಣಕ್ರಮ ಅಡಿಗಲ್ಲು.

Religion is the greatest Godsend to the Br· Empire, and the English may well thank the Gods for it. The fact is that if the Moslems did not exist, the English would have to invent them.

...Lin Yu Tang

We do not want under any circumstances a constitution of an All India character with one Government at the centre. We will never agree to that. If you once agree to it, let me tell you that the Muslims would be absolutely wiped out of existence. ...Jinnah, 1940

I believe in the fundamental truth of all great religions of the world. ...Gandhi

೧೨. ಸರ್ವಧರ್ಮ ಸಹಿಷ್ಣುತೆ

ಒಂದು ದೇಶ ಸ್ವಾತಂತ್ರ್ಯ ಗಳಿಸಲು, ಗಳಿಸಿದ್ದನ್ನು ಉಳಿಸಿಕೊಳ್ಳಲು ಐಕ್ಯತೆ, ಶಾಂತಿ ಸಮಾಧಾನ ಅವಶ್ಯ. ಅಣುರೇಣುವಿನಲ್ಲಿಯೂ ಪರಮಾತ್ಮ ಅಂಶ ಕಾಣುವ ವಿಶ್ವಕುಟುಂಬಿ ಗಾಂಧಿಗೆ ಹಿಂದು-ಮುಸ್ಲಿಂ, ಕ್ರೈಸ್ತ-ಫಾರಸಿ, ಸ್ಪೃಶ್ಯ-ಅಸ್ಪೃಶ್ಯ ಎಂಬ ಭಿನ್ನತೆಗೆ ಅವಕಾಶವೆಲ್ಲಿ? 'ಯೇ ಯಥಾ ಮಾಂ ಪ್ರಪದ್ಯಂತೆ ತಾಂಸ್ತಥೈವ ಭಜಾಮ್ಯಹಂ' ಎಂಬ ಸರ್ವ ಧರ್ಮ ಸಹಿಷ್ಣುತೆಯೇ ಗಾಂಧೀ ವಾದದ ಸೋಪಾನ. ಹಿಂದೂ—ಮುಸ್ಲಿಮ ಸಖ್ಯ ಮತ್ತು ಅಸ್ಪೃಶ್ಯದ ಐಕ್ಯತೆಗಾಗಿ ಮಹಾತ್ಮನು ಕೈಗೊಂಡ ಉಪವಾಸ ತಪಸ್ಸುಗಳು ಲೋಕವಿದಿತ.

ಹಿಂದು ಮತ್ತು ಮುಸಲ್ಮಾನರ ಆಚಾರ, ವಿಚಾರ ವ್ಯವಹಾರಗಳಲ್ಲಿ ಭಿನ್ನತೆ ವಿಶೇಷ. ನಿರಾಕಾರ ಏಕ ಮಾತ್ರ ಭಗವಂತನನ್ನು ಇಸ್ಲಾಂ ಆರಾಧಿ

ಸುತ್ತದೆ. ಸಾಕಾರ ಸರ್ವತೋನಂತ ರೂಪವನ್ನು ಹಿಂದುಗಳು ಪೂಜಿಸುತ್ತಾರೆ. ಮೂರ್ತಿ ಪೂಜೆ ಇಸ್ಲಾಂ ಧರ್ಮ ತಿರಸ್ಕರಿಸುತ್ತದೆ; ಹಿಂದೂ ಧರ್ಮದಲ್ಲಿ ಮೂರ್ತಿಪೂಜೆಗೆ ವಿಶೇಷ ಸ್ಥಾನ. ವರುಷದ ಒಂದು ದಿನವಾದರೂ ಗೋಹತ್ಯಮಾಡಬೇಕೆಂದು ಹಲವು ಮುಹಮ್ಮದೀಯರು ನಂಬುತ್ತಾರೆ; ಒಂದು ದಿನವೂ ತಪ್ಪದೆ ಗೋಪೂಜೆ ಮಾಡಬೇಕಾಗಿ ಹಿಂದುಗಳ ಭಾವನೆ. ಹೀಗೆ ಪೂರ್ವ ಪಶ್ಚಿಮಗಳಾದ ಹಿಂದು-ಮುಸಲ್ಮಾನರು ವಿವಾಹಿತರಾಗಿ ತಮ್ಮ ಮತ ಧರ್ಮ ಪ್ರತ್ಯೇಕವಾಗಿ ಕಾಪಾಡಿಕೊಂಡು ಬರುವುದು ಅಸಾಧ್ಯ. ಮತಾಚಾರದ ಆಧಾರದ ಮೇಲೆ ಈ ಭಿನ್ನ ಮತೀಯರನ್ನು ಒಂದುಗೂಡಿಸುವುದು ಕಷ್ಟ ಎಂಬ ಅರಿವು, ಖಿಲಾಫತ್ ಚಳುವಳಿಯನ್ನು ವಿನಿಯೋಗಿಸಿಕೊಳ್ಳಲು ಗಾಂಧಿಯನ್ನು ಕಾತುರಮಾಡಿತು. ಈ ಕಾಲದಲ್ಲಿ ಹಿಂದು-ಮುಸಲ್ಮಾನರು ಸಹೋದರರಂತೆ ವರ್ತಿಸುತ್ತಿದ್ದರು. ಹಿಂದು-ಮುಸಲ್ಮಾನ ಜೊತೆಗೂಡಿದಂತೆ ತೋರಿಕೆಯಾಗುತ್ತಿತ್ತು !

ಆದರೆ ಭಾರತದ ಅದೃಷ್ಟ ಹಾಗೆ ಬರೆದಿಲ್ಲ. 'ಪಾಕಿಸ್ತಾನ'* ಚಳುವಳಿ ಬೆಳೆಯುತ್ತಿದೆ; ಇನ್ನೂ ಇಳಿಮುಖವಾಗಿಲ್ಲ. ಹಿಂದು-ಮುಸ್ಲಿಂ

---

* 'ಪಾಕಿಸ್ಥಾನ' ಯೋಜನೆಯ ಮೂಲ ಪುರುಷ ಕವಿವರ್ಯ ಹಜರತ್ ಅಲ್ಲಾಂ ಇಕಬಲ್. ಅಲಿಘರ ಮುಸ್ಲಿಂ ಕಲಾಶಾಲೆಯ ಮುಖ್ಯೋಪಾಧ್ಯಾಯ ಬೆಕ್ ಇದರ ಸೂತ್ರಧಾರಿ. ಈತನೇ ಮುಸ್ಲಿಂ ಲೀಗಿನ ಪ್ರಥಮ ಕಾರ್ಯದರ್ಶಿ. ೧೫ ವರುಷಗಳು ಈತನೇ ಕಾರ್ಯದರ್ಶಿಯಾಗಿದ್ದು ಹಿಂದು-ಮುಸ್ಲಿಂ ಭಿನ್ನತೆಯ ವಿಷಬೀಜ ಬಿತ್ತಿ ಬೆಳೆಸಿದ. ಇವನ ತರುವಾಯ ಇಬ್ಬರು ಆಂಗ್ಲರು ಲೀಗಿನ ಕಾರ್ಯದರ್ಶಿಗಳಾದರು. ಭಾರತದಲ್ಲಿ ಬ್ರಿಟಿಷ್ ಪ್ರಭುತ್ವ ಚಿರಾಯುವಾಗಲು ಸಹಕರಿಸುವುದು ಲೀಗಿನ ಒಂದು ಮುಖ್ಯೋದ್ದೇಶ. ೧೮೮೯ರಲ್ಲಿ ಚಾರ್ಲೆಸ್ ಬ್ರಾಡ್‌ಲಾ ಭಾರತಕ್ಕೆ ಸ್ವಲ್ಪ ಸುಧಾರಣೆ ಕೊಡಿಸಲು ಪಾರ್ಲಿಮೆಂಟ್ ಸಭೆಯಲ್ಲಿ ಪ್ರಯತ್ನಿಸಿದಾಗ ತಾವೇ ಪ್ರತ್ಯೇಕ ಜನಾಂಗವೆಂದು ಮುಸ್ಲಿಮರ ಪ್ರತಿಭಟನೆ ಏರ್ಪಡಿಸಿದವನು ಬೆಕ್. ಜುಮ್ಮಾ ಮಸೀದಿಯ ಬಳಿ ಅಲಿಘರ ಕಲಾಶಾಲೆಯ ವಿದ್ಯಾರ್ಥಿಗಳೊಡನೆ ನಿಂತು, ಗೋವಧೆ ನಿಷೇಧ ಪ್ರತಿಭಟನೆಯ ಮನವಿಗೆ ರುಜು ಮಾಡುವಂತೆ ಅಜ್ಞಾನಿ ಮುಸ್ಲಿಮರಿಂದ ೩೦,೬೩೫ ಸಹಿ ಪಡೆದು, ಸುಧಾರಣೆ ಪ್ರತಿಭಟಿಸಲು ಅದನ್ನೇ ಬೆಕ್ ಉಪಯೋಗಿಸಿದ! ಕೆಲವು ವರುಷಗಳ ತರುವಾಯ ಲೀಗಿನ ಸ್ಥಾಪಕ ಇಕ್‌ಬಲನು— 'ಪಾಕಿಸ್ತಾನ ಯೋಜನೆಯಿಂದ ಹಿಂದು-ಮುಸ್ಲಿಂ ಮತ್ತು ಬ್ರಿಟಿಷರ ಸರ್ವನಾಶ ಖಂಡಿತ' ಎಂದು ಹೇಳುತ್ತಾನೆ. (ಕಮ್ಯುನಲ್ ಟ್ರೈ ಆಂಗಲ್)

ಐಕ್ಯಕ್ಕಾಗಿ ಕಾಂಗ್ರೆಸ್ ಮತ್ತು ಗಾಂಧಿ ಮಾಡಿದ ಪ್ರಯತ್ನಗಳು ವಿಫಲವಾಗಿವೆ. ಹಿಂದು-ಮುಸಲ್ಮಾನರಲ್ಲಿ ಐಕ್ಯ ಆಗಬಾರದು ಎಂಬುದೇ ಮುಸ್ಲಿಂ ಲೀಗ್ ಸಂಸ್ಥೆಯ ಮೂಲ ಪುರುಷರ ಕುಟಿಲೋಪಾಯ.* ಬ್ರಿಟಿಷ್-ಮುಸ್ಲಿಂ-ಹಿಂದು ಈ ತ್ರಿಕೋಣದ ತ್ರಿಭುಜಗಳಲ್ಲಿ ಒಂದು ಬಾಹುವಾದರೂ ಹೋಗುವವರೆಗೆ ಭಾರತ ವಿಮೋಚನೆ ಪಡೆಯದು. ಹಿಂದು ಮತ್ತು ಮುಸ್ಲಿಮರು ಭಾರತದಲ್ಲಿ ಶಾಶ್ವತ ನೆಲೆಸಿದ್ದಾರೆ, ಮತ್ತು ಭಾರತ ತಮ್ಮದೆಂದು ಭಾವಿಸುತ್ತಾರೆ. ಆದರೆ ಆಂಗ್ಲೇಯರು ಮನೆಮಾಡಿ ಭಾರತದಲ್ಲಿ ನಿಲ್ಲುವುದಿಲ್ಲ. ಉದ್ಯೋಗ ಮುಗಿಯುತ್ತಲೇ ಬ್ರಿಟನ್ನಿಗೆ ಹಿಂದಿರುಗುತ್ತಾರೆ. ಆದುದರಿಂದ ಪರಕೀಯರಾದ ಬ್ರಿಟಿಷರು ಭಾರತವನ್ನು ಭಾರತೀಯರಿಗೆ ಬಿಟ್ಟುಕೊಟ್ಟರೆ ಮಾತ್ರ ಈ ಜಾತೀಯ ಕಲಹ ತೊಲಗಿ ಭಾರತ ಬಂಧಮುಕ್ತವಾದೀತು ಎಂದು ಶ್ರೀ ಅಶೋಕ ಮೆಹಥ ಮತ್ತು ಅಚ್ಯುತ ಪಟವರ್ಧನ ಇವರು ತಮ್ಮ 'ಕಮ್ಯುನಲ್ ಟ್ರೈ ಆಂಗಲ್' ಎಂಬ ಶ್ರೇಷ್ಠ ಗ್ರಂಥದಲ್ಲಿ ಆಧಾರ ಸಹಿತ ವಾದಿಸಿದ್ದಾರೆ.

ಇದನ್ನೇ ಗಾಂಧೀ ವಾದ ಸಮರ್ಥಿಸುತ್ತದೆ.

---

* ಬ್ರಿಟಿಷರೇನೋ ಭಾರತ ಬಿಟ್ಟು ತೊಲಗಿದರೂ ಹಿಂದೂ-ಮುಸ್ಲಿಂ ಸಖ್ಯದ ಗಾಂಧಿಯ ಪ್ರಯತ್ನಗಳು ಪ್ರಕೃತ ನಿಷ್ಫಲವಾಗಿ ಕಾಣುತ್ತಿವೆ. ತಾವೇ ಪ್ರತ್ಯೇಕ ಜನಾಂಗವೆಂದು ಸಾಧಿಸುತ್ತ ಮುಸ್ಲಿಮರು ಅಮಾನುಷ ಕೃತ್ಯಗಳಿಂದ ಭಾರತವನ್ನು ಇಬ್ಭಾಗಮಾಡಿ ಪಾಕಿಸ್ತಾನಗಳಿಸಿದ್ದಾರೆ. ಈ ರಾಕ್ಷಸೀ ಕೃತ್ಯಗಳು ಗಾಂಧಿಯ ಅವಿಚ್ಛಿನ್ನಭಕ್ತರಾದ ರಾಷ್ಟ್ರಪತಿ ಕೃಪಾಲಿನಿ ಮೊದಲಾದವರ ಅಹಿಂಸೆಯ ಗಾಢ ನಂಬಿಕೆಯನ್ನು ಅಲುಗಾಡಿಸಿಬಿಟ್ಟಿದೆ. ಗಾಂಧಿ ಮಾತ್ರ ಇನ್ನೂ ಹಿಂದೂ-ಮುಸ್ಲಿಂ ಸಖ್ಯದ ಕನಸು ಕನವರಿಸುತ್ತಲೇ ಇದ್ದಾನೆ. ನವಾಖಲಿ ಮತ್ತು ಬಿಹಾರಿನಲ್ಲಿ ಈ ಸಖ್ಯದ ಪರೀಕ್ಷೆಯಾಗುತ್ತಿದೆ. ಒಡೆದ ಕನ್ನಡಿ, ಎರಡಾದ ಭಾರತ ಒಂದಾಗುವುದೇ ಎಂದು ಭವಿಷ್ಯ ತಿಳಿಯಬೇಕು.

No man, no nation can hate others and live. India's doom was sealed the very day they invented the world 'Mlechcha' and stopped from communion with others.

Our religion is in the kitchen, our God is the cooking pot and our religion is "Don't Touch Me, I am holy". If this goes on for another century, every one of us will be in the Lunatic asylum. Vivekananda

I would far rather that Hinduism died than that untouchability lived. ...Gandhi

೧೩. ವರ್ಣ ಸಾಂಕರ್ಯ

"ಒಡೆದು ಆಳು" ಎಂಬುದು ಸಾಮ್ರಾಜ್ಯವಾದದ ನೀತಿ. ಹಿಂದು-ಮುಸ್ಲಿಂ, ಬ್ರಾಹ್ಮಣ-ಬ್ರಾಹ್ಮಣೇತರ, ಸ್ಪೃಶ್ಯ-ಅಸ್ಪೃಶ್ಯ, ರಾಜಭಕ್ತ-ರಾಜದ್ರೋಹಿ ಎಂಬ ಭಿನ್ನತೆಗಳನ್ನು ಆಳರಸರೇ ಕಲ್ಪಿಸಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುವುದಕ್ಕೆ ಸಾಕಷ್ಟು ಆಧಾರಗಳು ದೊರೆತಿವೆ.* ಭಿನ್ನ ಭಿನ್ನ ಜಾತಿ ಮತಗಳ ಭಾರತದಲ್ಲಿ ಇದು ಸುಲಭ. ಸ್ಥಾನ, ಮಾನ, ಧನ, ಬೆದರಿಕೆ ಮೊದಲಾಗಿ ಅನೇಕ ಉಪಾಯಗಳು ಈ ಕಾರ್ಯದಲ್ಲಿ ಸರಕಾರಕ್ಕೆ ಬಹಳ ಸಹಾಯಕಾರಿಯಾಗುತ್ತವೆ. ಬ್ರಿಟಿಷರು ಈ ತಂತ್ರದಲ್ಲಿ ಹೆಸರೆತ್ತಿದವರು. ಈ ಭಿನ್ನತೆಯೇ ಭಾರತದ ಐಕ್ಯತೆಗೆ, ಸ್ವಾತಂತ್ರ್ಯಕ್ಕೆ ಅಡಚಣೆಯಾಗಿದೆ ಎಂದು ದೇಶ ವಿದೇಶಗಳಲ್ಲಿ ಪ್ರಚಾರ ಮಾಡುತ್ತಾರೆ. ಅಸ್ಪೃಶ್ಯರನ್ನು

---

* "ಮದ್ರಾಸಿನ ಜಸ್ಟಿಸ್ ಪಕ್ಷದ ಸ್ಥಾಪನೆಯಲ್ಲಿ ಸರ್ಕಾರದ ಕೈವಾಡ ನಿರ್ಧರಿಸಲು ಲಾರ್ಡ್ ಸಿಂಹ ಅವರ ಅಧ್ಯಕ್ಷತೆಯಲ್ಲಿ ಗೊತ್ತಾದ ಸಮಿತಿಯ ಮುಂದೆ ಸಾಕ್ಷ್ಯ ಕೊಡುತ್ತ, ಇದರಲ್ಲಿ ಸರ್ಕಾರದ ಯಾವದೇ ಪಾತ್ರ ವಹಿಸಿಲ್ಲನೆಂದು ಆಗಿನ ಮದ್ರಾಸು ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಸರ್ ಅಲೆಕ್ಸಾಂಡರ್ ಕಾರ್ಡ್ಯೂ ನುಡಿದ. ಜಸ್ಟಿಸ್ ಪಾರ್ಟಿ ಸ್ಥಾಪನೆಯ ನಿರ್ಣಯ ಕರಡು ಕಾಗದದಲ್ಲಿ ಸರ್ ಅಲೆಕ್ಸಾಂಡರ್ ಸ್ವಹಸ್ತಾಕ್ಷರವನ್ನೇ ಅಧ್ಯಕ್ಷರು ತೋರಿಸಲು, ಅಷ್ಟಕ್ಕೇ ಸರ್ ಅಲೆಕ್ಸಾಂಡರ್ ಬಾಯಿ ಮುಚ್ಚಬೇಕಾಯಿತು."

(ಕಮ್ಯೂನಲ್ ಟ್ರೈ ಆಂಗಲ್).

ಪ್ರತ್ಯೇಕಿಸಿ ರಾಜಕೀಯ ವಿಧರ್ಮಿಗಳಾಗಿ ಮಾಡಬೇಕೆಂಬ ಬ್ರಿಟಿಷರ ಪ್ರಯತ್ನ ಪ್ರತಿಭಟಿಸಲು ಗಾಂಧಿ ನಿರಶನ ವ್ರತ ಕೈಕೊಂಡು ಪೂನ ಒಪ್ಪಂದ ದಲ್ಲಿ ಫಲಿತವಾದುದು ಸರ್ವ ವಿದಿತ. 'ಹಿಂದೂ ಧರ್ಮ ಅಳಿದರೂ ಅಳಿಯಲಿ, ಅಸ್ಪೃಶ್ಯತೆ ತೊಲಗಲೇಬೇಕು' ಎಂದು ಹಟತೊಟ್ಟು ಗಾಂಧಿ ನಡೆಸಿದ ಚಳವಳಿ ಅದ್ಭುತವಾದುದು. 'ಹರಿಜನ' ಎಂಬ ಸುಂದರ ಹೆಸರಿನಲ್ಲಿ 'ಹರಿಜನ' ಪತ್ರಿಕೆ, ಅಸ್ಪೃಶ್ಯರ ಹಿತಕ್ಕಾಗಿಯೇ ಅವತರಿಸಿತು. ಕರಾಚಿ ಯಿಂದ-ಕನ್ಯಾಕುಮಾರಿ, ಬೊಂಬಾಯಿಂದ-ಬಂಗಾಳದ ವರೆಗೆ ನಡೆದ ಪ್ರಚಂಡ ಹರಿಜನೋದ್ಧಾರ ಚಳವಳಿ ಜಿಡ್ಡು ಹಿಡಿದ ಹಿಂದೂ ಸನಾತನ ಆಚಾರ ಪದ್ಧತಿಗಳನ್ನು ಬುಡ ಸಹಿತ ಅಲ್ಲಾಡಿಸಿತು. ಹರಿಜನರ ಛಾಯೆಯೂ ಸೋಂಕದ ಪುಣ್ಯಕ್ಷೇತ್ರಗಳಲ್ಲಿ, ದೇವಾಲಯಗಳಲ್ಲಿ ಅವರಿಗೆ ಪ್ರವೇಶ ದೊರೆಯಿತು. ಸರ್ವ ದೇವಾಲಯಗಳಲ್ಲಿಯೂ ಹರಿಜನರಿಗೆ ಪ್ರವೇಶ ಕೊಡುವ ವಿಶೇಷ ಶಾಸನ ಮೊದಲು ಮಾಡಿತು ಸಂಪ್ರದಾಯ ಶರಣು ತಿರುವಾಂಕೂರು. ಗಾಂಧಿಯ ನೇತೃತ್ವದಲ್ಲಿ ಹರಿಜನ ಸೇವಾ ಸಂಘ ಸ್ಥಾಪಿತವಾಯಿತು.

ಅಸ್ಪೃಶ್ಯತಾ ನಿವಾರಣೆ ಹಿಂದೂ ಧರ್ಮ ಶುಚಿಗೊಳಿಸುವ ಧಾರ್ಮಿಕ ವಿಚಾರ ಮಾತ್ರವಲ್ಲ; ಪ್ರಪಂಚದ ಸ್ಪೃಶ್ಯ ಅಸ್ಪೃಶ್ಯ, ಬಿಳಿಯ-ಕರಿಯ ಎಂಬ ವರ್ಣ ವಿದ್ವೇಷದ ಪ್ರತಿಭಟನೆ ಅದರ ಗುರಿ. ಹಿಂದೂ ಜನಾಂಗ ತನ್ನದೇ ಐದು ಕೋಟಿಯನ್ನು ಈ ಕಡೆಗಣ್ಣಿನಿಂದ ನೋಡಿದರೆ, ದೇಶ ವಿದೇಶಗಳಲ್ಲಿ ವಲಸೆಹೋಗಿರುವ ಭಾರತೀಯರನ್ನು—ಪರಾಧೀನ ಭಾರತ ಪುತ್ರರನ್ನು—ನಿಕೃಷ್ಟಭಾವನೆಯಿಂದ ಪರರು ನೋಡುವುದರಲ್ಲಿ ಆಶ್ಚರ್ಯ ವೇನು? ತನ್ನ ಮನೆ ಮೊದಲು ಶುಚಿಗೊಳಿಸಬೇಕು. ಹಾಗಲ್ಲದೆ ಈ ವರ್ಣ ಸಾಂಕರ್ಯ ದೂರವಾಗದು. ದಲಿತ ಬಾಂಧವರನ್ನು ದೂರ ಮಾಡಿದರೆ, ಅವರು ಅನ್ಯಮತೀಯರಾಗಿ, ಸಮಾಜ ವಿದ್ವೇಷಿಗಳಾಗಿ, 'ಒಡೆದು ಆಳು' ಎಂಬ ಸಾಮ್ರಾಜ್ಯ ನೀತಿಯ ಪಾಶಕ್ಕೆ ಸಿಲುಕಿ, ಭಾರತ ಸ್ವಾತಂತ್ರ್ಯ ವಿರೋಧಿಗಳೂ ಆಗಬಹುದು. ಪ್ರಪಂಚದ ವರ್ಣ ಸಾಂಕರ್ಯ ತೊಲಗಿ ಸುವ ಗುರಿಯುಳ್ಳ ಗಾಂಧೀ ವಾದ ಸ್ವದೇಶದ ಅಸ್ಪೃಶ್ಯತಾ ಕಳಂಕ ನಿರ್ಮೂಲವಮಾಡಲು ಪಣ ತೊಟ್ಟಿರುವುದರಲ್ಲಿ ಆಶ್ಚರ್ಯವೇನು?

There is no chance for the welfare of the world unless the condition of women is improved. It is not possible for a bird to fly on only one wing. ...Vivekananda

೧೪. ಸ್ತ್ರೀ ರಾಷ್ಟ್ರಮಾತೆ—ಧರ್ಮರಕ್ಷಿಣಿ

"ಶ್ರೀರಾಮ ಆದರ್ಶ ಪತಿಯಾದರೆ, ಸೀತೆ ಆದರ್ಶ ಸತಿ; ಸೀತೆ ರಾಮನ ದಾಸಿಯಲ್ಲ ಅಥವ ಇಬ್ಬರೂ ಒಬ್ಬರೊಬ್ಬರ ದಾಸರು". ಭಾರತವು ಸ್ತ್ರೀಗೆ ಅರ್ಧಾಂಗಿ, ಸಹಧರ್ಮಿಣಿ, ಸಹಚಾರಿಣಿ ಎಂಬ ಗೌರವ ಕೊಟ್ಟಿದೆ. ಸಂಸಾರ ನಿರ್ವಹಣೆಯಲ್ಲಿ ಅವಳದೇ ಮೇಲು ಕೈ. ಮನೆಯ ರಾಣಿ, ಆಕೆ.

ಆದರೂ ಹೆಂಗಸು ಮನೆಬಿಟ್ಟು ಸಾಮಾನ್ಯವಾಗಿ ಹೊರಗೆ ಬರುವುದಿಲ್ಲ. ತೆರೆಯಮರೆಯಿಂದ ಹೊರಗೆ ಬಂದು ವಿಧಾಯಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡಿದವ ಗಾಂಧಿ. ವಿದೇಶೀ ವಸ್ತ್ರ ಬಹಿಷ್ಕಾರ, ಪಾನ ನಿರೋಧ, ಶಾಸನಭಂಗ ಚಳವಳಿಯಲ್ಲಿ ಅಬಲೆಯಾದ ಸ್ತ್ರೀ ಇಷ್ಟು ಮುನ್ನುಗ್ಗುವಳೆಂದು ಯಾರೂ ಅರಿತಿರಲಿಲ್ಲ. ಸ್ತ್ರೀಯ ಅಪಾರ ಪ್ರೇಮ, ಮಿತಿಯಿಲ್ಲದ ಕಷ್ಟ ಸಹಿಷ್ಣುತೆ ಈ ವಿಶೇಷ ಗುಣಗಳಿಗೆ ಅನುರೂಪ ಕಾರ್ಯಕ್ರಮ ತೋರಿ, ಪುರುಷರನ್ನು ಆಕೆಯು ಮೀರಿಸುವಂತೆ ಮಾಡಿರುವುದು ಗಾಂಧೀ ವಾದದ ಅನುಪಮ ಕಾರ್ಯಕ್ರಮ. ಸ್ತ್ರೀ ಅಹಿಂಸೆಯ ಅವತಾರ, ಕಾರುಣ್ಯ ಮೂರ್ತಿ. 'ತಾನು ಗಂಡಸಾಗಿ ಹುಟ್ಟಲಿಲ್ಲವೆಂದು ಸ್ತ್ರೀ ಮರುಗದಿರಲಿ. ಇಂತಹ ದೈವೀಗುಣ ಅಷ್ಟಿಲ್ಲದ ಪುರುಷ ತಾನು ಹೆಂಗಸಾಗಿ ಹುಟ್ಟಲಿಲ್ಲವಲ್ಲ ಎಂದು ಹಂಬಲಿಸಬೇಕು' ಎನ್ನುತ್ತಾನೆ ಗಾಂಧಿ.

"ಸ್ತ್ರೀಯನ್ನು ಗೃಹದಾಸಿಯಾಗಿ ಮಾಡಿರುವುದು, ಪುರುಷನ ದೌಷ್ಟ್ಯ, ಡಾಂಭಿಕ ವರ್ತನೆ. ಇಂದ್ರಿಯ ತೃಪ್ತಿಯ ಭೋಗ್ಯವಸ್ತುವಲ್ಲ ಸ್ತ್ರೀ. ಆಕೆ ಮಾನವನ ಮಾತೆ. ಹಿಂದೂ ಸಂಸ್ಕೃತಿಯ ವೈಶಿಷ್ಟ್ಯಗಳನ್ನು ತೊರೆದು, ಪಾಶ್ಚಿಮಾತ್ಯದ ಅಂಧಾನುಕರಣೆ ಗಾಂಧಿ ಅನುಮೋದಿಸನು. "ಸೃಷ್ಟಿಯಲ್ಲಿಯೇ ಸ್ತ್ರೀ ಪುರುಷರಲ್ಲಿ ವಿಶೇಷ ಭಿನ್ನತೆ ಇದೆ. ಆದುದರಿಂದಲೇ ನಿತ್ಯ

ಜೀವನದಲ್ಲಿ ಆಕೆಯ ಕರ್ತವ್ಯ ಭಿನ್ನವಿದೆ. ಉಭಯತ್ರರಿಗೂ ಸಮಾಜದಲ್ಲಿ ಮಹತ್ವಸ್ಥಾನವಿದೆ. ಪುರುಷನಿಗಿರುವ ಸಮಾನ ಸ್ವಾತಂತ್ರ್ಯ ಮತ್ತು ಹಕ್ಕು ಸ್ತ್ರೀಗೂ ಇದೆ. ಸ್ತ್ರೀ ಅಬಲೆಯಲ್ಲ. ತನ್ನ ನಿಜ ಶಕ್ತಿ ಆಕೆ ಅರಿತರೆ ಪುರುಷ ನಿಗೂ ಮಿಗಿಲಾದ ಸಬಲೆಯಾಗುತ್ತಾಳೆ. ತಾಯಿಯಾಗಿ ಮಕ್ಕಳ ಜೀವನ ರೂಪುಗೊಳಿಸುವಂತೆ, ಪತ್ನಿಯಾಗಿ ಪತಿಗೆ ಮಾರ್ಗದರ್ಶಕಳಾಗುವಂತೆ, ರಾಷ್ಟ್ರಕನ ಜೀವನವೂ ವಿಕಾಸಗೊಳ್ಳುತ್ತದೆ. ಮಹಿಳೆಯ ವೈಶಿಷ್ಟ್ಯ ಆಕೆಯ ವಿದ್ವತ್ ಪ್ರಭೆಯಲ್ಲಾಗಲಿ ಅಥವ ಶರೀರ ಬಲದಲ್ಲಾಗಲಿ ಅಡಗಿಲ್ಲ; ಆದರೆ ತೀವ್ರ ಶ್ರದ್ಧೆ, ಭಾವನಾ ವೇಗ ಮತ್ತು ತ್ಯಾಗಶಕ್ತಿಯಲ್ಲಿ ಉಡುಗಿದೆ. ಸ್ವಭಾವತಃ ಸ್ತ್ರೀ ವೃತ್ತಿ ಕೋಮಲ, ಬುದ್ಧಿ ಧಾರ್ಮಿಕ. ಪುರುಷ ಎಲ್ಲಿ ಶ್ರದ್ಧಾ ಶೂನ್ಯನಾಗುತ್ತಾನೋ, ಎಲ್ಲಿ ಲಾಭ ನಷ್ಟಗಳ ಗುಣಕದಲ್ಲಿ ಬುಗುರಿ ಯಂತೆ ಭ್ರಮಿಸುತ್ತಾನೋ, ಅಲ್ಲಿ ಸ್ತ್ರೀ ಮುನ್ನುಗ್ಗಿ ಬಾಣದಂತೆ ಹಾದು ಹೋಗುವಳು. ಜಗತ್ತಿನ ಧರ್ಮರಕ್ಷಣೆ ಸ್ತ್ರೀ, ಸಾರ್ವಜನಿಕ ಕ್ಷೇತ್ರಗಳಲ್ಲಿ ಆಕೆ ಪುರುಷನಿಗೆ ಸಮಾನಳಾಗಬೇಕು. ಮದ್ಯಪಾನ ನಿಷೇಧ, ದಲಿತ ಸ್ತ್ರೀಯರ ಉದ್ಧಾರ ಈ ಸಮಾಜ ಸೇವಾಕಾರ್ಯಗಳಲ್ಲಿ ಹೆಚ್ಚು ಸಫಲತೆ ಯಿಂದ ಸ್ತ್ರೀ ಸೇವೆ ಸಲ್ಲಿಸಬಲ್ಲಳು".

ಸ್ತ್ರೀ ವಿವಾಹಿತಳಾಗಲೇ ಬೇಕು ಎಂದು ಹಿಂದೂ ಸಾಮಾನ್ಯ ಪದ್ಧತಿ. ಪುರುಷರು ಆಜನ್ಮ ಬ್ರಹ್ಮಚಾರಿಗಳಾಗಿರಬಹುದಾದರೆ ಸ್ತ್ರೀಗೂ ಆ ಸ್ವಾತಂತ್ರ್ಯ ಇರಬೇಕು. ಲಗ್ನವಾಗಿಯೂ ಆಕೆ ಬ್ರಹ್ಮಚಾರಿಣಿಯಾಗಿರ ಬಲ್ಲಳು. ಸ್ವಧರ್ಮದಲ್ಲಿ ವಿವಾಹವಾಗುವುದೇ ಶ್ರೇಯಸ್ಕರ. ಆದರೆ ಈಗಿನ ಕಾಲದಲ್ಲಿ ವರ್ಣ ವ್ಯವಸ್ಥೆ ಭಿನ್ನವಾಗಿರುವದರಿಂದ ಇದಕ್ಕೆ ಹೆಚ್ಚು ಮಹತ್ವ ಕೊಡುವುದು ಅನವಶ್ಯಕ. ಪರಮತೀಯ ವಿವಾಹ ಧರ್ಮ ನಿಷೇಧ. ಆದರೆ ಇದರಲ್ಲಿ ಅನೇಕ ವಿಘ್ನಗಳು ತಲೆದೋರುವ ಸಂಭವ ವುಂಟು. ವಿವಾಹದಲ್ಲಿ ಪಾರಮಾರ್ಥಿಕವಿರಬೇಕು. ಕೇವಲ ಮೃಗತೃಷ್ಣೆ ಯಲ್ಲ. ಅಂತಹ ವಿಶೇಷ ಸಂದರ್ಭಗಳಲ್ಲಿ ಮಾತ್ರ ಪರಮತೀಯ ವಿವಾಹ ಶ್ರೇಯಸ್ಕರವಾದೀತು. ಅರ್ಧಾಂಗಿ, ಸಬಲ ಸ್ತ್ರೀಬಲ ದೇಶ ಕಾರ್ಯಕ್ಕೆ ದೊರೆಯುವಂತೆ ಮಾಡಲು ಗಾಂಧೀ ವಾದ ಕಾತುರವಾಗಿದೆ.

ಯತ್ರ ನಾರ್ಯಾಸ್ತು ಪೂಜ್ಯಂತೇ । ರಮಂತೇ ತತ್ರ ದೇವತಾಃ ॥

Drink is the devils devise to make brutes of men. ... Anon

Even in war the moral is to the physical as ten to one. ... Napoleon

೧೫. ನೀತಿಯ ಬಲ

ಹಿಂಸಾ ಯುದ್ಧದಲ್ಲಿ ಜಯ ಗಳಿಸಲು ಶಿಸ್ತು ಮತ್ತು ಸಂಘಟನೆ ಅತ್ಯಂತ ಪ್ರಾಮುಖ್ಯ. ತನ್ನ ವ್ಯಕ್ತಿತ್ವ ಬದಿಗೊತ್ತಿ, ಅಪಾಯ ಸನ್ನಿವೇಶ ಗಳಲ್ಲಿ ಸಾಮೂಹಿಕ ಪ್ರತಿಭಟನೆ ನಡೆಸುವುದೇ ಶಿಸ್ತು. ನೆಪೋಲಿಯನ್ ಕಾಲದಂತೆ ಈಗಿನ ಯಾಂತ್ರಿಕ ಯುದ್ಧದಲ್ಲಿಯೂ ಶಿಸ್ತು ಆವಶ್ಯಕ. ಶಿಸ್ತು ಕಾಪಾಡುವವನು ಯೋಧ. ಈ ಯೋಧ ದೃಢಕಾಯನೂ, ಸಬಲನೂ ನಿರೋಗಿಯೂ ಆಗಿರಬೇಕು. ವಿಮಾನದಂತಹ ಸೂಕ್ಷ್ಮ ಯಂತ್ರ ನಡೆಸಲು ಕೇವಲ ಬಾಹುಬಲವಲ್ಲದೆ ಚುರುಕು ಬುದ್ಧಿ, ಚಟುವಟಿಕೆ ಅವಶ್ಯ. ಬಿಸಿಲ ಬೇಗೆಯಿಂದ ನಿರ್ವೀರ್ಯರಾದ ಹಿಂದೂಗಳು, ಆಜಾನುಬಾಹುಗಳೂ, ದೃಢ ಕಾಯರೂ ಆದ ವಿದೇಶಿಯರನ್ನು ಪ್ರತಿಭಟಿಸಿ ಜಯಪಡೆಯಲು ಸಾಧ್ಯವಾಗ ಲಿಲ್ಲ. ಬೆಟ್ಟ ಗುಡ್ಡಗಳಲ್ಲಿ ವಾಸಿಸುವ ಕಷ್ಟ ಸಹಿಷ್ಣುತೆಯುಳ್ಳವರು ಸಾಮಾನ್ಯವಾಗಿ ಉತ್ತಮ ಯೋಧರಾಗುತ್ತಾರೆ. ಬಾಹುಬಲದಷ್ಟೇ ಪ್ರಾಮುಖ್ಯವಾದುದು ನೈತಿಕ ಬಲ. ನೈತಿಕ ಶಕ್ತಿ ಹತ್ತರಲ್ಲಿ ಮೂರುಭಾಗ ವೆಂದು ನೆಪೋಲಿಯನ್, ಹತ್ತರಲ್ಲಿ ಆರು ಭಾಗವೆಂದು ಲಿಡಲ್ ಹಾರ್ಟ್ ಅಭಿಪ್ರಾಯಪಡುತ್ತಾರೆ.

ಹಿಂಸಾಯೋಧನಿಗೆ ಪಶುಬಲ ಅವಶ್ಯವಾದರೆ, ಅಹಿಂಸಾಯೋಧನಿಗೆ ನೈತಿಕಬಲ ಪ್ರಾಮುಖ್ಯ. ನೈತಿಕಬಲವಿಲ್ಲದ ಜನಾಂಗ ಅಹಿಂಸಾ ಹೋರಾ ಟಕ್ಕೆ ಯೋಗ್ಯ ಸತ್ಯಾಗ್ರಹಿ ಕೊಡದು. ಕೊಳೆತ ಬೀಜ ಮೊಳತು ಗಿಡವಾ ಗದು. ತಂದೆಯಂತೆ ಮಗ. ತಂದೆ ತಾಯಿಗಳ ನಡತೆ ಅಯೋಗ್ಯವಿದ್ದರೆ, ಮಕ್ಕಳು ಹೇಗೆ ಯೋಗ್ಯರಾದಾರು? ಆರ್ಯಕುಲದ ಜರ್ಮನರ ಶುದ್ಧ ರಕ್ತ ಸಾಂಕರ್ಯದಿಂದ ಕುಲಕ್ಷೀಣವಾಗುತ್ತದೆ ಎಂದು ವರ್ಣಸಾಂಕರ್ಯ ವಿವಾಹ ಜರ್ಮನಿಯಲ್ಲಿ ನಿಷಿದ್ಧ.

ಕುಡಿತ ಮತ್ತು ಅಫೀಮು ಸೇವನೆಯಿಂದ ದೇಹಶಕ್ತಿ ಮಾತ್ರವಲ್ಲ, ನೈತಿಕ ಶಕ್ತಿಯೂ ನಾಶವಾಗುತ್ತದೆ. ಇದನ್ನು ಗ್ರಹಿಸಿ ಅಮೇರಿಕವೂ ಶಾಸನ ಬಲದಿಂದ ಕುಡಿತ ತಪ್ಪಿಸಲು ಪ್ರಯತ್ನಿಸಿತು. ಧಾರ್ಮಿಕ ಬೆಂಬಲ ವಿಲ್ಲದೆ ಈ ಪ್ರಯೋಗ ಅಮೇರಿಕದಲ್ಲಿ ಫಲಿಸಲಿಲ್ಲ. ಆದರೆ ಭಾರತದಲ್ಲಿ

ಪಾನನಿರೋಧ ಪ್ರಯತ್ನ ಯಶಸ್ವಿಯಾಗಿದೆ. ಧರ್ಮದ ಹಿನ್ನೆಲೆ ಇದಕ್ಕೆ ಒಂದು ಮುಖ್ಯ ಕಾರಣ. ಕುಡಿತದಿಂದ ಕೇಂದ್ರ ಸರಕಾರಕ್ಕೆ ಇಪ್ಪತ್ತು ಕೋಟಿ ರೂಪಾಯಿ ಆದಾಯ. ಅನೀತಿ-ಆರ್ಜಿತ ಈ ಹಣ ವಿದ್ಯಾಭ್ಯಾಸ ವೈದ್ಯಸಹಾಯ ಮೊದಲಾದ ಸತ್ಕಾರ್ಯಗಳಿಗೆ ವಿನಿಯೋಗವಾಗುತ್ತದೆ ಎಂಬ ಜಾಣ್ಮೆಯ ವಾದ ಗಾಂಧೀವಾದ ಅನುಮೋದಿಸದು. ದರೋಡೆ ಚೋರ ದಾನ ಮಾಡುವಂತೆಯೇ ಸರಿ. ಅಕ್ಷರ ಜ್ಞಾನವಿಲ್ಲದೆ ಅಂಧಕಾರ ಕವಿದರೂ ಪಾನ ಪಿಶಾಚಿ ತೊಲಗಬೇಕು. ಈ ತತ್ವ ಅಂಗೀಕರಿಸಿ ಕಾಂಗ್ರೆಸ್ ಅಧಿಕಾರ ಸೂತ್ರ ವಹಿಸುತ್ತಲೇ ವರಮಾನ ಕಡಮೆಯಾದರೂ, ಪಾನನಿರೋಧ ಕೈಗೊಂಡಿತು. ಪಾನನಿರೋಧದಿಂದ ಮದರಾಸು ಸರ ಕಾರಕ್ಕೆ ನಾಲ್ಕು ಕೋಟಿ ಒಳಗೆ ಬಂದರೂ, ಪ್ರಜೆಗಳಿಗೆ ಹದಿನೇಳು ಕೋಟಿ ರೂಪಾಯಿ ಉಳಿತಾಯವಾಗಿದೆ ಎಂದು ಅಂದಾಜು ಮಾಡಿದಾರೆ. ಬಡವ ರಿಂದ ಹೆಚ್ಚು ಸುಲಿಗೆ ಮಾಡಿ ಬೊಕ್ಕಸ ತುಂಬುವುದೂ ಆರ್ಥಿಕ ನೀತಿಗೆ ವಿರುದ್ಧ. ಕುಡಿಯುವರಲ್ಲಿ ಬಡವರೇ ಹೆಚ್ಚು. ಜನತೆಯ ಶ್ರೇಯಸ್ಸು ಬಯಸುವ ಸರಕಾರ ಈ ಅನೀತಿ ಸಂಪಾದನೆ ಬಿಡಬೇಕು. ಹೀಗೆ ಮಾಡಿ ಕಾಂಗ್ರೆಸ್ಸು ತನ್ನ ಘನತೆ ವಿಶೇಷ ಬೆಳೆಸಿತು.

ಬಡತನ, ಅನೀತಿ, ಮೈಗಳ್ಳತನ ಬೆಳೆಸುವ ಅಫೀಮು ಸೇವನೆಗೆ ಚೀನೀಯರನ್ನು ಪ್ರೋತ್ಸಾಹಿಸಿದವರು ಬ್ರಿಟಿಷರು. ಚೀನೀಯರು ಈ ದುಷ್ಟ ಪದ್ಧತಿಯನ್ನು ಮೂಲೋತ್ಪಾಟನ ಮಾಡಲು ೨೦,೦೦೦ ಅಫೀಮು ಡಬ್ಬಿಗಳನ್ನು ಕ್ಯಾಂಟನ್ ನಗರದಲ್ಲಿ ಸುಟ್ಟರು. ಆದರೆ ತಮ್ಮ ವ್ಯಾಪಾರ ಉಳಿಸಿಕೊಳ್ಳಲು ಬ್ರಿಟಿಷ್ ಪ್ರಭುತ್ವ ಯುದ್ಧವನ್ನೇ ಹೂಡಿತು. ೧೮೩೯ ರಲ್ಲಿ ನಡೆದ ಈ ಯುದ್ಧ 'ಅಫೀಮು ಯುದ್ಧ' ವೆನಿಸಿ ಚರಿತ್ರಾರ್ಹವಾ ಗಿದೆ. ಚೀನದ ರಾಷ್ಟ್ರನಿರ್ಮಾಣಕ ಸುನ್‌ಯಾತ್ ಸೇನನಿಗೆ ಅಫೀಮು ನಾಶಪಡಿಸುವುದರಲ್ಲಿ ಗಾಂಧಿಯಷ್ಟೇ ಆಸಕ್ತಿ.

ಬಹುಶಃ ಎಲ್ಲ ಧರ್ಮಗಳೂ, ಎಲ್ಲ ಸರಕಾರಗಳೂ ಮಾದಕ ವಸ್ತು ಸೇವನೆ ಖಂಡಿಸುತ್ತವೆ. ಆದರೆ ಗಾಂಧೀವಾದ ಕೊಡುವ ಪ್ರಾಮುಖ್ಯತೆ ಇತರ ವಾದಗಳು ಪಾನನಿರೋಧಕ್ಕೆ ಕೊಡುವುದಿಲ್ಲ. ಇದಕ್ಕೆ ಕಾರಣ ಇಷ್ಟೇ—ಗಾಂಧೀವಾದದ ಅಡಿಕಟ್ಟು ನೀತಿ, ನೈತಿಕ ಬಲ. ಇತರ ವಾದ ಗಳಿಗೆ ಆಧಾರ ಪಶುಬಲ. ಪಶುಬಲ ಬೆಳೆಸಲು ಕುಡಿತ ಇರಬೇಕು, ನೈತಿಕ ಶಕ್ತಿ ಬೆಳೆಸಲು ಕುಡಿತ ಬಿಡಬೇಕು

Cow protection to me is one of the most wonderful phenomena in human evolution........Cow protection is the gift of Hinduism to the world. And Hinduism will live so long as there are Hindus to protect the cow.

I would not kill a human being for protecting a cow, as I will not kill a cow for saving a human life, be it ever so precious.

...Gandhi

೧೬. ಗೋರಕ್ಷಣೆಯೋ? ಗುಲಾಮಗಿರಿಯೋ?

ಭಾರತೀಯರು ಗೋಪೂಜೆಗೆ ಕೊಟ್ಟಿರುವ ಸ್ಥಾನ ಪಾಶ್ಚಿಮಾತ್ಯರಿಗೆ ಆಶ್ಚರ್ಯ. ದೇವಾಲಯದ ಕೊಬ್ಬಿದ ಗೂಳಿ ನೋಡಿ—'ಎಷ್ಟು ಟನ್ ಮಾಂಸ ನಿರುಪಯೋಗವಾಗುತ್ತಿದೆ' ಎಂದು ಆಲ್‌ಡಸ್ ಹಕ್ಸಲಿ ಸಂಕಟ ಪಡುತ್ತಾನೆ; ಗೋಹತ್ಯದಿಂದ ಹಿಂದು-ಮುಸಲ್ಮಾನರ ಎಷ್ಟು ತಲೆಗಳು ಉರುಳಿಹೋಗುತ್ತವೆ ಎಂದು ಭಾರತದ ಮೌಢ್ಯದಲ್ಲಿ ಭ್ರಾಂತನಾಗುತ್ತಾನೆ.

ಹಿಂದೂಗಳಿಗೆ ಗೋವು ಪವಿತ್ರವಿರಬಹುದು. ಆದರೆ ಗಾಂಧೀವಾದಕ್ಕೂ ಗೋಸೇವೆಗೂ ಸಂಬಂಧವೇನು? ಗೋಸೇವೆಯಲ್ಲಿ ಹಿಂದೂ ಧರ್ಮದ ಮರ್ಮವೂ, ಗೋಹತ್ಯದಲ್ಲಿ ಹಿಂದೂ-ಮುಸ್ಲಿಮರ ಸಖ್ಯವೂ, ಗೋಪಾಲನೆಯಲ್ಲಿ ಗಾಂಧೀವಾದದ ಗೋಪ್ಯವೂ ಅಡಗಿರುವುದರಿಂದಲೇ ಈ ನಾಲ್ಕು ವಾಕ್ಯಗಳು ಅದಕ್ಕೆ ಮೀಸಲು.

ರಷ್ಯ, ಅಮೇರಿಕ, ಯೂರೋಪು ಮೊದಲಾದ ಭಾಗಗಳು ಭೂಸಾಗುವಳಿ, ಕೃಷಿ, ವಹಿವಾಟು ಕೆಲಸಗಳಿಗೆ ಯಂತ್ರ ಬಳಸುವುದು ಹೆಚ್ಚು.

ವ್ಯವಸಾಯ ಯಂತ್ರ ಬಳಸುವುದರಲ್ಲಿ ಸೋವಿಯಟ್ ರಷ್ಯ ಅಮೇರಿಕವನ್ನು ಮೀರಿಸಿ ಪ್ರಪಂಚದಲ್ಲಿ ಪ್ರಥಮಸ್ಥಾನ ಪಡೆದಿದೆ. ರಷ್ಯದಲ್ಲಿ ಮರದ ನೇಗಿಲು ಮತ್ತು ಕುದುರೆಯ ಸ್ಥಾನ 'ಟ್ರಾಕ್ಟರ್' ನೇಗಿಲುಯಂತ್ರ ಆಕ್ರಮಿಸಿದೆ. ಟ್ರಾಕ್ಟರ್ ಬಳಕೆಗೆ ಬರುವ ಹೊಸದರಲ್ಲಿ (೧೯೨೯-೩೩) ಕಾಲ್ನಡೆಗಳು ಸರಕಾರದ ವಶವಾಗದಿರಲೆಂದು ಒಂದು ಕೋಟಿ ಎಂಬತ್ತು ನಾಲ್ಕು ಲಕ್ಷ ಕುದುರೆ, ಎರಡು ಕೋಟಿ ತೊಂಭತ್ತೈದು ಲಕ್ಷ ಗೋವು, ಅಸಂಖ್ಯಾತ ಕುರಿ ಮತ್ತು ಹಂದಿ ರೈತರೇ ನಾಶಪಡಿಸಿದರು. ಹಿಂದುಸ್ಥಾನದ ರೈತ ಗೋವಿಗೆ ಮೇವಿಲ್ಲದೆ ಉಪವಾಸವಾದರೂ ಬಿಡುವನೇ ವಿನಾ ಕೈಯೆತ್ತಿ ಕೊಲಲಾರ. ಹಕ್ಸಲೆಗೆ ಗೋವು ಚಲಿಸುವ ಮಾಂಸದ ಮುದ್ದೆ! ಆಸ್ಟ್ರೇಲಿಯ, ಕೆನಡ, ಅಮೇರಿಕಗಳಲ್ಲಿ ಗೋಮಾಂಸ ಗಾಳಿಸೋಂಕದ ಡಬ್ಬಿಗಳಲ್ಲಿ ತುಂಬಿ ವಿಕ್ರಯಿಸುವುದೇ ಒಂದು ದೊಡ್ಡ ಕೈಗಾರಿಕೆ. ಭಾರತದ ಕಲ್ಪವೃಕ್ಷ ತೆಂಗು. ಕಾಮಧೇನು ಗೋವು. ಸಜೀವವಿರಲಿ ನಿರ್ಜೀವವಿರಲಿ ಗೋವಿನ ಪ್ರತಿಯೊಂದುಭಾಗವೂ ಉಪಯುಕ್ತ. ಗೋಮೂತ್ರ ಹಿಂದುಗಳಿಗೆ ಪಂಚಗವ್ಯ. "ಮಾನವ ಜೀವನ ವಿಕಾಸದಲ್ಲಿ ಗೋರಕ್ಷಣೆಯು ಒಂದು ಆಶ್ಚರ್ಯಕರ ಘಟನೆ, ಒಂದು ಸುಂದರ ಕಲೆ. ಮಾನವ ಮೊದಲ್ಗೊಂಡು ಜೀವರಾಶಿಗಳೆಲ್ಲ ಒಂದೇ ಒಂದು ವೈಶಾಲ್ಯಭಾವನೆ ಮೂಡಿ, ಸಕಲ ಜೀವರಾಶಿಗಳೊಂದಿಗೆ ಸಹೃದಯನಾಗಲು ಗೋವು ಸಹಕಾರಿ. ಗೋ ಮೂಕ ಪ್ರಾಣಿಗಳ ಮೂರ್ತೀಭಾವನೆ, ರೈತನ ಗೆಳೆಯ. ಗೋರಕ್ಷಣೆ ಹಿಂದೂಧರ್ಮ ಪ್ರಪಂಚಕ್ಕೆ ಕೊಟ್ಟಿರುವ ವರಪ್ರಸಾದ. ಗೋಸಂರಕ್ಷಣೆ ಹಿಂದೂಗಳು ಮಾಡುತ್ತಿರುವವರೆಗೆ ಹಿಂದೂಧರ್ಮಕ್ಕೆ ಚ್ಯುತಿಬಾರದು. ಗೋರಕ್ಷಕರೆಂದು ನಟಿಸುತ್ತಾ ಗೋವನ್ನೂ ಅದರ ಸಂತಾನವನ್ನೂ ದಾಸ್ಯಕ್ಕೆ ದೂಡಿ, ನಾವೇ ಗುಲಾಮರಾಗಿದ್ದೇವೆ" ಎಂದು ಗೋವಿನ ಸ್ತೋತ್ರ ಮಾಡುತ್ತಾನೆ ಗಾಂಧಿ.

ವ್ಯಕ್ತಿತ್ವ ನಾಶಪಡಿಸುವ ಯಂತ್ರಕ್ಕೆ ಗಾಂಧೀವಾದದಲ್ಲಿ ಪುರಸ್ಕಾರವಿಲ್ಲ. ಆದುದರಿಂದ ರೈತರ ಸಜೀವ ಗೆಳೆಯ ಗೋ; ಮತ್ತು ಅದರ ಸಂತಾನಕ್ಕೇ ಆದರಣೆ.

Be careful in dealing with a man who cares nothing for sensual pleasures, nothing for comfort or praise or promotion, but is simply determined to do what he belives to be right. He is a dangerous and uncomfortable enemy because his body which you can always conquer gives you so little purchase over his soul.

...Gilbert Murray

೧೭. ರಾಜಕೀಯದಲ್ಲಿ ಬ್ರಹ್ಮಚರ್ಯ

“ಇಂದ್ರಿಯ ಸುಖಭೋಗಗಳಿಗೆ ಮನಸೋಲದ ಸ್ತೋತ್ರಪ್ರಿಯನಲ್ಲದ ಇಂದ್ರಿಯ ಸಂಯಮ ಮಾಡಿ ಉದ್ದೇಶ ಸಾಧನೆಗೆ ನಿರ್ಭೀತನಾಗಿ ಮುನ್ನುಗ್ಗುವ ಸತ್ಯ ಸಂಕಲ್ಪಿಯಿಂದ ಎಚ್ಚರಿಕೆ! ಅವನ ಶರೀರ ಬಂಧಿಸಲು ಸಾಧ್ಯ. ಆತ್ಮತೇಜಸ್ಸು ನಮ್ಮ ವಶವಾಗದು, ಶರಣು ಹೋಗದು. ಈ ಪರಿಯ ವಿರೋಧಿಯೊಡನೆ ವ್ಯವಹರಿಸುವುದು ಸುಲಭವಲ್ಲ. ಲಂಚಕೊಟ್ಟು ಅವನನ್ನು ಒಲಿಸಿಕೊಳ್ಳಲಾರಿರಿ” ಎಂದು ಎಚ್ಚರಿಕೆ ಕೊಡುತ್ತಾನೆ ಗಿಲ್ಬರ್ಟ್ ಮುರ್ರೆ. ನಿಜ ಬ್ರಹ್ಮಚರ್ಯದ ಆಂತರ್ಯವಿದು.

ಹಿಂಸಾಯೋಧ ಪಿಸ್ತೂಲು, ತುಪಾಕಿ, ವಿಮಾನ ಮೊದಲಾದ ಶಸ್ತ್ರಗಳ ಪ್ರಯೋಗ ಅರಿಯಲು ಬಹುಕಾಲ ಶ್ರಮಿಸುತ್ತಾನೆ. ಯೋಧನ ಶಿಕ್ಷಣದಲ್ಲಿ ‘ಡ್ರಿಲ್’ ಪ್ರಮುಖ ಪಾತ್ರವಹಿಸಿದೆ. ವ್ಯಕ್ತಿತ್ವ ನಾಶಪಡಿಸಿ, ಯೋಧ ಸಮೂಹವನ್ನು ಯಂತ್ರವಾಗಿ ಮಾಡುವುದೇ ಇದರ ಉದ್ದೇಶ. ಸೈನಿಕನು ತನ್ನ ವಿವೇಚನಾ ಸಾಮರ್ಥ್ಯ ವಿನಿಯೋಗಿಸಿ, ರಣರಂಗದಲ್ಲಿ ಶತ್ರುವಿನ ಮೇಲೆ ಗುಂಡು ಹಾರಿಸುವುದು ಧರ್ಮ ಸಮ್ಮತವೇ ಎಂದು ತರ್ಕಿಸುತ್ತಿದ್ದರೆ ಯುದ್ಧದಲ್ಲಿ ಜಯ ದೊರೆತಂತೆಯೇ! ಈ ವ್ಯಕ್ತಿ-ವಿವೇಚನಾ-ಶಕ್ತಿ ನಾಶ ಪಡಿಸುವುದೇ ಕವಾಯಿತಿನ ಗುರಿ.

ಯುದ್ಧ ಯಂತ್ರ ಪ್ರಯೋಗ ಹಿಂಸಾಮಾರ್ಗದ ಗುರಿಯಾದರೆ ಅಹಿಂಸಾ ಮಾರ್ಗದ ಶಿಕ್ಷಣ ಇಂದ್ರಿಯ ನಿಗ್ರಹ. ಪುಷ್ಟಿ ಆಹಾರ ತಿಂದು ದೇಹ ಬೆಳೆಸುವಂತೆ ಹಿಂಸಾಮಾರ್ಗ ಬೋಧಿಸಿದರೆ, ದೇಹದಂಡಿಸಿ, ಆಸ್ವಾದ, ಅಸ್ತೇಯ, ಅಪರಿಗ್ರಹ, ಸಹಿಷ್ಣುತೆ, ನಿರಶನವ್ರತ ಆಚರಿಸಿ ಸಂಯಮಿಯಾಗು

ಎಂದು ಪ್ರೇರೇಪಿಸುತ್ತದೆ ಅಹಿಂಸಾವಾದ. ಆತ್ಮಬಲ ವೃದ್ಧಿಗೆ ದೇಹ ದಂಡನೆ ಅವಶ್ಯ. ಆದುದರಿಂದಲೇ ಹೊರಗೆ ನಿರ್ಬಲನಾಗಿ ತೋರಿದರೂ, ಸಂಯಮಿಯಲ್ಲಿ ಅದ್ಭುತ ತೇಜಸ್ಸು ಅಡಗಿರಲು ಸಾಧ್ಯ. 'ಧಿಕ್ ಕ್ಷತ್ರಿಯ ಬಲಂ, ಬ್ರಹ್ಮ ತೇಜೋ ಬಲಂಬಲಂ' ಎಂಬಂತೆ ಬ್ರಹ್ಮಚರ್ಯದ ಮುಂದೆ ಪಶುಬಲ ಸಾಟಿಯಾಗದು. ಆಧುನಿಕ ಕಾಲದಲ್ಲಿ ವಿನೋಬ, ಭನ್‌ಸಾಲಿ, ಗಾಂಧಿ ಇವರು ಬ್ರಹ್ಮಚರ್ಯದ ಸಜೀವ ಸಾದೃಶ್ಯ. ಒಮ್ಮೆ ಗಾಂಧಿ ಇಪ್ಪತ್ತೊಂದು ದಿನಗಳ ನಿರಶನ ವ್ರತ ಕೈಗೊಂಡಿದ್ದನು. ದಿನದಿನಕ್ಕೂ ತೂಕ ಇಳಿಯುತ್ತಿತ್ತು. ಇನ್ನು ಹತ್ತು ಪೌಂಡು ತೂಕ ಹೆಚ್ಚಿದ್ದರೆ, ಉಪವಾಸದಿಂದ ಪಾರಾಗುವುದು ಕಷ್ಟವಾಗುತ್ತಿರಲಿಲ್ಲ. ಮೂರನೇ ದಿನ ಉಪವಾಸಮಾಡುತ್ತಿದ್ದ ಗಾಂಧಿಯನ್ನು ತೂಗಿದರೆ ನಿಖರವಾಗಿ ಹತ್ತು ಪೌಂಡು ತೂಕ ಹೆಚ್ಚಾಗಿತ್ತೆಂದು ಡಾ|| ಅನ್ಸಾರಿ ಬರೆದಿದ್ದಾರೆ. ಮತ್ತೊಮ್ಮೆ ಉಳುವಿನ ಆಸೆ ತೊರೆದು ವೈದ್ಯರು ಹತಾಶರಾದಾಗ ಉಪವಾಸಮಾಡುತ್ತಿದ್ದ ಗಾಂಧಿ ಕೇವಲ ಆತ್ಮಬಲದಿಂದ ಚೇತರಿಸಿಕೊಂಡು ವೈದ್ಯಕೀಯ ಪ್ರಪಂಚ ವನ್ನೇ ಆಶ್ಚರ್ಯಗೊಳಿಸಿದ. ಅರವತ್ತೈದು ದಿನಗಳ ನೀರಿಲ್ಲದ ಘೋರ ನಿರಶನ ವ್ರತ ಕೈಗೊಂಡು ಅರವತ್ತೈದು ಮೈಲಿ ನಡೆಯುವ ಅದ್ಭುತ ಶಕ್ತಿ ಭನ್‌ಸಾಲಿಯಲ್ಲಿರುವುದು ಆತನ ಬ್ರಹ್ಮಚರ್ಯದಿಂದ. ಋಷಿಗಳು ಅಸಾಧ್ಯ ಸಾಧಿಸುತ್ತಿದ್ದರು ಎಂಬುದರಲ್ಲಿ ಆಶ್ಚರ್ಯವೇನು?

ಸತ್ಯಾಗ್ರಹಿ ಅನೇಕ ಕಷ್ಟಗಳನ್ನು ಅನುಭವಿಸಬೇಕು. ತುರಂಗವಾಸ ಸ್ವತಃಸಿದ್ಧ. ಅಗಿಯಲಾಗದ ರೊಟ್ಟಿ, ಬೇಯಲಾರದ ಹಿಟ್ಟು ಜೀರ್ಣಿಸಿ ಕೊಳ್ಳಬೇಕು. ಒರಟು ಕಂಬಳಿ, ತರಾಟು ಹೊದಿಯಬೇಕು. ಇಂದ್ರಿಯ ನಿಗ್ರಹ ಅರಿಯದ ಪಾಶ್ಚಿಮಾತ್ಯರು ಸುಖಬಯಸುವರು. ಬ್ರಹ್ಮಚಾರಿ ಎಷ್ಟೇ ಕಷ್ಟ ಬಂದರೂ ಸಂತೋಷದಿಂದ ಸಹಿಸಬಲ್ಲ.

'ಬ್ರಹ್ಮಚರ್ಯ' ಎನ್ನುವುದಕ್ಕೆ ಅವಿವಾಹಿತ ಎಂಬ ಸಂಕುಚಿತಾರ್ಥ ಮಾಡಲಾಗದು. ವಿವಾಹಿತನೂ ಇಂದ್ರಿಯ ನಿಗ್ರಹದಿಂದ ಬ್ರಹ್ಮಚರ್ಯ ಪಾಲಿಸಬಲ್ಲ. ಇಂದ್ರಿಯ ವಶಪಡಿಸಿಕೊಂಡ ಸ್ಥಿತಪ್ರಜ್ಞನಂತೆ ಕಾಯಾ ವಾಚಾ ಮನಸಾ ನಿಷ್ಕಾಮ ಬುದ್ಧಿಯಿಂದ ಸತ್ಯ ಅಹಿಂಸೆಗಳ ಮಾರ್ಗದಲ್ಲಿ ದೇಶ ಸೇವೆ ಕೈಕೊಳ್ಳುವವನೇ ನಿಜ ಬ್ರಹ್ಮಚಾರಿ. ಇವನು ಯೋಗ್ಯ ತ್ಯಾಗ್ರಹಿಯಾಗಬಲ್ಲ.

Physical liberty may be taken from a man, but spiritual liberty is his birth-right which all armies and Governments of the world are powerless to deprive him without his co-operation.
...Russell

೧೮. ವಿಚಿತ್ರ ಅಸ್ತ್ರಗಳು

ಅಹಿಂಸೆಯ ಅಸ್ತ್ರಗಳು ವಿಚಿತ್ರವಾದವು. "ದೈವಭಕ್ತಿ, ಪ್ರಾರ್ಥನೆ, ಸತ್ಯ, ಅಹಿಂಸೆ, ಕ್ಷಮೆ, ಪ್ರೇಮ, ದಯೆ, ಅಪಕಾರಕ್ಕೆ ಪ್ರತ್ಯುಪಕಾರ, ಕಷ್ಟ ಸಹಿಷ್ಣುತೆ, ನಿರಶನ ವ್ರತ ಇವು ಸತ್ಯಾಗ್ರಹದ ಬತ್ತಳಿಕೆಯ ಅಸ್ತ್ರಗಳು!"

ಗಾಂಧಿಗೆ ದೇವರೇ ಸತ್ಯ, ಸತ್ಯವೇ ದೇವರು. ಅಣುರೇಣು ಬ್ರಹ್ಮಾಂಡವೆಲ್ಲ ಪರಮಾತ್ಮ ನಿರ್ಮಿತ. ದೇವರಿಲ್ಲದೆ ಹುಲ್ಲುಕಡ್ಡಿಯೂ ಹುಟ್ಟದು. ರೈಲು ಗಾಡಿಯಲ್ಲಿ ಪ್ರಯಾಣ ಮಾಡುವಾಗ, ನಿಂತು ನಿಂತು ಕಾಲು ನೋವು ಬಂದಾಗ ಕೂಡಲು ಜಾಗ ಕೊಡಿಸುವವನೂ ಪರಮಾತ್ಮ; ಉಪವಾಸ ಪ್ರೇರೇಪಿಸುವವನೂ ಪರಮಾತ್ಮ; ಸತ್ಯಾಗ್ರಹ ಹೂಡಲು ದಾರಿ ತೋರಿಸುವವನೂ ಪರಮಾತ್ಮ; ಸಮಸ್ತ ಕಾರ್ಯಗಳಲ್ಲಿಯೂ ಪರಮಾತ್ಮನ ಕೈವಾಡ ಕಾಣುವನು ಗಾಂಧಿ. 'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ' ಎಂದು ಪ್ರಾರ್ಥಿಸಿ, ಅಂತರ್ಜ್ಯೋತಿ ತೋರಿದ ಬೆಳಕಿನಲಿ ಅಡಿಯಿಟ್ಟು ಮುನ್ನಡೆಯುವನು. ಸತ್ಯಾಗ್ರಹಿಯ ಪ್ರಥಮಾಸ್ತ್ರ ಪ್ರಾರ್ಥನೆ, ಕಡೆಯ ಅಸ್ತ್ರ ಭಗವಂತನಲ್ಲಿ ನಂಬಿಕೆ. ಸರ್ವಶಕ್ತ ಪರಮಾತ್ಮನಲ್ಲಿ ಭಕ್ತಿಯುಳ್ಳ ಸತ್ಯಾಗ್ರಹಿ, ಯಾವ ಶಕ್ತಿಗೂ ತಲೆಬಾಗನು.

ರಾಜಕೀಯದಲ್ಲಿ ಗಾಂಧಿಯ ಉಪವಾಸ ಪಾಶ್ಚಿಮಾತ್ಯರಿಗೆ ಅರ್ಥವಾಗದು. 'ಬರಿ ಹೊಟ್ಟೆಯಲ್ಲಿ ಬ್ರಿಟಿಷ್ ಪ್ರಭುತ್ವ ಸಂಕಟಕ್ಕೆ ಸಿಲುಕಿಸುವ ಯೋಧ ಎಲುಬು ಗೂಡಿನ ಗಾಂಧಿ' ಎಂದು ಒಬ್ಬ ಅಮೇರಿಕ ಪತ್ರಿಕೋದ್ಯೋಗಿ ಬಣ್ಣಿಸುತ್ತಾನೆ. ಅಹಿಂಸೆಯ ಸೋಪಾನ ನಿರಶನವ್ರತ. "ಆತ್ಮಶುದ್ಧಿಗಾಗಿ ಅನಾದಿಯಿಂದ ಬಂದಿರುವ ಪವಿತ್ರ ವ್ರತ ಉಪವಾಸ. ನಿರ್ದಿಷ್ಟ

ಗುರಿ ಸಾಧಿಸಲು ಉಪವಾಸ ಕೈಗೊಳ್ಳುವುದು ಅನೂಚಾನ ಪದ್ಧತಿ. ಸೇತು ಬಂಧನಕ್ಕಾಗಿ ಶ್ರೀರಾಮನೂ, ಪತಿಸಾಕ್ಷಾತ್ಕಾರಕ್ಕಾಗಿ ಪಾರ್ವತಿಯೂ ಉಪವಾಸ ಕೈಗೊಂಡರು. ಪರಮಾತ್ಮನ ಪ್ರತ್ಯಕ್ಷ ದರುಶನಕ್ಕಾಗಿ ಬುದ್ಧ, ಏಸು, ಪೈಗಂಬರ್ ಮೊದಲಾಗಿ ಮಹಾಪುರುಷರು ಉಪವಾಸ ವ್ರತಮಾಡಿದರು. ನನ್ನ ಉದ್ದೇಶ ಕೀಳಾದರೂ ನಾನು ಅನುಸರಿಸುವುದೂ ಈ ಮಹಾಪುರುಷರನ್ನೇ" ಎಂದು ಗಾಂಧಿ ಬರೆಯುತ್ತಾನೆ.

ವಿಪಕ್ಷಿಯನ್ನು ಪೇಚಾಟಕ್ಕೆ ಸಿಕ್ಕಿಸಿ, ಬಲೋದ್ಬಂಧದಿಂದ ಕಾರ್ಯ ಸಾಧಿಸುವುದು ನಿರಶನ ವ್ರತದ ಗುರಿಯಲ್ಲ. ಆತ್ಮಶುದ್ಧಿ, ಅಂತರಾತ್ಮ ಪ್ರೇರಣೆ ಇವೇ ಉಪವಾಸದ ಗುರಿ. ವ್ರತದ ಫಲವಾಗಿ ವಿರೋಧಿಯ ಮನ ಒಲಿದರೆ ಅದನ್ನೇ ಬಲಪ್ರಯೋಗವೆನ್ನುವುದು ವಿತಂಡವಾದ. ಹರಿಜನ ಪತ್ರಿಕೆ ನಡೆಸಲು ಅವಕಾಶ ಬೇಡಿ ನಿರಶನ ವ್ರತ ಧರಿಸಿದರೆ, ಗಾಂಧಿ ಬಂಧ ಮುಕ್ತನಾಗಬಹುದು. "ಗಾಂಧಿ ಘೋರ ನಿರಶನವ್ರತ ಕೈಗೊಂಡರೆ, ಈ ವ್ರತ ಕೈಗೊಳ್ಳಲು ಎಡೆಗೊಟ್ಟ ಸನ್ನಿವೇಶ, ಸಮಾಜ ಅಥವ ಸರ್ಕಾರದಲ್ಲಿ ಏನೋ ಲೋಪವಿದೆ ಎಂದು ಪ್ರಪಂಚ ತಲ್ಲಣಿಸುವುದೇ ವಿನಃ ಗಾಂಧಿಯ ಉಪವಾಸದಲ್ಲಿ ದೋಷ ಆರೋಪಿಸದು. ಜಲಿಯನ್‌ವಾಲಾ ಕೊಲೆಗೆ ಕಾರಣನಾದ ಡಯರನಿಗೆ ವಿರಾಮವೇತನ, ನೊಂದವರಿಗೆ ಮರುಗಿದ ಸಂತನಿಗೆ ಆರುವರ್ಷಗಳ ಸಶ್ರಮ ಶಿಕ್ಷೆ ವಿಧಿಸುವ ಸಮಾಜ ವ್ಯವಸ್ಥೆಯಲ್ಲಿ ದೋಷಯಾರದು ?" ಎಂದು ಗಗನವಿಹಾರಿ ಮೆಹಥ ಪ್ರಶ್ನಿಸುತ್ತಾನೆ. ಗಾಂಧಿಯ ಸಮ್ಯಗ್‌ಜೀವನವೇ ಈ ಮಹಾ ಲೋಪಗಳ ಪ್ರತಿಭಟನೆ. ಸತ್ಯಸಂಕಲ್ಪ ಸಾಧಿಸಲು ಆಮರಣ ನಿರಶನ ವ್ರತಕೈಗೊಳ್ಳಲು ಅಂತರಾತ್ಮ ಪ್ರೇರಣೆಯಾದರೆ, ದಧೀಚಿಯಂತೆ ದೇಹ ತ್ಯಜಿಸಲು ಗಾಂಧಿ ಸಿದ್ಧ. ಔಚಿತ್ಯವೇನೇ ಇರಲಿ ದೇಶಕ್ಕಾಗಿ 'ಹರಿಕಾರಿ' ಮಾಡಿ ಹುತಾತ್ಮರಾಗುವ ಜಪಾನೀಯರನ್ನು ಇಲ್ಲಿ ನಿದರ್ಶಿಸಬಹುದು.

ಶಸ್ತ್ರಚಿಕಿತ್ಸೆ ಮಾಡುವ ವೈದ್ಯ ಯೋಗ್ಯ ಶಿಕ್ಷಣ ಪಡೆದಿರಬೇಕು. ಅಂತೆಯೇ ಉಪವಾಸ ಕೈಗೊಳ್ಳುವುದಕ್ಕೂ ಯೋಗ್ಯತೆ ಬೇಕು. ಯಾರು ನಿರಶನ ವ್ರತ ಕೈಗೊಳ್ಳಬಹುದು ಎಂಬುದನ್ನು ಗಾಂಧಿಯ ಈ ಸಲಹೆಗಳಿಂದ ಗ್ರಹಿಸಬಹುದು :—

(೧) ಪರಮಾತ್ಮನಲ್ಲಿ ನಿಶ್ಚಲ ಪರಿಪೂರ್ಣ ಭಕ್ತಿ ಇರಬೇಕು. (೨) ಸತ್ಯ ಮತ್ತು ಅಹಿಂಸೆ ಅವನ ಧರ್ಮವಿರಬೇಕು. ತನ್ನ ಆತ್ಮಾರ್ಪಣೆಯ ಮೂಲಕ ವ್ಯಕ್ತಗೊಳಿಸಿದ ಸತ್ಯನಿಷ್ಠೆ ಮತ್ತು ಪ್ರೇಮಭಾವನೆಯಿಂದ ಮಾನವನ ಸಹಜ ಸದ್ಗುಣ ಪ್ರಚೋದಿಸಬಹುದು ಎಂಬ ದೃಢ ವಿಶ್ವಾಸ ಇರಬೇಕು. (೩) ನಿತ್ಯ ಜೀವನ ಪವಿತ್ರವೂ ನಿರ್ಮಲವೂ ಇರಬೇಕು. ಧ್ಯೇಯ ಸಾಧನೆಗಾಗಿ ಸರ್ವಸ್ವವನ್ನೂ, ಅಂತ್ಯದಲ್ಲಿ ಆತ್ಮವನ್ನೂ ಅರ್ಪಿಸುವ ಸಿದ್ಧತೆ ಇರಬೇಕು. (೪) ನಿತ್ಯ ಖಾದಿ ಧಾರಿಯಾಗಿಯೂ, ಸ್ವತಃ ನೂಲುವವನೂ ಇರಬೇಕು. (ಭಾರತೀಯರಿಗೆ ಇದು ಅತ್ಯಾವಶ್ಯಕ.) (೫) ಕುಡುಕನೂ ಮಾದಕ ಪದಾರ್ಥಗಳ ಅಡಿಯಾಳೂ ಆಗಿರಲಾಗದು. ಇಲ್ಲವಾದರೆ ಆತನ ಮನಸ್ಸು ನಿರ್ಮಲವೂ ಸ್ವಚ್ಛವೂ ಇರದು. (೬) ಕಾಲಾನುಸಾರ ಸೂಚಿಸುವ ನಿಯಮ ಪಾಲಿಸಲು ಬದ್ಧನಿರಬೇಕು. (೭) ಆತ್ಮಗೌರವಕ್ಕೆ ಚ್ಯುತಿಬಾರದ ಸೆರೆಮನೆಯ ನಿರ್ಬಂಧನೆಗಳನ್ನು ಪಾಲಿಸಲು ಸಿದ್ಧನಿರಬೇಕು.

ಪಶುಬಲದಲ್ಲಿ ವಿಶ್ವಾಸವಿಟ್ಟು ಯುದ್ಧ ಮಾಡುವವರೂ, ದೈವ ಸಹಾಯ ಬಯಸುವರು. ಸಮರ ನೌಕೆಗಳನ್ನೂ, ಯುದ್ಧ ವಿಮಾನಗಳನ್ನೂ 'ವಿಜಯೀ ಭವ' ಎಂದು ದೇವರ ಹೆಸರಿನಲ್ಲಿ ಪೂಜಾರಿಗಳು ಹರಸುವರು! ಹೀಗಿರುವಲ್ಲಿ ಪಾಶವೀಶಕ್ತಿ ಧಿಕ್ಕರಿಸುವ ಸತ್ಯಾಗ್ರಹಿಗೆ ದೈವಶಕ್ತಿಯಲ್ಲದೆ ಬೇರೆ ಆಧಾರವುಂಟೇ ?

'ಮರಣ ಭೀತಿ ಮಾನವನಿಗೆ ತಪ್ಪಿದ್ದಲ್ಲ. ಯಮನನ್ನು ವಂಚಿಸಿ, ಮರಣ ಭೀತಿಯಿಂದ ಪಾರಾಗಲು ಆಧುನಿಕ ನಾಗರಿಕತೆ ಕಲ್ಪಿಸಿರುವ ಯೋಜನೆಯೇ ಜೀವವಿಮೆ. ವಿಮೆ ಆಧುನಿಕ ನಾಗರಿಕತೆಯ ಹೆಗ್ಗುರುತು' ಎನ್ನುತ್ತಾನೆ ಪ್ರೊ|| ಡ್ರೂಕರ್. ಗಾಂಧಿ ಜೀವವಿಮೆ ಮಾಡಸು. ಹೀಗೆ ಮಾಡುವುದು ಪರಮಾತ್ಮನಿಗಿಂತ, ಮಾನವ ಯೋಜನೆಯಲ್ಲಿ ಹೆಚ್ಚು ವಿಶ್ವಾಸವಿಟ್ಟಂತೆ. ಅಂತೆಯೇ ಧನ ಸಂಗ್ರಹಣ ಆಧ್ಯಾತ್ಮ ದಿವಾಳಿ.

The Indian Revolution is the first entirely above-ground revolution in history that has undeviatingly followed a policy of using wholly humanitarian means to achieve its ends.

...Mrs. Francis Gunther

In the method we are adopting, fraud, lying, deceit and all ugly brood of violence and untruth have absolutely no room. Everything is done openly and above board, for truth hates secrecy.

...Gandhi

೧೯. ಮರ್ಮವಿಲ್ಲದ ಮಂತ್ರ

ಹಠಾತ್ತಾಗಿ ಶತ್ರು ಮೇಲೆ ದಾಳಿ ನಡೆಸಿ, ಗಾಬರಿಗೊಳಿಸಿ, ಸೈನ್ಯ ಚೆಲ್ಲಾಪಿಲ್ಲಿ ಮಾಡುವುದು ಯುದ್ಧ ಕೌಶಲ್ಯ. ಅನಿರೀಕ್ಷಿತ ಧಾಳಿ, ವಿಶೇಷ ಪ್ರಭಾವಶಾಲಿ. ಈ ಅನಿರೀಕ್ಷಿತ ಧಾಳಿಗೆ ಆಸ್ಪದ ಕೊಡಬಾರದೆಂದು ಉಭಯ ಪಕ್ಷಗಳ ಗೂಢಚಾರರೂ, ವಿಪಕ್ಷಿಯ ಗುಟ್ಟು ರಟ್ಟುಮಾಡಲು ಕಾತುರರಾಗಿರುತ್ತಾರೆ. ಆದರೆ ಅಹಿಂಸಾ ಮಾರ್ಗ ಇದಕ್ಕೆ ನೇರ ವಿತೋಧ. ಗುಪ್ತವಾಗಿ ಹಠಾತ್ತಾಗಿ ಕಾರ್ಯ ಕೈಗೊಳ್ಳುವ ಸನ್ನಿವೇಶ ಸತ್ಯಾಗ್ರಹದಲ್ಲಿಲ್ಲ. ಉಪಕ್ರಮಿಸುವುದಾಗಿ ವಿರೋಧಿಗೆ ಎಚ್ಚರಿಸಿ ಕಾರ್ಯೋನ್ಮುಖವಾಗುತ್ತದೆ ಸತ್ಯಾಗ್ರಹ. ಅಧಿಕಾರಿಗಳಿಗೆ ತಿಳಿಸದೆ, ವೈಸರಾಯರಿಗೆ ಮುಂದಾಗಿ ಕಾಗದ ಬರೆಯದೆ, ಗಾಂಧಿ ಸತ್ಯಾಗ್ರಹ ಉಪಕ್ರಮಿಸನು, ಉಪಕ್ರಮಿಸಿಲ್ಲ. ಅಂತೆಯೇ ಗುಪ್ತ ಕಾರ್ಯಕ್ರಮಗಳೂ ಸತ್ಯಾಗ್ರಹಕ್ಕೆ ಬಾಹಿರ. ಗುಪ್ತವಾಗಿ ಕರಪತ್ರ ಹೊರಡಿಸುವುದು, ವೇಷ ಮರೆಸಿ, ಗೂಢವಾಗಿ ಕೆಲಸಮಾಡುವುದು ಗಾಂಧಿ ಒಪ್ಪನು. "ಸರ್ಕಾರದ ದಬ್ಬಾಳಿಕೆಯಿಂದ ಒದಗಿದ ಸಂದರ್ಭಕ್ಕೆ ಅನುಗುಣವಾಗಿ ತನ್ನ ಜಾಣ್ಮೆ ಮತ್ತು ಚಾತುರ್ಯ ಉಪಯೋಗಿಸಿ ಚಳವಳಿ ನಡೆಸಿದವರ ಉದ್ದೇಶ ಮತ್ತು ಸಾಹಸ ಪ್ರಶಂಸನೀಯ. ಗುಪ್ತ

ಕಾರ್ಯಕ್ರಮ ಸತ್ಯಾಗ್ರಹ ಪ್ರಗತಿಗೆ ಅಡಚಣೆ. ಜನತೆಯಲ್ಲಿ ತೋರಿಬರುವ ಅನೀತಿಗೆ ಕಾರಣ. ಇದರ ನಿಷೇಧದಿಂದ ಕಾಂಗ್ರೆಸ್ಸನ್ನು ಸಜೀವವಾಗಿಟ್ಟರು ವಂತೆ ತೋರಿಕೆ ಕೊಡುವ ಹಲವು ಚಳವಳಿಗಳು ನಿಲ್ಲಬಹುದು. ಆದರೆ ಸತ್ಯಾಗ್ರಹ ತತ್ವಕ್ಕೆ, ಘನತೆಗೆ ಕುಂದು ತರುವ ಮಾರ್ಗ ತೊರೆಯುವದರ ಲ್ಲಿಯೇ ನಿಜ ಶ್ರೇಯಸ್ಸು. ಸತ್ಯಾಗ್ರಹ ಕೇವಲ ಚಮತ್ಕಾರ ವಿದ್ಯೆಯಲ್ಲ" ಎಂದು ಗುಪ್ತ ಕಾರ್ಯಾಚರಣೆ ಗಾಂಧಿ ಖಂಡಿಸುತ್ತಾನೆ.

ಸತ್ಯಾಗ್ರಹಿ ತನ್ನ ಕಾರ್ಯಕ್ರಮ ಮುಂದಾಗಿ ತಿಳಿಸುವುದು ಉದ್ದೇಶ ರಹಿತವಲ್ಲ. ಸತ್ಯಾಗ್ರಹದ ಮೂಲ ಉದ್ದೇಶ ಹೃದಯ ಪರಿವರ್ತನೆ. ಕಷ್ಟ ಅನುಭವಿಸಲು ಸತ್ಯಾಗ್ರಹಿ ಸಿದ್ಧವಾಗುವುದು ಕಂಡು, ಅವನ ಉದ್ದೇಶ ಪವಿತ್ರವಿರಬೇಕು ಎಂಬ ಭಾವನೆ ವಿಪಕ್ಷಿಯಲ್ಲಿ ತೋರಬಹುದು. ಅಲ್ಲದೆ ಪರಿಸ್ಥಿತಿ ವಿಷಮಿಸುವ ಮೊದಲು ಮಧ್ಯಸ್ಥಗಾರರಿಗೂ ಒಂದು ಅವಕಾಶ ದೊರೆಯುತ್ತದೆ. ಸತ್ಯಾಗ್ರಹಿಯ ದೃಢತೆಯಿಂದ ವಿಪಕ್ಷಿಯಲ್ಲಿ ಆದರ ಗೌರವ ಬೆಳೆಯುತ್ತದೆ. ಸತ್ಯಾಗ್ರಹದ ನೈತಿಕ ಶಕ್ತಿಯೂ ವೃದ್ಧಿಯಾಗು ತ್ತದೆ. ದೊಡ್ಡವರು ಬಹಿರಂಗವಾಗಿ ಕೈಗೊಳ್ಳುವ ಕಾರ್ಯವನ್ನು— "ಯದ್ಯದಾಚರತಿಶ್ರೇಷ್ಠಃ ತತ್ತ ದೇವೇತರೋಜನಃ" ಎಂಬ ವಾಕ್ಯದಂತೆ ಇತರರೂ ಅದೇ ಮಾರ್ಗ ತುಳಿಯುತ್ತಾರೆ. ದಂಡಿ ಸತ್ಯಾಗ್ರಹಕ್ಕಾಗಿ ಕೇವಲ ೭೯ ಸತ್ಯಾಗ್ರಹಿಗಳೊಡನೆ ಗಾಂಧಿ ಹೊರಟರೂ, ಅಲ್ಪ ಕಾಲದಲ್ಲಿಯೇ ಅದು ಬೃಹದ್ರೂಪ ತಾಳಿತು. ಬಹಿರಂಗ ಕಾರ್ಯಕ್ರಮ ಶುಕ್ಲ ಪಕ್ಷದ ಚಂದ್ರ ನಂತೆ ಬೆಳೆಯುತ್ತದೆ; ಗುಪ್ತ ಕಾರ್ಯಕ್ರಮ ಕೃಷ್ಣಪಕ್ಷದ ಚಂದ್ರನಂತೆ ಕ್ಷೀಣಿಸುತ್ತ ಬರುತ್ತದೆ.

ತನ್ನ ಪ್ರಥಮ ಸತ್ಯಾಗ್ರಹದ ಕುರಿತು ಜವಾಹಿರನು ಹೀಗೆ ಬರೆಯು ತ್ತಾನೆ—"ಸ್ವಾತಂತ್ರ್ಯ ಭಾವನೆ ಮತ್ತು ನಿರ್ಭಯತೆ ನಮ್ಮಲ್ಲಿ ಎದ್ದು ಕಾಣುತ್ತಿತ್ತು. ನಮ್ಮ ಹೃದಯದಲ್ಲಿ ಭೀತಿಯ ಸುಳಿವೇ ಇರಲಿಲ್ಲ. ಮೊದಲಿನ ಅವಕುಂಠಿತ ಭಾವನೆ, ಅಡ್ಡಿ ಆತಂಕದ ಕಲ್ಪನೆಯ ಸುಳಿವೇ ಇರಲಿಲ್ಲ. ಅಧಿಕಾರಿಗಳ ಕೈಗೆ ಸಿಲುಕದೆ ಜಾರಿ ತಪ್ಪಿಸಿಕೊಳ್ಳಲು, ಶಾಸನ ಕಡತದಲ್ಲಿ ಲೋಪ ಎಲ್ಲಿದೆ; ಯಾವ ಸಂದಿನಲ್ಲಿ ತೂರಿ ತಲೆ ತಪ್ಪಿಸಿಕೊಳ್ಳ ಬಹುದು ಎಂಬ ದೌರ್ಬಲ್ಯ, ಪಿಸುಮಾತು, ಕುಯುಕ್ತಿ ದೂರ ಸರಿದವು.

ಸರಿತೋರಿದ್ದನ್ನು ಘಂಟಾಘೋಷಸಾರ ತೊಡಗಿದೆವು. ನಮ್ಮ ನಿರ್ಭಯ ಹುಂಕಾರದಿಂದ ಗಿರಿಗೋಪುರಗಳು ಪ್ರತಿಧ್ವನಿತವಾಗುತ್ತಿದ್ದವು. ಇದರ ಪರಿಣಾಮವೇನು ಎಂಬ ದುಗುಡು, ಭೀತಿ ನಮಗೇಕೆ? ಸೆರೆಮನೆ! ಇಷ್ಟೇ ತಾನೆ. ಸೆರೆಮನೆ ನಮ್ಮ ಉದ್ದೇಶ ಸಾಧನೆಗೆ ಮತ್ತಷ್ಟು ಸಹಕಾರಿಯಲ್ಲವೆ ಎಂದು ಉತ್ತೇಜಕರಾಗುತ್ತಿದ್ದೆವು. ನೆರಳಂತೆ ಹಿಂಬಾಲಿಸುತ್ತಿದ್ದ ಗೂಢ ಚಾರರ ಪಾಡು ಶೋಚನೀಯವಾಯಿತು. ನಮ್ಮಲ್ಲಿ ರಹಸ್ಯವಿದ್ದರೆ ತಾನೆ, ರಹಸ್ಯ ಬಯಲಿಗೆಳೆಯುವುದು? ದಾಳಿ ಪದಾತಿಗಳೆಲ್ಲ ಬಹಿರಂಗ. ಗುಟ್ಟು ಗೋಪ್ಯವಿಲ್ಲ, ಮುಚ್ಚು ಮರೆಯಿಲ್ಲ".

'ನಮ್ಮ ನೈತಿಕ ಶಕ್ತಿ ಏರಿದಂತೆ ಸರ್ಕಾರದ ಪ್ರಭಾವ ಇಳಿಯುತ್ತ ಬಂತು. ದಿಗ್ಭ್ರಮೆ ಹಿಡಿದು 'ಏನು ನಡೆಯುತ್ತಿದೆ' ಎಂಬ ಅರಿವು ಅವರಿಗಿಲ್ಲವಾಯಿತು. ಹಳೆಯ ಸುಭದ್ರ ಕಟ್ಟಡ ಕುಸಿದು ಬೀಳುವಂತೆ ಅವರಿಗೆ ಭಾಸವಾಗುತ್ತಿತ್ತು. ಸ್ವಪ್ರತಿಷ್ಠೆ, ಸ್ವಾವಲಂಬನೆ, ಆತ್ಮಗೌರವ ಮತ್ತು ನಿರ್ಭಯ ವಾತಾವರಣ ತಾಂಡವವಾಡುತ್ತಿದ್ದವು. ಬ್ರಿಟಿಷ್ ಸರ್ಕಾರದ ಪ್ರತಿಷ್ಠೆ ಉರುಳಿಹೋಗುತ್ತ ಬಂತು. ದಬ್ಬಾಳಿಕೆಯಿಂದ ಚಳವಳಿಗೆ ಮತ್ತಷ್ಟು ಸ್ಫೂರ್ತಿ. ಮುಖಂಡರ ಮೇಲೆ ಕೈಮಾಡಿದರೆ ಪರಿಣಾಮವೇನಾದೀತೋ ಎಂಬ ಭೀತಿ ಸರ್ಕಾರಕ್ಕೆ. 'ಭಾರತೀಯ ಸೈನ್ಯದಲ್ಲಿ ಭರವಸೆ ಇಡಬಹುದೇ? ಪೋಲೀಸಿನವರು ಆಜ್ಞೆ ಪಾಲಿಸಿಯಾರೆ? ದಿಕ್ಕು ದೆಸೆ ಕಾಣದೆ ತಲ್ಲಣಿಸಿ ಹೋಯಿತು ಸರ್ಕಾರ' ಎಂದು ವೈಸರಾಯ್ ಲಾರ್ಡ್ ರೀಡಿಂಗ್ ಹೇಳಬೇಕಾಯಿತು'.

'ಶತ್ರು ಸಂಕಟವೇ ನಮ್ಮ ಸುಸಮಯ' ಎಂದು ಭಾವಿಸದು ಸತ್ಯಾಗ್ರಹ. ದಕ್ಷಿಣ ಆಫ್ರಿಕದಲ್ಲಿ ಸಾತ್ವಿಕ ವಿರೋಧ ಚಳವಳಿ ನಡೆಯುತ್ತಿದ್ದಾಗ ರೈಲ್ವೆಯ ಬಿಳಿ ಕೆಲಸಗಾರರು ಮುಷ್ಕರ ಹೂಡಿದರು. ಈ ಸಮಯ ಉಪಯೋಗಿಸಿ ಸರ್ಕಾರವನ್ನು ಮತ್ತಷ್ಟು ಪೇಚಾಟಕ್ಕೆ ಸಿಲುಕಿಸಬಹುದಾಗಿತ್ತು. ಆದರೆ ಗಾಂಧಿ ಹಾಗೆ ಮಾಡದೆ ಸತ್ಯಾಗ್ರಹವನ್ನೇ ತಾತ್ಕಾಲಿಕ ನಿಲ್ಲಿಸಿದ. ಸತ್ಯಾಗ್ರಹದ ಘನತೆ ನೂರ್ಮಡಿಯಾಯಿತು. ಅಹಿಂಸಾ ತತ್ವಕ್ಕೆ ವಿರೋಧವೆನಿಸಿದರೂ ಬೋಅರ ಮತ್ತು ಮೊದಲ ಘೋರ ಯುದ್ಧದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಗಾಂಧಿ ಸಹಾಯವೆಸಗಲು ಇದೇ ಮುಖ್ಯ ಕಾರಣ. ರಾಮು

ರಾವಣರ ಕಾಳಗದಲ್ಲಿ ಶ್ರೀರಾಮನ ರಥ ನಾಶವಾದರೆ, ರಾಕ್ಷಸನಾದರೂ ರಾವಣನು ರಥದಿಂದ ಕೆಳಗಿಳಿಯುವನು. ದುರ್ಯೋಧನನ ಕೈಯಿಂದ ಗದೆ ಜಾರಿದರೆ, ಮತ್ತೆ ಅವನು ಗದಾಧಾರಿಯಾಗುವ ವರೆಗೆ ಭೀಮ ಗದೆ ಉಪಯೋಗಿಸನು. ಈ ಉದಾರ ನೀತಿಯೇ ಸತ್ಯಾಗ್ರಹದ ಆದರ್ಶ.

ಹಿಂದುಸ್ಥಾನದ ಸ್ವಾತಂತ್ರ್ಯ ಚಳವಳಿ ಕುರಿತು ಸತಿ ಜಾನಗಂಥರು ಈ ರೀತಿ ಬರೆಯುತ್ತಾರೆ:—"ವಿಪ್ಲವದಲ್ಲಿ ಪಾಪವಿಲ್ಲ. ಪಾಪ ಕಾಣಿಸಿಕೊಳ್ಳುವುದು ಅನಂತರ. ಫ್ರಾನ್ಸಿನ ಮಹಾಕ್ರಾಂತಿಯ ಗುರಿ ರಾಜಕೀಯ ಸ್ವಾತಂತ್ರ್ಯ; ರಷ್ಯದ ವಿಪ್ಲವ ಆರ್ಥಿಕ ಸ್ವಾತಂತ್ರ್ಯವಾದರೆ, ಭಾರತದ ಆಂದೋಲನ ಮಾನಸಿಕ ಸ್ವಾತಂತ್ರ್ಯ. ಪ್ರಪಂಚದ ಆರ್ಥಿಕ ಮತ್ತು ರಾಜಕೀಯ ಭಿನ್ನತೆಗಳನ್ನು ಶಾಂತಿಮಾರ್ಗದಿಂದ ನಿವಾರಿಸಿ, ಜೀವನ ಸಾಮರಸ್ಯ ನೆಲೆಸುವಂತೆ ಮಾಡಲು ತೊಡಗಿದೆ ಭಾರತೀಯ ಆಂದೋಲನ. ಅವಶ್ಯವೆನಿಸಿರುವ ಗುಟ್ಟು ತೊರೆದು ಗುಪ್ತಾಚರಣೆ ತಿರಸ್ಕರಿಸಿ, ಬಹಿರಂಗವಾಗಿ ನಿರ್ಭಯವಾಗಿ ನಡೆದಿದೆ ಭಾರತೀಯ ಆಂದೋಲನ........ಅಧಿಕಾರವು ದರ್ಪವನ್ನೂ, ಪ್ರಜೆಯು ಅಸಹಕಾರವನ್ನೂ ತೊರೆದು, ಅಂತ್ಯದಲ್ಲಿ ಉಭಯತ್ರರೂ ಒಮ್ಮನದಿ ಒಂದಾಗಿ ಬಾಳಬಹುದಾದ ಸಾಧನವು ಅಹಿಂಸಾ ಆಂದೋಲನ. ಪ್ರಪಂಚದ ಇತಿಹಾಸದಲ್ಲಿ ಏಕಮಾತ್ರ ನಿದರ್ಶನವಿದು.

ಆಗಸ್ಟ್ ೧೯೪೨ರಲ್ಲಿ ಹಠಾತ್ತನೆ ಗಾಂಧಿ ಮತ್ತು ಇತರ ನಾಯಕರ ಬಂಧನದಿಂದ ದಾರಿ ಕಾಣದೆ ಕುಪಿತಗೊಂಡ ಜನರು ಅನೇಕ ದೌರ್ಜನ್ಯ ಕೃತ್ಯಗಳನ್ನು ನಡೆಸಿದರು. ಬಂಧಮುಕ್ತರಾದ ಮೇಲೆ ಗಾಂಧಿ ಈ ಕಾರ್ಯಗಳನ್ನು ಕಟುವಾಗಿ ಖಂಡಿಸಿದನು. ಜನ ಸಮುದಾಯ ಸತ್ಯಾಗ್ರಹದ ತತ್ವಗಳನ್ನು ಸರಿಯಾಗಿಗ್ರಹಿಸಿ ನಡೆಯಲಿಲ್ಲವೆಂದು ಮನನೊಂದನು. ಶೇಂದಿ ಇಳಿಸುವ ಈಚಲ ಮರ ಕಡಿಯುವುದೂ ಹಿಂಸೆಯೆಂದೇ ಭಾವಿಸುವ ಗಾಂಧೀ ಈ ದೌರ್ಜನ್ಯ ಕೃತ್ಯಗಳನ್ನು ಎಂದಿಗೂ ಅನುಮೋದಿಸನು. ವಿನಾಶಕಾರೀ ಕೃತ್ಯಗಳಿಗೆ, ಮರ್ಮದ ಯುಕ್ತಿಗಳಿಗೆ ಸತ್ಯಾಗ್ರಹದಲ್ಲಿ ಎಡೆಯಿಲ್ಲ. ಹಿಂಸೆ ಮತ್ತು ಅಸತ್ಯಕ್ಕೆ ಎಡೆಯಾದುದರಿಂದಲೇ ಭಾರತವು ಇಬ್ಭಾಗವಾಗಲು ಕಾರಣವಾಯಿತೆಂದು ಗಾಂಧೀ ತಿಳಿಯುತ್ತಾನೆ. ಮೂವತ್ತು ವರುಷಗಳಿಂದ ಭಾರತ ನಡೆಸಿರುವುದು ಎದೆಗಾರಿಕೆಯ ನಿಜ ಸತ್ಯಾಗ್ರಹವಲ್ಲ. ಇವೆಲ್ಲವೂ ಸಾತ್ವಿಕ ನಿರೋಧದ ಶ್ರೇಣಿಗೆ ಸೇರಿದವು ಎಂದೇ ಗಾಂಧಿಯ ಅಭಿಮತ.

It is a melancholy reflection that our civilization has not yet succeeded in finding any sure means of righting a wrong or settling a dispute save by the wholesale massacre of one's fellow creatures. Major Gen. Temperley

I have been practising with scientific precision non-violence and its possibilities for an unbroken period of over fifty years......I know of no single case in which it has failed ...Gandhi

೨೦. ಸತ್ಯಾಗ್ರಹದ ರೂಪನಿಷ್ಪತ್ತಿ

ತಾನು ದಕ್ಷಿಣ ಆಫ್ರಿಕದಲ್ಲಿ ಕೈಗೊಂಡ ಆಗ್ರಹ ಪೂರಿತ ಚಳವಳಿಗೆ ‘ಸತ್ಯಾಗ್ರಹ’ ಎಂದು ಗಾಂಧಿ ಹೆಸರಿಟ್ಟನು. ಸತ್ಯದಿಂದ ಕೂಡಿದ ಆಗ್ರಹವೇ ಸತ್ಯಾಗ್ರಹ ಎಂದು ಅನ್ವರ್ಥ. ‘ಆಗ್ರಹ’ ಎಂದರೆ ಕೋಪವಲ್ಲ; ಪ್ರೇಮ. ಈ ಪ್ರೇಮದ ಸೋಪಾನ ಅಹಿಂಸೆ. ಸತ್ಯ, ಅಹಿಂಸಾ ಮಾರ್ಗದಿಂದ ನಿರ್ದಿಷ್ಟ ಸಂಕಲ್ಪ ಸಾಧಿಸುವುದೇ ಸತ್ಯಾಗ್ರಹ. ಯುದ್ಧ ವಿರೋಧ (Passificism) ಸಾತ್ವಿಕ ವಿರೋಧ, (Passive Resistance) ಸವಿನಯ ಕಾನೂನು ಭಂಗ, (Civil Disobedience) ಅಸಹಕಾರ (Non-co-operation) ಇವು ಸತ್ಯಾಗ್ರಹದ ಸಂಕುಚಿತ ಪೂರ್ವ ರೂಪಗಳು. ವ್ಯಕ್ತಿ ತನ್ನ ಭಿನ್ನತೆ ಬಲಪ್ರಯೋಗದಿಂದ ಅಥವ ಪಂಚಾಯಿತಿ, ನ್ಯಾಯಸ್ಥಾನಗಳಲ್ಲಿ ಬಗೆಹರಿಸಿಕೊಳ್ಳುತ್ತಾನೆ. ವ್ಯಕ್ತಿಗಳ ಬಲ ಪ್ರಯೋಗವೇ ಜಗಳ. ರಾಷ್ಟ್ರಗಳು ತಮ್ಮ ಕಲಹ ಬಗೆಹರಿಸಿಕೊಳ್ಳಲು ಪ್ರಯೋಗಿಸುವ ಆಸುರೀ ಶಕ್ತಿಯೇ ಯುದ್ಧ. ಆಕ್ರಮಣ ದಾಹ, ಸಾಮ್ರಾಜ್ಯ ವಿಸ್ತರಣೆ, ಆರ್ಥಿಕ ಆಸೆ, ಕಚ್ಚಾ ಮಾಲಿನ ಅವಶ್ಯಕತೆ, ವ್ಯಕ್ತಿ ಅಥವ ರಾಷ್ಟ್ರದ ಪ್ರತಿಷ್ಠೆ, ಧರ್ಮ ಪ್ರಭಾವ ಇವು ಯುದ್ಧಕ್ಕೆ ಕಾರಣವಾಗಬಹುದು. ಹಿಂಸೆಯ ಉಲ್ಬಣವೇ ಯುದ್ಧ. ಅಕ್ರಮ, ಆಸುರೀ ಶಕ್ತಿ ನಾಶಪಡಿಸಲು ಯುದ್ಧ ಕಾಣಿಸಿಕೊಳ್ಳು

ತ್ತದೆ. ಯುದ್ಧ ಕೊನೆಗಾಣಿಸಲು ಕೈಗೊಳ್ಳುವ ಯುದ್ಧದಿಂದ ಹಿಂಸೆ ಮತ್ತು ಆಸುರೀ ಶಕ್ತಿಗಳು ಮೇರೆ ಮೀರಿ ಅತ್ಯಾಚಾರ ನಡೆಸುತ್ತವೆ.

ಯುದ್ಧ ವಿರೋಧಿಗಳ ಮುಖ್ಯ ಧ್ಯೇಯ ನೈತಿಕ ಕಾರಣಗಳಿಗಾಗಿ ಯುದ್ಧ ವಿರೋಧಿಸುವುದು. ತನಗೆ ಏನೇ ವಿಪತ್ತು ಒದಗಿದರೂ ಸರ್ಕಾರಕ್ಕೆ ಯುದ್ಧ ಕಾರ್ಯಗಳಲ್ಲಿ ಅವನು ಸಹಾಯ ನೀಡನು. ಈ ರೀತಿ ತಟಸ್ಥನಾಗಿರುವುದರಿಂದ ಮಾತ್ರ ತೃಪ್ತಿ ಪಡೆಯದವನು, ಯುದ್ಧ ವಿರೋಧ ಚಳವಳಿ ಹೂಡುವನು. ಮೊದಲ ಮಹಾ ಯುದ್ಧದಲ್ಲಿ ಇಂಗ್ಲೆಂಡಿನಲ್ಲಿ ಸುಮಾರು ೧೬,೦೦೦ ಯುದ್ಧ ವಿರೋಧಿಗಳಿದ್ದರು. ದ್ವಿತೀಯ ಮಹಾ ಯುದ್ಧದಲ್ಲಿ ೯ನೇ ಮಾರ್ಚಿ ೧೯೪೦ರ ವರೆಗೆ ಇವರ ಸಂಖ್ಯೆ ೨೬,೬೮೧ ಇದ್ದಿತು. ಕಳೆದ ಮಹಾ ಯುದ್ಧದಲ್ಲಿ ಯುದ್ಧ ವಿರೋಧಿಗಳಾಗಿದ್ದ ಅನೇಕ ವಿಖ್ಯಾತರು ಈಗಿನ ಯುದ್ಧ ವಿಷಯದಲ್ಲಿ ತಮ್ಮ ಧೋರಣೆ ಸ್ವಲ್ಪ ಬದಲಾಯಿಸಿದ್ದಾರೆ. ಪ್ರಪಂಚದ ಶಾಂತಿ ಮತ್ತು ಸ್ವಾತಂತ್ರ್ಯಕ್ಕೆ ವಿಪತ್ತು ತರುವ ಸರ್ವಾಧಿಕಾರ ನಾಶಪಡಿಸಲು, ಪ್ರಜಾಪ್ರಭುತ್ವಕ್ಕೆ ಸಹಕಾರ ನೀಡುವುದು ತಮ್ಮ ಕರ್ತವ್ಯವೆಂದು ಭಾವಿಸುತ್ತಾರೆ. ಸೈನ್ಯಕ್ಕೆ ಸೇರಿ ಯುದ್ಧರಂಗದಲ್ಲಿ ಪ್ರತ್ಯಕ್ಷ ಭಾಗವಹಿಸದಿದ್ದರೂ, ಗಾಯಗೊಂಡವರ ಸುಶ್ರೂಷೆ, ಪ್ರಥಮ ಚಿಕಿತ್ಸೆ, ವಿಮಾನಧಾಳಿ ರಕ್ಷಣಾ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ.

ಸತ್ಯಾಗ್ರಹ ಮತ್ತು ಸಾತ್ವಿಕ ವಿರೋಧಗಳಲ್ಲಿ ಮಹದಂತರ. ಸಾತ್ವಿಕ ವಿರೋಧ ಹಿಂಸೆ ತಿರಸ್ಕರಿಸದು. ಪ್ರತೀಕಾರ ಮಾಡಲು ಹಿಂತೆಗೆಯದು. ಸಾತ್ವಿಕ ವಿರೋಧ ಆತ್ಮಶಕ್ತಿಯ ಅನುಗುಣ ಅಸ್ತ್ರವಾಗದು.

ನೀತಿ ವಿರುದ್ಧ ಶಾಸನ ಉದ್ದೇಶಪೂರ್ವಕ ಧಿಕ್ಕರಿಸಿ ಸರಿಗೊಳಿಸುವುದು ಅಥವ ಶಾಸನ ಕಡಿತದಿಂದ ಹೋಗುವಂತೆ ಮಾಡುವುದೇ ಸವಿನಯ ಕಾನೂನು ಭಂಗ. ವಿರೋಧ ಶಾಸನ ಧಿಕ್ಕರಿಸಿ, ನ್ಯಾಯಸ್ಥಾನದಲ್ಲಿ ಅದನ್ನು ಒರೆಗೆ ಹಚ್ಚುವುದು ಒಂದು ಮಾರ್ಗ. ಸರಕಾರ ಮತ್ತು ನ್ಯಾಯಸ್ಥಾನದಲ್ಲಿ ವಿಶ್ವಾಸವಿದ್ದರೆ ಮಾತ್ರ ಹೀಗೆ ಮಾಡಬಹುದು. ಸಂಕೇತವಾಗಿ ಒಂದು ಶಾಸನ ಪ್ರತಿಭಟಿಸಿ ತನ್ಮೂಲಕ ಸ್ವಾತಂತ್ರ್ಯ ಹೆಚ್ಚಿಸಿಕೊಳ್ಳಲು ಪ್ರಯತ್ನಿಸಲೂ ಬಹುದು. ಉಪ್ಪಿನ ಕಾಯಿದೆ ಭಂಗಪಡಿಸಿ ಸ್ವಾತಂತ್ರ್ಯ ಗಳಿಸಲು ಗಾಂಧಿ ಮಾಡಿದ ಸಾಹಸ ಯೋಗ್ಯ ನಿದರ್ಶನ.

ಸತ್ಯ ಅಹಿಂಸೆ, ಆಧಾರದ ಅಸಹಕಾರಗಳ ಸತ್ಯಾಗ್ರಹದ ಮೊದಲ ಹೆಂತವೆನ್ನಬಹುದು. ಸಹಕಾರ ರಹಿತವಾದುದು ಅಸಹಕಾರ. ಸಹಕಾರ ಮೊದಲ ಇದ್ದೆಡೆಯಲ್ಲಿ ಮಾತ್ರ ಅಸಹಕಾರ ಪ್ರಭಾವಶಾಲಿ ಆದೀತು. ಸಹಕಾರ ನಿರಾಕರಿಸುವುದರಿಂದ ವಿರೋಧಿಗೆ ಕಿರುಕುಳ ಹೆಚ್ಚಿದಂತೆ, ಅಸಹಕಾರ ಯಶಸ್ವಿಯಾಗುವ ಸಂಭವವೂ ಅಧಿಕ. ಶ್ರಮಜೀವಿಗಳು ಹೂಡುವ ಮುಷ್ಕರವೂ ಒಂದು ಬಗೆಯ ಅಸಹಕಾರ. ನಮ್ಮ ಗಿರಣಿಯ ಕೆಲಸ ಸಾಗದು ಎಂಬುದೇ ಈ ಅಸಹಕಾರದ ಅಡಿಗಲ್ಲು; ಅಬ್‌ಕಾರಿ ವರಮಾನ ಸರಕಾರಕ್ಕೆ ತಗ್ಗಿಸುವ ಸರ್ಪಕಾವಲು; ಸಮಾಜದ ಬಹಿಷ್ಕಾರ; ವಿದ್ಯಾರ್ಥಿಗಳು ಶಾಲೆಗೆ ಹೋಗದೆ ನಿಲ್ಲುವುದು; ವಕೀಲರು ಸನ್ನದು ಹಿಂದಕ್ಕೆ ಕೊಡುವುದು ಇವೂ ಸಹ ಅಸಹಕಾರದ ದೃಷ್ಟಾಂತಗಳು.

ಅಸಹಕಾರದಲ್ಲಿಯೇ ಸಹಕಾರವೂ ಉಡುಗಿದೆ. ಒಂದು ಷರತ್ತಿನ ಮೇಲೆ ಸಹಕಾರ ನೀಡುವುದಾಗಿ ಉಪಕ್ರಮವಾಗುವ ಅಸಹಕಾರದ ಅಂತರ್ಯವಿದು. ಶಾಸನ ಸಭೆಗಳಿಗೆ ಕಾಂಗ್ರೆಸ್ಸು ಬಹಿಷ್ಕಾರ ಹಾಕಲು ಈ ಧೋರಣೆಯೇ ಹಿನ್ನೆಲೆ.

ನಿರ್ದಿಷ್ಟ ಉದ್ದೇಶ ಸಾಧಿಸಲು ಅಸಹಕಾರ ಆಚರಣೆಯಲ್ಲಿರುವ ಏಕ ಕಾಲದಲ್ಲಿ, ಅದೇ ಸರಕಾರದೊಡನೆ ಬೇರೆ ಅಂಗಗಳಲ್ಲಿ ಸಹಕಾರವೂ ಆಚರಣೆಯಲ್ಲಿರಬಹುದು. ಇದು ವಿರೋಧಾಭಾಸವಲ್ಲ.

ಅಸಹಾರ ಅರಾಜಕತ್ವವಲ್ಲ, ಅನಾಯಕತ್ವವಲ್ಲ. ಸರಕಾರದೊಡನೆ ಹೂಡಿದ ಅಸಕಾರ ಯಶಸ್ವಿಯಾಗಲು, ಅಸಹಕಾರಿಗಳಲ್ಲಿ ಅನ್ಯೋನ್ಯ ಸಹಕಾರ, ವ್ಯವಸ್ಥೆ ವಿಶೇಷ ಅಗತ್ಯ.

'ಅ' ಕಾರ ಯುಕ್ತವಾದ ಅಸಹಕಾರ, ಅಹಿಂಸೆ ಇವು ಆತ್ಮರಕ್ಷಣೆ ಮಾಡಿಕೊಳ್ಳಲು ಮಾತ್ರ ಯೋಗ್ಯವಾದವು. ತಾನಾಗಿ ವಿಪಕ್ಷಿಯಮೇಲೆ ಬಿದ್ದು ಧಾಳಿ ಮಾಡುವ ಶಕ್ತಿ ಅದಕ್ಕಿಲ್ಲ ಎಂಬ ಆಪಾದನೆ ನಿಜವಲ್ಲ. ಅಸಹಕಾರ ಹೇಡಿಯ ಅಸ್ತ್ರವಲ್ಲ. ಏಟಿಗೆ ಏಟು ಎಲ್ಲ ಸಂದರ್ಭಗಳಲ್ಲಿಯೂ ಪರಾಕ್ರಮವಾಗದು. ಆತ್ಮರಕ್ಷಣೆಗಾಗಿ ಇಲಿಯೂ ಸಹ ಬೆಕ್ಕಿನಮೇಲೆ ತಿರುಗಿಬೀಳಬಹುದು. ಇನ್ನು ಉಳಿಗಾಲವಿಲ್ಲ ಎಂಬ ಭೀತಿಯ ಉದ್ವೇಗವೇ

ಇಲಿಗೆ ಶಕ್ತಿ ಕೊಡುತ್ತದೆ. ಭೀಮಬಲವಿದ್ದೂ ನಿರ್ಬಲ ಶತ್ರುವಿನಮೇಲೆ ತಿರುಗಿಬೀಳದಿರುವುದೇ ನಿಜ ಪರಾಕ್ರಮ. ನಮ್ಮ ಧ್ಯೇಯ ಸಾಧಿಸುವ ಸಲುವಾಗಿ ಕೈಗೊಳ್ಳುವ ಸತ್ಯಾಗ್ರಹವೇ ಸಕ್ರಿಯಾತ್ಮಕ. ಸತ್ಯಾಗ್ರಹ ವಜ್ರದಂತೆ ಕಠೋರವೂ, ಕುಸುಮದಂತೆ ಮೃದುವೂ ಆದುದು. "ಅಹಿಂಸೆ ಉಪಯೋಗಕ್ಕೆ ಬಾರದೆ, ಪ್ರಭಾವಕಾರಿಯಾಗದ ಸಂದಿಗ್ಧ ಪ್ರಸಂಗ, ಅರ್ಧಶತಮಾನದ ನನ್ನ ಜೀವಿತದಲ್ಲಿ ಒಮ್ಮೆಯೂ ತಲೆದೋರಿಲ್ಲ" ಎಂದು ಧೈರ್ಯದಿಂದ ನುಡಿಯುತ್ತಾನೆ ಗಾಂಧಿ.

ಸೋಲರಿಯದ ಅಜೇಯ ಅಸ್ತ್ರ ಸತ್ಯಾಗ್ರಹ. ಶಸ್ತ್ರಧಾರಿ ಶಸ್ತ್ರ ಕಳೆದುಕೊಳ್ಳುತ್ತಲೇ ಧೈರ್ಯ ಉಡುಗಿ ನಿಸ್ಸಹಾಯಕನಾಗುತ್ತಾನೆ. ಪರಾವಲಂಬನೆ ಕಾಣದ, ಸತ್ಯಾಗ್ರಹ ಸೋಲರಿಯದು. ಹಿಂಸಾಪ್ರತಿಭಟನೆ ಶಸ್ತ್ರನಾಶದೊಡನೆ ಮುಕ್ತಾಯವಾಗುತ್ತದೆ. ಆತ್ಮಬಲವಿರುವವರೆಗೂ ಸತ್ಯಾಗ್ರಹಿ ಪ್ರತಿಭಟನೆ ನಡೆಸಬಲ್ಲ. ಈ ಪ್ರತಿಭಟನೆ ಆಚರಣೆಯಲ್ಲಿರುವವರೆಗೂ ಸತ್ಯಾಗ್ರಹ ಸಜೀವ ಇರುತ್ತದೆ, ಅಜೇಯವೆನಿಸಿಕೊಳ್ಳುತ್ತದೆ.

'ಹಿಜರತ್' ಅಥವ ದೇಶಾಂತರ ಹೋಗುವುದೂ ಒಂದು ಬಗೆಯ ಸತ್ಯಾಗ್ರಹ. ಸತ್ಯಾಗ್ರಹಿಯು ಆತ್ಮ ಗೌರವ ಉಳಿಸಿಕೊಂಡು ತನ್ನ ಊರಿನಲ್ಲಿ ಅಥವ ಪ್ರದೇಶದಲ್ಲಿ ವಾಸಿಸುವುದು ಅಸಾಧ್ಯವಾದರೆ ಅಕ್ರಮಕ್ಕೆ ತಲೆಬಾಗುವುದಕ್ಕಿಂತ ಮನೆ ಮಠ ಬಿಟ್ಟು ಹೋಗುವುದೇ ಲೇಸಾದೀತು. ಅಕ್ರಮವನ್ನು ಪ್ರತಿಭಟಿಸುವುದೇ ಉತ್ತಮ ಮಾರ್ಗ. ಹೀಗೆ ಪ್ರತಿಭಟಿಸಲು ಅಸಾಧ್ಯವೆಂದು ತೋರಿ ಬಂದಾಗ ಮಾತ್ರ ದೇಶಾಂತರ ಹೋಗುವುದನ್ನು ಕೈಗೊಳ್ಳಬಹುದು. ೧೯೩೦ರಲ್ಲಿ ಕರನಿರಾಕರಣೆ ನಡೆಸುತ್ತಿದ್ದ ಗುಜರಾತಿನ ರೈತರು ಸರ್ಕಾರದ ದಬ್ಬಾಳಿಕೆಯನ್ನು ತಡೆಯಲಾರದೆ ಹೋದಾಗ ನೆರೆಯ ಬರೋಡ ಸಂಸ್ಥಾನಕ್ಕೆ ಹೋಗಿ ನೆಲೆಸಲು ಗಾಂಧೀ ಅನುಮತಿಯಿತ್ತನು. ಲಿಂಬಡಿ, ಜುನಾಘಡ್, ವಿಠ್ಠಲಘಡ ಸಂಸ್ಥಾನದ ಪ್ರಜೆಗಳೂ ಇದೇ ಮಾರ್ಗವನ್ನು ೧೯೩೮ ಮತ್ತು ೧೯೩೯ರಲ್ಲಿ ಅನುಸರಿಸಿದರು. ಸವರ್ಣ ಹಿಂದುಗಳ ಹಿಂಸೆಯನ್ನು ತಡೆಯಲಾಗದ ಹರಿಜನರು ಗುಜರಾತಿನ ಖೈರಾದಿಂದ ಅನ್ಯ ಪ್ರದೇಶಕ್ಕೆ ಹೋಗುವಂತೆ ಗಾಂಧಿ ತಿಳಿಸಿದನು. ಮುಸಲ್ಮಾನರ ಕ್ರೂರ ವರ್ತನೆ ತಡೆಯಲಾರದ ಹಿಂದುಗಳು ಬಂಗಾಳದ ನವಾಖಲಿಯಿಂದ ಬಿಟ್ಟು

ಹೋಗಲು ಅನುಮತಿ ಗಳಿಸಿದರು. ಶಾಂತಿ ತಲೆದೋರಿದ ಮೇಲೆ ಸ್ವಸ್ಥಾನಕ್ಕೆ ಬರಲೂಬಹುದು. ಆದರೆ ಹೀಗೆ ದೇಶಾಂತರ ಹೋಗುವುದು ಸತ್ಯಾಗ್ರಹಿಯ ದೌರ್ಬಲ್ಯ ಪ್ರದರ್ಶನವೆಂದೇ ಪರಿಗಣಿಸಬೇಕಾದೀತು. ಹಲವು ಅಸಾಧಾರಣ ಸನ್ನಿವೇಶಗಳಲ್ಲಿ ಅಲ್ಪ ಸಂಖ್ಯೆ ಬಹು ಮತವನ್ನು ವಿರೋಧಿಸಿ ಉಳಿವು ಕಾಣದ ಅಂಧಕಾರದಲ್ಲಿ ಮಾತ್ರ ಹಿಜರತ್ ಕೈಗೊಳ್ಳ ಬಹುದು. ಸರ್ಕಾರಕ್ಕೆ ವಿರೋಧವಾಗಿ ಈ ಮಾರ್ಗ ಅಷ್ಟು ಪ್ರಯೋಜನ ಕಾರಿಯಾಗದು.

ಸ್ವಾಧೀನರಾಷ್ಟ್ರದ ಜನಬೆಂಬಲವಿಲ್ಲದೆ ಗೆದ್ದವರು ಒಂದುದಿನ ಕೂಡ ರಾಜ್ಯರಥ ಸಾಗಿಸರು. ಶತ್ರುವನ್ನು ಯುದ್ಧದಲ್ಲಿ ಸೋಲಿಸುವುದು ಮೊದಲ ಕೆಲಸ. ಸೋತ ಶತ್ರುವನ್ನು ಬಗ್ಗಿಸಿ ಹತೋಟಿಗೆ ತಂದು ಗೆದ್ದ ರಾಷ್ಟ್ರ ಸ್ವಪ್ರಯೋಜನ ಪಡೆಯುವುದು ಮುಂದಿನ ಕೆಲಸ. ಗೆದ್ದ ರಾಷ್ಟ್ರವನ್ನು ಅಧೀನದಲ್ಲಿಟ್ಟುಕೊಳ್ಳುವುದೇ ಸಾಮ್ರಾಜ್ಯವಾದದ ಒಂದು ಕಲೆ. ಸ್ವಾಧೀನ ರಾಷ್ಟ್ರದ ಜನದಿಂದಲೇ ಜಯಪಡೆದ ರಾಷ್ಟ್ರ ತನ್ನ ಅಧಿಕಾರ ನಡೆಯಿಸುತ್ತ, ಹಿಡಿತ ಬಿಗಿಪಡಿಸಿಕೊಳ್ಳುತ್ತದೆ. ಇದನ್ನು ಗ್ರಹಿಸಿ ಮನನ ಮಾಡಿಕೊಳ್ಳು ವುದರಲ್ಲಿದೆ ಅಸಹಕಾರದ ಗುಟ್ಟು.

ಒಂದು ರಾಷ್ಟ್ರ ತನ್ನ ಸ್ವಾತಂತ್ರ್ಯ ರಕ್ಷಿಸಿ ಉಳಿಸಿಕೊಳ್ಳಲು ಎಷ್ಟು ತ್ಯಾಗಕ್ಕೆ ಸಿದ್ಧವಿರುತ್ತದೆಯೋ ಅಷ್ಟೇ ತ್ಯಾಗ ಮತ್ತು ಉತ್ಸಾಹ ಕಳೆದು ಹೋದ ಸ್ವಾತಂತ್ರ್ಯ ಗಳಿಸಲು ತೋರ್ಪಡಿಸದು. ಇದರ ಕಾರಣಗಳು ಅನೇಕ. ಸ್ವತಂತ್ರ ರಾಷ್ಟ್ರ ತನ್ನ ಸ್ವಾತಂತ್ರ್ಯ ಮತ್ತು ದೇಶಗೌರವ ಉಳಿಸಿ ಕೊಳ್ಳಲು ತ್ಯಾಗಕ್ಕೆ ಹಿಂಜರಿಯದು. ದೇಶಭಕ್ತರು ಸಮಯವೊದಗಿದಾಗ ಅಸೀಮತ್ಯಾಗ, ಧೈರ್ಯತೋರಿ ದೇಶಕ್ಕಾಗಿ ಪ್ರಾಣ ಸಹ ಧಾರೆ ಎರೆಯು ತ್ತಾರೆ. ಇಂತಹ ವೀರಾಗ್ರಣಿಗಳ ಚರಿತ್ರೆಯೇ ಆ ದೇಶದ ಇತಿಹಾಸ ವಾಗುತ್ತದೆ.

ಆದರೆ ವ್ಯಕ್ತಿಗೂ, ರಾಷ್ಟ್ರಕ್ಕೂ ಭಿನ್ನತೆ ಇದೆ. ಭಿನ್ನ ಮನೋಭಾವನೆ ಗಳ ಸಮೂಹವೇ ರಾಷ್ಟ್ರಾಭಿಪ್ರಾಯ. ಈ ಸಮೂಹದಲ್ಲಿ ವಿರೋಧ ಭಾವನೆಗಳೂ ಅನೇಕ. ಒಂದೇ ಅಪಮಾನ ಒಬ್ಬ ವ್ಯಕ್ತಿಗೆ ಅಸಹನೀಯವೂ, ಮತ್ತೊಬ್ಬನಿಗೆ ಅಲ್ಪವೂ, ಇನ್ನೊಬ್ಬನಿಗೆ ಉಪೇಕ್ಷಣೀಯವೂ ತೋರ

ಬಹುದು. ರಾಷ್ಟ್ರಾಪಮಾನಕ್ಕಾಗಿ ಒಬ್ಬ ಸರ್ವತ್ಯಾಗ ಮಾಡಬಹುದು, ಇನ್ನೊಬ್ಬ ಹೋದಜೀವ ಮತ್ತೊಮ್ಮೆ ಬರುತ್ತದೆಯೇ ಎಂದು ತೃಣೀಕರಿಸ ಬಹುದು. ಹತ್ತು ಜನ ಹೀಗೆ ಭಿನ್ನ ಅಭಿಪ್ರಾಯ ಪಡುವುದರಿಂದ ದೇಶ ಬಲ ಒಡೆದು, ನಾಶವಾಗಿ ಸೋಲಿಗೆ ಮಾರ್ಗವಾಗುತ್ತದೆ. ಜೀವ ಉಳಿಸಿ ಕೊಂಡರೆ ಎಂದಾದರೂ ಸ್ವಾತಂತ್ರ್ಯ ಗಳಿಸಬಹುದು ಎಂಬ ಮನೋಶೈ ಥಿಲ್ಯವೇ ಹೋರಾಟ ಕೊನೆಗಾಣದಿರಲು ಕಾರಣ. ದೇಶಗೌರವ ಕಳೆದು ಕೊಳ್ಳುವುದಕ್ಕೆ ಬದಲಾಗಿ ಮಡದಿ ಮಕ್ಕಳು, ಮನೆ, ಮಠ, ಪ್ರಾಣ ಸರ್ವಸ್ವ ಕಳೆದುಕೊಳ್ಳುವುದೇ ಮೇಲೆಂದು ಬೆಂಕಿಯಲ್ಲಿ ಬಿದ್ದು ಪ್ರಾಣ ಕೊಟ್ಟ ಒಂದು ಜನಾಂಗದ ನಿದರ್ಶನ ರಾಜಸ್ಥಾನ ವಿನಾ ಪ್ರಪಂಚದ ಬೇರೆ ಯಾವ ಇತಿಹಾಸದಲ್ಲಿಯೂ ಇಲ್ಲ ಎಂದು ಮಶ್ರುವಾಲಾ ಬರೆ ಯುತ್ತಾನೆ.

ಗೆದ್ದ ರಾಷ್ಟ್ರವನ್ನು ನಿಶ್ಶಸ್ತ್ರ ಮಾಡುವುದು ಆಧುನಿಕ ಸಾಮ್ರಾಜ್ಯ ವಾದದ ನೀತಿ. ಸ್ವಾತಂತ್ರ್ಯ ಹೋರಾಟ ಕೈಗೊಳ್ಳಲು ನಿಶ್ಶಸ್ತ್ರ ರಾಷ್ಟ್ರ ದಾರಿ ಕಾಣದು. ಶಸ್ತ್ರಕ್ಕಾಗಿ ಅದು ಪರರಾಷ್ಟ್ರ ಸಹಾಯ ಅಪೇಕ್ಷಿಸುತ್ತದೆ. ಈ ಸಹಾಯ ಪಡೆಯುವುದರಲ್ಲಿಯೂ ಸಂಕಟ ಸಿದ್ಧ. ಇದರಲ್ಲಿಯೇ ಸಹಾಯಕರಾಷ್ಟ್ರದ್ದೇ ಮೇಲ್ಗೈಯ್ಯಾಗಬಹುದು. 'ಕಾವಲಿಯಿಂದ ಕೆಂಡಕ್ಕೆ' ಎಂದು ಒಬ್ಬನ ಅಧೀನದಿಂದ ರಾಷ್ಟ್ರ ಮತ್ತೊಬ್ಬನ ಅಧೀನವಾಗಬಹುದು. ಚರಿತ್ರೆಯಲ್ಲಿ ಇಂತಹ ನಿದರ್ಶನಗಳು ಅನೇಕ. ಆತ್ಮಬಲ ಆಧಾರವಾದ ಸತ್ಯಾಗ್ರಹ ಪರಸಹಾಯ ಅಪೇಕ್ಷಿಸದು. ಈ ಸಂಕಟ ಸನ್ನಿವೇಶಕ್ಕೆ ಸತ್ಯಾ ಗ್ರಹ ಆಸ್ಪದ ಕೊಡದು. ಹಿಂಸಾಹೋರಾಟದಲ್ಲಿ ಸಂಭವಿಸುವ ನಷ್ಟ ಅಪಾರ. ಇದರಿಂದ ಚೇತರಿಸಿಕೊಂಡು ತಲೆ ಎತ್ತಲು ವಿಶೇಷ ಪ್ರಯತ್ನ, ದೀರ್ಘ ಅವಧಿ ಬೇಕು. ಅಹಿಂಸಾಮಾರ್ಗ ಇಷ್ಟು ನಷ್ಟಕ್ಕೆ ಎಡೆಗೊಡದು. ಆದುದರಿಂದ ಬೇಗ ಚೇತರಿಸಿಕೊಂಡು ಮತ್ತೆ ಹೋರಾಟ ಉಪಕ್ರಮಿಸ ಬಹುದು. ಅಹಿಂಸೆಯಲ್ಲಿ ಕಹಿ ವಾತಾವರಣಕ್ಕೆ ಆಸ್ಪದವಿಲ್ಲ. ಲಾಠಿ ಪೆಟ್ಟು ತಿಂದ ಸತ್ಯಾಗ್ರಹಿ ಲಾಠಿ ಪ್ರಯೋಗಿಸಿದ ಪೋಲೀಸನನ್ನೂ ದ್ವೇಷಿಸ. ಇದರಿಂದ ಕರ್ತವ್ಯ ಪಾಲಿಸಿದೆನೆಂದು ತಿಳಿಯುವ ಪೋಲೀಸಿನ ಮನದ ಮೇಲೂ ಪರಿಣಾಮವಾಗದಿರದು. ಅಹಿಂಸಾ ರಾಜ್ಯದಲ್ಲಿ ಇಬ್ಬರೂ ಒಂದಾಗುವರು. ವೈರತ್ವ, ರೋಷ, ಪ್ರತೀಕಾರ ಭಾವನೆ ಬೆಳೆಸುತ್ತದೆ— ಹಿಂಸೆ. 'ಪ್ರೇಮ ಬಾಷ್ಪ ಪಶ್ಚಾತ್ತಾಪ ಫಲ'—ಅಹಿಂಸೆ.

If one-fifth of the people refuse to pay their taxes, it would cost more to try to collect them than what the rest would pay into the treasury.

...Benjamin Tucker

India has created a new technique in the history of revolution,......and if maintained in its purity will become a true gift of our people to civilization. ...Tagore

೨೧. ಅಸಹಕಾರದ ವ್ಯಾಪ್ತಿ

ಅಹಿಂಸೆ ಕೇವಲ ಧಾರ್ಮಿಕ ಪ್ರಶ್ನೆಯಾಗಿತ್ತು. ಹಿಂಸೆ ಮಾಡದಿರುವುದೇ ಅಹಿಂಸೆ ಎಂದು ಪ್ರಾಣಿಹಿಂಸೆ ನಿಷೇಧವಿತ್ತು. ಧಾರ್ಮಿಕ ಮತ್ತು ರಾಜಕೀಯ ಪ್ರತ್ಯೇಕವಿದ್ದು, ಘರ್ಷಣೆಗೆ ಹೆಚ್ಚು ಅವಕಾಶವಿರಲಿಲ್ಲ. ಧರ್ಮರಕ್ಷಣೆ ಮಠಾಧಿಪತಿಗಳದು, ರಾಜ್ಯರಕ್ಷಣೆ ಅರಸನ ಹೊಣೆ.

ರಾಜಕೀಯ ಕಾಲಾನುಕ್ರಮ ಪ್ರಧಾನವಾಗುತ್ತ, ಧಾರ್ಮಿಕ ಗೌಣವಾಯಿತು. ತತ್ಪರಿಣಾಮ ರಾಜಕೀಯಕ್ಕೂ, ಧರ್ಮಕ್ಕೂ ಘರ್ಷಣೆ ತಲೆದೋರತೊಡಗಿತು. “ರಾಜ್ಯ ನಿಜ ಕ್ರೈಸ್ತರ ಪೀಡೆ. ನಿಜಕ್ರೈಸ್ತ ರಾಷ್ಟ್ರಕನಲ್ಲ. ರಾಜ್ಯಕ್ಕೆ ಸೇವೆ ಸಲ್ಲಿಸಬೇಕಾಗಿಲ್ಲ. ಮುಕ್ತಿಯ ದಿನ ಸನ್ನಿಹಿತವಾಗುವ ವರೆಗೆ ಸರ್ಕಾರಕ್ಕೆ ತಲೆಬಾಗಿ ನಡೆಯುವುದೇ ಸದ್ವರ್ತನೆ” ಎಂದು ಅನಾಬ್ಯಾಪ್ಟಿಸ್ಟ (Anabaptists) ರು ನಿರ್ಧರಿಸಿ, ೧೫೨೫ರಲ್ಲಿ ಸ್ವಿಟ್ಜರ್ಲೆಂಡಿನಲ್ಲಿ ಸಂಘಸ್ಥಾಪಿಸಿದರು. ಹತ್ತು ವರುಷಗಳಲ್ಲಿ ವಾತಾವರಣ ಬದಲಾಯಿಸಿತು. ೧೫೩೬ರಲ್ಲಿ ಮೆನ್ನೊಸೈಮನ್ಸ್—“ಧರ್ಮಾಚರಣೆಗೆ ಸರ್ಕಾರ ಆತಂಕಪಡಿಸಬಾರದು” ಎಂದು ಸರ್ಕಾರ ಪ್ರತಿಭಟಿಸತೊಡಗಿದ. ತನ್ನ ಅನುಯಾಯಿಗಳು ಸೈನ್ಯದಲ್ಲಿ ಸೇರಬಾರದೆಂದು ನಿಷೇಧಿಸಿದ. ಆದರೆ ಸರಕಾರದ ಕಾಟ ತಡೆಯದೆ ಮಧ್ಯ ಯೂರೋಪಿನಲ್ಲಿದ್ದ ಇವನ ಅನುಯಾಯಿಗಳು ೧೭೮೦ರಲ್ಲಿ ರಷ್ಯಾಗೂ, ೧೮೭೪ರಲ್ಲಿ ಅಮೇರಿ

ಕಾಗೂ ಓಡಿದರು. ರಾಜಕೀಯದಲ್ಲಿ ಭಾಗವಹಿಸಲು ನಿರಾಕರಿಸಿದ 'ಡನ್‌ಕರ್‍ಸ್' (Dunkers) ಅಥವ ಜರ್ಮನಿಯ ಬ್ಯಾಪ್ಟಿಸ್ಟರು (Baptists) ದೇಶ ತೊರೆದು ಆರುಸಾವಿರ ಮೈಲಿಗಳ ಪೆನ್‌ಸಿಲ್‌ವೇನಿ ಯಾಗೆ ೧೭೨೦ ರಲ್ಲಿ ಪಲಾಯನ ಮಾಡಿದರು. ಅಮೇರಿಕದ ಮೂಲನಿವಾಸಿಗಳ ವಿರುದ್ಧ ಯುದ್ಧದಲ್ಲಿ ಭಾಗ ವಹಿಸಲು ನಿರಾಕರಿಸಿದ 'ಕ್ವಾಕರ್ಸ್' (Quakers) ಧರ್ಮ ಪಂಥದವರೂ ದೇಶ ಬಿಡಬೇಕಾಯಿತು. ಯುದ್ಧ ಪ್ರತಿಟಿಸಿ ಅನೇಕರು ಸೆರೆಮನೆ ಸೇರಿದರು. ಪ್ರಾಣಿಹಿಂಸೆ, ಮಾಂಸಭಕ್ಷಣೆ ಪಾಪಕರ ವೆಂದು ಕೆನಡಾ ದೇಶದ 'ಡಕೋಬಾರ್‍ಸ್' (Dukhbors) ಎತ್ತುಗಳನ್ನು ಕಾಡಿಗೆ ಅಟ್ಟಿ, ನೊಗಕ್ಕೆ ತಾವೇ ಹೆಗಲು ಕೊಟ್ಟು ಭೂಮಿ ಉಳುತ್ತಿದ್ದರು! "ಭೂ ಸಾಗುವಳಿಯಲ್ಲಿಯೂ ಪ್ರಾಣಿಹಿಂಸೆಯಾಗುವದಲ್ಲ ಎಂದು ಸಿಂಹಾ ಸನ ತೊರೆದ ಬುದ್ಧ, ಧರ್ಮ ಸಂಗ್ರಾಮ ಅಧರ್ಮವಲ್ಲವೆಂದು ನಿರೂ ಪಿಸಿದ!" ಅಹಿಂಸಾ ಪ್ರಚಾರ ಮಾಡಲು ಧರ್ಮ ಪ್ರಚಾರಕರನ್ನು ಅಶೋಕ ದೇಶದೇಶಗಳಿಗೆ ಕಳುಹಿಸಿದ್ದು ಚರಿತ್ರಾರ್ಹ.

ಇಂಗ್ಲೆಂಡಿನಲ್ಲಿ ೧೯೦೨ರಲ್ಲಿ ಶಿಕ್ಷಣ ಶುಲ್ಕ ಪ್ರತಿಭಟಿಸಲು ನಡೆದು ಸಾತ್ವೀಕ ವಿರೋಧದಲ್ಲಿ ಭಾಗವಹಿಸಲು ಅರವತ್ತು ಸಾವಿರ ಸದಸ್ಯರು ಸಿದ್ಧ ರಾದರು. ೨೫೮ ಸೆರೆಮನೆ ಸೇರಿದರು. ೧೯೧೩ರಲ್ಲಿ ನ್ಯೂಜಿಲೆಂಡಿನ ಕ್ರೈಸ್ಟ್ ಚರ್ಚ್ ಎಂಬ ಒಂದು ನಗರದಲ್ಲಿಯೇ ೪೫೦ ಯುವಕರು ಸೈನ್ಯಶಿಕ್ಷಣ ವಿರೋಧ ಸಂಘದ ಸದಸ್ಯರಾದರು. ವೋಟಿನ ಹಕ್ಕು ಪಡೆಯಲು ೧೯೨೭ ರಲ್ಲಿ ಇಂಗ್ಲೆಂಡಿನ ಮಹಿಳೆಯರು ಪ್ರಚಂಡ ಚಳವಳಿ ಹೂಡಿದರು. ಪಾರ್ಲಿ ಮೆಂಟ್ ನಡೆಯಲು ಅಡಚಣೆ; ರೈಲು, ಟ್ರಾಂ ಓಡಾಟ ತಡೆಗಟ್ಟುವುದು ಮೊದಲಾದ ಕಾರ್ಯಕ್ರಮ ಕೈಗೊಂಡು ಅನೇಕ ಸ್ತ್ರೀಯರು ಸೆರೆಮನೆ ಸೇರಿದರು. ಸೆರೆಮನೆಯಲ್ಲೂ ಉಪವಾಸ. ಪ್ರಸಿದ್ಧ 'ಡರ್ಬಿ' ಕುದುರೆ ಜೂಜಿನಲ್ಲಿ ಕುದುರೆಗಳ ಮುಂದೆ ಬಿದ್ದು ಒಬ್ಬ ಸ್ತ್ರೀ ಹಾಹಾಕಾರ ಎಬ್ಬಿಸಿ ದಳು. ೭೫ ದಿನಗಳ ನಿರಶನ ವ್ರತದಿಂದ ಪ್ರಾಣಾರ್ಪಣೆ ಮಾಡಿ ಐರ್ಲೆಂಡಿನ ಮ್ಯಾಕ್‌ಸ್ವೆನಿ ಜಗದ್ವಿಖ್ಯಾತನಾದ. ಸೆರೆಮನೆಯಲ್ಲಿ ರಾಜಕೀಯರಿಗೆ ಸೌಲಭ್ಯ ಕಲ್ಪಿಸಲು ೭೨ ದಿನಗಳ ಪ್ರಾಯೋಪವೇಶದಿಂದ ಜತೀಂದ್ರ ಅಮರನಾದ.

ಡೇನಿಯಲ್, ಸಾಕ್ರಟೀಸ್, ಪ್ರಹ್ಲಾದ, ಮೀರಾಬಾಯಿ ಇವರು ಪ್ರಥಮ ಶ್ರೇಣಿಯ ಸತ್ಯೋಪಾಸಕರೆಂದು ಗಾಂಧಿ ಹೊಗಳುತ್ತಾನೆ.

ಹಂಗೆರಿ

ಹಂಗೆರಿಯಜನರು ಡೀಕನ ಮುಂದಾಳುತ್ವದಲ್ಲಿ ನಡೆಸಿದಸಾತ್ವಿಕ ವಿರೋಧಗಮನಾರ್ಹ. ಆಸ್ಟ್ರಿಯಾ ಚಕ್ರವರ್ತಿ ಹಂಗೆರಿಯ ಮಂತ್ರಿಮಂಡಳ ಸ್ಥಾಪಿಸಲು ಮಾಡಿದ ಪ್ರಯತ್ನ ನಿಷ್ಪ್ರಯೋಜನವಾಯಿತು. ಹಂಗೇರಿಯ ಶಾಸನ (ಡಯಟ್) ಸಭೆ ಶಾಸನ ಬಾಹಿರವಾದರೂ, ಸದಸ್ಯರು ಸಭೆ ನಡೆಸಲು ಪ್ರಯತ್ನಿಸಿ, ಸೈನಿಕರ ಧೂರ್ತತನಕ್ಕೆ ಎಡೆಗೊಟ್ಟರು. ಹಂಗೇರಿಯನ್ನರು ಕಂದಾಯ ಕೊಡಲು ನಿರಾಕರಿಸಿದರು. ಸರ್ಕಾರ ಸಾಮಾನು ಮುಟ್ಟು ಗೋಲು ಹಾಕಿ ಲಿಲಾವಿಗೆ ಇಟ್ಟಿತು. ಆದರೆ ಯಾರೂ ಕೊಳ್ಳರು. ವಸೂಲಿಗೆ ಹೆಚ್ಚು ವ್ಯಯವೂ ಶ್ರಮವೂ ಆಯಿತು. ಸೈನ್ಯ ಹಳ್ಳಿ ಹಳ್ಳಿಯಲ್ಲಿರಿಸಿ, ತಮ್ಮ ಮನೆಯಲ್ಲಿಯೇ ಸೈನ್ಯಕ್ಕೆ ಅನ್ನ ಆಹಾರ ಒದಗಿಸಬೇಕೆಂದು ಹಂಗೆರಿಯನ್ನರಿಗೆ ಆಸ್ಟ್ರಿಯಾ ಸರ್ಕಾರ ಆಜ್ಞಾಪಿಸಿತು. ಅನ್ನ ನೀಡಿದರೂ, ತಿರಸ್ಕಾರ ವರ್ತನ ತಡೆಯದ ಸೈನಿಕರು ಹಂಗೆರಿಯನ್ನರ ಮನೆಯಲ್ಲಿ ತಂಗಲು ನಿರಾಕರಿಸಿದರು. ಆಸ್ಟ್ರಿಯಾ ಚಕ್ರವರ್ತಿ ವಿಯನ್ನದಲ್ಲಿ ನಡೆಸಿದ ವೈಭವ ದರ್ಬಾರನ್ನು ಹಂಗೇರಿಯನ್ನರು ಬಹಿಷ್ಕರಿಸಿದರು. ಪ್ರಷ್ಯ-ಆಸ್ಟ್ರಿಯ ಯುದ್ಧದಲ್ಲಿ ಆಸ್ಟ್ರಿಯಾಗೆ, ಹಂಗೇರಿ ಸಹಾಯ ನೀಡಲಿಲ್ಲ. ಸೋತು ಕಂಗೆಟ್ಟ ಆಸ್ಟ್ರಿಯ ಕಡೆಗೆ ೧೮೬೭ರಲ್ಲಿ ಹಂಗೇರಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿತು.

ಈಜಿಪ್ಟ್

೧೮೮೨ರಲ್ಲಿ ಈಜಿಪ್ಟನ್ನು ಬ್ರಿಟನ್ ಆಕ್ರಮಿಸಿತು. ಅಂದಿನಿಂದಲೇ ಈಜಿಪ್ಟಿನ ಸ್ವಾತಂತ್ರ್ಯ ಹೋರಾಟ ಉಪಕ್ರಮವಾಯಿತೆನ್ನಬಹುದು. ೧೯೧೪ರ ಮಹಾಯುದ್ಧದಲ್ಲಿ ತನಗೆ ನೆರವಾಗುವುದಾದರೆ ಪೂರ್ಣಸ್ವಾತಂತ್ರ್ಯ ಕೊಡುವುದಾಗಿ ಬ್ರಿಟಿಷರು, ಈಜಿಪ್ಟಿಗೆ ಅಭಯವಚನ ಕೊಟ್ಟರು. ಈಜಿಪ್ಟ್ ಬ್ರಿಟನ್ನಿಗೆ ಶಕ್ತಿ ಮೀರಿ ಸಹಾಯಮಾಡಿತು. ಅಪಾರ ಧನಧಾನ್ಯ ಸಹಾಯ ವಲ್ಲದೆ, ಹತ್ತು ಲಕ್ಷ ಅಂದರೆ ತನ್ನ ಜನಬಾಹುಳ್ಯದಲ್ಲಿ ಹದಿಮೂರನೇ ಒಂದು ಭಾಗ ಸೈನ್ಯಕ್ಕೆ ಸೇರಿದರು. ಯುದ್ಧದಲ್ಲಿ ಬ್ರಿಟನ್ ಜಯ ಪಡೆಯಿತು.

ಆದರೂ ಈಜಿಪ್ಟಿಗೆ ಮಾತ್ರ ಸ್ವಾತಂತ್ರ್ಯ ಕೊಡಲಿಲ್ಲ. ಈಜಿಪ್ಟಿನಲ್ಲಿ ಲಷ್ಕರೀ ಶಾಸನ ಸಾರಿ ಭಯಂಕರ ದಬ್ಬಾಳಿಕೆ ಬ್ರಿಟಿಷರು ಆರಂಭಿಸಿದರು. ರಶೀದ ಪಾಷಾ ತನ್ನ ಮಂತ್ರಿತ್ವಕ್ಕೆ ರಾಜೀನಾಮೆ ಕೊಟ್ಟನು. ಈಜಿಪ್ಟ್ ಪಾರ್ಲಿಮೆಂಟು ರದ್ದಾಯಿತು. ಆರು ತಿಂಗಳು ಮಂತ್ರಿಮಂಡಲವೇ ರಚಿತವಾಗಲಿಲ್ಲ. ಇಪ್ಪತ್ತು ಲಕ್ಷ ಈಜಿಪ್ಟರು ರುಜು ಮಾಡಿದ ಮನವಿ ಬ್ರಿಟಿಷ್ ಪಾರ್ಲಿಮೆಂಟಿಗೆ ಒಪ್ಪಿಸಬೇಕೆಂದು ಜನನಾಯಕ ಜಗಲೂಲ್ ಮಾಡಿದ ಪ್ರಯತ್ನ ವಿಫಲವಾಯಿತು. ಜಗಲೂಲ್ ಮತ್ತು ಅನೇಕರು ಬಂಧಿತರಾದರು. ಎಲ್ಲೆಲ್ಲೂ ದಬ್ಬಾಳಿಕೆ ತಾಂಡವಾಡತೊಡಗಿತು. ಎಲ್‌ಜೊಬಾಟ್ ಗ್ರಾಮದ ಪ್ರತಿಯೊಬ್ಬ ಗಂಡಸಿಗೂ ಛಡೀ ಏಟು. ಅನೇಕ ಗ್ರಾಮಗಳು ನೆಲಸಮವಾದವು. ಕೆಲವರನ್ನು ಸಜೀವ ಹೂತರು. ಕೆಲವರನ್ನು ಅರ್ಧ ಹೂತು ಕತ್ತರಿಸಿದರು. ೪,೦೦೦ ಜನ ನಿರಾಶ್ರಿತರಾದರು. ಈಜಿಪ್ಟರು ದಬ್ಬಾಳಿಕೆ ತಡೆಯದೆ ದಂಗೆ ಎದ್ದರು. ಸರ್ ಲೀ ಸ್ಟ್ಯಾಕ್ ಎಂಬ ರಾಯಭಾರಿ ಕೊಲೆಯಾದನು. ಇದಕ್ಕೆ ಭಯಂಕರ ಪ್ರತೀಕಾರ ಮಾಡಿತು ಇಂಗ್ಲೆಂಡ್.

ಈ ಪ್ರತೀಕಾರದಿಂದ ತಲ್ಲಣಿಸಿದ ಈಜಿಪ್ಟ್ ಗುರಿ ಸಾಧಿಸಲು ಬೇರೆ ದಾರಿ ಹಿಡಿಯಿತು. ೧೯೧೯ರಿಂದ ಅಸಹಕಾರ ಚಳವಳಿ ಉಪಕ್ರಮಿಸಿತು. ಜಗಲೂಲ್ ಮತ್ತು ಇತರ ನಾಯಕರು ಮಾಲ್ಟಾ ದ್ವೀಪದಲ್ಲಿ ಸೆರೆಯಾದರು. ಸರಕಾರೀ ಅಧಿಕಾರದಲ್ಲಿದ್ದ ಈಜಿಪ್ಟರು ರಾಜೀನಾಮೆ ಇತ್ತರು. ಪೋಲೀಸರು ಪ್ರಜೆಗಳ ಮೇಲೆ ಗುಂಡು ಹಾರಿಸಲು ನಿರಾಕರಿಸಿದರು. ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಮುಷ್ಕರ ಹಿಡಿದರು. ಟ್ರಾಂ, ರೈಲು ಮತ್ತು ಜಲ ಸಂಚಾರ ನಿಂತಿತು. ಚಳವಳಿಯ ಉದ್ವೇಗ ತಡೆಯಲಾರದೆ ಜಗಲೂಲ್ ಮತ್ತು ಮುಖಂಡರನ್ನು ಬಿಡುಗಡೆ ಮಾಡಿದರು. ಮಿಲ್‌ನರ್ ಸಮಿತಿ ಈಜಿಪ್ಟಿಗೆ ಬಂತು. ಈಜಿಪ್ಟರು ಇದನ್ನು ಬಹಿಷ್ಕರಿಸಿದರು. ಮುಷ್ಕರ ಮತ್ತು ಬಹಿಷ್ಕಾರ ಬಲಿಯಿತು. ಸ್ತ್ರೀಯರೂ ಪರದೆಯಿಂದ ಹೊರಬಿದ್ದು, ಚಳವಳಿಯಲ್ಲಿ ಮುನ್ನುಗ್ಗಿದರು. ಮಂತ್ರಿಮಂಡಳ ರಾಜೀನಾಮೆ ಕೊಟ್ಟಿತು. ಮಿಲ್‌ನರ್ ಸಮಿತಿ ಬಹಿಷ್ಕಾರ ಯಶಸ್ವಿಯಾಯಿತು. ಹಿಂಸೆಯಿಂದೆ ಸಾಧಿಸಲಾಗದ ಸ್ವಾತಂತ್ರ್ಯ ಈಜಿಪ್ಟ್ ೧೯೨೨ರಲ್ಲಿ ಅಹಿಂಸೆಯಿಂದ ಸಾಧಿಸಿತು.

ಕೊರಿಯ

ಕೊರಿಯಾ ಸ್ವಾತಂತ್ರ್ಯಗಳಿಸಲು ಜಪಾನಿನೊಡನೆ ನಡೆಸಿದ ಅಹಿಂಸಾ ಹೋರಾಟ ಗಣಸೀಯ. ಸೈನ್ಯ, ಶಿಕ್ಷಣ, ರಷ್ಯ ಸೈನ್ಯಾಧಿಕಾರಿಗಳಿಗೆ ಒಪ್ಪಿಸ ಬೇಕೆಂಬ ತೀರ್ಮಾನ ಪ್ರತಿಭಟಿಸಲು ಹತ್ತು ಸಾವಿರ ಕೊರಿಯನ್‌ರು ಅರಸನ ಅರಮನೆ ಮುಂದೆ ಧಾರಣೆ ಕುಳಿತು ಕಾರ್ಯ ಸಾಧಿಸಿದರು.

೧೯೧೦ರಲ್ಲಿ ಕೊರಿಯುವನ್ನು ಜಪಾನ್ ಪೂರ್ಣ ಆಕ್ರಮಿಸಿತು. ರಾಜ ಕುಮಾರ ಇಟೊನ ಕೊಲೆಗಾಗಿ ಜಪಾನ್ ಎಂಟು ವರುಷಗಳ ಕಾಲ ಅವಿಚ್ಛಿನ್ನ ಕ್ರೂರ ದಬ್ಬಾಳಿಕೆ ನಡೆಸಿತು. ಈ ಅವಧಿಯಲ್ಲಿ ೮೨,೧೨೧ ಕೊರಿಯನರು ನಾನಾ ವಿಧ ಶಿಕ್ಷೆಗೆ ಗುರಿಯಾದರು. ಪ್ರತಿವರುಷ ೭೫,೦೦೦ ದಂತೆ ಕೊರಿಯನ್ನರು ಮಂಚೂರಿಯಾಕ್ಕೆ ವಲಸೆ ಹೋದರು. ಈ ಚೈತ್ರ ಯಾತ್ರೆಯಲ್ಲಿ ನೂರಾರು ಜನ ಪ್ರಾಣ ಬಿಟ್ಟರು. ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಕೊರಿಯ ಪ್ರಶ್ನೆ ಬೇಕಾಗಲಿಲ್ಲ. ತನ್ನ ಮಗ ಜಪಾನೀ ಕನ್ಯೆ ಯನ್ನು ಮದುವೆಯಾಗದಿರಲೆಂದು ಕೊರಿಯಾ ಚಕ್ರವರ್ತಿ ಆತ್ಮಹತ್ಯಮಾಡಿ ಕೊಂಡ. ಈ ಹುತಾತ್ಮನ ಅಂತ್ಯಕ್ರಿಯೆಯ ದಿನವೇ ಕೊರಿಯದ ಸ್ವಾತಂತ್ರ್ಯ ಆಚರಣೆಯ ದಿನವಾಯಿತು. ಸತ್ಯಧರ್ಮ ಅನುಸರಿಸಿ ಅಹಿಂಸಾ ಮಾರ್ಗದಲ್ಲಿಯೇ ಸ್ವಾತಂತ್ರ್ಯ ಸಾಧಿಸುವ ಸತ್ಯ ಸಂಕಲ್ಪ ಅಂದು ಮಾಡಿದರು. ಹಿಂಸಾಕೃತ್ಯ ದೇಶಕ್ಕೆ ಶತ್ರುವಾಗುತ್ತದೆ ಎಂದು ಎಲ್ಲರಿಗೂ ಎಚ್ಚರಿಸಲಾಯಿತು. ಸ್ವಾತಂತ್ರ್ಯ ಪ್ರತಿಜ್ಞೆಗೆ ಶಿಕ್ಷೆ, ಸಾವು. ದೊಡ್ಡ ಜಪಾನ್ ಅಧಿಕಾರಿಗಳಿಗೆ ಔತಣ ಕೊಟ್ಟು, ಆ ಸಮಾರಂಭದಲ್ಲಿಯೇ ಸ್ವಾತಂತ್ರ್ಯ ಪ್ರತಿಜ್ಞೆ ಸ್ವೀಕರಿಸಿ, ೩೩ ಕೊರಿಯನ್ ಮುಖಂಡರು ಸೆರೆ ಯಾದರು. ಹಲವರು ತಾವಾಗಿಯೇ ಪೋಲೀಸರ ವಶರಾದರು. ವಿದ್ಯಾರ್ಥಿಗಳ ಮುಷ್ಕರ, ಮೆರೆವಣಿಗೆ ಇತ್ಯಾದಿ ಉಪಕ್ರಮವಾದವು. ಜಪಾನರ ದಬ್ಬಾಳಿಕೆ ದುಸ್ಸಹವಾಯಿತು. ಸ್ತ್ರೀಯರನ್ನು ಬೆತ್ತಲೆ ಮಾಡು ತ್ತಿದ್ದರು. ಇದೂ ಜಪಾನ್ ಶಾಸನ ಬಾಹಿರವಲ್ಲವಂತೆ! ೧೯೧೯ ಮಾರ್ಚಿ ಯಿಂದ ಜೂನ್‌ವರೆಗೆ ೧,೬೬,೮೧೩ ಕೊರಿಯನರು ಸೆರೆಯಾದರು, ೮,೩೫೧ ಶಿಕ್ಷಿತರಾದರು. ಇಂತಹ ಶಾಂತ ಹೋರಾಟ ತಾನೆಲ್ಲೂ ನೋಡಲಿಲ್ಲವೆಂದು ಅಮೇರಿಕದ ಪ್ರೇಕ್ಷಕನೊಬ್ಬ ಬರೆದಿರುತ್ತಾನೆ. ಕಡೆಗೆ ಅಹಿಂಸೆಗೇ ಗೆಲು

ವಾಯಿತು. ಆರು ವರುಷ ಸೆರೆಮನೆಯಲ್ಲಿದ್ದು, ಮರಣದಂಡನೆಗೆ ಗುರಿಯಾಗಿ, ಹತ್ಯಾಕಾರನ ತಪ್ಪಿನಿಂದ ನೆರೆಯುವನು ಗಲ್ಲಿಗೇರಿ ಸಿಂಗ್‌ಮನ್ ರೀ ಬದುಕಿದ! ೧೯೯೮ರಲ್ಲಿ ಇವನೇ ಸ್ವತಂತ್ರ ಕೊರಿಯದ ಪ್ರಥಮ ಮಂತ್ರಿಯಾದ.

ಮೇ ೧೯೨೬ರಲ್ಲಿ ಇಂಗ್ಲೆಂಡಿನ ಕಾರ್ಮಿಕರು ನಡೆಸಿದ ಸಾರ್ವಜನಿಕ ಮುಷ್ಕರವು ಒಂದು ಬಗೆಯ ಸತ್ಯಾಗ್ರಹವೇ. ಕೆಲವು ಪ್ರಮುಖರು ಕಾರ್ಮಿಕರಿಗೆ ದ್ರೋಹ ಮಾಡದಿದ್ದರೆ ಈ ಮುಷ್ಕರ ಯಶಸ್ವಿಯಾಗಿ ಸರ್ಕಾರ ಉರುಳಿ ಹೋಗುತ್ತಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ. ಅಹಿಂಸಾ ಹೋರಾಟದಿಂದ ಹಂಗೇರಿ ಸ್ವಾತಂತ್ರ್ಯ ಗಳಿಸಿದ್ದು ಹಿಂದೆಯೇ ವಿವರಿಸಿದೆ. ಇದೇ ಹಂಗೇರಿಯ 'ಪಿಸ್' ನಗರದ ಗಣಿ ಕೆಲಸಗಾರರು ಕೂಲಿ ಹೆಚ್ಚಿಸಿಕೊಳ್ಳಲು ನಡೆಸಿದ ಮುಷ್ಕರ, ಹೃದಯವಿದ್ರಾವಕ. ೧,೨೦೦ ಕಾರ್ಮಿಕರು ಕೂಲಿ ಹೆಚ್ಚಿಸುವ ವರೆಗೆ ಗಣಿಯಿಂದ ಮೇಲಕ್ಕೆ ಬರುವುದಿಲ್ಲವೆಂದು ಒಳಗೇ ಕುಳಿತರು. ಕಲ್ಲಿದ್ದಲ ಧೂಳು, ಭೂಗರ್ಭ ಉಷ್ಣ, ಕೆಟ್ಟ ಹವೆ, ಅನ್ನ ನೀರು ಕಾಣದೆ ಪ್ರಜ್ಞೆ ತಪ್ಪಿದ ೪೪ ಮುಷ್ಕರಕಾರರನ್ನು ನಾಲ್ಕು ದಿನಗಳಲ್ಲಿಯೇ ಮೇಲಕ್ಕೆ ತರಬೇಕಾಯಿತು. ಪ್ರಜ್ಞೆ ತಪ್ಪಿ ಆತ್ಮಹತ್ಯ ಮಾಡಿಕೊಳ್ಳದಂತೆ ಅನೇಕರನ್ನು ಕಂಬಗಳಿಗೆ ಬಿಗಿದು ಕಟ್ಟಿದರು. ಕೆಲವರಿಗೆ ಹುಚ್ಚು ಹಿಡಿಯಿತು. ೩೪೪ ಚಟ್ಟ ಸಿದ್ಧಮಾಡಿ ಎಂದು ಮುಷ್ಕರಕಾರರು ಸಮಾಧಾನ ಹೇಳಬಂದವರಿಗೆ ಉತ್ತರಕೊಟ್ಟರು. ಮುಷ್ಕರ ಜಯಪ್ರದವಾಯಿತು. ಅಮೆರಿಕದ ತಾಟಸ್ಥ್ಯ (ಸ್ಟೇ-ಇನ್-ಸ್ಟ್ರೈಕ್) ಮುಷ್ಕರ ಸಹ ಒಂದು ಬಗೆಯ ಅಶುದ್ಧ ಸತ್ಯಾಗ್ರಹವೆನ್ನಬಹುದು.

ಮಹಾಯುದ್ಧದ ತರುವಾಯ ವರ್ಸೇಲ್ಸ್ ಒಪ್ಪಂದ ಜರ್ಮನಿಯು ಫ್ರಾನ್ಸಿಗೆ ಪರಿಹಾರ ಕೊಡಬೇಕೆಂದು ನಿರ್ಧರಿಸಿತು. ಆದರೆ ಜರ್ಮನಿ ಈ ಹಣ ಕೊಡಲಾರದಾಯಿತು. ಇದಕ್ಕೆ ಪ್ರತಿಯಾಗಿ ಫ್ರಾನ್ಸ್ ಮತ್ತು ಬೆಲ್ಜಿಯಂ ಸೈನ್ಯಗಳೂ ಜರ್ಮನಿಯ ರೂರ್ ಪ್ರಾಂತವನ್ನು ೧೯೨೩ರಲ್ಲಿ ಆಕ್ರಮಿಸಿದವು. ಜರ್ಮನಿ ಸರ್ಕಾರ ಅಸಹಕಾರ ಪ್ರತಿಭಟನೆ ನಿರ್ಧರಿಸಿತು. ಇದರ ಫಲವಾಗಿ ಒಂದು ಟನ್ ಕಲ್ಲಿದ್ದಲು ಸಹ ಫ್ರಾನ್ಸ್ ಪಡೆಯಲಿಲ್ಲ. ಒಂದೂವರೆ ಲಕ್ಷ ಜರ್ಮನರು ಗಡೀಪಾರಾದರು. ಸಾವಿರಾರು ಜನ ಸೆರೆ

ಯಾದರು. ಒಂದು ನೂರು ಜನ ಸತ್ತರು. ಆದರೆ ಜರ್ಮನ್ ಸರ್ಕಾರಕ್ಕೆ ರೂರ್ ಪ್ರಾಂತದ ಗಣಿ ಮಾಲೀಕರಿಗೂ ಕಾರ್ಮಿಕರಿಗೂ ಪರಿಹಾರ ಕೊಡಲು ಅಸಾಧ್ಯವಾಗಿ ಅಸಹಕಾರ ನಿಲ್ಲಿಸಿತು. ಫ್ರಾನ್ಸಿಗೂ ಅಪಾರ ವೆಚ್ಚ. ಮೂರು ಕಾಸಿನ ಫಲವೂ ದೊರೆಯಲಿಲ್ಲ. ೧೯೨೫ರಲ್ಲಿ ಫ್ರೆಂಚ್ ಸರಕಾರ ಸೈನ್ಯ ಹಿಂದಕ್ಕೆ ಕರೆಸಿಕೊಂಡಿತು. ಸರ್ಕಾರಗಳ ನಡುವೆ ನಡೆಸಿರುವ ಅಸಹಕಾರ ಪ್ರತಿಭಟನೆ, ಪ್ರಪಂಚದಲ್ಲಿ ಇದೊಂದೇ.

ಗಾಂಧಿಯ ನೇತೃತ್ವದಲ್ಲಿ ನಡೆದಿರುವ ಹೋರಾಟಗಳು, ವಾಚಕರಿಗೆ ವೇದ್ಯವೇ. ದಕ್ಷಿಣ ಆಫ್ರಿಕ ಸರ್ಕಾರ ಭಾರತೀಯರ ಮೇಲೆ ಹೊರೆಸಿದ ಅಪಮಾನಕರ ತಲೆಗಂದಾಯ ಪ್ರತಿಭಟಿಸಲು ೧೩,೦೦೦ ನಿರಾಶ್ರಿತರೊಡನೆ ೧೯೧೩ರಲ್ಲಿ ಗಾಂಧಿ ನೇಟಾಲಿಂದ ಟ್ರಾನ್ಸ್‌ವಾಲಿಗೆ ಹೊರಟ. ಜಯಪ್ರದವಾದ ಈ ಪ್ರಥಮ ಸತ್ಯಾಗ್ರಹವೇ ಕೂಲಿ ಗಾಂಧಿಯನ್ನು ಮಹಾತ್ಮ ಗಾಂಧಿಯಾಗಿ ಮಾಡಿತು.

ಈ ಅಮೋಘ ಅನುಭವ ಪಡೆದ ಗಾಂಧಿ ಹಿಂದುಸ್ಥಾನದಲ್ಲಿ ಸಂಸಾರಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮೊದಲಾಗಿ ಎಲ್ಲ ಕ್ಷೇತ್ರಗಳಲ್ಲಿಯೂ ಅಹಿಂಸಾ ಪ್ರಯೋಗ ನಡೆಸಿರುತ್ತಾನೆ. "ಜೀವನದ ಸಕಲ ಕ್ಷೇತ್ರಗಳಲ್ಲಿಯೂ ವ್ಯವಹಾರ ಯೋಗ್ಯವಾಗದ ಅಹಿಂಸೆ ನಿಷ್ಪ್ರಯೋಜಕ" ಎಂದು ಪ್ರಯೋಗದಿಂದ ತೋರಿದ್ದಾನೆ. ಇಲ್ಲಿ ಕೆಲವು ನಿದರ್ಶನ ಮಾತ್ರ ನಮೂದಿಸಿದೆ. ವಿವರ ಕೊಡಲು ಸ್ಥಳಾಭಾವ. ೬೪ ಬಗೆಯ ತೆರಿಗೆಗಳನ್ನು ಆಂಗ್ಲೇಯ ಪ್ಲಾಂಟರುಗಳಿಗೆ ಕೊಡಲು ನಿರಾಕರಿಸಿದ ಚಂಪಾರಣ್ಯ ಸತ್ಯಾಗ್ರಹ; ಖೈರಾ ಸತ್ಯಾಗ್ರಹ; ಕೂಲಿ ಹೆಚ್ಚಿಸಲು ಹೂಡಿದ ಅಹಮದಾಬಾದು ಗಿರಣಿ ಕಾರ್ಮಿಕರ ಸತ್ಯಾಗ್ರಹ; ರೌಲಟ್ ಮಸೂದೆ ಪ್ರತಿಭಟನೆಯ ಸತ್ಯಾಗ್ರಹ; ಮಲಬಾರಿನ ಗುರುವಾಯೂರ್ ದೇವಾಲಯ ಪ್ರವೇಶ ಸತ್ಯಾಗ್ರಹ; ನಾಗಪುರ ಧ್ವಜ ಸತ್ಯಾಗ್ರಹ; ಲೋಕ ವಿಖ್ಯಾತ ಬರ್ಡೋಲಿ ಮತ್ತು ಚರ್ಸಾದ್ ಸತ್ಯಾಗ್ರಹ; ವೀರ ಅಕಾಲಿಗಳ ಗುರುಕಾಬಾದ್ ಸತ್ಯಾಗ್ರಹ; ಕಾರವಾರದ ಕರ ನಿರಾಕರಣೆ, ಮೈಸೂರಿನ ಧ್ವಜ ಸತ್ಯಾಗ್ರಹ; ಹರಿಜನರ ವೈಕಂ ಸತ್ಯಾಗ್ರಹ; ಧರ್ಮಕೂಲಿ ಪಡೆಯಲು ಹಿಮಾಚಲದ ಕೊಟಘಾರಕಾಡುಜನರ ಸತ್ಯಾಗ್ರಹ; ದರಸಾನ ಉಪ್ಪಿನ ಸತ್ಯಾಗ್ರಹ; ದಂಡಿ ಸತ್ಯಾಗ್ರಹ ಮತ್ತು ಯುದ್ಧ ನೀತಿ ಪ್ರತಿಭಟನಾ ಸತ್ಯಾಗ್ರಹ. ಅಹಿಂಸಾ ಹೋರಾಟಗಳಲ್ಲಿ ಗಾಂಧಿಯಷ್ಟು ಅಪಾರ ವಿಜಯ ಇನ್ನಾರೂ ಪಡೆದಿಲ್ಲ.

That Government is best which governs the least.
...Thoreau

The history of liberty is a history of the limitation of governmental powers, not the increase of it.
...Woodrow Wilson

All power tends to corrupt and absolute power corrupts absolutely.
...Lord Acton

Any scheme of reform which employs evil means to achieve what it alleges to be good ends is profoundly to be distrusted.
...Afred Cobbam

In the ideal State of Gandhi there is no political power because there is no State.
...Dhawan

೨೨. ಸರ್ಕಾರ ಮತ್ತು ರಕ್ಷಣೆ

ಪರಶತ್ರು ಭಯ ನಿವಾರಣೆ ಮತ್ತು ಒಳಶಾಂತಿ ರಕ್ಷಣೆ ಸರಕಾರದ ಆದ್ಯ ಕರ್ತವ್ಯ. ಈ ರಕ್ಷಣೆ ಪಡೆದು ನಿರ್ಭಯ ಜೀವನ ನಡೆಸಬೇಕೆಂಬ ಆಕಾಂಕ್ಷೆಯೇ ಸರಕಾರದ ಸ್ಥಾಪನೆಗೆ ಮೂಲ.

ಸರಕಾರದ ಆದ್ಯ ಕರ್ತವ್ಯ ಪ್ರಜಾರಕ್ಷಣೆ, ಸ್ವಾತಂತ್ರ್ಯ ರಕ್ಷಣೆಯಾದರೂ ಸ್ವತಂತ್ರವೇನು ಎಂದು ನಿರ್ಣಯಿಸುವುದೇ ಕಠಿಣವಾಗುತ್ತಿದೆ. ಸ್ವೇಚ್ಛಾವೃತ್ತಿ ಸ್ವಾತಂತ್ರ್ಯವಾಗದು 'ಮಿತಿಯುಕ್ತ ಸ್ವೇಚ್ಛಾವೃತ್ತಿಯೇ ಸ್ವಾತಂತ್ರ್ಯ' ಎಂದು ಅದರ ಲಕ್ಷಣ ನಿರೂಪಿಸಬೇಕಾಗಿದೆ. ಪರಹಿತಕ್ಕೆ ಧಕ್ಕೆ ತಾರದಿರುವುದೇ ಈ ಮಿತಿ. ಈ ಮಿತಿ ಮೀರುವುದೇ ದಬ್ಬಾಳಿಕೆ. ಈ ಮಿತಿ ಮೀರದೆ ಪ್ರಜಾ ಸ್ವಾತಂತ್ರ್ಯ ಕಾಪಾಡುವ ಸರಕಾರ, ಪ್ರಜೆಗಳ ವಿಶ್ವಾಸಕ್ಕೆ ಪಾತ್ರವಾಗುತ್ತದೆ. ಪ್ರಜೆಗಳಿಂದ ಸೇವೆ ಪಡೆಯುವ ಹಕ್ಕನ್ನೂ ತತ್ಪರಿಣಾಮ ಸರಕಾರ ಗಳಿಸುತ್ತದೆ. ಪ್ರಜಾಹಿತ ನಿರ್ಲಕ್ಷಿಸಿ ನಡೆಯುವ

ಸರಕಾರ ಈ ಪ್ರತಿ ಸಹಕಾರ ಪಡೆಯುವ ಹಕ್ಕನ್ನು ಕಳೆದುಕೊಳ್ಳುತ್ತದೆ. ಮಾತ್ರವಲ್ಲ, ಅಂತಹ ಸಂದರ್ಭಗಳಲ್ಲಿ ಅಸಹಕಾರ ಹೂಡುವುದೇ ಪ್ರಜೆಯ ಪ್ರಥಮ ಕರ್ತವ್ಯವಾದೀತು.

ಸ್ವೇಚ್ಛಾವೃತ್ತಿಯ ಮಿತಿ ನಿರ್ಣಯಿಸುವುದರಲ್ಲಿ ಸರಕಾರ ಮತ್ತು ಪ್ರಜೆಗೆ ಘರ್ಷಣವಾಗಬಹುದು. ಈ ಹೋರಾಟ ತಡೆಗಟ್ಟಲು ಸರಕಾರ ಶಾಸನ ಮಾಡುತ್ತದೆ. ನ್ಯಾಯಾಂಗ, ಪೋಲೀಸ್, ಸೈನ್ಯಗಳನ್ನು ಉಪಯೋಗಕ್ಕೆ ತರುತ್ತದೆ. ಪ್ರಜಾ ಪ್ರಭುತ್ವಗಳಲ್ಲಿ ಸಭಾ, ಭಾಷಣ, ಪ್ರಕಟಣ ಸ್ವಾತಂತ್ರ್ಯಗಳ ಸಹಾಯದಿಂದ ಪ್ರಜೆ ತನ್ನ ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ವಿಧಿಯುಕ್ತ ಶಾಸನಬದ್ಧ ಚಳವಳಿಯೊಂದೇ ಅವನಿಗಿರುವ ಸಾಧನ. ಇದು ತಪ್ಪಿದರೆ ಹಿಂಸೆಗೆ ಕೈಯಿಡಬೇಕು. ಆದರೆ ಗಾಂಧೀವಾದ ಹಿಂಸೆಯ ಪ್ರತಿಯಾಗಿ ಅಹಿಂಸಾ ಅಸಹಕಾರ ಹೋರಾಟ ಕೈಕೊಳ್ಳಬಲ್ಲದು. ಗಾಂಧೀವಾದದಲ್ಲಿ ಅಸಹಕಾರವೂ ಶಾಸನಬದ್ಧ ಕಾರ್ಯಕ್ರಮವೇ. ಇದು ಕಾನೂನು ಬಾಹಿರವಲ್ಲ. ಗಾಂಧಿ-ಅರ್ವಿನ್ ಒಪ್ಪಂದ ಈ ಷರತ್ತು ಒಪ್ಪಿದೆ ಎಂದು ಗಾಂಧೀ ವಾದಿಸುತ್ತಾನೆ.

ಸ್ವಾತಂತ್ರ್ಯದ ಮೇರೆ ನಿರ್ದೇಶಿಸುವುದರಲ್ಲಿಯೇ ಸರ್ಕಾರದ ಲಕ್ಷಣ ಸ್ವಯಂ ನಿರ್ಣೀತ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಸ್ವಾತಂತ್ರ್ಯ ಹೆಚ್ಚು. ಸರ್ವಾಧಿಕಾರ ಪ್ರಭುತ್ವದಲ್ಲಿ ಪ್ರಜೆಗಳ ಸ್ವಾತಂತ್ರ್ಯ ಕಡಮೆ. ಸಾಧ್ಯವಾದಷ್ಟು ಹೆಚ್ಚು ಸ್ವಾತಂತ್ರ್ಯ ಪ್ರಜೆಗೆ ಕೊಡುವುದೇ ಕ್ರೊಪೊಟ್‌ಕಿನ್, ಥೋರಿಯೋ, ಟಾಲಸ್ಟಾಯ್, ಬಾಕುನಿನ್ ಮೊದಲಾದ ಅರಾಜಕವಾದಿಗಳ ಗುರಿ. ಗಾಂಧೀವಾದ ಅರಾಜಕವಾದುದಲ್ಲ. ಆದರೂ ಸರಕಾರಕ್ಕಿಂತ ವ್ಯಕ್ತಿ ಶ್ರೇಷ್ಠ ಎಂಬ ಸರಣಿಯನ್ನೇ ಗಾಂಧೀವಾದ ಅನುಸರಿಸುತ್ತದೆ. "ತನ್ನ ಅಧಿಕಾರದರ್ಪ ಪ್ರಜೆಗೆ ಅರಿವಾಗದಂತೆ ಆಡಳಿತ ನಡೆಸುವ ಸರಕಾರವೇ ಉತ್ತಮ ಸರಕಾರ" ಎಂಬ ಥೋರಿಯೋ ಮತ ಗಾಂಧೀವಾದ ಅನುಮೋದಿಸುತ್ತದೆ.

ಗಾಂಧೀವಾದ ಭಾವೀ ರಾಷ್ಟ್ರದ ಚಿತ್ರ ಕೊಡಲು ಪ್ರಯತ್ನಿಸದು. ಹಾಗೆ ಮಾಡುವುದು ಭಾವೀ ಜನಾಂಗದ ಅಧಿಕಾರದ ಅಪಹರಣ. ಸ್ವಾತಂತ್ರ್ಯಗಳಿಸಿದಮೇಲೆ ರಾಜ್ಯ ಅನುರೂಪುಗೊಳಿಸುವುದು ಭಾವೀ

ಜನಾಂಗಕ್ಕೆ ಸೇರಿದ್ದು. "ಹಿಂಸಾ ರಾಜ್ಯಪದ್ಧತಿಯಲ್ಲಿ ನಿರ್ಬಲನಿಗೆ ಸ್ವಾತಂತ್ರ್ಯ ಕಡಮೆ ಅವನ ಸ್ವಾತಂತ್ರ್ಯ ಸಬಲ ಹಿಂಸಾರಾಧಕನ ಅಧೀನ. ಆದರೆ ಅಹಿಂಸಾ ಆಧಾರವ ರಾಜ್ಯದಲ್ಲಿ ನಿರ್ಬಲನೂ ಸಬಲನಷ್ಟೆ ಅಧಿಕಾರ ಅನುಭವಿಸುವನು" ಎಂದು ಮೂಲರೂಪಮಾತ್ರ ನಿರ್ದೇಶಿಸುತ್ತದೆ ಗಾಂಧೀವಾದ. ಬಲುದೂರ ನೋಟ ನೋಡಲು ಗಾಂಧೀವಾದ ಬಯಸದು! "ಸಾಕು ನನಗೊಂದು ಹೆಜ್ಜೆ" ಎಂದು ಅಷ್ಟರಲ್ಲಿಯೇ ತೃಪ್ತಿಗೊಳ್ಳುತ್ತದೆ.

"ಅಹಿಂಸೆಯೇ ಪೂರ್ಣ ಆಧಾರವಾದ ರಾಜ್ಯ ಅಂದಲಾಗದ ಆಕಾಶ ಕುಸುಮ" ಎಂದು ಗಾಧೀವಾದವೂ ಬಲ್ಲದು. ರಾಷ್ಟ್ರ ನಾನಾ ಜನಜಾತಿ ಮತ (ಅಭಿಪ್ರಾಯ) ಗಳ ಸಮುಚ್ಚಯ. ಸರಕಾರ ಇವೆಲ್ಲರ ಪ್ರತಿನಿಧಿ. ಇಂತಹ ಪ್ರತಿನಿಧಿ ಪೂರ್ಣ ಅಹಿಂಸಾವಾದಿಯಾಗದು. ಆದರೂ ಇಂತಹ ಸರಕಾರದ ಅಡಿಗಲ್ಲು ಸತ್ಯ ಅಹಿಂಸೆಯಾಗುವುದು ದುಸ್ತರವಲ್ಲ. ಅಹಿಂಸಾ ವಾದಿಗಳು ಈ ರಾಜ್ಯದಲ್ಲಿ ಅಧಿಕ. ಯಾವ ಸರಕಾರವೂ ಅವ್ಯವಸ್ಥೆಗೆ ಆಸ್ಪದ ಕೊಡದು. ಆದುದರಿಂದ ಶಾಂತಿ ಕಾಯಲು, ವ್ಯವಸ್ಥೆ ಇರಿಸಲು ಅಹಿಂಸಾ ರಾಜ್ಯದಲ್ಲೂ ಸ್ವಲ್ಪ ಪೋಲೀಸು ದಳ ಅವಶ್ಯವೇ ಸರಿ. ಆದರೆ ಈ ಪೋಲೀಸುದಳದ ಬಲ ಲಾಠಿಯಲ್ಲಿ ಅಡಗಿಸದು. ಸೇವಾ ತತ್ಪರತೆ ಮತ್ತು ಪ್ರೇಮವೇ ಅದರ ನಿಜಶಕ್ತಿ. ಗಲಭೆ ಎದ್ದಾಗ ನಿಶ್ಶಸ್ತ್ರ ಶಾಂತಿದಳ ಮಧ್ಯೆ ನುಗ್ಗಿ, ತನ್ನ ಪ್ರಾಣ ಅರ್ಪಿಸಿ ಶಾಂತಿ ರಕ್ಷಿಸುವುದು. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ, ಗಲಭೆ ಅಡಗಿಸಲು ಮಂತ್ರಿಗಳು ಈ ರೀತಿ ಪ್ರಾಣ ಅರ್ಪಿಸದೆ ಹೋದರಲ್ಲ—ಎಂದು ಗಾಂಧಿ ಪರಿತಪಿಸುತ್ತಾನೆ.

ಒಳದೇಶದ ಶಾಂತಿ ರಕ್ಷಣೆ ಅಹಿಂಸೆಯಿಂದ ಸಾಧ್ಯವಾದರೂ, ಪರ ದೇಶದ ಧಾಳಿ ಹೇಗೆ ಎದುರಿಸುವುದು ಎಂಬ ಪ್ರಶ್ನೆಗೆ ಗಾಂಧಿ ಅನೇಕ ಸಂದರ್ಭಗಳಲ್ಲಿ ಸಮರ್ಪಕ ಉತ್ತರ ಕೊಟ್ಟಿದ್ದಾನೆ. ಹಿಟ್ಲರ್ ಜೆಕೊಸ್ಲೊವೇಕಿಯಮೇಲೆ ದಂಡೆತ್ತಿಬಂದಾಗ "ನಾನು ಜೆಕ್‌ನಾಗಿದ್ದರೆ" ಎಂಬ ಗಾಂಧಿಯ ಜಗತ್ಪ್ರಸಿದ್ಧ ಲೇಖನ ಪ್ರಾಸಂಗಿಕ. ದೇಶಗೌರವ ಕಾಪಾಡಲು, ಮನದಲ್ಲಿ ಲೇಶಮಾತ್ರವೂ ದ್ವೇಷ ಎಣಿಸದೆ ಮಡಿಯುವುದು ಮೇಲು. ಅಹಿಂಸಾ ಹೋರಾಟದಿಂದ ಕಲ್ಲೆದೆಯ ಹಿಟ್ಲರನ ಹೃದಯ ಪರಿವರ್ತನೆ

ಯಾಗದಿರಬಹುದು. ಆದರೂ ನಷ್ಟವಿಲ್ಲ. ಆತ್ಮಗೌರವ, ದೇಶಗೌರವ ಉಳಿಯುವುದೇ ಲಾಭ. ಸ್ವಾತಂತ್ರ್ಯ ಇಲ್ಲವೆ ಸಾವು ಎಂದು ಅಳಿಯುವುದೇ ಲೇಸು. ದೈವೀಶಕ್ತಿಗೆ ಹಿಟ್ಲರನು ತಲೆಬಾಗನು ಎಂದು ಹೇಳುವುದೂ ನಿಜವಾಗದು. ಜನ ಹಿಂಸೆಗೆ ಬೆದರಿ ತಲೆಬಾಗುತ್ತಾರೆ ಎಂಬ ಆಧಾರವೇ ಹಿಟ್ಲರ್ ಮತ್ತು ಅವನ ಕುಲ ಮಧಾಂಧರಾಗಲು ಕಾರಣ. ಹಿಂಸೆಯನ್ನು ಅಹಿಂಸೆ ಎದುರಿಸಿದ ನಿದರ್ಶನ ಚರಿತ್ರೆ ಕಂಡರಿಯದು. ಹಿಟ್ಲರನ ಜನ್ಮದಲ್ಲಿ ಈ ಅನುಭವ ನವೀನವಾದೀತು.'

ಈ ಮಹಾಯುದ್ಧದಲ್ಲಿ ಸ್ಲೋವೇಕಿಯ, ಪೋಲೆಂಡ್, ಹಾಲೆಂಡ್, ಗ್ರೀಸ್, ಬೆಲ್ಜಿಯಂ ಮೊದಲಾದ ಸಣ್ಣ ರಾಷ್ಟ್ರಗಳು ವ್ಯವಸ್ಥಿತ ಜರ್ಮನಿಯ ಮುಂದೆ ಒಂದು ದಿನವೂ ನಿಲ್ಲದೆ ನಾಶವಾದುದು ಎಲ್ಲರ ಕಣ್ಣನ್ನೂ ತೆರೆಸಿದೆ. ಕ್ಯೋಟ್ಯಾಂತರ ವೆಚ್ಚ ಮಾಡಿದ್ದ ಫ್ರಾನ್ಸ್ ಸಹ ಜರ್ಮನಿಯ ಹೊಡೆತ ತಡೆಯಲಾರದೆ ಹೋಯಿತು. ಹೃದಯದೌರ್ಬಲ್ಯವೇ ಇದಕ್ಕೆ ಪ್ರಥಮ ಕಾರಣ. ಅಹಿಂಸಾ ಪ್ರತಿಭಟನೆಯಿಂದ ಜಯ ಸಂದಿಗ್ಧವೆನಿಸಿದರೂ, ಖಂಡಿತ ಎಂದಿಗೂ ಅಪಜಯವಾಗುತ್ತಿರಲಿಲ್ಲ. ಒಂದು ಹಿಡಿ ನಿಶ್ಶಸ್ತ್ರ ನಿರಾಯುಧ ಜನ ಅಪಾರ ಆಸುರೀಶಕ್ತಿಗೆ ತಲೆಬಾಗದೆ, ಮಣಿಯದೆ ಮಡಿದರೆಂಬ ಧವಳಕೀರ್ತಿ ಚಿರಸ್ಮರಣೀಯವಾಗುತ್ತಿತ್ತು. ಅದಕ್ಕೂ ಹೆಚ್ಚಿನ ಜಯ ಬೇರೆಯುಂಟೆ ?

ಹಿಂಸಾಯುದ್ಧದಲ್ಲಿ ಜಯಗಳಿಸಲು ಶತ್ರುವಿಗಿಂತ ಅಪಾರ ಸಿದ್ಧತೆ ಅವಶ್ಯ. ಸಮುದ್ರದಲ್ಲಿ ಬಿದ್ದು, ತನ್ನ ಮೃತದೇಹದ ಹಳ್ಳ ಮುಚ್ಚಲು ಪ್ರಯತ್ನಿಸುವ ಇರುವೆ ಸಾಲಿನಂತೆ ಈ ಭಯಂಕರಭೂತದ ಬಾಯಿಗೆ ಏನು ಸುರಿದರೂ ತೀರದು ಎನ್ನುತ್ತಾನೆ ಅಪಟನ್‌ಸಿನ್‌ಕ್ಲೇರ್. 'ಸಕಲ ಸಂಪದ್ಯುಕ್ತ ಬ್ರಿಟಿಷ್ ಸಾಮ್ರಾಜ್ಯವೇ ಪರ ಸಹಾಯವಿಲ್ಲದೆ ಸ್ವರಕ್ಷಣೆ ಮಾಡಿಕೊಳ್ಳುವದು ಅಸಾಧ್ಯ' ಎನ್ನುತ್ತಾನೆ ಲೂಯಿ ಫಿಷರ್. ಇನ್ನು ಚಿಲ್ಲರೆ ರಾಷ್ಟ್ರಗಳ ಪಾಡೇನು ? ಅವರ ಪ್ರಯತ್ನ ಸಮುದ್ರ ತುಂಬಲು ಇರುವೆ ಮಣ್ಣು ಹೊರುವಂತೆಯೇ ಸರಿ !

'ಶತ್ರುವಿನಲ್ಲಿ ಅಧೈರ್ಯ, ಸೋಲು ಮನೋಭಾವನೆ ತಲೆದೋರುವಂತೆ ಮಾಡುವುದೇ ಯುದ್ಧದ ಗುರಿ. ಶತ್ರು ಸಂಹಾರವೇ ಯುದ್ಧದ

ಉದ್ದೇಶವಲ್ಲ' ಎನ್ನುತ್ತಾನೆ, ಯುದ್ಧ ಶಾಸ್ತ್ರ ನಿಪುಣ ವಾಂಡರ್ ಗೋಲ್ಟ್ಸ್. ಪರಶತ್ರು ಧಾಳಿಯಿಂದ ದೇಶರಕ್ಷಿಸಲು ಈ ಮನೋ ವಿಜ್ಞಾನ ತತ್ವವೇ ಅಹಿಂಸೆಯ ಆಧಾರ. ಅಹಿಂಸವೇ ಆಧಾರವಾದ ರಾಷ್ಟ್ರ ಯಾವ ಪಶು ಬಲಕ್ಕೂ ತಲೆಬಾಗದು. ಅಸ್ತ್ರ ಆದಕ್ಕೆ ಅನವಶ್ಯಕ ಎಂಬ ತಿಳುವಳಿಕೆಯನ್ನು ಪರರಾಷ್ಟ್ರ ಧಾಳಿಯಿಂದ ಅಹಿಂಸಾ ತನ್ನ ರಾಷ್ಟ್ರ ರಕ್ಷಿಸುತ್ತದೆ. ಯುದ್ಧ ದಲ್ಲಿ ಜಯಪಡೆಯುವುದು ಮೊದಲ ಸಾಹಸವಾದರೆ, ಗೆದ್ದ ರಾಜ್ಯ ಸ್ವಾಧೀನ ಪಡಿಸಿಕೊಂಡು, ಅಲ್ಲಿಯ ಜನರನ್ನು ಬಗ್ಗಿಸಿ ವಿಧೇಯರಾಗಿ ಮಾಡಿಕೊಳ್ಳು ವುದು ಎರಡನೆಯ ಸಾಹಸ. ತನ್ನ ಪ್ರತಿಭೆಯನ್ನು ತೋರಲು ಈ ದ್ವಿತೀಯ ಹಿಂಸೆ ಅಹಿಂಸೆಗೆ ವಿಶೇಷ ಆಸ್ಪದಕೊಡುತ್ತದೆ.

ಸಾಮ್ರಾಜ್ಯವಾದ ಅರಿಯದು ಅಹಿಂಸೆ. ಶಸ್ತ್ರ ಸನ್ಯಾಸ ಅಂಗೀಕರಿಸಿ, ನಿಶ್ಶಸ್ತ್ರವಾಗಿ ಪ್ರಪಂಚದ ರಾಷ್ಟ್ರಗಳೆಲ್ಲ ಒಂದಾಗಿ, ಶಾಂತಿಯಿಂದ ಬಾಳ ಬೇಕೆಂಬುದೇ ಗಾಂಧೀವಾದದ ಗುರಿ. ಸಾಮ್ರಾಜ್ಯ ವಿಸ್ತರಣೆ ಖಂಡಿಸು ವುದರಿಂದ ಶತ್ರುಗಳೂ ಅದಕ್ಕೆ ಮಿತ್ರರಾಗುತ್ತಾರೆ. ಸ್ವಾತಂತ್ರ, ಶಾಂತಿ ಕಾಯಲು ಇದೇ ಗುರಿಯುಳ್ಳ ಇತರ ರಾಷ್ಟ್ರಗಳೊಡನೆ ಅದು ಸ್ನೇಹ ಕೋರುತ್ತದೆ.

ಹಿಂದುಸ್ಥಾನವನ್ನೇ ತನ್ನ ಪ್ರಯೋಗ ಕ್ಷೇತ್ರಮಾಡಿ ಅಹಿಂಸೆಯ ಸಾಧ್ಯತೆಯನ್ನು ತೋರಬೇಕೆಂಬ ಗಾಂಧಿಯ ಹೆಬ್ಬಯಕೆ, ಭಾರತದ ಬಂಧ ವಿಮೋಚನೆಯ ಸೂತ್ರವನ್ನು ಗಾಂಧೀ ಕೈಗೊಂಡ ಮೂವತ್ತೈದು ವರುಷ ಗಳ ಅವಿಚ್ಛಿನ್ನ ಹೋರಾಟದ ಪರಿಣಾಮವಾಗಿ ಇಂದು ಕೈಗೂಡಿದೆ. ಸುಮಾರು ಎರಡು ಶತಮಾನಗಳಿಂದ ತಮ್ಮ ಅಧೀನದಲ್ಲಿದ್ದ ಭಾರತವನ್ನು ಬ್ರಿಟಿಷರು ೧೯೪೭ನೆ ಆಗಸ್ಟ್ ೧೫ನೇ ತಾರೀಖು ಬಿಟ್ಟು ಹೋಗುತ್ತಾರೆ. ಅಹಿಂಸೆಯಿಂದ ಭರತಖಂಡದಷ್ಟು ವಿಶಾಲವಾದ ಒಂದು ದೊಡ್ಡ ರಾಷ್ಟ್ರ ಸ್ವಾತಂತ್ರ್ಯ ಗಳಿಸಿರುವುದು ಜಗತ್ತಿನ ಇತಿಹಾಸದಲ್ಲಿ ಇದೇ ಮೊದಲು. ಈ ಅಹಿಂಸೆ ಕಲಂಕರಹಿತವಿಲ್ಲದಿರಬಹುದು. ಅಸತ್ಯ ಅನ್ಯಾಯದ ಕ್ರಮ ಗಳನ್ನು ಅಹಿಂಸೆಯ ಅನುಚರರು ಅನುಸರಿಸಿರಬಹುದು. ಆದರೂ ಭಾರತ ಮಹಾ ಸಭೆಯು ಸೂತ್ರಗಳನ್ನು ಗಾಂಧೀ ವಹಿಸಿಕೊಂಡ ಮೊದಲಿಂದ ಅಹಿಂಸಾ ಪಥದಲ್ಲಿಯೇ ಅದನ್ನು ನಡೆಸಿಕೊಂಡು ಬರುತ್ತಿರುವನು.

ಗಾಂಧಿಗೆ ಅಹಿಂಸೆಯೇ ಒಂದು ಗುರಿ; ಕಾಂಗ್ರೆಸ್ಸಿಗೆ ಸ್ವಾತಂತ್ರ್ಯ ಗಳಿಸಲು ಅಹಿಂಸೆ ಒಂದು ಮಾರ್ಗ ಮಾತ್ರ. ಮುಖ್ಯವಾಗಿ ಅಹಿಂಸೆಯ ಪ್ರಯೋಗ ಬಲದಿಂದ ಭಾರತ ಬಂಧಮುಕ್ತವಾಗಿದೆ ಎಂಬುದನ್ನು ಈಗಾಗಲೇ ಅನೇಕರು ಅಸಡ್ಡೆಯಿಂದ ಕಾಣುತ್ತಿರುವುದು ಶೋಚನೀಯ. ಸ್ವಾತಂತ್ರ್ಯ ಸಂಗ್ರಾಮದ ಕಡೆಯ ಹಲವು ಘಟನೆಗಳು ಇದಕ್ಕೆ ಕಾರಣ. ಸುಭಾಷ್ ಚಂದ್ರ ಬೋಸರ ರೋಮಾಂಚಕವಾದ ರಾಜಕೀಯ ಹೋರಾಟ; ಇದುವರೆಗೆ ಭಾರತವನ್ನು ಬಂಧನದಲ್ಲಿರಿಸಲು ಸಹಾಯಕರಾಗಿದ್ದ ಸೈನಿಕರೂ, ನಾವಿಕರೂ, ವೈಮಾನಿಕರೂ ಬೋಸರಿಂದ ಸ್ಫೂರ್ತಿಪಡೆದು ಬ್ರಿಟಿಷರ ವಿರೋಧ ತಿರುಗಿ ಬಿದ್ದುದು; ಅಂತರರಾಷ್ಟ್ರೀಯದಲ್ಲಿ ಬ್ರಿಟಿಷರ ಬಲಪ್ರಭಾವ ಇಳಿದಿರುವುದು ಇವೆಲ್ಲ ಅಂತ್ಯದಲ್ಲಿ ಭಾರತ ಹಿಂಸೆಯಿಂದಲೇ ಜಯ ಪಡೆದಿದೆ ಎಂಬ ಭಾವನೆಗೆ ಕಾರಣ. ಹಿಂಸೆ ಮತ್ತು ದೌರ್ಜನ್ಯ ಕೃತ್ಯಗಳಿಂದ ಮುಸ್ಲಿಂ ಲೀಗ್ ಪಾಕಿಸ್ತಾನ ಗಳಿಸಿದೆ ಎಂಬುದೊಂದು ವಿತಂಡವಾದ. ಅರವತ್ತು ವರುಷಗಳ ಅವಿಚ್ಛಿನ್ನ ಅಹಿಂಸೆಯ ಹೋರಾಟದ ಹಿನ್ನೆಲೆ ಅರಿವಿಗೆ ಈಗ ಬಾರದಾಗಿದೆ. ವರ್ತಮಾನದಲ್ಲಿ ಕಣ್ಣೆದುರಿಗೆ ನಡೆಯುತ್ತಿರುವ ದುರಂತ ದೃಶ್ಯಗಳು ಹಿಂದಿನ ಚರಿತ್ರೆಯನ್ನು ಮರಸುವಂತೆ ಮಾಡಿದೆ. ಆದರೆ ದೀರ್ಘ ದೃಷ್ಟಿಯಿಂದ ವಿಚಾರಮಾಡಿ ನೋಡಿದರೆ ರಾಷ್ಟ್ರ ಇತಿಹಾಸದಲ್ಲಿ ಈ ಘಟನೆಗಳು ಕೇವಲ ಕ್ಷಣಿಕ ಮತ್ತು ತಾತ್ಕಾಲಿಕ ಎಂದು ವೇದ್ಯವಾಗದಿರದು.

"ಸುಸಂಘಟಿತ ಕೇಂದ್ರೀಕೃತ ಅಹಿಂಸೆಯ ಸಾಕ್ಷಾತ್ಕಾರವೇ ರಾಜ್ಯ. ವ್ಯಕ್ತಿಗೆ ಆತ್ಮವಿದೆ; ರಾಜ್ಯ ಆತ್ಮ ರಹಿತ. ಹಿಂಸೆಯೇ ಜೀವಾಧಾರಿಯಾದ ರಾಜ್ಯವನ್ನು ಹಿಂಸೆಯಿಂದ ಬೇರ್ಪಡಿಸಲಾಗದು" ಎನ್ನುತ್ತಾನೆ ಗಾಂಧಿ. ಆದ್ದರಿಂದಲೇ ಹೆಚ್ಚು ಅಧಿಕಾರ ಸರ್ಕಾರಕ್ಕೆ ಕೊಡಲು ಗಾಂಧಿ ಸಮ್ಮತಿಸನು. ಜನಸೇವೆಯ ನೆಪದಿಂದಲೇ ಸರ್ಕಾರಗಳೆಲ್ಲ ಅಧಿಕಾರ ಮೊದಲು ಗಳಿಸುವುದು. ಅನಂತರ ಈ ಅಧಿಕಾರ ಜನಗಳ ವಿರುದ್ಧ ಪ್ರಯೋಗಿಸಲು ಸರ್ಕಾರ ಹೇಸದು. "ಎಲ್ಲರೂ ಅಧಿಕಾರ ಬಯಸುವುದು ಧರ್ಮೋದ್ಧಾರಕ್ಕಾಗಿಯೇ; ಆದರೆ ಪ್ರಾಪ್ತ ಅಧಿಕಾರ ಬಲದಿಂದ ಧರ್ಮದ ಉದ್ಧಾರವಾಗಿರುವುದು ಇತಿಹಾಸದಲ್ಲಿ ಅತಿ ವಿರಳ" ಎಂಬ ಲಿನ್ ಯುಟಾಂಗಿನ ಸತ್ಯ ವಾಕ್ಯವನ್ನು ಗಾಂಧಿಯೂ ಸಮರ್ಥಿಸುತ್ತಾನೆ.

The idea of complete and over-whelming victory is the greatest folly on earth; such victories only lead to bankruptcy, moral as well as economic.

...Captain Liddel Hart

That man should fight is perhaps part of their nature; but what they fight about is part of their nurture, habit, training, tradition and ways of thought.

Dis-armament will not abolish war; you cannot abolish war from a competitive system of civilization; competition is the root basis of such system of civilization and competition is war.

...Sir Norman Angell

೨೩. ಸಮಾಧಾನ

ಗಾಂಧೀವಾದ ವಿಮರ್ಶಿಸುತ್ತ — 'ಸತ್ಯಾಗ್ರಹದಿಂದ ದೇಶದಲ್ಲಿ ಅಶಾಂತಿ ಮತ್ತು ಅವ್ಯವಸ್ಥೆ ತಲೆದೋರಬಹುದು. ಆದರೆ ರಾಜ್ಯವಿಪ್ಲವ ಸಾಧ್ಯವಿಲ್ಲ' ಎನ್ನುತ್ತಾನೆ ಸ್ಪ್ರಾಟ್.

'ಬಿಚ್ಚು ಕತ್ತಿಯಲ್ಲದೆ, ಭಾರತದ ಬಂಧ ವಿಮೋಚನೆಗೆ ಬೇರೆ ಮಾರ್ಗ ವಿಲ್ಲ' ಎಂಬುದು ಮುಸ್ಲಿಂ ಲೀಗಿನ ಕಾರ್ಯದರ್ಶಿ ನವಾಬ್ ಜಾದಾ ಲಿಯಾಖತ್ಅಲಿಖಾನರ ಅಭಿಪ್ರಾಯ.

ಸತ್ಯಾಗ್ರಹದಲ್ಲಿ ಅನಾಯಕತ್ವ ಕಾಣುತ್ತಾರೆ ಭಾರತದ ಲಿಬರಲ್ ಪಕ್ಷದವರು. ಇಷ್ಟು ಉಗ್ರ ಅಸ್ತ್ರ ಪ್ರಯೋಗ ಅವರು ಸಮ್ಮತಿಸರು. ಶಾಸನ ಸಮ್ಮತ ಚಳವಳಿಯಲ್ಲಿಯೇ ಅವರಿಗೆ ವಿಶ್ವಾಸ.

'ಸತ್ತರೆ ಪೀಡೆ ಕಳೆಯಿತು' ಎಂಬ ಅಧಿಕಾರ ದರ್ಪದ ಮುಂದೆ 'ಗಾಂಧಿಯ ಉಪವಾಸದ ಬೆದರಿಕೆಯು ಬೇಳೆ ಬೇಯದು' ಎಂಬ

ಸಾಮ್ರಾಜ್ಯವಾದಿಗಳ ಧೋರಣೆ ವ್ಯಕ್ತಪಡಿಸುತ್ತಾನೆ, ಆಂಗ್ಲ ಲೇಖಕ ಎಚ್. ಜಿ. ವೆಲ್ಸ್.

ವಾಕ್ಯಸರಣಿಯಲ್ಲಿ ವಿಶೇಷ ಭಿನ್ನವಿದ್ದರೂ, ಈ ಎಲ್ಲ ವಾದಸರಣಿಯ ಸಾರ ಸತ್ಯಾಗ್ರಹದ ತಿರಸ್ಕಾರ. ಸಮಾಜವಾದಿ ಸ್ಪ್ರಾಟ್ ಮೇಲ್ಕಂಡ ತೀರ್ಮಾನಕ್ಕೆ ಬರಲು ಕಾರಣ ಒಂದೇ. 'ಗಾಂಧಿ ಬಂಡವಾಳಗಾರರ ವಿರೋಧಿಯಲ್ಲ. ಬಂಡವಾಳಗಾರರು ಬ್ರಿಟಿಷ್ ಸಾಮ್ರಾಜ್ಯದ ಒಂದು ಅಂಗ. ತನ್ನ ಚಳವಳಿಯಿಂದ ಬ್ರಿಟಿಷ್ ಪ್ರಭುತ್ವವನ್ನು ತೊಂದರೆಗೆ ಸಿಲುಕಿಸಿದರೂ, ಅದೇ ಪ್ರಭುತ್ವದ ಊರುಗೋಲಾದ ಭಾರತೀಯ ಬಂಡವಾಳಗಾರರ ಮೇಲೆ ಬಂಡಾಯಕ್ಕೆ ಆಸ್ಪದ ಕೊಡನು. ಬಂಡವಾಳಗಾರರೇ ಗಾಂಧಿಯ ಸಹಾಯ ಕೋರುತ್ತಾರೆ. ಈ ಚಳವಳಿಯಿಂದ ಅವರು ಲೇಶವೂ ಬೆದರರು'.

ಗಾಂಧೀವಾದ ಸಮಾಜವಾದವಲ್ಲ. ಬಂಡವಾಳಶಾಹಿ ನಾಶಮಾಡಿ ವರ್ಗವಿನ್ಯಾಸ ತೊಲಗಿಸುವುದು ಗಾಂಧೀವಾದದ ಗುರಿಯಲ್ಲ. ಬಂಡವಾಳಗಾರರು ರಾಷ್ಟ್ರದ ಧನಪಾಲಕರೆಂದು ಭಾವಿಸುತ್ತದೆ ಗಾಂಧೀವಾದ. ಜಮೀನ್ದಾರರೂ, ಬಂಡವಾಳಗಾರರೂ ಧನದ 'ಟ್ರಸ್ಟೀ'ಗಳೇ ವಿನಾ ಅದರ ಒಡೆಯರಲ್ಲ. ತನ್ನ ಅಧೀನದ ಧನ ಮತ್ತು ಉತ್ಪನ್ನ ಸ್ವೇಚ್ಛೆಯಾಗಿ ವೆಚ್ಚ ಮಾಡುವ ಅಧಿಕಾರವಿಲ್ಲ ಅವನಿಗೆ. ಸಮಾಜ ಅಥವ ಸರ್ಕಾರ ಅವನ ಭಾಗಕ್ಕೆ ಎಷ್ಟು ಮೀಸಲಾಗಿ ಕೊಡುವುದೋ ಅಷ್ಟಕ್ಕೆ ಮಾತ್ರವೇ ಅವನ ಹಕ್ಕುದಾರಿ. ಅವನ ಕುಟುಂಬದ ಸುಖ ಜೀವನಕ್ಕೆ ಅವಶ್ಯವೆನಿಸಿದಷ್ಟು ಮಾತ್ರ ಪಡೆಯಬಲ್ಲನು. ತನ್ನ ಅಧೀನದಲ್ಲಿರುವ ಒಬ್ಬ ಸಂಸಾರಿಯ ಕನಿಷ್ಠಾಂಶದ ಹನ್ನೆರಡು ಪಾಲಿಗಿಂತ ಹೆಚ್ಚು ಆತ ಪಡೆಯಲಾರ. ಇದು ಅನುಭವಪೂರ್ವಕವಾದ ಸಂಖ್ಯೆ ಎಂದು ದಾಂತವಾಲಾ ಅಂಕಿ ಸಂಖ್ಯೆಗಳಿಂದ ಉದಹರಿಸುತ್ತಾನೆ. ರಷ್ಯದ ರಾಷ್ಟ್ರ ವರಮಾನದ ಅರ್ಧಭಾಗ ಶೇಕಡ ಹನ್ನೆರಡು ಜನರಲ್ಲಿ ಹಂಚಿ ಹೋಗುತ್ತದೆ ಎಂದು ಬರ್ನ್‌ಹ್ಯಾಂ ತೋರಿದ್ದಾನೆ. ಗಾಂಧೀವಾದ ತಾನಾಗಿ ಧನಪಾಲಕರಿಗೆ ನೀಡುವುದೂ ಇಷ್ಟೇ ಆಗಿದೆ. 'ಟ್ರಸ್ಟಿ' ಅಥವ ನಿಕ್ಷೇಪಾಧಿಕಾರಿಯ ಈ ಸಿದ್ಧಾಂತವು ಗಾಂಧೀವಾದದ ಇತರ ತತ್ವಗಳಿಗನುಗುಣವಾಗಿ ಹೊಂದಿಕೊಳ್ಳುತ್ತದೆ. ವ್ಯಕ್ತಿ ಮತ್ತು ಸಮಾಜದ ಧಾರ್ಮಿಕ ಬುದ್ಧಿಯೇ ಇದರ ಹಿನ್ನೆಲೆ. ಸಮಾಜ ಸಮತಾ

ವಾದಗಳು ಧನಿಕರನ್ನು ನಾಶಪಡಿಸುತ್ತವೆ. ಬಲಪ್ರಯೋಗದಿಂದ ಅವರ ಆಸ್ತಿ ಪಾಸ್ತಿಗಳನ್ನು ಕಸಿದುಕೊಳ್ಳಬೇಕೆಂದು ಉಪದೇಶಿಸುತ್ತವೆ. ಕೇವಲ ವಿಧಿಯಿಲ್ಲದೆ ಹೋದರೆ ಸ್ವಲ್ಪ ಅಹಿಂಸಾ ಬಲವಂತಿಕೆ ಪ್ರಯೋಗಿಸುವುದನ್ನು ಗಾಂಧಿ ಅನುಮೋದಿಸುತ್ತಾನೆ. ಆದರೆ ಮಾನವನ ದೈವೀಗುಣವನ್ನೇ ನಂಬಿರುವ ಗಾಂಧೀವಾದ ಬಂಡವಾಳಗಾರನ ಮನಸ್ಸು ಒಲಿಸಿಕೊಳ್ಳುವ ಪ್ರಯತ್ನವೇ ಶ್ರೇಷ್ಠವೆಂದು ಭಾವಿಸುವುದು. ಇದರಿಂದ ಕ್ರಾಂತಿಯಲ್ಲಿ ರಕ್ತಪಾತ ತಲೆದೋರದು. ವೈಮನಸ್ಯ ಬಹುವಾಗಿ ಕಡಮೆಯಾಗುವುದು. ಕ್ರಾಂತಿಯಿಂದ ಶಾಂತಿಯು ನೆಲೆಗೊಳ್ಳಲು ಬಹಳ ಪ್ರಯಾಸವಾಗದು.

ಆರಂಭದಲ್ಲಿ ಸತ್ಯಾಗ್ರಹದ ನಾವೀನ್ಯತೆಯೇ ಸರಕಾರವನ್ನು ಮಂಕು ಬಡಿಸಿತು. ಆದರೆ ಕಾಲಾನುಕ್ರಮ ಸತ್ಯಾಗ್ರಹದ ಆಂತರ್ಯ, ದೌರ್ಬಲ್ಯ ಅರಿತು ಅದನ್ನು ಅಡಗಿಸಲು ಸರ್ಕಾರ ಸಿದ್ಧವಾಯಿತು. ಆರ್ಥಿಕ ಪೆಟ್ಟು ತಡೆಯಲು ಮಾನವ ಹಿಂದೆಗೆಯುತ್ತಾನೆ. ಈ ಮನೋದೌರ್ಬಲ್ಯ ನೋಡಿ ಆಸ್ತಿ ಪಾಸ್ತಿಗಳ ಮುಟ್ಟುಗೋಲು; ಸಾವಿರಾರು ರೂಪಾಯಿಗಳ ದಂಡ; ಸತ್ಯಾಗ್ರಹಕ್ಕೆ ಪರೋಕ್ಷ ಸಹಾಯ ನೀಡುವವರಿಗೂ ಶಿಕ್ಷೆ; ಪುಂಡುಗಂದಾಯ ಹೊರಿಸುವುದು; ಚಳವಳಿಯ ಮೊದಲೇ ನಾಯಕರ ಬಂಧನ; ಇದರಿಂದ ಸತ್ಯಾಗ್ರಹ ಸಂಸ್ಥೆಯಲ್ಲಿ ಅವ್ಯವಸ್ಥೆ ತರುವುದು; ಪ್ರಜಾಭಿಪ್ರಾಯ ರೂಪುಗೊಳಿಸುವ ಪತ್ರಿಕೆ, ರೇಡಿಯೋ, ಸಭಾ, ಮುದ್ರಣ, ಪ್ರಕಟಣ ಇವುಗಳನ್ನು ಪ್ರತಿಬಂಧಿಸುವುದು ಮಾತ್ರವಲ್ಲದೆ, ಸರ್ಕಾರ ಸ್ವತಃ ದೇಶ ವಿದೇಶಗಳಲ್ಲಿ ಅಪಪ್ರಚಾರ ನಡೆಸುವುದು; ಶಾಸನ ಸಭೆಗಳನ್ನು ತನ್ನ ಕೈಗೊಂಬೆ ಮಾಡಿಕೊಳ್ಳುವುದು, ಅಷ್ಟು ಅನ್ನದಿದ್ದರೆ ರದ್ದು ಮಾಡುವುದು; ಅಂತಃಕಲಹದ ಪ್ರೇರಣೆಗೆ ಪ್ರೋತ್ಸಾಹ ಇವು ಸತ್ಯಾಗ್ರಹ ಅಡಗಿಸಲು ಸರ್ಕಾರ ಕೈಗೊಳ್ಳುವ ಹಲವು ಸಾಧನಗಳು. ಸತ್ಯಾಗ್ರಹ ಅಡಗಿಸುವ ಸಾಧನ ಬೆಳೆದಂತೆ ಸತ್ಯಾಗ್ರಹದ ಕಲಾಕೌಶಲ್ಯ ಬೆಳೆದಿಲ್ಲ ಎಂಬುದು ಒಂದು ಆಕ್ಷೇಪಣೆ.

'ವಿರೋಧಿಯೂ ಸತ್ಯ ಧರ್ಮ ಪುರಸ್ಕರಿಸಿ ನಡೆಯುತ್ತಾನೆ ಎಂಬ ನಂಬಿಕೆಯೇ ಸತ್ಯಾಗ್ರಹ ಆಚರಿಸಲು ಆಧಾರ. ಆದರೆ ೧೯೧೫ರಿಂದ ಪ್ರಪಂಚಗತಿ ವಿಮರ್ಶಿಸಿದರೆ, ಕಾಲಕಳೆದಂತೆ ಪಾಪಕೂಪದೊಳಕ್ಕೆ ಅದು

ಧುಮ್ಮಿಕ್ಕುತ್ತಿದೆ. ಹೀಗಿರುವಲ್ಲಿ ಶ್ರೇಷ್ಠವಾದರೂ, ನಿರ್ಬಲವಾದ ಈ ಕೋಮಲ ಅಸ್ತ್ರ ತಲೆಯೆತ್ತಿ ಜೀವಿಸಲಾರದು' ಎಂದು ಮರುಗುತ್ತಾನೆ ಸ್ಪ್ರಾಟ್. 'ತನ್ನ ಉಳಿವಿಗೇ ಅಳಿವು ಬರುವುದಾದರೆ ಸರ್ಕಾರ ಏನು ತಾನೆ ಮಾಡನು? ಧರ್ಮಾಧರ್ಮದ ರಂಧ್ರಾನ್ವೇಷಣ ಮಾಡುತ್ತ ಸರ್ಕಾರ ಆಗ ಕೂಡುವುದೇ'?

ಸತ್ಯಾಗ್ರಹ ಅನ್ವರ್ಥವಾದುದು. ಸತ್ಯಾಗ್ರಹದ ರೂಪನಿಷ್ಪತ್ತಿಯ ಪರಿಚ್ಛೇದದಲ್ಲಿಯೇ ಈ ಪ್ರಶ್ನೆಗಳಿಗೆ ತಕ್ಕ ಮಟ್ಟಿಗೆ ಸಮಾಧಾನ ಕೊಡ ಲಾಗಿದೆ. ಸತ್ಯಾಗ್ರಹದಲ್ಲಿಯೂ ನಷ್ಟ ಸಂಭವಿಸದಿರದು. ಸತ್ಯಾಗ್ರಹದಲ್ಲಿ ನಷ್ಟಸಂಭವಿಸುವ ಔಚಿತ್ಯವೇ ಒಂದು ವೈಶಿಷ್ಟ್ಯ. ನಷ್ಟ ಅನುಭವಿಸುವ ವನು ವಿರೋಧಿಯಲ್ಲ, ಆದರೆ ಸತ್ಯಾಗ್ರಹಿ. ಸತ್ಯಾಗ್ರಹಿಯನ್ನು ಆರ್ಥಿಕ ಸಂಕಟಕ್ಕೆ ಸಿಲುಕಿಸುವ ವಿರೋಧಿಯ ಉದ್ದೇಶ ಗಮನಿಸಿ ಸರ್ವತ್ಯಾಗ ಬೋಧಿಸುತ್ತದೆ ಸತ್ಯಾಗ್ರಹ. ತನ್ನದು ಎಂಬ 'ಸ್ವ' ಭಾವನೆ ಇದ್ದರಲ್ಲವೆ ಹೋಯಿತಲ್ಲ ಎಂಬ ಪೇಚಾಟ. ಹಿಂಸಾ ಯುದ್ಧದಲ್ಲಿ ಉಪಯುಕ್ತ ಪದಾರ್ಥ ಶತ್ರುವಶವಾಗಬಾರದೆಂಬ 'ದಗ್ಧಭೂತಲ' ನೀತಿಗೆ ಕ್ರೋಧವೇ ಕಾರಣ. ತಾನು ಉಣದಿದ್ದರೂ ಶತ್ರುವಿಗೆ ನೀಡಿ, ಸತ್ಯಾಗ್ರಹಿ ಹುತಾತ್ಮ ನಾಗುವನು.

ಆಧುನಿಕ ಕಾಲದಲ್ಲಿ ಪ್ರಚಾರ ಅಂಗವೇ ಒಂದು ಪ್ರಭಾವಯುತ ಅಸ್ತ್ರ. ಹಿಂಸಾ ಮತ್ತು ಅಹಿಂಸಾ ಉಭಯ ಮಾರ್ಗಗಳಲ್ಲಿಯೂ ಶತ್ರು ಈ ಸಾಧನ ದುರುಪಯೋಗಪಡಿಸದಿರನು. ಆದುದರಿಂದ ಅಸ್ವಾತಂತ್ರ್ಯ ಪತ್ರಿಕೆಗಳು ತಾವಾಗಿಯೇ ಅಳಿಯಬೇಕೆಂದು ಗಾಂಧಿ ಸೂಚಿಸುತ್ತಾನೆ. ಸುಳ್ಳು ಸುದ್ದಿ, ಅಪಪ್ರಚಾರ ಇವುಗಳ ಪರಿಣಾಮ ಉಭಯ ಪಕ್ಷಗಳೂ ಅನುಭವಿಸಬೇಕಾ ಗುತ್ತೆ. ವಿರೋಧಿ ಎಷ್ಟೇ ಅಪಪ್ರಚಾರ ನಡೆಸಲಿ, ಬಾಹ್ಯ ವಿಚಾರಗಳಿಗೆ ಕಿವಿಗೊಡದೆ, ತನ್ನ ಧ್ಯೇಯ, ಸತ್ಯಮಾರ್ಗ ಇವುಗಳಲ್ಲಿ ನಂಬಿಕೆಯಿಟ್ಟು ಸತ್ಯಾಗ್ರಹಿ ಮುಂದುವರಿಯುವನು.

"ಅಸತ್ಯ ಜಯಪಡೆಯುತ್ತದೆ ಎನ್ನುವುದು ನಿಜವಲ್ಲ. ಅದು ತೋರಿಕೆ ಮಾತ್ರ. ಅಸತ್ಯವೇ ಪ್ರಧಾನವಾಗಿದ್ದರೆ ಲೋಕವ್ಯವಹಾರವೇ ಸಾಗುತ್ತಿರಲಿಲ್ಲ. ಸಾವಿರ ಸತ್ಯವಂತರಿರುವುದರಿಂದಲೇ ಒಬ್ಬ ಮೋಸಗಾರ

ಜೀವಿಸಬಲ್ಲ. ಹೆಚ್ಚು ಜನ ತುಡುಗು ಮಾಡದಿರುವುದರಿಂದಲೇ ಕಳ್ಳತನ ಲಾಭದಾಯಕ" ಎನ್ನುತ್ತಾನೆ ಜೋಡ್. ಸತ್ಯ ಪ್ರತಿಷ್ಠಾಪನೆಯೇ ಸತ್ಯಾಗ್ರಹದ ಗುರಿ. ಸತ್ಯ ನಾಶವಾದಂತೆ, ಸತ್ಯ ಮತ್ತು ಧರ್ಮದ ಪುನರುದ್ಧಾರದಲ್ಲಿ ಅಮರತ್ವದಲ್ಲಿ ಸತ್ಯಾಗ್ರಹಿಯ ಶ್ರದ್ಧೆ ಮತ್ತು ದೃಢ ವಿಶ್ವಾಸ ಬೆಳೆಯಬೇಕು. ಅದಕ್ಕಾಗಿ ಸರ್ವತ್ಯಾಗಮಾಡಲು ಸಿದ್ಧನಾಗಬೇಕು.

ಹಿಂಸೆಯಲ್ಲಿಯೇ ಓಲಾಡುತ್ತಿರುವ ಪ್ರಪಂಚ—ಕೆಂಪು ಕನ್ನಡಿಯ ಕನ್ನಡಕ ಧರಿಸಿದವನಂತೆ—ಸರ್ವಸ್ವವನ್ನೂ ಹಿಂಸಾದೃಷ್ಟಿಯಿಂದಲೇ ನಿರೀಕ್ಷಿಸುತ್ತಾ ಹೊಸ ದೃಷ್ಟಿಯಿಂದ ಹೊಸ ವಿಚಾರ ನೋಡಿ ಗ್ರಹಿಸುವ ಸಾಮರ್ಥ್ಯವನ್ನು ಕಳೆದುಕೊಂಡಿದೆ. ಅಹಿಂಸಾ ದೃಷ್ಟಿಯಿಂದ ವಿಚಾರ ತುಲನೆ ಮಾಡುವ ಶಕ್ತಿ ಪ್ರಪಂಚ ಗಳಿಸಬೇಕಾಗಿದೆ. ವಿನಾಶ ಕಾರುವುದೇ ಹಿಂಸೆಯ ಗುರಿಯಾದರೆ, ಆತ್ಮಾರ್ಪಣೆಯೇ ಅಹಿಂಸೆಯ ಸಾಧನ ಎಂದು ಗ್ರಹಿಸಿದರೆ ಈ ಸಂಶಯಗಳಿಗೇ ಆಸ್ಪದವಿಲ್ಲದಾಗುತ್ತೆ.

"ಸತ್ಯಾಗ್ರಹ ಅಂತ್ಯವಿಲ್ಲದ ಹೋರಾಟ. ಶತ್ರುವಿನ ಪೂರ್ಣ ನಾಶ ಅದರಿಂದ ಸಾಧ್ಯವಿಲ್ಲ. ಸತ್ಯಾಗ್ರಹ ಎಷ್ಟೇ ತೀಕ್ಷ್ಣವಿರಲಿ ಶಾಂತಿ ಸಂಧಾನವೇ ಅದರ ಪರಿಣಾಮ" ಎಂದು ಸ್ಪ್ರಾಟ್ ಆಕ್ಷೇಪಿಸುತ್ತಾನೆ.

ಈ ವಾದದಲ್ಲಿ ಹುರಳಿಲ್ಲದಿಲ್ಲ. ಆದರೆ ಹಿಂಸಾವಾದಿಗಳ ಆಕ್ಷೇಪಣೆಯೇ ಸತ್ಯಾಗ್ರಹದ ವೈಶಿಷ್ಟ್ಯ ಎಂದೇ ಗಾಂಧೀವಾದದ ಸಮಾಧಾನ. "ಸಂಪೂರ್ಣ ವಿಜಯ ಗಳಿಸಬೇಕೆಂಬುದು ಮೂರ್ಖತನ. ಯುದ್ಧದ ಅಂತಿಮ ಧ್ಯೇಯ ಶಾಂತಿ. ಆದರೆ ಅದು ಸ್ಮಶಾನ ಶಾಂತಿಯಾಗದಿರಲಿ! ಈ ಶಾಂತಿ ನೆಪದ ಯುದ್ಧವೇ ಇನ್ನೊಂದು ಯುದ್ಧಕ್ಕೆ ಬೀಜವಾಗುವುದು ಖಂಡಿತ, ಇದು ಅನುಭವ ಸಿದ್ಧ. ಯುದ್ಧ ವಿಲಂಬಿಸಿದಷ್ಟೂ ದ್ವೇಷಾಸೂಯೆ ವಿಷವೀಸುತ್ತದೆ, ಎಂದು ಅಧಿಕಾರವಾಣಿಯಿಂದ ಕ್ಯಾಪ್ಟನ್ ಲಿಡಲ್ ಹಾರ್ಟ್ ಬರೆಯುತ್ತಾನೆ. "ಯಾವ ಷರತ್ತೂ ಇಲ್ಲದೆ ಶತ್ರು ಶರಣಾಗತನಾಗಬೇಕು ಎಂಬ ತತ್ವ ಪ್ರಪಂಚದ ಭಾವೀ ಶಾಂತಿ ಸ್ಥಾಪನೆಗೆ ಲೇಶಮಾತ್ರವೂ ಸಹಕಾರಿಯಾಗದು. ಜಯ ಪಡೆದ ನಾವು ಬಲ್ಲೆವು ಅದರ ಕಹಿ" ಎನ್ನುತ್ತಾನೆ ತುರ್ಕಿಯ 'ವತನ್' ಪತ್ರಿಕಾ ಸಂಪಾದಕ ಮಿಮಿನ್ ಯಾಲ್‌ಮಿನ್. ಇದೇ ತುರ್ಕಿಯ ಅಭಿಪ್ರಾಯ.

"ಹಿಟ್ಲರ್ ಮತ್ತು ಜರ್ಮನಿ ಮತ್ತೆ ತಲೆ ಎತ್ತದಂತೆ ನಾಶಮಾಡುವುದೇ ಯುದ್ಧದ ಗುರಿ, ಎಂಬ ಕೂಗು ಕೇಳಿ ಬರುತ್ತದೆ. ಜರ್ಮನಿ ಮತ್ತೆ ತಲೆ ಎತ್ತದಂತೆ ಮಾಡಲು ಐದುಕೋಟಿ ಜರ್ಮನರನ್ನು ಕೊಂದು ಹಾಕುವುದೊಂದೇ ಮಾರ್ಗ. ಇದು ಅಸಾಧ್ಯ. ಯುರೋಪಿನಲ್ಲೆಲ್ಲಾ ಅತ್ಯಂತ ಶಿಸ್ತಿನಿಂದ ವ್ಯವಹರಿಸುವ ಸುಸಂಘಟಿತ ರಾಷ್ಟ್ರ ಜರ್ಮನಿ. ಜರ್ಮನಿಯ ನಾಶದಲ್ಲಿ ಯುರೋಪಿನ ನಾಶವೂ ಸ್ವತಃ ಸಿದ್ಧ. ಜರ್ಮನಿ ಗೌರವದಿಂದ ಬಾಳುವ ಅವಕಾಶ ಕಲ್ಪಿಸಿಕೊಟ್ಟರೆ ಮಾತ್ರ ಯುರೋಪ್ ಬಾಳೀತು" ಎಂದು ಪ್ರೊ. ಕಾರ್ ಸ್ಪಷ್ಟೋಕ್ತಿಗಳಲ್ಲಿ Conditions of Peace ಎಂಬ ತನ್ನ ಗ್ರಂಥದಲ್ಲಿ ಬರೆಯುತ್ತಾನೆ.

ಶತ್ರು ಪೂರ್ಣ ಪರಾಜಿತನಾದರೂ ಹಿಂಸಾ ಯುದ್ಧದ ಅಂತ್ಯದಲ್ಲಿಯೂ ಸೋತವರೂ ಗೆದ್ದವರೂ ಒಂದುಗೂಡಲೇ ಬೇಕು. ವಿಷಮ ಪ್ರಕ್ಷುಬ್ಧ ವಾತಾವರಣ ಕಲ್ಪಿಸಿ, ದ್ವೇಷದ ಜ್ವಾಲಾಮುಖಿ ಉರಿಯುವಂತೆ ಮಾಡಿ, ಆ ಮೇಲೆ ತಣ್ಣೀರು ಎರಚಬೇಕೆ? ಈ ಉಲ್ಕಾಪಾತಕ್ಕೆ ಸಕಾರ ಎಡೆ ಗೊಡದ ಅಹಿಂಸಾ ಮಾರ್ಗವೇ ಶ್ರೇಷ್ಠವಲ್ಲವೇ? "ರಕ್ತಪಾತವಿಲ್ಲದೆ ಬದಲಾಯಿಸುವ ಮಾರ್ಗವೊಂದಿದ್ದರೆ ಅದೀಗ ಸತ್ಯಾಗ್ರಹ. ಸತ್ಯಾಗ್ರಹ ಪ್ರಯೋಗ ಯಶಸ್ವಿಯಾಗಲು ತಕ್ಕ ವಾತಾವರಣವಿರುವ ನಾಡು ಆಧುನಿಕ ಭಾರತ ಮಾತ್ರ........ಕ್ಷಿಪ್ರ ಫಲ ಆಶಿಸುವವರಿಗೆ ಸತ್ಯಾಗ್ರಹ ನಿಷ್ಫಲ ತೋರಬಹುದು. ಆದರೆ ಸತ್ಯಾಗ್ರಹ ನಿರರ್ಥಕವಾಗಿಲ್ಲ. ಹಾಗೆ ತೋರಿದರೂ, ಪಕ್ಷ ಪ್ರತಿಪಕ್ಷಗಳ ಮೇಲೆ ಸತ್ಯಾಗ್ರಹದ ನಿರೀಕ್ಷಿತ ಪರಿಣಾಮ ಸ್ವಲ್ಪಮಟ್ಟಿಗಾದರೂ ಆಗಿಯೇ ಇರುತ್ತದೆ" ಎಂದು ಸ್ಪ್ರಾಟನೇ ಸಮಾಧಾನ ಕೊಡುತ್ತಾನೆ.

ಸತ್ಯಾಗ್ರಹದಲ್ಲಿಯೂ ನ್ಯೂನತೆಗಳಿವೆ ಎಂದು ವಾದಿಸಿದರೆ, ಬೇರೆ ಮಾರ್ಗ ಯಾವುದು? ಹಿಂಸೆ. ಈ ಹಿಂಸಾ ಮಾರ್ಗ ತ್ಯಜಿಸಿ ಪ್ರಪಂಚ ಶಾಂತಿ ಮಾರ್ಗ ಹಿಡಿಯಲಿ ಎಂಬ ಉದಾತ್ತ ಭಾವನೆಯೇ ಸತ್ಯಾಗ್ರಹದ ಬಯಕೆ. ಈ ಅಸ್ತ್ರ ಪ್ರಯೋಗ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ಇಷ್ಟು ಅಲ್ಪಕಾಲದಲ್ಲಿಯೇ ಅಸಾಧ್ಯ ಸಾಧಿಸಿ ತನ್ನ ಪ್ರತಿಭೆ ತೋರಿದೆ. ಹಿಂದುಸ್ಥಾನ ಪ್ರಪಂಚದ ರಾಜಕೀಯದಲ್ಲಿ ಇಂದು ಸ್ಥಾನ ಗಳಿಸಿದ್ದರೆ ಅದು ಸತ್ಯಾಗ್ರಹದ ಪ್ರಭಾವದಿಂದ. ಸತ್ಯದ, ಅಂತೆಯೇ ಸತ್ಯಾಗ್ರಹದ ಆಳ ಅರಿತವರ್ಯಾರು? ಬಳಕೆಯಾದಂತೆ ಅದರ ಕಲೆಯೂ ಬೆಳೆದೀತು. ಅವಕಾಶ ಕೊಟ್ಟರೆ ಪ್ರಪಂಚವನ್ನು ಸುಖ ಶಾಂತಿಯ ನೆಲವೀಡಾಗಿ ಮಾಡಬಯಸುತ್ತದೆ ಸತ್ಯಾಗ್ರಹ. ಆದರೆ ಈ ಹಿಂಸಾ ಪ್ರಪಂಚದಲ್ಲಿ ಅದಿನ್ನೂ ಅರಣ್ಯರೋದನ. ಪ್ರಪಂಚ ಶಾಂತಿ ಮಾರ್ಗ ಹಿಡಿಯುವುದೆಂದು?

Materialism is the very stuff and fibre of modern thinking which dominates all post-war planning and makes a philosophy of peace impossible.

...Lin Yutang

What is essentially wrong with the masters-and-masses system in all its forms is that it is rooted in a contempt for human individuality, in a disbelief in any possible development of the human personality, in a denial of any moral order in the universe, in a blank despair of the life of the spirit.

...J.B.Priestly

I have no doubt in my mind that ultimately in this conflict that is confronting the world the human spirit will prevail over the atom bomb.

...Nehru

೨೪. ಅಹಿಂಸೆಯೋ ಆಟಂ ಬಾಂಬೋ?

ಇದು ಆಟಂ ಬಾಂಬಿನ ಯುಗ. ಕುಂಬಾರನಿಗೆ ಒಂದು ವರುಷ ದೊಣ್ಣೆಗೆ ಒಂದು ನಿಮಿಷ ಎನ್ನುವ ಹಳೆಯ ಗಾದೆಗೆ ಬದಲಾಗಿ 'ಮಾನವನಿಗೆ ಮನ್ವಂತರ, ಆಟಂ ಬಾಂಬಿಗೆ ಅರೆಕ್ಷಣ' ಎಂದು ಹೇಳುವುದು ಸೂಕ್ತ. ಯುಗ ಯುಗಾಂತರಗಳ ಮಾನವ ನಿರ್ಮಾಣಗಳನ್ನು ಆಟಂ ಬಾಂಬು ಅರೆ ಘಳಿಗೆಯಲ್ಲಿ ಬೂದಿ ಮಾಡಬಲ್ಲದು. ಪ್ರಪಂಚದ ಶಾಂತಿ ರಕ್ಷಣೆಗೆ ಇಂತಹ ಭಯಂಕರ ವಿನಾಶಕಾರಿ ಅಸ್ತ್ರ ಪಡೆದಿರಬೇಕಾದುದೂ ಅಗತ್ಯ ಎಂದು ಅಮೆರಿಕದ ಸೈನ್ಯಾಧಿಕಾರಿಗಳು ವಾದಿಸುತ್ತಾರೆ.

ಯುದ್ಧ ಮರಳಿ ತಲೆದೋರದಂತೆ ಮಾಡುವುದೇ ಮೊದಲ ಘೋರ ಯುದ್ಧದ ಉದ್ದೇಶವಿತ್ತು. ಆದರೆ ೨೫ ವರುಷಗಳಲ್ಲಿ ಅದಕ್ಕೂ ಭಯಂಕರ

ವಾದ ದ್ವಿತೀಯ ಘೋರ ಯುದ್ಧ ಸೆಪ್ಟಂಬರ್ ೧೯೩೯ರಲ್ಲಿ ಉಪಕ್ರಮವಾಗಿ ಇಡೀ ಪ್ರಪಂಚವನ್ನೇ ಆವರಿಸಿತು. "ನನ್ನ ಆಸೆಗಳೆಲ್ಲವೂ ಭಗ್ನವಾದವು. ಆದರೆ ಹಿಟ್ಲರಿನ ನಿರಂಕುಶಾಧಿಕಾರ ನಿರ್ಮೂಲಮಾಡಿ, ಯೂರೋಪನ್ನು ಅವನ ಹಿಡಿತದಿಂದ ಬಿಡಿಸುವ ಪುಣ್ಯವಾದರೂ ಲಭಿಸೀತೆಂದು" ಜರ್ಮನಿಯ ಮೇಲೆ ಯುದ್ಧ ಘೋಷಿಸಿದ ಚೇಂಬರ್ಲೀನ್. ಜರ್ಮನಿಗೆ ಅಳಿವಾದರೂ ಇಂಗ್ಲೆಂಡಿಗೆ ಉಳಿವಾಗಲಿಲ್ಲ. ಸ್ಪೇನಿನ ಮ್ಯಾಡ್ರಿಯಾಗ ಹೇಳುವಂತೆ—ಯುದ್ಧದಲ್ಲಿ "ಸೋಲಾದರೆ ಪ್ರಜಾಪ್ರಭುತ್ವ ತನ್ನಸ್ವಾತಂತ್ರ್ಯ ಶತ್ರು ಕ್ರಿಯೆಯಿಂದ ಕಳೆದುಕೊಳ್ಳುತ್ತದೆ; ಗೆಲುವಾದರೆ ಸ್ವಹಸ್ತದಿಂದ ಸ್ವಾತಂತ್ರ್ಯ ನಾಶಮಾಡಿಕೊಳ್ಳುತ್ತದೆ". ಅಂತೂ ಯುದ್ಧದಿಂದ ಸ್ವಾತಂತ್ರ್ಯಕ್ಕೆ ಸಂಚಕಾರ. ಇಂಗ್ಲೆಂಡಿನ ಆರ್ಥಿಕ ಸೋತ ರಾಜ್ಯಗಳಿಗಿಂತ ಉತ್ತಮವಿದೆ ಎಂದು ಹೇಳುವುದೂ ಕಠಿಣ. ತನ್ನ ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಳ್ಳಲು ಅಮೆರಿಕದಿಂದ ೩,೭೫೦ ದಶಲಕ್ಷ ಡಾಲರ್ ಸಾಲ ಪಡೆಯಬೇಕಾಯಿತು ಇಂಗ್ಲೆಂಡ್. ಶತ್ರು ಸಂಹಾರದಲ್ಲಿ ತನ್ನ ಸರ್ವ ಶಕ್ತಿ ವಿನಿಯೋಗಿಸಿ ನಿರ್ಬಲವಾದ ಇಂಗ್ಲೆಂಡ್, ಬ್ರಿಟಿಷ್ ಸಾಮ್ರಾಜ್ಯದ ಮುಕುಟಮಣಿಯಾದ ಭಾರತ; ರಬ್ಬರ್, ಪೆಟ್ರೋಲ್, ಟಿನ್ ಇವುಗಳ ಭಾಂಡಾರವಾದ ಬರ್ಮ ದೇಶಗಳನ್ನು ಬಂಧನದಲ್ಲಿರಿಸಿಕೊಳ್ಳಲು ಸಾಧ್ಯವಿಲ್ಲದೆ ಸ್ವಾತಂತ್ರ್ಯ ಕೊಡಬೇಕಾಯಿತು.

ಮೊದಲ ಘೋರ ಯುದ್ಧದಲ್ಲಿ ಸಂಭವಿಸಿದ ನಷ್ಟದ ವಿವರಗಳನ್ನು ಹಿಂದೆಯೇ ತಿಳಿಸಿವೆ. ದ್ವಿತೀಯ ಘೋರ ಯುದ್ಧದಲ್ಲಿ ಆಗಿರುವ ಅಪಾರ ನಷ್ಟ ವರ್ಣನಾತೀತ. ಈ ಆಧುನಿಕ ಅಸ್ತ್ರ ಯುದ್ಧದಲ್ಲಿ ಪ್ರಾಣಹಾನಿಗಿಂತ ಆರ್ಥಿಕ ನಷ್ಟ ಬಹಳ. ಅಮೆರಿಕದ ದಂಡನಾಯಕ ಜನರಲ್ ಮಾರ್ಷಲ್ ತನ್ನ ಸರ್ಕಾರಕ್ಕೆ ಒಪ್ಪಿಸಿದ ವರದಿಯಿಂದ ಯುದ್ಧದ ಕಲ್ಪನಾತೀತ ನಷ್ಟ ಸ್ವಲ್ಪಮಟ್ಟಿಗೆ ಗ್ರಹಿಸಬಹುದು. "ಯುದ್ಧಕಾಲದಲ್ಲಿ ಅಮೆರಿಕ ತನ್ನ ಸೈನ್ಯ ಖಾತೆಯ ಬಟವಾಡೆಗೆ ಮಾತ್ರ ೨೨,೪೦,೦೦,೦೦,೦೦,೦೦೦ (೨ ಲಕ್ಷ ೨೪ ಸಾವಿರ ದಶ ಕೋಟಿ) ಡಾಲರ್ (ಡಾಲರಿಗೆ ನಾಲ್ಕು ರೂಪಾಯಿ) ವಿನಿಯೋಗಿಸಿದೆ. ೭೩,೭೦,೦೦೦ ಜನರನ್ನೂ, ೧೦,೧೭,೫೦,೦೦೦ ಟನ್ ತೂಗುವ ಸರಕನ್ನು ೧,೫೩೭ ಜಹಜುಗಳಲ್ಲಿ ಸಾಗಿಸಿದೆ; ೯೦,೮೩,೦೦೦ ಯೋಧರಿಗೆ

ಆಸ್ಪತ್ರೆಗಳಲ್ಲಿ ಚಿಕಿತ್ಸೆ ನಡೆಸಿದೆ; ೩,೧೫೯ ಲಕ್ಷ ಪೌಂಡು ಆಹಾರ ಒದಗಿಸಿದೆ. ಪರ್ಷಿಯಾ ಒಂದರಿಂದ ಮಾತ್ರವೇ ವಿಮಾನಕ್ಕೆ ಬೇಕಾದ ೨೫,೯೦,೦೦,೦೦೦ ಗ್ಯಾಲನ್ ಉತ್ತಮ ದರ್ಜೆ ಪೆಟ್ರೋಲ್ ಪಡೆದಿದೆ". ಆಧುನಿಕ ಕಾಲದ ಯುದ್ಧವೆಂದರೆ ಎಷ್ಟು ಅಪಾರ ಸಿದ್ಧತೆ ಮತ್ತು ನಷ್ಟ ಎಂದು ಗಮನಕ್ಕೆ ತರಲು ಈ ಸಂಖ್ಯೆಗಳನ್ನು ಕೊಟ್ಟಿದೆ. ೩,೨೦,೦೦೦ ಜನ ಬಾಹುಳ್ಯದ ಹಿರೋಷೀಮದಲ್ಲಿ ಒಂದು ಆಟಂ ಬಾಂಬಿನಿಂದ ಸತ್ತವರು ೭೮,೧೫೦, ಗಾಯಗೊಂಡವರು ೩೭,೪೨೫, ಅಗಣಿತರು ೧೩,೯೮೩. ನಾಗಸಾಕಿಯ ಮೇಲೆ ಬಿದ್ದ ಆಟಂ ಬಾಂಬಿನ ಹೊಗೆ ೧೫೦ ಮೈಲಿಗಳಾಚೆ ಕಾಣುತ್ತಿದ್ದಿತು. ಇಂಗ್ಲೆಂಡಿನ ಹಲ್ ತೀರಪಟ್ಟಣದ ಮೇಲೆ ಜರ್ಮನರು ಮೇ ೧೯೪೧ರಲ್ಲಿ ಎರಡು ರಾತ್ರಿ ಸುರಿಸಿದ ಬಾಂಬುಗಳ ಪರಿಣಾಮವಾಗಿ "೯೨,೦೦೦ ಮನೆಗಳಲ್ಲಿ ೮೬,೦೦೦ ಪೂರ್ಣ ನಾಶವಾದವು, ಮಿಕ್ಕವು ವಾಸಹಕ್ಕೆ ಅನರ್ಹವಾದವು; ೧,೫೨,೦೦೦ ಜನಕ್ಕೆ ಆಶ್ರಯವಿಲ್ಲವಾಯಿತು" ಎಂದು ವರದಿಯಾಗಿದೆ.

ಪ್ರಾಣನಾಶ, ಅರ್ಥನಾಶವಲ್ಲದೆ ವ್ಯಕ್ತಿ ಮತ್ತು ಸಮಾಜದ ಮೇಲೆ ಯುದ್ಧದಿಂದಾಗಿರುವ ಪರಿಣಾಮ ಅಳೆಯಲಸದಳ. ಮೊದಲ ಪೆಟ್ಟು ಯುದ್ಧದಲ್ಲಿ ಮಾನವತ್ವಕ್ಕೆ. ಮಾನವತ್ವ ಕಳೆದುಕೊಂಡ ಮನುಷ್ಯ ಮೃಗಸಮಾನ. ಕೊಲುವುದೇ ಒಂದು ಧರ್ಮ ಎಂಬ ತುಂಬಿದ ಭಾವನೆಯ ಯೋಧ ನಿತ್ಯ ಜೀವನದಲ್ಲಿಯೂ ಇದೇ ಧರ್ಮದ ಅಂಧಾನುಕರಣೆಮಾಡುವನು. ಜೀವಕ್ಕೆ ಬೆಲೆಯಿಲ್ಲದಾಗಿ ಕೊಲೆ, ದರೋಡೆ, ತುಡುಗು ಇವು ಸರ್ವ ಸಾಮಾನ್ಯವಾಗಿವೆ. ಕುಡಿತ, ವ್ಯಭಿಚಾರಗಳಿಗೆ ಪ್ರೋತ್ಸಾಹ. "ಯುದ್ಧಕ್ಕೆ ಮೊದಲು ೨೫ ವಯಸ್ಸು ಮೀರದ ತರುಣರಲ್ಲಿ ನೂರಕ್ಕೆ ೭ ಮಾತ್ರ ಮದ್ಯಪಾನಕ್ಕೆ ವಶರಾಗಿದ್ದರು. ೧೯೪೫ರಲ್ಲಿ ಈ ಸಂಖ್ಯೆ ೪೦ಕ್ಕೆ ಏರಿತು" ಎಂದು ಲಂಡನ್ ನಗರದ ವರದಿಯೊಂದು ತಿಳಿಸುತ್ತದೆ. ಲಂಡನ್-ಮಾಂಚೆಸ್ಟರ್ ರೈಲ್ವೆಯಲ್ಲಿ ತಿಂಗಳಿಗೆ ೧೪,೫೦೦ ಬಲ್ಬುಗಳು ಕಳುವಾಗುತ್ತಿವೆ. ಈ ಬಲ್ಬುಗಳು ಬೇರೆ ಎಲ್ಲಿಯೂ ಉಪಯೋಗಕ್ಕೆ ಬಾರವು. ಯುದ್ಧಕ್ಕೆ ಮೊದಲು ಒಂದು ದೀಪವೂ ಕಳುವಾಗುತ್ತಿರಲಿಲ್ಲ! ನೆರೆಯವನ ಸಂಕಟದಲ್ಲಿ ಕರಬುವ ಅನುಕಂಪನೆ ಅದೃಶ್ಯವಾಗುತ್ತಿದೆ. ತಾನು ಬಾಳಿದರೆ

ಜಗ ಬಾಳೀತು ಎಂಬ ಭಾವನೆ ಬೆಳೆಯುತ್ತಿದೆ. ನಿತ್ಯ ಜೀವನ ವ್ಯವಹಾರ ಇವಕ್ಕೆ ಪ್ರೋತ್ಸಾಹಕವಾಗಿದೆ. ಜೀವನದ ಪ್ರತಿ ಕ್ಷೇತ್ರದಲ್ಲಿಯೂ ಹತೋಟಿ, ಪಡಿತರ ಇವು ಶಾಶ್ವತವಾಗುತ್ತಿವೆ. ಮಾನವತ್ವ ಯಾವ ಮಟ್ಟಕ್ಕೆ ಇಳಿದಿದೆ ಎಂಬುವಕ್ಕೆ ಪಡಿತರಕ್ಕಿಂತ ಬೇರೆ ನಿದರ್ಶನ ಬೇಡ. ಇಡೀ ಪ್ರಪಂಚವೇ ಪಡಿತರ ಪದ್ಧತಿ ಅನುಸರಿಸುವಂತೆ ಮಾಡಿರುವುದು ದ್ವಿತೀಯ ಜಗದ್ಯುದ್ಧದ ಪ್ರಭಾವ.

ಯುದ್ಧದ ಪ್ರಭಾವದಿಂದ ಜಗತ್ತು ಇನ್ನೂ ಚೇತರಿಸಿಕೊಳ್ಳುವುದರಲ್ಲಿ ಸೇ ತೃತೀಯ ಘೋರ ಯುದ್ಧದ ಕಾರ್ಮೋಡಗಳು ಕವಿಯುತ್ತಿವೆ. ಹೀಗಾಗದಿದ್ದರೆ ಆಶ್ಚರ್ಯಪಡಬೇಕಾಗಿತ್ತು ಎನ್ನುತ್ತಾನೆ ಬರ್ನಾರ್ಡ್ ಷಾ. "ಜಗತ್ತಿನ ಸಾಮ್ರಾಜ್ಯಗಳನ್ನು ಉರುಳಿಸಿ, ರಕ್ತ ಕೋಡಿ ಹರಿಸಿದ ಅಲೆಕ್ಸಾಂಡರ್, ನೆಪೋಲಿಯನ್, ಹಿಟ್ಲರ್ ಇವರನ್ನು ಅಂಶ ಪುರುಷರು, ಶೂರಾಗ್ರಣಿಗಳು ಎಂದು ಜಗವಂದಿಸಿ ಪೂಜಿಸುವುದು. ಮಾನವ ಇತಿಹಾಸದಲ್ಲಿ ಘಟಿಂಗರು, ದರೋಡೆಕೋರರು ಎಂದು ಇವರನ್ನು ಚರಿತ್ರೆ ತೆಗಳದು. ಈ ಅಂಥ ಪೂಜ್ಯಭಾವನೆ ಇರುವವರೆಗೂ ಯುದ್ಧ ಜಗತ್ತಿನಿಂದ ಅಳಿಯದು. ಆಧುನಿಕ ಕಾಲದಲ್ಲಿ ಬಲಾತ್ಕಾರದಿಂದ ಪ್ರತಿಯೊಬ್ಬನನ್ನೂ ಸೈನ್ಯ ಸೇವೆ ಸಲ್ಲಿಸುವಂತೆ ಶಾಸನ ಸಭೆಗಳು ಅಧಿಕಾರ ವರ್ಗಕ್ಕೆ ಶರಣು ಹೋಗುತ್ತವೆ. "ಬಲಾತ್ಕಾರ ಸೈನ್ಯ ಶಿಕ್ಷಣ ಪದ್ಧತಿಯನ್ನು ವಿಧಾಯಿಸುವ ಸಂಪೂರ್ಣ ಗುಲಾಂಗಿರಿ, ನಾಗರಿಕತೆ ಅಳಿಯದು" ಎಂದು ಅಭಿಪ್ರಾಯ ಪಡುತ್ತಾನೆ ಷಾ. ಆದರೇನು? "ಯುದ್ಧ ಶಾಂತಿ ಬಯಸುವವರ ಹತೋಟಿಯಲ್ಲಿಲ್ಲ. ರಾಜಕೀಯ ಗುರಿ ಸಾಧಿಸುವ ಸಲುವಾಗಿ ಹಿಂಸೆ ಕೈಗೊಳ್ಳಲು ಯಾರು ಸಿದ್ಧರಿರುವರೋ ಅವರ ಅಧೀನದಲ್ಲಿದೆ ಯುದ್ಧದ ಆಗು ಹೋಗುಗಳು". ಇದು ಜನರಲ್ ಮಾರ್ಷಲನ ಖಚಿತಾಭಿಪ್ರಾಯ.

ಯುದ್ಧದಿಂದಾಗುವ ಅಪಾರ ನಷ್ಟ, ಅರ್ಥಹಾನಿ, ಪ್ರಾಣಹಾನಿ ಇವುಗಳನ್ನು ಅನುಭವಿಸಿಯೂ, ಯುದ್ಧ ಸಂಭವಿಸಲು ಕಾರಣವೇನು ಎಂದು ಅರಿಯಲು ಪ್ರಯತ್ನಿಸದೆ ಯುದ್ಧಕ್ಕೆ ಆಶ್ರಯವೀಯುವ ಪ್ರಚಲಿತ ರಾಜಕೀಯಗಳಿಗೆ ಬೇರೆ ಬೇರೆ ಹೆಸರಿತ್ತು, ರೂಪು ಮರಸಿ, ಅದೇ ಮಾರ್ಗ ಅನುಸರಿಸಿ ಹೋಗುತ್ತಿದೆ ಪ್ರಪಂಚ. ಯುದ್ಧದಲ್ಲಿ ಪ್ರಭಾವಾನ್ವಿತ

ಪಾತ್ರ ರಷ್ಯ ವಹಿಸಿದ ಕಾರಣ ಕಮ್ಯುನಿಸಂ ಸಿದ್ಧಾಂತದ ಕಡೆ ಜನ ದೃಷ್ಟಿ ಹೊರಳುತ್ತಿದೆ. ಕಮ್ಯುನಿಸಂ, ಹಿಟ್ಲರಿಸಂ, ಫ್ಯಾಸಿಸಂ ಮತ್ತು ಹೊಸದಾಗಿ ಸೃಜಿಸಲಾಗಿರುವ 'ಟೋಟಾಲಿಟೇರಿಯಾನಿಸಂ' Totalitarianism ಎಂಬ ಪದ ಎಲ್ಲವೂ ಸ್ವಲ್ಪ ಹೆಚ್ಚು ಕಡಮೆ ಒಂದೇ ಜಾತೀಯ ವಾದಗಳ ಬಹುದ್ರೂಪ. ಇವೆಲ್ಲ ವಾದಗಳೂ ರಾಜ್ಯಕ್ಕೆ ಶ್ರೇಷ್ಠಸ್ಥಾನ, ಸರ್ವಾಧಿಕಾರ ಒಪ್ಪಿಸಿ ಕೊಡುತ್ತವೆ. ಸಮತಾವಾದ ವ್ಯಕ್ತಿ ಸ್ವಾತಂತ್ರ್ಯಕ್ಕೆ ಊನು ತಾರದೆ ಕೇಂದ್ರೀಕರಣಕ್ಕೆ ಪ್ರಯತ್ನಿಸುತ್ತದೆ. ಎಣ್ಣೆ ನೀರಿನಂತೆ ಎರಡಕ್ಕೂ ವಿರೋಧವೆಂದು ಗ್ರಹಿಸದು. ಆರ್ಥಿಕ, ಶೈಕ್ಷಣಿಕ, ವ್ಯವಸಾಯ, ವ್ಯಾಪಾರ ಮೊದಲಾದ ಯೋಜನೆಗಳು ಸರ್ಕಾರದ ವಶವರ್ತಿಯಾದಂತೆ ವ್ಯಕ್ತಿ ಸ್ವಾತಂತ್ರ್ಯವೂ ಪೊಟಕಾಗುತ್ತಾ ಬರುವುದು ಎಂದು ಈ ವಾದಗಳ ಅಂಧ ಶ್ರದ್ಧರು ಮರೆತು ಹೋಗುತ್ತಾರೆ. ರಷ್ಯ ಲೋಕಕ್ಕೆ ಹೊಸ ದಾರಿ ತೋರೀತು ಎಂದು ಆಶಾತುರರಾಗಿದ್ದ ರಸಲ್, ಲ್ಯಾಸ್ಕಿ, ಪ್ರೀಸ್ಟಲಿ, ಫಿಷರ್, ಡ್ರೂಕರ್, ಷಾ ಮೊದಲಾದ ವಿಚಾರ ಪಶರಿಗೆ ರಷ್ಯದ ಪ್ರಯೋಗಗಳು ಉತ್ಸಾಹ ಭಂಗಮಾಡಿವೆ. ವ್ಯಕ್ತಿ ಸ್ವಾತಂತ್ರ್ಯ, ಜನಾಭಿಪ್ರಾಯ ಇವುಗಳಿಗೆ ರಷ್ಯದಲ್ಲಿ ದೊಡ್ಡ ಆಘಾತವೇ ಆಗಿದೆ. "ಅಲ್ಪ ಆರ್ಥಿಕ ಅನುಕೂಲಕ್ಕಾಗಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಸ್ವಲ್ಪ ಸಂಚಕಾರ ಬಂದರೂ ಚಿಂತೆಯಿಲ್ಲ ಎಂದು ಭಾವಿಸುವವರು ಸ್ವಾತಂತ್ರ್ಯ ಮತ್ತು ಆತ್ಮಗೌರವ ಎರಡನ್ನೂ ಕಳೆದು ಕೊಳ್ಳುತ್ತಾರೆ" ಎಂದು ಬೆಂಜಮಿನ್ ಫ್ರಾಂಕ್ಲಿಂ ಎಚ್ಚರಿಸುತ್ತಾನೆ. ಜರ್ಮನಿ, ಆಸ್ಟ್ರೇಲಿಯ, ಇಂಗ್ಲೆಂಡ್ ಅಮೆರಿಕಗಳ ವಾಸದಿಂದ ಸ್ವಾನುಭವ ಪಡೆದಿರುವ ಹಾಯಕ್ ಸಹ ಇದೇ ಅಭಿಪ್ರಾಯ ಪಡುತ್ತಾನೆ. "ಉದ್ಯಮ, ಸಾಹಸ, ಆದರ ಫಲ ಒಂದು ನಿರ್ದಿಷ್ಟ ಮಿತಿಯಲ್ಲಾದರೂ ಅನುಭವಿಸಬಹುದಾದ ಹಕ್ಕು ಇವು ಲೋಕದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆ ಉಳಿಯಲು ಆಧಾರವಾಗಿದೆ. ಸಿರಿತನ ಅಥವ ಉಪಭೋಗ ಹಕ್ಕನು ರಾಜ್ಯಾಧೀನವಾಗ ಡುವುದರಿಂದ ಅದನ್ನು ಸರ್ವರಲ್ಲಿಯೂ ಸಮನಾಗಿ ವಿನಿಯೋಗಮಾಡಬಹುದು ಎಂಬ ಮಾರ್ಕ್ಸಿನ ಸಿದ್ಧಾಂತ ಅನುಭವದಿಂದ ತಪ್ಪಾಗಿ ಕಂಡು ಬರುತ್ತಿದೆ. ಉಪಭೋಗ ವಸ್ತು ಸಮವಾಗಿ ಹಂಚುವ ಪ್ರಯತ್ನದಲ್ಲಿ, ವಸ್ತುವೇ ಕಣ್ಮರೆಯಾಗಿದೆ" ಎಂದು ಕಮ್ಯುನಿಸಂ ತತ್ವದಲ್ಲಿ

ತೀವ್ರಾಸಕ್ತನಾದ ಮಾರ್ಕ್ಸ್ ಈಸ್ಟ್‌ಮನ್ ೩೦ ವರುಷಗಳ ಅನುಭವದಿಂದ ನುಡಿಯುತ್ತಾನೆ.

ಪ್ರಪಂಚದ ಕಷ್ಟ ಸಂಕಟಗಳನ್ನು ಹೋಗಲಾಡಿಸಲು ವಿಚಾರಪರರು ನಾನಾ ಮಾರ್ಗಗಳನ್ನು ತೋರುತ್ತಿದಾರೆ. ಸಾಮಾನ್ಯ ಜನರಿಗೆ ಸುಖ ಶಾಂತಿ ನೀಡುವುದೇ ಸರ್ವ ಸಿದ್ಧಾಂತಗಳ ಉದ್ದೇಶ. ವಿಷಯ ಮಂಥನ ದಿಂದ ಸಮಾಜದ ರೋಗರುಜಿನಗಳ ಮೂಲಕಾರಣ ಸರ್ವಮಾನ್ಯ ಎಂದು ವೇದ್ಯವಾಗುತ್ತದೆ, ಔಷಧ ಮಾತ್ರ ಬೇರೆ. "ಧರ್ಮದಲ್ಲಿ ಆಸಕ್ತಿ ತಗ್ಗು ತ್ತಿರುವುದು; ರಾಜ್ಯಾಧಿಕಾರದ ವ್ಯಾಪ್ತಿ; ಯಾಂತ್ರೀಕರಣ ಇವು ಪ್ರಪಂಚದ ದುಃಖಕ್ಕೆ ಮೂಲ. ಈ ಕಾರಣಗಳು ಉದ್ದೇಶ ಪೂರ್ವಕ ನಮ್ಮ ಮೇಲೆ ಹೊರಿಸಲ್ಪಡದಿದ್ದರೂ, ಕಾಲಾನುಗುಣವಾಗಿ ನಮ್ಮೊಡನೆ ಬೆಳೆದು ಬಂದಿರು ವುದೇ ಅವು ಮತ್ತಷ್ಟು ಅಪಾಯಕ್ಕೆ ಕಾರಣ" ಎಂದು ಹೇಳುತ್ತಾನೆ ಜೆ. ಬಿ. ಪ್ರೀಸ್ಟ್ಲಿ. ಇದೇ ಅಭಿಪ್ರಾಯ ಮಾರ್ದನಿಗೈಯುತ್ತಾನೆ ವಿಖ್ಯಾತ ವಿಜ್ಞಾನಿ ಈನ್‌ಸ್ಟೀನ್. 'ಸತ್ಯ, ಧರ್ಮ ದೇವರು ಇವುಗಳಲ್ಲಿ ನಂಬಿಕೆ ತೊರೆದು ಭೌತವಾದದಲ್ಲಿ ವಿಶ್ವಾಸ ಬೆಳೆಸುವ ನಾಗರೀಕತೆ ಜಗತ್ತಿಗೆ ಶಾಂತಿ ತಂದೀತೆ' ಎಂದು ಲಿನ್ ಯುಟಾಂಗ್, ಜೋಡ್, ಪ್ರೀಸ್ಟ್ಲಿ, ರಾಧಾ ಕೃಷ್ಣ ಮೊದಲಾದ ವಿಚಾರಪರರು ಪರಿತಪಿಸುತ್ತಾರೆ. 'ಈ ಜಗತ್ತು ದೈವ ನಿಯಾಮಕ, ಶತಮಾನಗಳಿಂದ ಸೃಷ್ಟಿ ನಿಯಮ ಉಲ್ಲಂಘಿಸಿ ವ್ಯಕ್ತಿಗಳೂ, ರಾಷ್ಟ್ರಗಳೂ ನಡೆಯುತ್ತಿರುವುದರಿಂದ ಕಲ್ಪನಾತೀತ ಕಷ್ಟ ಮಾನವ ಕುಲ ಅನುಭವಿಸಬೇಕಾಗಿದೆ. ಈ ಕಷ್ಟ ಪರಂಪರೆಗಳು ಸಂಭವಿಸುವುದೇ ದೈವ ನಿಯಮ ನಡೆಯುತಿರುವುದಕ್ಕೆ ಸಾಕ್ಷಿ' ಎಂದು ದೈವೇಚ್ಛೆಯಲ್ಲಿ ಪೂರ್ಣ ವಿಶ್ವಾಸವುಳ್ಳ ಗಾಂಧಿ ನುಡಿಯುತ್ತಾನೆ. 'ಕರ್ಮ ವ್ಯಕ್ತಿಗಳನ್ನು ಮಾತ್ರ ವಲ್ಲ ಬಾಧಿಸುವುದು. ರಾಜ್ಯ, ರಾಷ್ಟ್ರಗಳ ಮೇಲೂ ಅದರ ಪರಿಣಾಮ ಆಗುತ್ತದೆ' ಎಂದು ಹೇಳುವುದು ಬುದ್ಧನಲ್ಲ ಲಿನ್ ಯುಟಾಂಗ್. 'ಸುಮ್ಮನಿದ್ದರೆ ಸಾಕು. ಪಾರಮಾರ್ಥ ತೊರೆದ ಈ ನಾಗರಿಕ ಜಗತ್ತು ತಾನಾಗಿಯೇ ನಾಶವಾದೀತು' ಎಂದು ಗಾಂಧಿಯ ಭಯಂಕರ ಭವಿಷ್ಯಕ್ಕೆ ಆಟಂ ಬಾಂಬು ಆಧಾರವಾದೀತೇನು?

ಭಯವಿಲ್ಲ "ಆಟಂ ಬಾಂಬಿನ ಆಸುರೀ ಶಕ್ತಿಗೂ ಮಾನವನ ದೈವೀ ಗುಣಕ್ಕೂ ನಡೆಯುತ್ತಲಿರುವ ಈ ಹೋರಾಟದಲ್ಲಿ ಮಾನವತ್ವಕ್ಕೇ ಜಯ ಸಿದ್ಧ" ಎಂದು ಶಾಂತಿ ಚಕ್ರ ನಿಶಾನೆಯ ಭಾರತದ ಪರವಾಗಿ ರಾಜ್ಯಘಟನಾ ಸಭೆಯಲ್ಲಿ ನೆಹರು ಜಗತ್ತನ್ನೇ ಉದ್ದೇಶಿಸಿ ಘೋಷಿಸಿರುತ್ತಾನೆ.

ಜಗತ್ತಿನ ಉಳಿವಿಗೆ ಆಟಂಬಾಂಬೋ ಅಹಿಂಸೆಯೋ ಮದ್ದು?

Let no one say that he is a follower of Gandhi ......I know what an inadequate follower I am of myself; for I cannot live up to convictions I stand for. ...Gandhi

Genius beholds the future in the present and his thoughts are the germ of the flower and the fruits of the latest time. ...Shelley

Lives of nations are determained not by the count of years but by the life time of human spirit, the fulness of the measure of its will to live.
...Roosevelt

That is the most perfect Govt. under which a wrong to the unblest is an affront to all. ...Solon

೨೫. ಗಾಂಧಿಯೋ? ಗಾಂಧೀವಾದವೋ?

ಜ್ಞಾನ ಬೆಳದಂತೆ, ಸೃಷ್ಟಿಯು ಮೇಲೆ ಮಾನವ ಕೈವಾಡ ಹೆಚ್ಚಿದಂತೆ, ಈ ಜ್ಞಾನಶಕ್ತಿ ಸದ್ವಿನಿಯೋಗವಾಗದೆ ದುರ್ವಿನಿಯೋಗವಾಗುತ್ತಿರುವುದು ವ್ಯಸನಕರ. ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಳಿಗಾಗಿ ಹೊಡಿದ ಫ್ರಾನ್ಸಿನ ಮಹಾಕ್ರಾಂತಿ ಪ್ರಜಾಪ್ರಭುತ್ವ ತಂದರೂ, ಶಾಂತಿ ತರಲಿಲ್ಲ. ರಾಜಕೀಯ ಸ್ವಾತಂತ್ರ್ಯ ಆರ್ಥಿಕ ಬಂಧನ ಬಿಡಿಸಲಿಲ್ಲ. ಪ್ರಭುತ್ವ ವಿಕಾಸಗೊಳ್ಳುತ್ತಾ ರಾಜ್ಯಭಾರವೇ ಒಂದು ಪ್ರವೀಣ ಕಲೆಯಾಯಿತು. ಜನಸಾಮಾನ್ಯರಿಂದ ಆರಿಸಲ್ಪಟ್ಟ ಪ್ರಜಾಪ್ರತಿನಿಧಿಗಳು ಸ್ಥಿರ ಅಧಿಕಾರ ವರ್ಗದ

ಬೆಂಬಲ ವಿಲ್ಲದೆ ರಾಜ್ಯಭಾರ ನಡೆಸುವುದು ಅಸಾಧ್ಯವೆನಿಸಿತು.* ಪಕ್ಷ ವಿಪಕ್ಷಗಳ ಹೋರಾಟದಲ್ಲಿ ವೋಟು ದುರ್ವಿನಿಯೋಗಗೊಂಡಿತು. ಗಳಿಸಿದ ಹಕ್ಕು ಉಳಿಸಿಕೊಳ್ಳಲು ಅಹರ್ನಿಶ ಹೋರಾಟ ನಡೆಸುವುದೇ ಪ್ರಜಾ ಪ್ರಭುತ್ವದ ಪಾಡಾಯಿತು. ಕರ್ತವ್ಯ ಪಾಲಿಸಿ ಅಧಿಕಾರ ಗಳಿಸು ಎಂದು ಪ್ರಜಾಪ್ರಭುತ್ವವೇ ಮರುತ್ತರ ಕೊಡುತ್ತದೆ. "ಬಿಚ್ಚುಗತ್ತಿಯಿಂದ ಸರ್ವಾಧಿಕಾರಿ ರಾಜ್ಯ ನಡೆಸಿದರೆ, ಪ್ರಜೆಗಳ ಹಿತವರಿತು ಅವರ ಇಂಗಿತದಂತೆ ನಡೆಯುವುದಾಗಿ, ಕತ್ತಿ ಒರೆಯಲ್ಲಿಟ್ಟು, ರಾಜ್ಯ ನಡೆಸುತ್ತಾನೆ ಪ್ರಜಾಪ್ರಭುತ್ವದ ಸರ್ವಾಧಿಕಾರಿ" ಎಂದು ಪ್ರಜಾಪ್ರಭುತ್ವ ಹಳಿಯುತ್ತಾನೆ ಬರ್ನಾರ್ಡ್ ಷಾ. ಪ್ರಜಾಪ್ರಭುತ್ವ ಸ್ಥಾಪಿಸಲು ಹೊರಟವನೇ ಸರ್ವಾಧಿಕಾರಿಯಾಗುತ್ತಾನೆ. ತನ್ನ ಸಹಾಯದಿಂದ ಅಧಿಕಾರಕ್ಕೆ ಏರಿದ ಸರ್ವಾಧಿಕಾರಿಯನ್ನು ಕದಲಿಸುವುದೇ ದುಸ್ತರವಾಗುತ್ತದೆ. ತಾಳಲಾರದ ಕಷ್ಟ, ಬಾಳಲಾರದ ಬದುಕು ಸಹಿಸಿ, ಆಗಸನ ಕತ್ತೆಯಂತೆ ಕಾಲದೂಡುವ ತಾಳ್ಮೆ, ಪರಾಧೀನತೆಯ ವೈಶಿಷ್ಟ್ಯ ಎನ್ನುತ್ತಾನೆ ಆಲ್ಡಸ್ ಹಕ್ಸಲಿ. ಧರ್ಮದ ಗ್ಲಾನಿ ಮಿತಿ ಮೀರಿದಾಗ ಧರ್ಮ ಸಂಸ್ಥಾಪನೆಗಾಗಿ ಶಕ ಪುರುಷರು ಜನ್ಮ ತಾಳುತ್ತಾರೆ. ಆಗ ಬಚ್ಚಲ ಕೊಚ್ಚೆಯ ಹುಳುವೂ ಎದುರುಬೀಳುತ್ತದೆ. ಅಶಕ್ತನು ಶಕ್ತಿ ಗಳಿಸಲು ನಡೆಸುವ ಈ ಮಹತ್ಪ್ರಯತ್ನವೇ ಕ್ರಾಂತಿ".

ಈ ಕ್ರಾಂತಿ ಮೇಲಿಂದ ಮೇಲೆ ಸಂಭವಿಸದಿರಲು ಕಾರಣಗಳು ಅನೇಕ. ಸಹನೆ ಪ್ರಜಾಭುತ್ವದ ಅಡಿಗಲ್ಲು. ಆದರೆ ಪರಾಧೀನ ರಾಷ್ಟ್ರಕ್ಕೆ, ಸ್ವಾತಂತ್ರ್ಯ ಗಳಿಸಲು ಅತಿಶಯ ತಾಳ್ಮೆಗೆ ಆಸ್ಪದ ಕೊಡದು. ಈ ಜಡಭರತ ತಾಳ್ಮೆ ನೆಲೆಸಲು ಮೊದಲ ಕಾರಣ ಅಜ್ಞಾನ. ಈ ದುಸ್ಥಿತಿಯಿಂದ ಪಾರಾಗುವುದು ಸಾಧ್ಯ ಎಂಬ ಪರಿಜ್ಞಾನದ ಅಭಾವ. ಜ್ಞಾನೋದಯವಾದರೂ, ಪ್ರಯತ್ನ ಫಲಿಸೀತೇ; ಫಲಸಿದರೂ ಫಲಾನುಭವ ಪ್ರಾಪ್ತಿ ತನಗುಂಟೇ ಎಂಬ ಶಂಕೆ.

---

* ಶಾಸನ ಸಭೆಯಿಂದ ಅಧಿಕಾರ ಪಡೆದ ನಿರ್ವಹಣಾಂಗ ಶಾಸನ ಸಭೆ ನಿರ್ಲಕ್ಷಿಸಿ ಶಾಸನ ಮಾಡುತ್ತದೆ. ೧೯೩೪ರಲ್ಲಿ ಇಂಗ್ಲೆಂಡಿನಲ್ಲಿ ೧೬೬೦ ಮತ್ತು ೧೯೪೧ರಲ್ಲಿ ೧೭೦೦ ಉಪನಿಯಮಗಳು ಶಾಸನ ಸಭೆಯ ಅಂಗೀಕಾರ ಪಡೆಯದೆ ಆಚರಣೆಗೆ ಬಂದಿವೆ. ಶಾಸನ ಸಭೆಯ ಅನುಮತಿಯಿಲ್ಲದೆ ಎಷ್ಟು ಕಾನೂನುಗಳನ್ನು ರೂಸ್‌ವೆಲ್ಟ್ ಜಾರಿಗೆ ತಂದಿದ್ದಾನೆ ಎಂದು ಗೊತ್ತು ಮಾಡಲು ಅಮೆರಿಕದ ಸೆನೆಟ್ ಇದಕ್ಕಾಗಿಯೇ ವಿಶೇಷ ಉಪಸಮಿತಿ ಗೊತ್ತುಮಾಡಿದೆ.

ದಾಸ್ಯದ ದೈನ್ಯತೆ ಅರಿತೂ, ಬಂಧ ವಿಮೋಚನೆಗೆ ಪ್ರಯತ್ನಿಸದ ಆಲಸ್ಯ ಭಾವ. 'ಅನೇಕ ಅನ್ಯಾಯಗಳಿಗೆ ಜನ ತಲೆಬಾಗಲು ಈ ಉದಾಸೀನ ತೆಯೇ ಮುಖ್ಯ ಕಾರಣ' 'ಆಳುವವರು ಅಧಿಕಾರಕ್ಕೆ ಕಚ್ಚಿಕೊಳ್ಳುವಂತೆ, ಆಳಿಸಿಕೊಳ್ಳುವವರೂ ಈ ದುಸ್ಸಹ ಬಾಳ್ವೆಯನ್ನೇ ಆಲಂಗಿಸುವುದು ಮತ್ತೊಂದು ವೈಚಿತ್ರ್ಯ. ಆಳುವುದು ಅವನ ಭಾಗ್ಯ, ಆಳಿಸಿಕೊಳ್ಳುವುದು ತನ್ನ ಹಣೆಬರಹ ಎಂಬ ಮೂಢ ನಂಬಿಕೆ.

ಮೇಲ್ಕಾಣಿಸಿದ ದೋಷಗಳನ್ನು ನಿವಾರಿಸಲು ಮಾರ್ಕಸಿಸಂ, ಸೋಷಿ ಲಿಸಂ, ಕಮ್ಯುನಿಸಂ, ಹಿಟ್ಲರಿಸಂ, ಫ್ಯಾಸಿಸಂ ಮೊದಲಾದ ರಾಜಕೀಯ ಸಿದ್ಧಾಂತಗಳು ಆಚರಣೆಗೆ ಬಂದಿವೆ. ಪ್ರಜಾಪ್ರಭುತ್ವವೇ ಶ್ರೇಷ್ಠ ಎಂದು ಸರ್ವಮಾನ್ಯ. ಆದರೂ ಪ್ರಪಂಚಕ್ಕೆ ಶಾಂತಿ, ಸಂತೃಪ್ತಿ ಪ್ರಾಪ್ತವಾಗಿಲ್ಲ. 'ಜೀವೋ ಜೀವಸ್ಯ ಜೀವನಂ' ಎಂಬ ಹಿಂಸಾ ತಳಹದಿಯ ಮೇಲೆ ರಚಿತ ವಾಗಿರುವುದರಿಂದಲೇ ಈ ವಾದಗಳು ಪ್ರಪಂಚಕ್ಕೆ ಶಾಂತಿ ತಾರವು.

'ಗಾಂಧೀವಾದಕ್ಕೆ ಮನಸೋತವರಿಗಿಂತ ಗಾಂಧಿಯ ವ್ಯಕ್ತಿತ್ವಕ್ಕೆ ಮರುಳಾದವರೇ ಅಧಿಕ' ಎನ್ನುವುದೂ ಉಂಟು. ಇದರಲ್ಲಿ ಸತ್ಯಾಂಶ ಇಲ್ಲ ವೆಂದು ಹೇಳಲಾಗದು. ಎಲ್ಲ ಸಿದ್ಧಾಂತಗಳೂ ಅವುಗಳ ಆಚಾರ್ಯ ಪುರುಷರ ವ್ಯಕ್ತಿ ಪ್ರಭಾವಗಳಿಂದಲೇ ಮೊಳೆದು ಚಿಗುರಿ ಬೆಳೆಯುತ್ತವೆ. ನುಡಿಯಂತೆ ನಡೆಯಲು ನಿರಂತರ ಸಾಧನ ಅವರು ನಡೆಸುತ್ತಲೇ ಇರುತ್ತಾರೆ. ಪದಶಃ ಇದು ಗಾಂಧಿಗೆ ಅನ್ವಯ. 'ತನ್ನ ತತ್ವವನ್ನೇ ತೈಲವಾಗಿಯೂ, ದೇಹವನ್ನೇ ಬತ್ತಿಯಾಗಿಯೂ ಮಾಡಿ ಬೆಳಗುತ್ತಿರುವ ಮಹಾತ್ಮನಲ್ಲಿ ಮಹಾ ಜನರು ಮುಗ್ಧಗೊಳ್ಳುವುದು ಅಚ್ಚರಿಯಲ್ಲ. ತಮ್ಮ ವಿಶ್ವಾಸಪಾತ್ರ ಪ್ರಮುಖನನ್ನು ಹಿಂಬಾಲಿಸುವುದು ಅನುಚರರಿಗೆ ಸುಲಭ. ರಾಜಕೀಯ ದಲ್ಲಿಯೂ ಪಕ್ಷಕ್ಕಿಂತ ಪ್ರಮುಖನೇ ಪ್ರಧಾನವಾಗುತ್ತಿದಾನೆ. ಹೀಗಾಗಿ ವ್ಯಕ್ತಿ ಶ್ರೇಷ್ಠನೋ, ಅವನ ತತ್ವ ಶ್ರೇಷ್ಠವೋ ಎಂದು ನಿರ್ಧರಿಸುವುದು ಕಠಿಣವಾಗುತ್ತದೆ. "ಸತ್ಯ ಮತ್ತು ಅಹಿಂಸೆ ನಿತ್ಯವಾದವು. ಗಾಂಧೀವಾದ ಒಂದು ಪಂಥವಾದರೆ ಅದು ನಾಶವಾಗಲಿ. ನನ್ನ ಕಾಲಾನಂತರ ನನ್ನ ತತ್ವಗಳೇ ಪ್ರತ್ಯೇಕ ಮತವಾಗುವುದಾದರೆ, ನನಗೆ ಬಹಳ ದುಃಖವಾದೀತು. ನಾನು ಗಾಂಧಿಯ ಹಿಂಬಾಲಕ, ಅನುಚರ ಎಂದು ಯಾರೂ ಹೇಳದಿರಲಿ.

ನನ್ನ ತತ್ವಗಳನ್ನು ಪಾಲಿಸುವ ನಾನೊಬ್ಬನಿದ್ದರೆ ಸಾಕು" ಎಂದು ಗಾಂಧಿಯೇ ಹೇಳುತ್ತಾನೆ. ವ್ಯಕ್ತಿಯನ್ನೇ ಈ ತತ್ವಗಳು ಆಶ್ರಯಿಸಿದ್ದರೆ, ಗಾಂಧಿಯೊಡನೆಯೇ ಅವು ಅಳಿದು ಹೋಗಬಹುದು. ಆದರೆ ಗಾಂಧೀ ವಾದದಲ್ಲಿ ತಿರುಳಿದ್ದರೆ, ಸತ್ಯವಿದ್ದರೆ, ಸತ್ಯ ಅಹಿಂಸೆಗಳಂತೆ ಗಾಂಧೀವಾದವೂ ಶಾಶ್ವತ ಬಾಳೀತು, ನಿತ್ಯವಾದೀತು.

"ಚಿರಾಯುವಾಗಲಿ ಗಾಂಧೀವಾದ"

> *"Not all the armies of all the Empires of earth can crush the spirit of one True Man and that one man will prevail—"*
>
> ...Terance MacSwinny

BIBLIOGRAPHY (Group A)

1 Story of my experiments with Truth. by Gandhi
2 Young India (Volumes) 3 Navajivan (Volumes)
4 Harijan (Volumes) 5 Hind Swaraj. by Gandhi
6 Indian Home Rule by Gandhi. 7 Mahatma Gandhi's Ideas. C. F. Andrews 8 Mahatma Gandhi (The Man & His Mission) 9 Mahatma Gandhi. by Romian Rolland
10 Mahatma Gandhi by H.S.L. Polak 11 Mabatma Gandhi by R.M. Gray & Manilal C. Parekh 12 Mahatma Gandhi by J. H. Holmes 13 Gandhi, The Apostle by H. M. Mujamdar 14 Gandhian Way by J. B. Kriplani 15 Gandhi & Gandhism by Pattabhi Seetharamiah 16 Studies in Gandhism by G. N. Mehta 17 Mahatmaji's Satyagraha by Gregg 18 Psychology of Khadi by R. B. Gregg 19 Power of Nonviolence by R. B. Gregg 20 Economics of Khadi by Gregg 21 An Indian Patriot in South Africa by Rev. J. J. Doke 22 History of Satyagraha in South Africa by Gandhi 23 From Yeroda Mandir by Gandhi 24 Seven Months with Mahatma Gandhi by Krishna Das 25 Anasaktiyoga by Gandhi 26 70th Birth day Sovenior Edited by Sir Radhakrishnan 27 Gandhi as I know him by I.K. Yajnik
28 I follow the Mahatma by K.M. Munshi 29 Out of Dust by D. F. Karaka 30 Non Violent Cœrcion by Clarence Maish Case 31 Non-Co-operation in other lands by Fenner Brockway 32 Gandhism by P. Spratt 33 Practical Non-Violence by K.G. Mashruwala 34 Bapu by G. D. Birla.
35 ಗಾಂಧಿ ವಿಚಾರದೋಹನ ಕೆ. ಜಿ. ಮಶ್ರುವಾಲಾ (ಹಿಂದಿ)
36 ವಿನೋಬಾಕೆ ವಿಚಾರ ವಿನೋಬಾ (ಹಿಂದಿ)

GROUP B

37 Ends and Means by Aldous Huxlay 38 Means are Ends Shelvankar 39 The Epic Fast by Pyarelal 40 Satyagraha in Champaran by Rajendra Prasad 41 Tragedy

of Waste by S. Chase 42 The World in Revolt by Gustav he Bon 43 The Rising Temper of the East by Frazier Hunt 44 Power by Bertrand Russel 45 The Politics of Democratic Socialism by E. F. M. Dwtin 46 Autobiography by J. Nehru. 47 Glimpses of the World by Nehru 48 Communal Triangle of India by Asoka Mehta & A. Patwardhan 49 Rebel India by H. N. Brailsford 50 Inside Asia by John Gunther.
51 Why Swadeshi by M. K. Agarwala.

GROUP C

52 History of Congress by Pattabhi Seetharamiah 53 The Great Illusion by Sir N. Angell 54 Bloody Traffic by F. Brockway 55 Basic Education by Zakir Hussein
56 Leaves from a Diary by G.D. Birla 57 The Indian Problem by C. F. Andrews 58 Intelligent Man's Guide to Economics by G. D. H. Cole 59 Roads to Freedom by Bertrand Russell 60 W[illegible] & Wealth by J.A. Hobson
61 Intelligent Man's Way to Prevent War by Golanez
62 Fruits of Victory by Angell 63 Man & Machines by Chate 64 Liberty in Modern States by H. J. Laski 65 Work, Wealth and Happiness by H. G. Wells 66 Out Look for Homo Sapiens by H. G. Wells 67 Japan, Its Strength and Weakness by Kamaladevi 68 Liberty to Day by Joal C. E. M. 69 A Week with Gandhi by Louis Fishcer 70 India and Democracy by Sir Georg Schuster and Guy Wynant 71 The Economic Man by P. F. Drucker 72 Conditions of Peace by E. H. Carr 73 The Kingdom of God is within you and other Works of Tolstoy "74 Unto the Last" and other works of Ruskin 75 Conquest of Bread and other works of Kropotkin.

Ticket No.	Issue Date	Return Date	Ticket No.	Issue Date	Return Date



ವಾಚಕ ವೃಂದ

(ವಿಚಾರ ಸಾಹಿತ್ಯದ ಆಶ್ರಯದಲ್ಲಿ)

ಕಾರ್ಯದರ್ಶಿಗಳು

ವಿ. ಯಸ್. ನಾರಾಯಣರಾವ್, ವಿ. ಶ್ರೀಧರ್.

ಉದ್ದೇಶ ಮತ್ತು ಸಾಧನೆ: ಜನರಲ್ಲಿ ವಿದ್ಯಾಭಿರುಚಿ, ಓದುವ ಆಸಕ್ತಿ, ಕಲಾಭಿಮಾನ ಹೆಚ್ಚಿಸುವುದು; ಓದುಗರು, ಬರಹಗಾರರು, ಪ್ರಕಾಶಕರು, ಕಲಾಭಿಮಾನಿಗಳು, ಇವರುಗಳಲ್ಲಿ ಅನ್ಯೋನ್ಯ ಭಾವನೆ, ಅಭಿಮಾನ ಬೆಳೆಯುವಂತೆ ಪ್ರಯತ್ನಿಸುವುದು; ಓದುಗರು, ಬರಹಗಾರರು ಇವರಿಗೆ ಬೇಕಾದ ಪುಸ್ತಕ ಮತ್ತು ಇತರ ಸೌಲಭ್ಯಗಳನ್ನು ಒದಗಿಸಿಕೊಡುವುದು.

ಸದಸ್ಯತ್ವ: ಸದಸ್ಯರಾಗಲು ಅಪೇಕ್ಷಿಸುವವರು ಒಂದು ರೂಪಾಯಿ ಕೊಟ್ಟು ತಮ್ಮ ಹೆಸರು, ವಿಳಾಸ, ರಿಜಿಸ್ಟರ್ ಮಾಡಿಕೊಳ್ಳಬಹುದು. ಬೇರೆ ಯಾವ ಶುಲ್ಕವನ್ನೂ ಕೊಡಬೇಕಾದ್ದಿಲ್ಲ.

ನಮ್ಮ ಮತ್ತು ಇತರ ಪ್ರಕಟಣೆಗಳೂ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸಿಗುವುವು.

ಹಲವು ಆಯ್ದ ರಾಷ್ಟ್ರೀಯ ಪುಸ್ತಕಗಳು

ಸ್ವಾತಂತ್ರ್ಯ ಘೋಷಣೆ ...	೦	೮	ಅಹಿಂಸೆಯ ಅಗ್ನಿಕುಂಡ ...	೦	೮
ಸ್ವರಾಜ್ಯ ಶಾಸ್ತ್ರ ...	೦	೧೨	ನೇತಾಜಿ ಬೋಸ್ ...	೩	೪
ಗಾಂಧೀ ಯೋಜನೆ ...	೧	೮	ವಿದ್ಯಾರ್ಥಿ ಕಾರ್ಯಕ್ರಮ ...	೦	೧೦
ಗಾಂಧೀವಾದ(ಹೊಸ ಸಂಸ್ಕರಣ)	೧	೧೨	ರಷ್ಯದ ಯೋಜನೆ ಸಾಧನೆ ...	೧	೨
ಗಾಂಧೀ ಶಕ್ತಿಯ ಮೂಲ ...	೦	೮	ಆರೋಗ್ಯ ಸಂಗ್ರಾಮ ...	೧	೦
ಗಾಂಧೀಜಿ—ಪೋಲಕ್ ...	೧	೮	ಶ್ರೀ ಶಾರದಾ ದೇವಿ ...	೧	೪
ಗುರು ಗಾಂಧೀಜಿ ...	೧	೦	ಸಮಾಧಿ ಶೀನಪ್ಪ ...	೧	೦
ಬಾಪೂ ...	೨	೦	ವಿಪ್ಲವ ...	೨	೦
ಆಗಸ್ಟ್ ತರುವಾಯ ...	೧	೦	ಅಲ್ಲೋಲ ...	೧	೮
ಆಗಸ್ಟ್ ಒಂಭತ್ತು ...	೧	೮	ಕಲ್ಲೋಲ ...	೧	೦
ಎಚ್ಚೆತ್ತ ಭಾರತ ಎತ್ತ ಸಾಗಿದೆ	೧	೧೨	ನಿಶ್ರವಾಸ ...	೪	೦
ಜೈ ಹಿಂದ್ ಗೀತೆಗಳು ...	೦	೬	ಕೈಲಾಸಂ ...	೨	೪
ಲೀಗ್ ಬೇಡಿಕೆ ...	೦	೬	ಕುಮುದಿನಿ ...	೩	೮

ವಿಚಾರ ಸಾಹಿತ್ಯ ಲಿಮಿಟೆಡ್, ಬಳೇಪೇಟೆ, ಬೆಂಗಳೂರು ಸಿಟಿ.